201

ಕೈಹಿಂದ್ Reg. No. M 4746

ನವಭಾರತ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ವರ್ಷ ೧೦ | ಬಳ್ಳಾರಿ ನವಂಬರು ೩ ಸೋಮವಾರ ೧೯೪೭ | ಸಂಪಾದಕ ಮತ್ತು ಪ್ರಕಾಶಕ
ಸಂಚಿಕೆ ೪೨ | ಟಿ. ಬಿ. ಕೇಶವರಾವ್.

ಕಾಶ್ಮೀರ ಹೋರಾಟ

ಭಾರತ ದಳಪತಿಯ ಮರಣ

ಕಾಶ್ಮೀರದಲ್ಲಿ ಒಳ ಹೊಕ್ಕಿದ್ದ ಅಫ್ರಿದೀ ಸೈನಿಕರನ್ನು ಗುಡ್ಡಗಾಡುಗಳಕಡೆ ಓಡಿಸುವ ಕಾರ್ಯದಲ್ಲಿ ಭಾರತ ಸೈನಿಕ ದಳಪತಿಯೊಬ್ಬನು ಮರಣ ಹೊಂದಿದನು

ಇಂಡಿಯಾ ಗವರ್ನರ್ ಜನರಲ್ ಮೌಂಟ್ ಬ್ಯಾಟನ್, ಪ್ರಧಾನ ಮಂತ್ರಿ ನೆಹರೂರವರು ಜಿನ್ನಾ ಲಿಯಾಕತರೊಡನೆ ಸಂಭಾಷಿಸಲು ಹೋಗಬೇಕೆಂದು ನಿಶ್ಚಯವಾಗಿತ್ತು. ಆದರೆ ನೆಹರೂರವರ ಅಸ್ವಸ್ಥತೆಯಿಂದ ಅದು ಮುಂದಕ್ಕೆ ಹಾಕಲಾಗಿದೆ.

ಹೆಚ್ಚಿನ ಪೆಟ್ರೋಲ್ ಇಲ್ಲ

ನವಂಬರ್‌ದಿಂದ ಪ್ರಾರಂಭವಾಗುವ ತ್ರೈಮಾಸಿಕ ಪೂರೈಕೆಯಲ್ಲಿ ಮದ್ರಾಸ್ ಪ್ರಾಂತದ ಭಾಗಕ್ಕೆ ಪೆಟ್ರೋಲ್ ಕಡಿಮೆ ಬಂದಿರುವ ಕಾರಣ ಶೇ 15 ಮತ್ತು 33 ರಂತೆ ಕ್ರಮವಾಗಿ ಅಗತ್ಯದವರಿಗೆ ಮತ್ತು ಇತರರಿಗೆ ಅನ್ವಯಿಸಲಾಗುವುದು.

ಅಗಸರೂ, ಕೋಟುಗಳು ಪಾಕಿಸ್ತಾನವನ್ನು ನಜೀಸಬಾರದೆಂದು ಸರಕಾರದ ಆಜ್ಞೆಯಾಗಿದೆ.

ಕಾಳಿನ ಸೀದಾ ಬೇಡ
ಬಟ್ಟೆ ಕಂಟ್ರೋಲ್ ಬೇಡ

ಕೂಡ್ಲಿಗೆ ತಾಲೂಕುಗಳ ಎಲ್ಲಾ ಭಿಕ್ಷಗಳಲ್ಲಿಯೂ ರೈತ ಪರಿಷತ್ತು ನಡೆದು ಹಳ್ಳಿಗಳಲ್ಲಿನ ಕಾಳಿನ ಮೇಲಿನ ನಿರ್ಬಂಧದಿಂದ ಬಡವರಿಗೆ, ಕೂಲಿಕಾರರಿಗೆ ಒದಗುತ್ತಿರುವ ಕಷ್ಟಗಳನ್ನು ತೀರ್ಮಾನಗಳ ಮೂಲಕ ನಿವೇದಿಸಲಾಗಿದೆ. ಸಿಡೇಗಲ್ಲಿನಲ್ಲಿ 8-11-47 ಕೂಡುತ್ತ ರೈತ ಪರಿಷತ್ತಿನಲ್ಲಿಯೂ ಈ ಮುಖ್ಯ ಸಮಸ್ಯೆಗಳು ಚರ್ಚಿತವಾಗಲಿವೆ. ಇದಕ್ಕೆ ಪ್ರಾತಿನಿಧ್ಯ ಸ್ವರೂಪವು ಅನಾವಶ್ಯಕ. ಜಿಲ್ಲೆಯ ಎಲ್ಲಾ ಕಡೆಗಳಿಂದಲೂ ಜನತೆಗೆ ಬೇಕಾದ ಅನ್ನ, ಬಟ್ಟೆಗಳಿಗೆ ಕಂಟ್ರೋಲ್ ಬೇಡವೆಂದು ಸರ್ವಾನುಮತದ ಅಭಿಪ್ರಾಯವಿದೆ. ಜಿಲ್ಲಾ ರೈತ ಪರಿಷತ್ತಿನ ಪರವಾಗಿ ಮದ್ರಾಸ್ ಮಂತ್ರಿಗಳ ಹತ್ತರ ಶಿಷ್ಟಮಂಡಲವನ್ನೊಯ್ದು ಅವರ ಮನ ಒಪ್ಪಿಸಬೇಕೆಂದು ನಾವು ಸೂಚಿಸುತ್ತೇವೆ.

(ಸಂ. ನವಭಾರತ)

ಕರ್ನಾಟಕ ಏಕೀಕರಣ

ಚಿತ್ರದುರ್ಗದಲ್ಲಿ ನವಂಬರ್ ೨ ನೇ ವಾರದಲ್ಲಿ ಕೂಡಲಿರುವ ಅಖಿಲ ಮೈಸೂರು ಕಾಂಗ್ರೆಸ್ ಅಧಿವೇಶನದ ಸಮಯಕ್ಕೆ ಕರ್ನಾಟಕ ಮಹಾ ಸಮಿತಿಯು ಕೂಡಿ ಏಕೀಕರಣ ಪ್ರಶ್ನೆಯನ್ನು ವಿಚಾರಿಸಲಿದೆ.

ಶ್ರೀ ವೆಂಕಟರಮಣ ಸ್ವಾಮಿ ದೇವಸ್ಥಾನ
ಹರಿಜನರ ಪ್ರವೇಶ.

ವಿಜಯದಶಮಿಯ ಶುಭ ಮುಹೂರ್ತದಲ್ಲಿ ರಾಯದುರ್ಗದ ಸುಪ್ರಸಿದ್ಧ ಶ್ರೀ ವೆಂಕಟರಮಣಸ್ವಾಮಿಯ ದೇವಸ್ಥಾನವು ಹರಿಜನರ ಪ್ರವೇಶದಿಂದ ಪವಿತ್ರವಾಯಿತು. ಹರಿಜನ ಸೇವಕ ಸಂಘದ ಕಾರ್ಯದರ್ಶಿಗಳು ಹರಿಜನರ ತಂಡವನ್ನು ದೇವಸ್ಥಾನಕ್ಕೆ ಭಜನೆಯಿಂದೊಯ್ದು ಪೂಜೆಯನ್ನು ಮಾಡಿಸಿ ಪ್ರಸಾದವನ್ನು ಸ್ವೀಕರಿಸಿ ಬಂದರು. ದೇವಸ್ಥಾನದ ಟ್ರಸ್ಟೀಗಳು ತಮ್ಮ ಆಕ್ಷೇಪಣೆ ಇಲ್ಲವೆಂದು ತಿಳಿಸಿದ ನಂತರ ಪ್ರವೇಶೋತ್ಸವವಾಯಿತು.

ಬಳ್ಳಾರಿ ಜಿಲ್ಲಾ ರೈತ ಪರಿಷತ್ತು
ಮುಂದೆ ಬಿತ್ತು.

ಕುರುಗೋಡಿನಲ್ಲಿ ತಾ|| ೯-೧೧-೪೭ ಕ್ಕೆ ಕೂಡಲಿದ್ದ ಜಿಲ್ಲಾ ರೈತ ಪರಿಷತ್ತನ್ನು ಮದ್ರಾಸ ಶಾಸನ ಸಭೆ ಸದಸ್ಯರ ಸೌಕರ್ಯಕ್ಕಾಗಿ ಮುಂದುವರಿಸಲಾಗಿದೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ಡಿ. ಯಂ. ಎ. ಜಲೀಲ್ ಸಾಹೇಬರು ಪುರಸಭೆಯ ಉಪಾಧ್ಯಕ್ಷರಾಗಿ ಸರ್ವಾನುಮತದಿಂದ ಆರಿಸಲ್ಪಟ್ಟರು.

1947 ರ ಚಳವಳಿದಲ್ಲಿ ಬಳ್ಳಾರಿ ಜಿಲ್ಲಾ ಪೋಲೀಸ್ ಸೂಪರಿಂಟೆಂಡರಾಗಿದ್ದು ಚಳವಳಿಕ್ಕೆ ಉತ್ತೇಜನ ಕೊಟ್ಟರೆಂದು ಹಿಂಬಡ್ತಿ ಮಾಡಲ್ಪಟ್ಟ ಶ್ರೀ ವಿ. ಸುಬ್ಬರಾಯನ್‌ರವರು (D.I.G. to C.I D. & Rys ಈಗ ಡೆಪ್ಯುಟಿಇನ್ಸ್‌ಪೆಕ್ಟರ್ ಜನರಲ್ ಆದ ಮೇಲೆ ಇದೇ ಪ್ರಥಮವಾಗಿ ಬಳ್ಳಾರಿಗೆ ಬಂದಾಗ ಮಿತ್ರರು ಕಂಡು ಸ್ವಾಗತಿಸಿದರು.

ಮೈಸೂರ ಮಂತ್ರಿಗಳ ಪ್ರತಿಜ್ಞಾವಿಧಿಯು ಮೈಸೂರಿನ ಅಂಬಾವಿಲಾಸ ಅರಮನೆಯಲ್ಲಿ ಅರಸರ ಮುಂದೆ ನಡೆಯಿತು. ಅವರಿಗೆ ಮೈಸೂರು ನಾಗರೀಕರು ಸಂಭ್ರಮದ ಸ್ವಾಗತವಿತ್ತರು.

ನಂದ್ಯಾಲದ ರಾಯಲಸೀಮ ಮಹಾಸಭೆ.

ಕಳೆದ ತಿಂಗಳು ೨೫-೨೬ ರಲ್ಲಿ ಶ್ರೀ ನೀಲಂ ಸಂಜೀವರೆಡ್ಡಿ ಎಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ನಂದ್ಯಾಲದಲ್ಲಿ ರಾಯಲಸೀಮ ಮಹಾಸಭೆಯು ಸಮಾವೇಶವಾಗಿದ್ದಿತು. ಶ್ರೀ ಎನ್. ಮೃತ್ಯುಂಜಯ ಶಾಸ್ತ್ರಿಗಳು ಉದ್ಘಾಟನೆಯನ್ನು ನೆರವೇರಿಸಿದರು. ತಾವು ಬೇಡಿದ ರಕ್ಷಣೆಗಳನ್ನು ಶಾಸನ ಬದ್ಧವಾಗಿ ಕೊಡುವುದಾದರೆ ರಾಯಲಸೀಮೆಯವರು ಆಂಧ್ರ ಪ್ರಾಂತವನ್ನು ಸೇರುವುದಾಗಿಯೂ ಇಲ್ಲವಾದರೆ ತಮ್ಮದೇ ಆದ ರಾಯಲಸೀಮೆಯನ್ನು ರಚಿಸಿಕೊಳ್ಳುವುದಾಗಿಯೂ ನಿಶ್ಚಯಿಸಿದ್ದಾರೆ. ಆರ್ಥಿಕ ಪ್ರಗತಿಯಾಗದ ಹೊರತು ಪ್ರಾಂತೀಕರಣ ಬೇಡವೆಂದು ಹೇಳುತ್ತಿದ್ದವರು ಈಗ ತಮ್ಮ ಧ್ಯೇಯವನ್ನು ಪರಿವರ್ತಿಸಿ ಪ್ರಾಂತಕ್ಕೆ ಸೇರುವ, ಪ್ರಾಂತೀಕರಣವನ್ನು ಒಪ್ಪುವ ನಿರ್ಮಾನವಾಡಿದುದು ಶುಭದಾಯಕವಾದುದಾದರೂ, ಕನ್ನಡ ಜಿಲ್ಲೆಯಾದ ಬಳ್ಳಾರಿಯನ್ನೂ ಇತರ ಕನ್ನಡ ಭಾಗಗಳನ್ನೂ ಆಂಧ್ರಪ್ರಾಂತಕ್ಕೆ ಸೇರಿಸುವ ಪ್ರಯತ್ನಮಾಡಿದರೆ, ಒಳಸಂಚು ಹೂಡಿದರೆ ಹೋರಾಟವೇ ನಡೆಯಬೇಕಾಗುತ್ತದೆ ಕನ್ನಡಿಗರ ಪಕ್ಷವಾಗಿ ಶ್ರೀ ಗಂಗಾವತಿ ನರಸಿಂಗರಾಯರು ಅಲ್ಲಿ ಹಾಜರಿದ್ದು ಅಲ್ಲಿ ನಡೆದ ಅಂಶಗಳನ್ನೆಲ್ಲಾ ಸೂಕ್ಷ್ಮವಾಗಿ ಪರಿಶೀಲಿಸಿ ಕನ್ನಡಿಗರನ್ನು ಎಚ್ಚರಿಸಿರುತ್ತಾರೆ.

ನಿರಾಶ್ರಿತರ ಸಂಕಟ ತಪ್ಪಿಲ್ಲ.

ಪಶ್ಚಿಮ ಪಂಜಾಬದಿಂದ ಪೂರ್ವಕ್ಕೆ ಬರುತ್ತಿದ್ದನಿರಾಶ್ರಿತರ ತಂಡದ ಮೇಲೆ ಕಳೆದ ತಿಂಗಳು ೨೫ ನೆಯ ತಾ. ದಾಳಿಯಾಗಿ ೩೦ ಜನರು ಕೊಲ್ಲಲ್ಪಟ್ಟರು ೪೦ ಜನರಿಗೆ ಗಾಯವಾಗಿದೆಯೆಂದು ಪಾಕಿಸ್ತಾನ ಸರಕಾರದ ಪ್ರಕಟನೆಯು ಹೊರಟಿದೆ

ಭಾರತದ ಮುಸಲ್ಮಾನರ ಭವಿತವ್ಯವನ್ನು ವಿಮರ್ಶಿಸಿ ಒಮ್ಮತದ ನಿರ್ಣಯಕ್ಕೆ ಬರಲು ನವಂಬರ್ ೯ನೆಯ ದಿನಾಂಕ ಕಲ್ಕತ್ತಾದಲ್ಲಿ ಪರಿಷತ್ತನ್ನು ಸುಹ್ರವರ್ದಿಯವರು ಕರೆದಿದ್ದಾರೆ.

ಜು ನಾ ಗ ಢ

ಸಂಸ್ಥಾನ ಅರಸರು ಓಡಿ ಹೋಗಿರುತ್ತಾರೆ. ಕರಾಚಿಯಲ್ಲಿ ಬಂಗ್ಲೆ ಕೊಂಡುಕೊಂಡು ಅಲ್ಲಿಯೇ ನೆಲಸುವರಂತೆ. ತಾತ್ಕಾಲಿಕ ಸರಕಾರವನ್ನು ರಚಿಸಿದ ಶಾಮಲದಾಸ್ ಗಾಂಧಿಯವರು ಜುನಾಗಢ ಪ್ರಾಂತಕ್ಕೆ ಸೇರಿದ ಅನೇಕ ಹಳ್ಳಿಗಳನ್ನು ಆಕ್ರಮಿಸಿರುವರು ಅವರಿಗೆ ಪ್ರಜೆಗಳ ಬೆಂಬಲವುಂಟು. ಅಹಮ್ಮದಾಬಾದ್ ಕಾಂಗ್ರೆಸ್ ಸಮಿತಿಯವರು, ಮತ್ತು ಬೊಂಬಾಯಿಯವರು ಸಹಾಯದ ಅಭಿವಚನವಿತ್ತಿರುವರು. ಅನೇಕ ಯುವಕರು ಸ್ವಯಂಸೇವಕ ಪಡೆಯಲ್ಲಿ ಸೇರಿರುವರು, ಹಿಂದೂಸ್ತಾನದ ಸೈನ್ಯವು ಜುನಾಗಢದ ಹತ್ತಿರವಿದೆ. ಇಲ್ಲಿ ಜನಗಣನೆಮಾಡಿ ಪ್ರಜೆಗಳ ಅಭೀಷ್ಟದಂತೆ ವರ್ತಿಸಬೇಕೆಂದು ಭಾರತ ಸರ್ಕಾರವು ಕೇಳಿದ ಪ್ರಶ್ನೆಗೆ ಪಾಕಿಸ್ತಾನವು ಸ್ತಬ್ದವಿದೆ.

ಹೈ ದ ರಾ ಬಾ ದ್

ಇಲ್ಲಿ ಹಿಂದೂಗಳ ಮೇಲೆ ಇತ್ತೆಹಾದುಲ್ ಮುಸ್ಲಿಮೀನ್ ಎಂಬ ಸಂಸ್ಥೆಯು ತಮ್ಮ ಗೂಂಡಾ ಜನರೊಂದಿಗೆ ಭಯಂಕರ ಅತ್ಯಾಚಾರಗಳನ್ನು ಎಲ್ಲಾ ಕಡೆಯಲ್ಲೂ ನಡೆಸಿದೆ. ನೈಜಾಮರು ಮೀಲ್ಯಾಣಿಸಿದ ಸಂಸ್ಥೆಯು ಗುಲಾಮರಾಗಿ ವರ್ತಿಸುತ್ತಿರುವರು. ಅವರೇ ನಿಯಮಿಸಿದ ಪ್ರತಿನಿಧಿಗಳನ್ನು ಮನೆಗೆ ಕಳುಹಿಸಿ— ಭಾರತ ಸರ್ಕಾರದೊಡನೆ ವಿಚಾರ ವಿನಿಮಯಮಾಡಿ ಒಪ್ಪಂದಕ್ಕೆ ಬರಲು ಬೇರೆಯವರನ್ನು ಈಗ ನಿಯಮಿಸಿದ್ದಾರೆ. ಇದೆಲ್ಲಾ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಲು ಗುಪ್ತಕಾರಾಸ್ಥಾನವೆಂದು ಊಹಿಸಲಾಗಿದೆ. ಲಂಡನ್ನಲ್ಲಿ ಹೈದರಾಬಾದ್ ಪ್ರತಿನಿಧಿಯು ಒಂದು ಕೋಟಿ ರೂಪಾಯಿ ಶಸ್ತ್ರಾಸ್ತ್ರಗಳನ್ನು ಕೊಂಡು ವಿಮಾನದ ಮೇಲೆ ಹಿಂದೂಸ್ತಾನಕ್ಕೆ ಕಳುಹಿಸಿರುವನೆಂದು ಇಂಡಿಯನ್ ಎಕ್ಸ್‌ಪ್ರೆಸ್ ಲಂಡನ್ ಸುದ್ದಿಗಾರನು ತಿಳಿಸುತ್ತಾನೆ. ಹೈದರಾಬಾದ್ ಸ್ಟೇಟ್ ಕಾಂಗ್ರೆಸ್‌ನ ಉದ್ಯಮವು ದಿನೇದಿನೇ ಬಲಗೊಳ್ಳುತ್ತಲಿದೆ. ಗ್ರಾನೋದ್ಯೋಗಿಗಳು ರಾಜೀನಾಮೆ ಕೊಡುತ್ತಿರುವರು. ದಫ್ತರಗಳನ್ನು ಸುಡಲಾಗುತ್ತಿದೆ. ನಿಜಾಮರು ಇತ್ತುಲ್ ಮುಸ್ಲಿಮೀನ್ ಸಂಸ್ಥೆ ಅರಬರ ಸೈನ್ಯಗಳಿಂದ ಪ್ರಜೆಗಳನ್ನು ಬಗ್ಗುಬಡಿಯುತ್ತಿರುವರು. ಒಂಧನ ಹಳ್ಳಿಗಳನ್ನು ಸುಡುವುದು, ಸ್ತ್ರೀಯರ ಮೇಲೆ ಅತ್ಯಾಚಾರ ನಿತ್ಯ ಕೃತಿಗಳಾಗಿವೆ.

ಕಾ ಶ್ಮೀ ರ

ಪಾಕಿಸ್ತಾನ-(ಪಂಜಾಬ್-ಸರಹದ್ ಪ್ರಾಂತ) ಭಾಗದಿಂದ ಪುಂಡರೂ ನಿವೃತ್ತ ಸೈನಿಕರೂ ಕಾಶ್ಮೀರದಲ್ಲಿ ನುಗ್ಗಿ ಜನಗಳ ಮೇಲೆ ಅತ್ಯಾಚಾರ ನಡೆಸಲು ಪ್ರಾರಂಭಿಸಿದ ಕಾರಣ ಅಲ್ಲಿನ ಮಹಾರಾಜರು ಭಾರತಕ್ಕೂಟಕ್ಕೆಸೇರಿ ಸಹಾಯವನ್ನಪೇಕ್ಷಿಸಿದರು. ದೆಲ್ಲಿಯಿಂದ ಸ್ಪೆಶಲ್ ವಿಮಾನಗಳಲ್ಲಿ ಸೈನಿಕರು ಪುಂಡರನ್ನು ಹೊರಗಟ್ಟಲು ಹೋಗಿದ್ದಾರೆ. ಆಫ್ರಿಡಿ ಸೈನಿಕರು ಪಾಕಿಸ್ತಾನದಿಂದ ಕೊಡಲ್ಪಟ್ಟ ೧೦೦ ಲಾರಿಗಳಲ್ಲಿ ಬಂದು ಕಾಶ್ಮೀರದಲ್ಲಿ ಧಾನ್ಲೆ ಪ್ರಾರಂಭಿಸಿದ್ದರು. ಕಾಶ್ಮೀರದ ಪ್ರಮುಖ ಮುಖಂಡರಾದ ಶೇಖ ಅಬ್ದುಲ್ಲಾರವರು ಪ್ರಧಾನ ಮಂತ್ರಿಗಳೊಡನೆ ರಾಜ್ಯಭಾರ ಸೂತ್ರಗಳನ್ನು ವಹಿಸಿರುತ್ತಾರೆ.

ಪಾಕಿಸ್ತಾನ ಸರಕಾರವು ತನ್ನ ಆಧಿಪತ್ಯವನ್ನು ಹಿಂದೂಸ್ತಾನದಲ್ಲೆಲ್ಲಾ ಸ್ಥಾಪಿಸಬೇಕೆಂದು ಹೊಂಚು ಹಾಕಿದೆ. ಹಿಂದೂಗಳ ವಿತ್ತ ಪ್ರಾಣಹಾನಿ ಮಾಡಿ ಭಯೋತ್ಪಾತ ವಾತಾವರಣವನ್ನು ಕಲ್ಪಿಸಿ ಅಧಿಕಾರಾರೂಢಬೇಕೆಂದಿದ್ದಾರೆ. ಭಾರತಸರ್ಕಾರವು ಈಗ ಢೀಲಾಬಿಟ್ಟರೆ ಅದರ ಅಸ್ತಿತ್ವವೇ ಉಳಿಯಲಾರದು. ಹಿಂದೂಸ್ತಾನದಲ್ಲಿಯ ಮುಸಲ್ಮಾನರೂ ಶಸ್ತ್ರಾಸ್ತ್ರ ಸುಸಜ್ಜಿತರಿರುವರೆಂಬುದು ಅನೇಕ ಪರಿಶೋಧಗಳಿಂದ ಗೊತ್ತಾಗಿದೆ. ದೇಶದ ಪರಿಸ್ಥಿತಿಯು ಬಹಳ ಭಯಂಕರವಿದ್ದೆ. ನಮ್ಮ ಯುವಕರಿಗೆಲ್ಲಾ ಸೈನಿಕಶಿಕ್ಷಣವು ಅತ್ಯಂತಾವಶ್ಯಕ. ಆಧುನಿಕ ಶಸ್ತ್ರಾಸ್ತ್ರಗಳ ಸಂಗ್ರಹವೂ ಆಯ್ತು ನೇಳೆಯಲ್ಲಿರಬೇಕು.

ಹುಕ್ಕೇರಿಕರರು ಶತಾಯುವಾಗಲಿ.

ಕೌಟುಂಬಿಕ ಜೀವನದಲ್ಲಿಯ ಒಂದು ಘಟಕವಾದ ವ್ಯಕ್ತಿಯ ಹುಟ್ಟುಹಬ್ಬವು ಕುಟುಂಬಕ್ಕೆ ಒಂದು ಸಂಭ್ರಮದ ದಿನವಿದ್ದಂತೆ. ಸಾರ್ವಜನಿಕ ಕಾರ್ಯಕ್ಷೇತ್ರಗಳಲ್ಲಿ ದುಡಿಯುತ್ತಿರುವ ವ್ಯಕ್ತಿಗಳ ಹುಟ್ಟುಹಬ್ಬವು ನಾಡಿಗೇ ಸಂಭ್ರಮದ ದಿನವಾಗುವದು.

ಶ್ರೀ ಹುಕ್ಕೇರಿಕರರು ಕನ್ನಡ ನಾಡಿನ ಸಾರ್ವಾಂಗಿಕ ಉನ್ನತಿಗಾಗಿ ಈಗ ೩೦ ವರ್ಷಗಳಿಂದ ಬೇರೆ ಬೇರೆ ಭೂಮಿಕೆಯಲ್ಲಿ ದುಡಿದು ಕನ್ನಡಿಗರನ್ನು ಚಿರ ಋಣಿಗಳನ್ನಾಗಿ ಮಾಡಿದ್ದಾರೆ. ಶಿಕ್ಷಣ, ಉದ್ಯೋಗ, ರಾಜಕಾರಣ, ಕರ್ನಾಟಕ ಏಕೀಕರಣ, ಕಾಂಗ್ರೆಸ್ಸು ಇವೆಲ್ಲ ಚಟುವಟಿಕಗಳಿಗೂ ಅವರ ದುಡಿಮೆ ಮುಟ್ಟಿದೆ

ಈ ರೀತಿಯಾಗಿ ಕನ್ನಡ ನಾಡಿನ ಏಳ್ಗೆಗಾಗಿ ದುಡಿದು ಮುಪ್ಪನ್ನೆ ಕಂಡ ಶ್ರೀ ಹುಕ್ಕೇರಿಕರರನ್ನು ಕನ್ನಡ ನಾಡಿನ ಜನತೆ ಗೌರವಿಸುವದು ಅವಶ್ಯ. ಆ ಕಾರ್ಯವನ್ನುಮಾಡಲು ಧಾರವಾಡದ ನಾಗರಿಕರು ಮುಂದೆ ಬಂದುದು ಯೋಗ್ಯವೇ ಆಗಿದೆ. ಸಾರ್ವಜನಿಕ ಜೀವನದ ಮರ್ಮವನ್ನರಿಯದ ಅನೇಕರಿಗೆ ಇಂಥ ಸಮಾರಂಭಗಳ ಮಹತ್ವವು ಗೊತ್ತಾಗಲಾರದು ಮತ್ತು ದೂಷಿತ ಮನೋವೃತ್ತಿಯವರಿಗಂತೂ ಈ ಸಮಾರಂಭಗಳು ಸರಿಬರಲಾರವು. ಕನ್ನಡಿಗರು ಆದರ್ಶ ನಾಗರಿಕರಾಗಲು ಕಲಿತುಕೊಳ್ಳಬೇಕಾದ ಅಂಶಗಳಲ್ಲಿ ಇದು ಒಂದಾಗಿದೆ.

ದೇಶಕ್ಕಾಗಿ ತಮ್ಮ ಜೀವನವನ್ನೇ ಸವೆಸಿ ಅರವತ್ತು ವರ್ಷಗಳನ್ನು ಮುಗಿಸಿ ಅರವತ್ತೊಂದನೆಯ ವರ್ಷದಲ್ಲಿ ಪದಾರ್ಪಣ ಮಾಡಿದ ಶ್ರೀ ಹುಕ್ಕೇರಿಕರರಿಗೆ ಈ ಮಂಗಲ ಪ್ರಸಂಗದಲ್ಲಿ ನಮ್ಮ ಅಭಿನಂದನೆಗಳನ್ನರ್ಪಿಸುತ್ತೇವೆ. ಮತ್ತು ಅವರು ಶತಾಯುಷಿಗಳೆಂದು ಪರಮಾತ್ಮನಲ್ಲಿ ಬೇಡಿಕೊಳ್ಳುತ್ತೇವೆ.

ಪೂರ್ವ ಪಾಕಿಸ್ತಾನದ ಪ್ರದೇಶವು ಭಯಂಕರ ಬಿರುಗಾಳಿ ಅನಾಹುತಕ್ಕೆ ಒಳಗಾಗಿ ಬಹಳ ಹಾನಿಯಾಗಿದೆ.

ಭಾರತ ಮುಸಲ್ಮಾನರ ಪರಿಷತ್ತು:— ನವಂಬರ್ ತಿಂಗಳ ವಾರದಲ್ಲಿ ಭಾರತ ಮುಸಲ್ಮಾನರ ಪರಿಷತ್ತು ಕೂಡಿಸುವ ತಮ್ಮ ನಿರ್ಧಾರವನ್ನು ಕೇಂದ್ರ ವಿದ್ಯಾಶಾಖೆಯ ಮಂತ್ರಿಗಳಾದ ಮೌಲಾನಾ ಅಬುಲ ಕಲಂ ಆಜಾದರು ತಿಳಿಯಪಡಿಸಿದರು. ಭಾರತದಲ್ಲಿನ ಮುಸಲ್ಮಾನರ ದುಸ್ಥಿತಿಗೆ ಲೀಗ್ ಮುಖಂಡರೇ ಕಾರಣರೆಂದೂ, ದ್ವಿರಾಷ್ಟ್ರ ತತ್ವದಿಂದ ಧಾರ್ಮಿಕ ಭೇದದ ಸ್ವರೂಪವು ದೊಡ್ಡದಾಯ್ತೆಂದೂ ಅವರು ಹೇಳಿದರು.

ಎಣ್ಣೆಯ ತಿಕ್ಕಾಟ:— ಉತ್ತರ ಪರ್ಶಿಯಾದಲ್ಲಿ ರಶಿಯಾದ ಸರ್ಕಾರವು ಎಣ್ಣೆ ತೆಗೆದುಕೊಳ್ಳುವ ಸೌಲಭ್ಯವನ್ನು ಕುರಿತು ಒಪ್ಪಂದವಾಗಿದ್ದಿತು. ಅದನ್ನು ಈ ಒಪ್ಪಂದವನ್ನು ಪರ್ಶಿಯನ್ ಪಾರ್ಲಿಮೆಂಟ್ ಒಪ್ಪಲಿಲ್ಲ. ಇದರಲ್ಲಿ ಅಮೆರಿಕಾದ ಕೈವಾಡವಿದೆಯೆಂದು ರಷ್ಯಾದ ಅಂಬೋಣವಿದೆ.

ಕಾಶ್ಮೀರ:—ಪಾಕಿಸ್ತಾನ ಸರ್ಕಾರವು ಕಾಶ್ಮೀರದಮೇಲೆ ದಾಳಿಯನ್ನಾರಂಭಿಸಿದೆ. ಪಾಕಿಸ್ತಾನದ ೨೦೦೦ ಅಫ್ರಿದೀ ಸೈನಿಕರು ಕಾಶ್ಮೀರದಲ್ಲಿ ನುಗ್ಗಿ ಕೊಲೆ, ಸುಲಿಗೆ, ಅತ್ಯಾಚಾರಗಳನ್ನಾರಂಭಿಸಿದ್ದಾರೆ. ಕಾಶ್ಮೀರದ ಸೈನ್ಯವು ಅವರ ಮುನ್ನಡೆಯನ್ನು ತಡೆದಿದೆ. ಜಿನ್ನಾರವರು ಮಹಾರಾಜರವರಿಗೆ ಒಂದು ತಂತಿಯನ್ನು ಕಳುಹಿಸಿ ಭಾರತ ಸಂಸ್ಥಾನವನ್ನು ಸೇರಲು ಮಹಾರಾಜರು ಒಂದು ನೆವ ಹೂಡಿರುವರೆಂತಲೂ ಅಪವಾದನೆ ಮಾಡಿದ್ದಾರೆ.

ಶ್ರೀ ಬಿ. ಭೀಮರಾಯರು ಎಂ. ಎಲ್. ಶಿ ಬಳ್ಳಾರಿ ಇವರು ಜಿಲ್ಲಾ ಕಾಂಗ್ರೆಸ್ ಸಮಿತಿಗೆ ಪ್ರತಿ ತಿಂಗಳು 15/-ಪ್ರಕಾರ ಕೆಲಕಾಲ ಕೊಡಲು ಒಪ್ಪಿರುವದಕ್ಕೆ ಅವರನ್ನು ಸಮಿತಿಯು ಅಭಿನಂದಿಸಿತೆಂದು ನಮ್ಮ ಸುದ್ದಿಗಾರರು ತಿಳಿಸುತ್ತಾರೆ.

ಎಮ್ಮಿಗನೂರಲ್ಲಿ ಪಂಚಕಲಶದ ಮೆರವಣಿಗೆ ಪೋಲೀಸರ ಗೋಲೀಬಾರು

ಎಲ್ಲಾ ಜನರಿಗಿರುವಂತೆಯೇ ಹರಿಜನರಿಗೆ ಸಾಮಾಜಿಕ ಹಕ್ಕುಗಳು ಶಾಸನಬದ್ಧವಾದ ಮೇಲೆ— ದೇವಸ್ಥಾನ–ಭಾವಿ–ಮತ್ತು ಇತರ ಉದ್ಯೋಗಸ್ಥರು (ಕ್ಷೌರದವರು–ಮೇಳದವರು) ಸಮಾನವರ್ತನೆ ನಡೆಸಬೇಕಾದುದನ್ನು ವಿಧಿಸಿದ ನಂತರ ತಮ್ಮ ಊರಲ್ಲಿ ಮಹರ್ನವಮಿ ಉತ್ಸವದ ಸಂದರ್ಭಕ್ಕೆ ಪಬ್ಲಿಕ್ ಬೀದಿಗಳಲ್ಲಿ ಪಂಚಕಲಶದ ಮೆರವಣಿಗೆಯನ್ನಾದರೂ ಹೊರಡಿಸಲು ಅನುಕೂಲ ಮಾಡಿಕೊಡಬೇಕೆಂದು ಎಮ್ಮಿಗನೂರ ಹರಿಜನರು ಕಂಪ್ಲಿಗ್ರಾಮಕ್ಕೆ ಬಂದು ನುಂ ಶ್ರಿ ಗಳಾದ ಶ್ರೀ ಶೀತಾರಾಮರೆಡ್ಡಿಯವರು ಬಂದಾಗ ಹರಿಜನ ಸೇವಕ ಸಂಘದವರನ್ನು ಕೇಳಿಕೊಂಡರು. ನೂರಾರು ಗ್ರಾಮಗಳಲ್ಲಿ ಊರ ಬೀದಿಗಳಲ್ಲಿ ಹೋಗಲು ತಡೆಯಿಲ್ಲದೆ ಮೆರವಣಿಗೆ ಇದುವರೆಗೆ ನಡೆದಿರುವುದಾದರೂ ಊರ ಮುಖ್ಯಸ್ಥರ ಸಹಕಾರವು ಅಗತ್ಯವೆಂದು ಸುಮಾರು ಒಂದೂವರೆ ತಿಂಗಳುಗಳ ಕೆಳಗೆ ಸಂಘದ ಕಾರ್ಯದರ್ಶಿಗಳು ಬೇರೆ ಮುಖ್ಯರೊಂದಿಗೆ ಹೋಗಿ ಊರ ಜನರನ್ನು ಕೂಡಿಸಿ ಎರಡು ಗಂಟೆ ಉಪನ್ಯಾಸಮಾಡಿ ದೇಶಪರಿಸ್ಥಿತಿಯನ್ನು ತಿಳಿಸಿ ಸಹಾಯ ಕೋರಿದರು. ಇದಾದ ನಂತರ ಮತ್ತೊಂದು ಸಲ ಹೋಗಲಾಯಿತು. ಆ ಕ್ಷೇತ್ರಕ್ಕೆ ಸೇರಿದ ಪೋಲೀಸ್ ಸಬ್ ಇನ್ಸ್ರೂ ಕೂಡ ಒಂದು ಸಲ ಕಾರ್ಯಕರ್ತರೊಡನೆ ಹೋಗಿ ಊರ ಜನರ ಅಭಿಪ್ರಾಯಗಳನ್ನು ತಿಳಿದುಕೊಂಡರು. ಊರಿನವರು ಕರಿಣವಾಗಿ ಯಾವಾಗಲೂ ತಮ್ಮ ವಿರೋಧವನ್ನು ಸೂಚಿಸಲಿಲ್ಲ

ಮಹರ್ನವಮಿಯ ದಿನ ಉತ್ಸವವು ನಡೆಯುವುದೆಂಬ ಅಚ್ಚಾದ ಪ್ರಕಟನೆಗಳನ್ನು ಹರಿಜನರು ಹೊರಡಿಸಿದ ನಂತರ ಅವರ ಪರವಾಗಿ ಸಂಘದವರು ಸಂಬಂಧಿಸಿದ ಪೋಲೀಸರಿಗೆ ಬಂದೋಬಸ್ತಿಗಾಗಿ ಕೇಳಿದರು.

ಸಬ್ ಇನ್ಸ್ರು, ಸರ್ಕಲ್ ಇನ್ಸ್ರು 3–4 ಕಾನ್ಸ್ಟೇಬಲರೊಂದಿಗೆ ಬಂದರು. ಮೆರವಣಿಗೆಯು ಚಾವಡಿಯ ಸಮೀಪಕ್ಕೆ ಬರುವವರೆಗೂ ಗಲಭೆಯಾಗಲಿಲ್ಲ. ಅಲ್ಲಿಗೆ ಬಂದ ನಂತರ ಮನೆಗಳಮೇಲೆ ಮತ್ತು ಕೆಳಗೆ ನಾಲ್ಕೂ ಕಡೆಗಳಲ್ಲಿದ್ದ ಸಾವಿರಾರು ಜನರು ಕಲ್ಲುಗಳ ಸುರಿಮಳೆಗೈದರು. ಮೆರವಣಿಗೆಯಲ್ಲಿದ್ದ ಹರಿಜನರು ಸುಮಾರು 300 ಜನರು ಇರಬಹುದು. ಹರಿಜನರಿಗೂ ಪೋಲೀಸರಿಗೂ ಪೆಟ್ಟುಬಿಗಲಿತು. ತಮ್ಮ ಮತ್ತು ಹರಿಜನರ ರಕ್ಷಣೆಗಾಗಿ ಪೋಲೀಸರು ಸಾಕಷ್ಟು ಸಲ ಎಚ್ಚರಿಕೆ ಕೊಟ್ಟು ಗುಂಡು ಹಾರಿಸಿದರು.

ಪರಿಸ್ಥಿತಿಯು ವಿಕೋಪಕ್ಕೆ ಬಂದಿತೆಂದು ಬಳ್ಳಾರಿಗೆ ಸುದ್ದಿಯನ್ನು ಕಳುಹಿಸಲಾಯಿತು. ಪೋಲೀಸಿನವರು ವಿವೇಕದಿಂದಲೂ ಶಾಂತವಾಗಿಯೂ ವರ್ತಿಸಿದರು. ಸರ್ಕಲ್ ಇನ್. ಶ್ರೀ ಶಾಂತಪೀಲರು ಬಳ್ಳಾರಿಯಿಂದ ಸಹಾಯ ಬರುವವರೆಗೂ ಸಾವಿರಾರು ಜನರ ಸಂದಣಿಯನ್ನು ಮೀಲಿ ಬೀಳದಂತೆ ದೂರವಿಟ್ಟಿದ್ದರು ಹರಿಜನ ಸ್ತ್ರೀ ಪುರುಷರಿಗೆ (ಮೆರವಣಿಗೆಯಲ್ಲಿನ) ಚಾವಡಿಯಲ್ಲಿ ರಕ್ಷಣೆಕೊಡಲಾಗಿತ್ತು. ಜಿಲ್ಲಾ ಮ್ಯಾಜಿಸ್ಟ್ರೇಟ್ ಮತ್ತು ಡಿ. ಯಸ್. ಪಿಯವರು ರಿಸರ್ವ ಪೋಲೀಸರೊಂದಿಗೆ ಬಂದು ಊರ ಮುಖ್ಯರನ್ನೂ ಸಹ ಕಲೆಸಿಕೊಂಡು ಶಾಂತರೀತಿಯಲ್ಲಿ ಮೆರವಣಿಗೆ ನೆರವೇರಿಸಿದರು

ಪೋಲೀಸರ ಗೋಲೀಬಾರಿನಿಂದ ಮೂವರಿಗೆ ಸಾಧಾರಣ ಗಾಯಗಳಾಗಿವೆ. ಸುಮಾರು ಎಪ್ಪತ್ತು ಜನರ ಬಂಧನವಾಗಿದ್ದು ಜಾಮೀನಿನಮೇಲೆ ಬಿಡುಗಡೆಯಾಯ್ತೆಂದು ತಿಳಿದುಬಂದಿದೆ

ಜುನಾಗಡ :— ಕಾಥಿಯಾವಾರದ ಜುನಾಗಢ ಸಂಸ್ಥಾನದ ಮೇಲೆ ಪ್ರಜಾ ಸರ್ಕಾರದ ದಾಳಿಯಾಗಿದೆ ಈ ತಾತ್ಕಾಲಿಕ ಸರ್ಕಾರವು ಜುನಾಗಢದ ೧೨ ಹಳ್ಳಿಗಳನ್ನು ಸ್ವಾಧೀನಪಡಿಸಿಕೊಂಡು ಸರ್ಕಾರೀ ಆಸ್ತಿಯನ್ನು ಜಪ್ತಿಮಾಡಿ ಅಲ್ಲಿಯ ಪೋಲೀಸರನ್ನು ಕೈಸೆರೆ ಹಿಡಿದಿದ್ದಾರೆ.

ನಿರಾಶೆಯು ಕ್ಲೈಲಾಗದವನ ಲಕ್ಷಣ.

ಸುಖ ದುಃಖಗಳು ನಮಗೆ ಬೆನ್ನುಹತ್ತಿದ ಅನಿವಾರ್ಯವಾದ ವ್ಯಾಧಿಗಳಾಗಿವೆ. ಕೇವಲ ಸುಖವನ್ನೇ ಎಲ್ಲರೂ ಬಯಸಿ ಅದಕ್ಕಾಗಿ ಹಗಲಿರುಳು ಯತ್ನಿಸುತ್ತಿದ್ದರೂ ಇದುವರೆಗೆ ಆ ಕಾರ್ಯದಲ್ಲಿ ಯಾರೂ ಯಶಸ್ವಿಗಳಾಗಿಲ್ಲ. ಸುಖದ ಆಶೆಯಿಂದ ದುಃಖ ಅನುಭೋಗಿಸುವುದೂ, ದುಃಖದ ನಿರೀಕ್ಷಣೆ ಮಾಡುತ್ತ ಸುಖವನ್ನು ಪಡುವುದೂ ನಡೆದೇ ಇದೆ.

ಇಂದಿನ ಭಯಾನಕ ಸ್ಥಿತಿಯನ್ನು ನೋಡಿದರೆ, ಅದರ ಸಲುವಾಗಿ ಓದಿದರೆ ಮತ್ತು ಕೇಳಿದರೆ ಕೂಳು ಸವಿ ಹತ್ತುವುದಿಲ್ಲ, ನಿದ್ದೆ ಬರುವದಿಲ್ಲ. ಮರುಕ್ಷಣದಲ್ಲಿಯೇ ಅವುಗಳನ್ನು ಮರೆತು ಪುನಃ ನಮ್ಮ ನಿತ್ಯನೈಮಿತ್ತಿಕ ಕಾರ್ಯಗಳಲ್ಲಿ ನಾವು ಮಗ್ನರಾಗುವೆವು

ಭಯಗ್ರಸ್ತವೆಂದು ಕಾಣುವ ಕಾರ್ಯಕ್ಕಾಗಿ ನಾವು ಇಂದು ಸ್ವಸಂತೋಷದಿಂದ ಕೈಹಾಕುತ್ತಿದ್ದೇವೆ ಜಾಗತಿಕ ಯುದ್ಧವನ್ನು ಮಾಡುವವರ ಬಗ್ಗೆ ಆಶ್ಚರ್ಯವನ್ನು ವ್ಯಕ್ತಮಾಡುವದು ಸರ್ವಕಡೆಗೂ ಕಂಡು ಬರುತ್ತಿತ್ತು ಇಂತಹ ಕ್ರೂರ ಕಾರ್ಯಗಳಿಗೆ ಮನುಷ್ಯನು ಹೇಗೆ ಸಿದ್ಧನಾಗುತ್ತಾನೆ ಎಂಬ ಬಗ್ಗೆ ನಮ್ಮಲ್ಲಿ ಊಹೆಯು ನಡೆಯುತ್ತಿತ್ತು. ಆ ಯುದ್ಧಕ್ಕೆ ನಮ್ಮಲ್ಲಿಂದ ಹೋದ ಅನೇಕರಿಗೆ ಆ ಮನೋವೃತ್ತಿಯು ಅನುಭವವು ಪ್ರತ್ಯಕ್ಷವಾಗಿ ಬಂದಿತಾದರೂ ನಮ್ಮಿಲ್ಲರಿಗೆ ಅದರ ಅರಿವುಂಟಾಗಲಿಲ್ಲ. ಆದರೆ ಇಂದು ನಮ್ಮ ಎಡಬಲದಲ್ಲಿ ನಡೆದಿರುವ ಜಾತೀಯ ಹತ್ಯಾಕಾಂಡದಿಂದ ನಮ್ಮ ಕಣ್ಣುಗಳು ನಿಚ್ಚಳವಾಗಿ ತೆರೆದಿವೆ.

ಒಂದು ಉದ್ದೇಶವನ್ನು ಸಾಧಿಸುವ ಇಚ್ಛೆಯು ಉತ್ಕಟತೆಯನ್ನು ಮುಟ್ಟಿದಾಗ ಮನುಷ್ಯನು ಅದಕ್ಕಾಗಿ ಬೇಕಾದುದನ್ನು ಮಾಡಲು ಹೇಸುವುದಿಲ್ಲವೆಂಬ ಮಾತು ನಮಗೆ ಗೊತ್ತಿದೆ. ಆತ್ಮಹತ್ಯೆ, ಕೊಲೆಸುಲಿಗೆ, ಪಾತಿವ್ರತ್ಯ ಭಂಗಗಳು ಹೃಯಕ್ತಿಕವಾಗಿ ನಡೆದದ್ದನ್ನು ನಾವು ನೋಡಿಯೇ ನೋಡುತ್ತೇವೆ ಹೊನ್ನು ಹೆಣ್ಣು ಮಣ್ಣುಗಳಿಗಾಗಿ ಈ ಕೃತ್ಯಗಳು ನಡೆಯುವವು ಇದೇ ವೃತ್ತಿಯು ಸಾಮೂಹಿಕವಾಗಿ ತೋರುತ್ತಿದೆ ಜಾತೀಯ ಹುಚ್ಚಿನ ತಳಹದಿಯ ಮೇಲೆ ನರಹತ್ಯೆಯು, ಸುಲಿಗೆಯು, ಸ್ತ್ರೀಯರ ಮಾನಭಂಗವು ಸಾರ್ವತ್ರಿಕವಾಗಿ ನಡೆಯುತ್ತಿದೆ.

ಹೀಗೆ ಈ ಕಾರ್ಯಕ್ಕೆ ಕೈಹಾಕಿದವರನ್ನು ಎರಡು ವರ್ಗಗಳಲ್ಲಿ ವಿಭಾಗಿಸಬೇಕಾಗುತ್ತದೆ. ಕೆಲವರು ಅದನ್ನು ಮೊದಲು ಕಾಲು ಕೆದರಿ ಪ್ರಾರಂಭಿಸಿದರು. ಇನ್ನು ಕೆಲವರು ಅದರ ಪರಿಣಾಮದಿಂದ, ಆತ್ಮರಕ್ಷಣೆಯ ಒಂದು ಉಪಾಯವೆಂದು ಆ ಮೇಲೆ ಆ ದಾರಿಯನ್ನು ಅನುಸರಿಸಿದರು. ಈ ರೀತಿ ಎರಡೂ ಬಣಗಳು ಯುದ್ಧರಂಗಕ್ಕೆ ಇಳಿದುದರಿಂದ ಇಂದು ಶಾಂತಿಯು ತಾನಾಗಿಯೇ ಬರಲು ಸಿದ್ಧವಾಗಿದೆ.

ಸಾಮಾನ್ಯ ಜನರಿಗೆ ಇಂತಹ ಘಟನೆಗಳ ಅರ್ಥವಾಗುವುದು ಕಡಿಮೆ. ಮತ್ತು ಅವುಗಳನ್ನು ಕಂಡು ಅವರು ಎದೆಗೆಡುವುದುಂಟು. ಸ್ವಾತಂತ್ರ್ಯಸಿಕ್ಕ ಆನಂದವಿನ್ನು ಕೂಡ ಇಂಥ ಜನರು ಮರೆಯುತ್ತಾರೆ. "ಇಂಥ ಸ್ವಾತಂತ್ರ್ಯವು ಸಿಕ್ಕಿದುದರಲ್ಲಿ ಏನು ಪ್ರಯೋಜನವಿದೆ? ಸಿಕ್ಕ ಸ್ವಾತಂತ್ರ್ಯವನ್ನು ನಾವು ಪಚನ ಮಾಡಿಕೊಳ್ಳಬೇಕಲ್ಲವೇ?" ಎಂದು ಅನ್ನುವವರು ಬಹಳ ಜನ ಸಿಗುತ್ತಾರೆ

ಈ ತರಹದ ನಿರಾಶೆಯು ನಮ್ಮಲ್ಲಿಂದ ತೊಲಗಬೇಕು. ಇಂಥವರಿಂದ ಯಾವ ಕಾರ್ಯವೂ ಆಗಲಾರದು. ಇಂಥವರು ರಾಜ್ಯವನ್ನು ಕಟ್ಟಲಾರರು ಅವರು ಕಳೆದ ಸ್ವಾತಂತ್ರ್ಯವನ್ನು ತಿರುಗಿ ಗಳಿಸುವುದಂತೂ ದೂರೇ ಉಳಿಯಿತು.

ರಾಜ್ಯ ಕಟ್ಟುವವನು ಸಾವು ನೋವುಗಳಿಗೆ ಬೆದರಿದರೆ ನಡೆಯುವುದೇ? ಇದುವರೆಗೆ ರಾಜ್ಯಗಳಿಸಿದವರು ಮತ್ತು ಕಟ್ಟಿದವರು ಮಾಡಿದ ಪ್ರಯತ್ನಗಳನ್ನು ನಾವು ಕಣ್ಣ ಮುಂದೆ ಇಟ್ಟುಕೊಳ್ಳುವುದು ಅವಶ್ಯವಿದೆ. ಪಾಶ್ಚಿಮಾತ್ಯರು ಈ ವಿಷಯದಲ್ಲಿ ಸರ್ವರಿಗೂ ಆದರ್ಶಪ್ರಾಯರಾಗಿದ್ದಾರೆ.

ಕಾಂಗ್ರೆಸ ಸಂಸ್ಥೆಯವರು ಇಂದು ರಾಜ್ಯಸೂತ್ರಗಳನ್ನು ವಹಿಸಿದ್ದಾರೆ. ಬರಿ ವಿನಾಶಕ ಕಾರ್ಯದಲ್ಲಿ ದುಡಿದ ಇವರು ಇಂದು ವಿಧಾಯಕ ಕಾರ್ಯವನ್ನು ಮಾಡಬೇಕಾಗಿದೆ. ಹಾಗೆ ಮಾಡುವಾಗ ಅವರು ಅನೇಕ ಅನಿರೀಕ್ಷಿತ ಘಟನೆಗಳನ್ನು ಮತ್ತು ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಅನುಭವ ಬಂದಂತೆ ಅವರು ತಮ್ಮ ಮನಸ್ಸನ್ನು ಕಲ್ಲು ಮಾಡಿಕೊಂಡು ಮುಂದೆ ಸಾಗುತ್ತಿದ್ದಾರೆ. ದೇಶದಲ್ಲಿ ಯಾದವೀ ಕಲಹವು ಪ್ರಾರಂಭವಾದರೂ ಅದಕ್ಕೆ ಸಿದ್ಧರಿದ್ದೇವೆ ಎಂದು ಹಿಂದೆಯೇ ಪಂಡಿತ ಜವಾಹರಲಾಲರು ಹೇಳಿದುದರಿಂದ ಅವರ ಮನಸ್ಸಿನ ಸಿದ್ಧತೆಯನ್ನು ಅಳೆಯಲು ಬರುವಂತಿದೆ.

ದೇಶದಲ್ಲಿಯ ಆಹಾರ ಸಮಸ್ಯೆ, ಕಳ್ಳಪೇಟೆ, ಲಂಚಗುಳಿತನಗಳ ಬಗ್ಗೆ ಜನರು ಬೇಸತ್ತಿದ್ದಾರೆ. ಬರಿ ಬೇಸರಿಯುವುದರಿಂದ ಏನು ಪ್ರಯೋಜನ? ಈ ಅನಿಷ್ಟಪರಿಸ್ಥಿತಿಗೆ ಸರಕಾರವು ಕಾರಣವಾಗಿದೆಯೆಂಬ ಭಾವನೆಯು ಎದ್ದು ಕಾಣುತ್ತದೆ. ಸರಕಾರವೆಂದರೆ ನಮ್ಮದೇ ಅಷ್ಟೇ? ನಮ್ಮ ಗುಣಗಳನ್ನೇ ಸರಕಾರವು ಹೊಂದಿರುತ್ತದೆ. ಅದು ತನ್ನ ಶಕ್ತಿ ಮೀರಿ ಯತ್ನಿಸಿ ಇಂದಿನ ದೂಷಿತ ವಾತಾವರಣವನ್ನು ಸುಧಾರಿಸುತ್ತಿದೆ. ಅದರ ಕೈಕೆಳಗಿನ ಅಧಿಕಾರಿಗಳೆಲ್ಲರೂ ಬಹುಶಃ ಲಿಡ್ಡುದಾರಿಯವರಿರುವಾಗ ಅದರ ಕಾರ್ಯವು ಕಠಿಣವಾಗಿ ಕುಳಿತಿದೆ. ಈ ಅಧಿಕಾರಿಗಳು ನಡೆಸಿದ ಸುಲಿಗೆಯಿಂದ ಸರಕಾರಕ್ಕೆ ಮುಟ್ಟಬೇಕಾದ ಅಪರಿಮಿತ ಹಣವು ನಡುವೇ ಸೋರಿ ಹೋಗುತ್ತಿದೆ. ಅಧಿಕಾರಿಗಳು ಬಹುಶಃ ಧನವಂತರಾಗಿದ್ದಾರೆ. ಅವರ ಆ ಸಂಪಾದನೆಯ ಹೊರಬೀಳುವ ಕಾಲವು ಇಂದಿಲ್ಲ ನಾಳೆ ಬರತಕ್ಕದ್ದೇ ಇದೆ. ಪಾಕಿಸ್ತಾನದಲ್ಲಿ ಈ ಕಾರ್ಯವು ಈಗಾಗಲೇ ಪ್ರಾರಂಭವಾಗಿದೆ ಸರಕಾರೀ ಅಧಿಕಾರಿಗಳ ಆಸ್ತಿ, ಸಂಪಾದಿಸಿದ ಹಣಗಳ ಲೆಕ್ಕವನ್ನು ಇಲ್ಲಿಯ ಸರಕಾರವರು ತೆಗೆಯಹತ್ತಿದ್ದಾರೆ

ಹಿಂದುಸ್ಥಾನ ಸರಕಾರವು ತನ್ನ ಮುಂದೆ ಅನೇಕ ತರಹದ ಕಾರ್ಯಕ್ರಮಗಳನ್ನು ಮುಂದಿಟ್ಟುಕೊಂಡು ಇಂದು ಮುಂದರಿಯುತ್ತದೆ. ಮತ್ತು ಅದರಲ್ಲಿ ಜನತೆಯ ಸಹಾಯ ಸಹಕಾರಗಳು ಬೇಕೆಂದು ಕೇಳುತ್ತಿದೆ ಈ ಸಂದರ್ಭದಲ್ಲಿ ಜನತೆಯು ನಿರಾಶೆಗೊಂಡರೆ ನಮ್ಮ ಭವಿಷ್ಯವು ತೀರ ನಿರುತ್ತೇಜಕವಾಗುವುದರಲ್ಲಿ ಸಂಶಯವಿಲ್ಲ. ನಾವೆಲ್ಲರೂ ಇಂದು ಎಚ್ಚರಾಗಬೇಕು ನಾಳೆ ಬರಲಿರುವ ಸುದಿನಗಳಿಗಾಗಿ ಇಂದು ದುಡಿಯಬೇಕು. ಆ ಕಾರ್ಯದಲ್ಲಿ ಅಡ್ಡಬರುವವರನ್ನು ಬಯಲಿಗೆಳೆದು ನಮ್ಮ ಕೈಯಲ್ಲಿದ್ದ ಸಾಧನಗಳಿಂದ ಅವರಿಗೆ ಬುದ್ಧಿಗಲಿಸಬೇಕು ಮತ್ತು ಸರಕಾರೀ ಕಾಯಿದೆಗಳ ಚಕ್ರದಲ್ಲಿ ಕೊಟ್ಟು ಅವರನ್ನು ದಾರಿಗೆ ತರಬೇಕು.

ಅದೆಲ್ಲವನ್ನೂ ಬಿಟ್ಟು ಕೇವಲ ನಿರಾಶೆಯ ಮಾತಾಡುತ್ತ ಕುಳಿತರೆ ಏನೂ ಪ್ರಯೋಜವಿಲ್ಲ. ಇಂಥವರು ಕುಳಿತಲ್ಲಿಯೇ ಮಾತಾಡುತ್ತಿರುವಾಗ ಕರ್ತೃತ್ವಶಕ್ತಿಯುಳ್ಳವರು ತಮ್ಮ ಸಾಮರ್ಥ್ಯದಿಂದ ಮುಂದರಿದು ರಾಷ್ಟ್ರವನ್ನು ಕಟ್ಟಿಯೇ ಕಟ್ಟುವರು ಅಂಥವರೇ ರಾಷ್ಟ್ರನಿರ್ಮಾಣ ಕಾರ್ಯಕ್ಕೆ ಉಪಯೋಗ ಬೇಳತಕ್ಕವರು. ಅದಿಲ್ಲದೆ ಅಕ್ಕಿಯಿಲ್ಲ, ಬೇಳೆಯಿಲ್ಲ, ಅನ್ನು ಹೊಡೆಯುವನು, ಇವನು ಬೆದರಿಸುವನು ಎಂದು ಅಳುವವರು ಕೈಲಾಗದವರೆನ್ನಿಸಿಕೊಳ್ಳುವರು

ದೊಡ್ಡ ಹರಿವಾಣ — ನಾಡಹಬ್ಬ

ನಿಜಯದಶಮಿ ಶುಕ್ರವಾರ ಶ್ರೀ ವೇಂಕಟವ್ಯಾಸರಾಯರ ನೇತೃತ್ವದಲ್ಲಿ ಪುರಜನರು, ಬಾಲಕರು ಮಂಗಳ ಗೀತೆಗಳೊಂದಿಗೆ ಊರ ಬೀದಿಗಳಲ್ಲಿ ಪ್ರಾತಃಕಾಲ ಪ್ರಭಾತಫೇರಿ ನಡೆಸಿದರು. ಶ್ರೀ ಶಾ. ಕೃಷ್ಣಮೂರ್ತಿರಾಯರು ಕನ್ನಡ ಬಾವುಟವನ್ನು ಹಾರಿಸಿದರು.

20ಕೆ

ಸೈನಿಕ ಶಿಕ್ಷಣದ ಅವಶ್ಯಕತೆ

ಈಗತಾನೇ ಪರಧಾಸ್ಯದಿಂದ ಮುಕ್ತವಾದ ಸ್ವತಂತ್ರ ಭಾರತದಲ್ಲಿ ಅನೇಕ ಅಘಟಿತ ಘಟನೆಗಳು ನಡೆದಿವೆ. ಭಾರತವನ್ನು ಒಂದು ಪ್ರಗತಿಶೀಲ, ಆದರ್ಶ ರಾಷ್ಟ್ರವನ್ನಾಗಿ ಮಾಡಬೇಕೆಂಬ ನಮ್ಮ ಮುಖಂಡರ ಯೋಜನೆಗಳು ಈ ಘಟನೆಗಳ ಮೂಲಕ ಹಿಂದೆ ಬಿದ್ದು ಈಗ ಉದ್ಭವಿತವಾಗಿರುವ ಪರಿಸ್ಥಿತಿಯೊಳಗಿಂದ ರಾಷ್ಟ್ರವನ್ನು ಪಾರು ಮಾಡುವ ಕಾರ್ಯದಲ್ಲಿಯೇ ರಾಷ್ಟ್ರಾಡಳಿತದ ಚುಕ್ಕಾಣಿಯನ್ನು ಹಿಡಿದಿರುವ ನಮ್ಮ ನಾಯಕರ ಶಕ್ತಿ, ಉತ್ಸಾಹಗಳು ತೊಡಗಿಸಲ್ಪಟ್ಟಿವೆ.

ದೇಶದಲ್ಲಿ ಅನಾವೃಷ್ಟಿ, ಅತಿವೃಷ್ಟಿಗಳ ಮೂಲಕ ಆಹಾರ ಧಾನ್ಯದ ಕೊರತೆಯಿಂದ ಜನತೆ ಮೊದಲೇ ಹೈರಾಣಾಗಿದೆ. ಕಳ್ಳ ಪೇಟೆ, ಲಂಚಗುಳಿತನ ಮೊದಲಾದ ಸಮಾಜ ವಿದ್ರೋಹೀ ದುರ್ವ್ಯಾಪಾರಗಳಿಂದ ಜನತೆಯ ಕಷ್ಟ ಪರಂಪರೆಗಳು ಇನ್ನಷ್ಟು ಹೆಚ್ಚಿವೆ. ಇಂದಿನವರೆಗೆ ಕಾಂಗ್ರೆಸ್ಸನ್ನು ವಿರೋಧಿಸುತ್ತ ಬಂದ ಮತ್ತು ಕಾಂಗ್ರೆಸ್ಸಿನೊಳಗೆ ನುಸುಳಿಕೊಂಡ ಹಲವು ಪ್ರತಿಗಾಮೀ ಶಕ್ತಿಗಳು ಭವಿತವ್ಯದ ಅರಿವಿಲ್ಲದೆ ತಮ್ಮ ಹೊಣೆಗೇಡಿ ಕೃತಿಗಳಿಂದ ದೇಶವನ್ನು ಇನ್ನಷ್ಟು ಹೆಚ್ಚಿನ ಗಂಡಾಂತರಕ್ಕೆ ಗುರಿಮಾಡಿವೆ.

ಅದರಲ್ಲಿ ಅಲ್ಲಲ್ಲಿಯ ಹಲವು ಸಂಸ್ಥಾನಗಳೂ ಮತ್ತು ಇಂದಿನವರೆಗೆ ಕಾಂಗ್ರೆಸ್ಸನ್ನು ವಿರೋಧಿಸುತ್ತ ಬ್ರಿಟಿಶ ಸಾಮ್ರಾಜ್ಯಶಾಹಿಯ ಹಸ್ತಕರಾಗಿ ಭಾರತದ ಪ್ರಗತಿಯನ್ನು ಕುಂಠಿತಗೊಳಿಸಿದ ಹಲಕೆಲವು ಪಂಚಮ ದಳಗಳೂ ಅಲ್ಲಲ್ಲಿ ಗುಟ್ಟಿನ ಕಾರಸ್ಥಾನ ನಡೆಸಿ ಸ್ವತಂತ್ರವಾದ ಭಾರತವನ್ನು ಮತ್ತೊಮ್ಮೆ ದಾಸ್ಯದಲ್ಲಿ ನೂಕಲು ಹವಣಿಸುತ್ತಿವೆ

ಇದು ಇಂದು ನಮ್ಮ ದೇಶದಲ್ಲಿ ಕಂಡುಬರುತ್ತಿರುವ ಸ್ಥಿತಿ. ಈ ವಿಪತ್ತಿನೊಳಗಿಂದ ಪಾರಾಗುವದಕ್ಕೆ ನಮ್ಮ ನಾಯಕವರ್ಗವು ಅನಿರತವಾಗಿ ದುಡಿಯುತ್ತಿದೆ. ಆದರೆ ಅಷ್ಟಕ್ಕೆ ನಾವು ಸುಮ್ಮನೆ ಕೂಡ್ರಲಾಗದು. ನಮ್ಮ ನಾಯಕರು ಮಾಡುತ್ತಿರುವದನ್ನು ಸುಮ್ಮನೆ ನೋಡುತ್ತ ಕುಳಿತುಕೊಳ್ಳುವದರಿಂದ ಪರಿಸ್ಥಿತಿ ಸುಧಾರಿಸಲಾರದು ಈ ವಿಪತ್ತಿನೊಳಗಿಂದ ಪಾರಾಗುವದಕ್ಕಾಗಿ ಪ್ರತಿಯೊಬ್ಬನೂ ಇಂದು ತನ್ನ ಪಾಲಿನ ಕರ್ತವ್ಯವನ್ನು ಮಾಡಲೇಬೇಕಾಗಿ ಬಂದಿದೆ. ಈ ಕರ್ತವ್ಯದ ಹೆಚ್ಚಿನ ಹೊಣೆಗಾರಿಕೆಯು ಇಂದು ನಮ್ಮ ತರುಣರ ಮೇಲಿದೆ.

ಬಂದ ಪರಿಸ್ಥಿತಿಯನ್ನು ಎದುರಿಸಬೇಕಾದರೆ ಅದಕ್ಕೆ ನಮ್ಮ ತರುಣರಲ್ಲಿ ಸಿದ್ಧತೆ ಬೇಕು. ಆ ಸಿದ್ಧತೆ ತರುಣರಲ್ಲಿ ಬರಬೇಕಾದರೆ ಅವರು ತಕ್ಕ ಶಿಕ್ಷಣ ಪಡೆಯಬೇಕು. ಇಂದಿನವರೆಗೆ ಭಾರತದ ಪ್ರತಿಯೊಬ್ಬ ನಾಗರಿಕನು ತನಗೆ ಆಪತ್ತು ಬಂದಾಗ ಪೋಲೀಸರ ನೆರವನ್ನು ಕೋರುತ್ತಿದ್ದುದರಿಂದ ಅವನಲ್ಲಿ ಪರಾವಲಂಬನೆಯೇ ಬೇರೂರಿತ್ತು. ಆದರೆ ಇನ್ನುಮೇಲೆ ಹಾಗೆ ಮಾಡಿದರೆ ನಡೆಯಲಾರದು. ಪ್ರತಿಯೊಬ್ಬನೂ ತನ್ನ ಮತ್ತು ತನ್ನ ನೆರೆಹೊರೆಯವರ ಹಾಗೂ ದೇಶದ ರಕ್ಷಣೆಗಾಗಿ ಸನ್ನದ್ಧನಾಗಿರಲೇಬೇಕು. ಹೀಗೆಂದ ಮಾತ್ರಕ್ಕೆ ಪ್ರತಿಯೊಬ್ಬನೂ ದೇಶದ ಕಾನೂನನ್ನು ತನ್ನ ಕೈಯಲ್ಲಿಯೇ ತೆಗೆದುಕೊಳ್ಳಬೇಕೆಂದಲ್ಲ. ಆದರೆ ಸರಕಾರದ ಕರೆ ಬಂದಾಗ ಆ ಕರೆಗೆ ಓಕೊಟ್ಟು ತನ್ನ ಪಾಲಿಗೆ ಬಂದ ಕಾರ್ಯವನ್ನು ಯಶಸ್ವೀರೀತಿಯಿಂದಲೂ ಶಿಸ್ತಿನಿಂದಲೂ ಕೈಕೊಳ್ಳುವದಕ್ಕೆ ತಕ್ಕ ಸಿದ್ಧತೆ ಮಾಡಿಕೊಂಡು, ರಾಷ್ಟ್ರದ ಆಡಳಿತವನ್ನು ಸಾಗಿಸುವ ಸರಕಾರವು ಹೊರಡಿಸಿದ ಆಜ್ಞೆಗಳನ್ನು, ಕೈಕೊಂಡ ಉಪಾಯಯೋಜನೆಗಳನ್ನು ಪರಿಣಾಮಕಾರಿಯಾಗುವಂತೆ ಕಾರ್ಯಕ್ಕಿಳಿಸಬೇಕು. ಅದಾಗಬೇಕಾದರೆ ನಮ್ಮ ತರುಣರು ಶಿಸ್ತು, ಸಂಘಟನೆ, ಆತ್ಮರಕ್ಷಣೆ, ದೇಶರಕ್ಷಣೆ ಇವುಗಳ ಶಿಕ್ಷಣ ಪಡೆಯಬೇಕು ಮತ್ತು ಆ ತರಹದ ಶಿಕ್ಷಣಕೊಡುವ ವ್ಯವಸ್ಥೆಯನ್ನು ಸರಕಾರವು ಈಗಿನಿಂದಲೇ ಮಾಡಬೇಕು.

ನಮ್ಮ ತರುಣರಿಗೆ ಸೈನಿಕ ಶಿಕ್ಷಣವನ್ನೊದಗಿಸುವದಕ್ಕಾಗಿ ಒಂದು ಪಂಚವಾರ್ಷಿಕ ಯೋಜನೆಯನ್ನು ಸಿದ್ಧಪಡಿಸಿ ಆ ಯೋಜನೆಯನ್ನು ಕೂಡಲೆ ಕಾರ್ಯ

ರೂಪಕ್ಕಿಳಿಸಬೇಕು ಮತ್ತು ಆ ಯೋಜನೆಯು ಕಾರ್ಯರೂಪದಲ್ಲಿ ಬರುವವರೆಗೆ ಅದೇ ಯೋಜನೆಯ ಅಂಗವಾಗಿ ಶಾಲೆ ಕಾಲೇಜುಗಳಲ್ಲಿಯ ವಯಸ್ಕ ವಿದ್ಯಾರ್ಥಿಗಳಿಗೆ ಕಡ್ಡಾಯವಾದ ಸೈನಿಕಶಿಕ್ಷಣ ಕೊಡುವ ವ್ಯವಸ್ಥೆಮಾಡಬೇಕು. ದೇಶದಲ್ಲಿಯ ಮಾಧ್ಯಮಿಕ ಶಾಲೆಗಳಲ್ಲಿಯೂ, ಕಾಲೇಜುಗಳಲ್ಲಿಯೂ ಅಭ್ಯಾಸ ನಾಡುತ್ತಿರುವ ನಮ್ಮ ತರುಣರು ತಮ್ಮ ಬೌದ್ಧಿಕ ಶಿಕ್ಷಣವನ್ನು ಮುಗಿಸಿ ತಮ್ಮ ಶಿಕ್ಷಣ ಸಂಸ್ಥೆಗಳಿಂದ ಹೊರಬೀಳುವಾಗ ಉತ್ಕೃಷ್ಟ ಸೈನಿಕರಾಗುವಂತೆ ಅವರಿಗೆ ಅಧುನಿಕ ಸೈನ್ಯ ಮತ್ತು ಯುದ್ಧ ವಿದ್ಯೆಯಲ್ಲಿಯ ವಿವಿಧಾಂಗಗಳ ಪರಿಚಯ ಮಾಡಿಕೊಟ್ಟು ಅವುಗಳ ಶಿಕ್ಷಣ ಕೊಡಬೇಕು. ಅಂದರೆ ಬಲಾಢ್ಯವಾದ ರಾಷ್ಟ್ರದ ಸೈನಿಕ ಬಲವನ್ನು ಬೆಳೆಸಲಿಕ್ಕೆ ಅವರೂ ಸಹಾಯಕರಾಗುವರು.

ಆದುದರಿಂದ ಭಾರತ ಪ್ರಜಾರಾಜ್ಯದ ಆಡಳಿತ ಸೂತ್ರವಹಿಸಿದ ನಮ್ಮ ಮುಖಂಡರು ಈ ಕಾರ್ಯವನ್ನು ಶೀಘ್ರದಲ್ಲಿ ಕೈಯಲ್ಲಿ ತೆಗೆದುಕೊಳ್ಳಬೇಕು ಮತ್ತು ನಮ್ಮ ತರುಣರು ತಮ್ಮ ರಾಷ್ಟ್ರೀಯ ಹೊಣೆಗಾರಿಕೆಯನ್ನರಿತು ಹಿಂದಿನ ತರುಣರು ತಮ್ಮ ದೇಶಾಭಿಮಾನದಿಂದ ಗಳಿಸಿದ ಸ್ವಾತಂತ್ರ್ಯವನ್ನು ರಕ್ಷಿಸಿ, ಭಾರತವು ಪ್ರಪಂಚದಲ್ಲಿಯ ಒಂದು ಪ್ರಚಂಡ ರಾಷ್ಟ್ರವಾಗುವಂತೆ ಮಾಡುವದಕ್ಕಾಗಿ ಒಂದು ಬಲಿಷ್ಠವಾದ ಸೈನಿಕ ಬಲ ಕಟ್ಟುವಲ್ಲಿ ತನ್ನ ವಾಲಿನ ಕರ್ತವ್ಯವನ್ನು ಮಾಡಬೇಕೆಂದು ನಾವು ಕೇಳಿಕೊಳ್ಳುತ್ತೇವೆ.

[ಜಯ ಹಿಂದ್]

ಬಳ್ಳಾರಿ ಜಿಲ್ಲಾ ಕಾಂಗ್ರೆಸ್ ಸಮಿತಿ ತೀರ್ಮಾನಗಳು

ಹೊಸಪೇಟೆ ಬಳ್ಳಾರಿ ಜಿಲ್ಲಾ ಕಾಂಗ್ರೆಸ ಕಮಿಟಿಯ ಕಾರ್ಯಕಾರೀ ಸಮಿತಿಯು ಶ್ರೀ ಟಿ ಸುಬ್ರಹ್ಮಣ್ಯಮರ ಅಧ್ಯಕ್ಷತೆಯಲ್ಲಿ ತಾ|| 23 ನೇ ದಿನ ಸೇರಿ ಕೆಳಗಿನ ನಿರ್ಣಯಗಳನ್ನು ಸ್ವೀಕರಿಸಿತು.

ಮೈಸೂರ ಹೋರಾಟದಲ್ಲಿ ಸಾವುನೋವುಗಳಿಗೀಡಾದವರಿಗೆ ಅನುತಾಪ ಸೂಚಿಸುವದು ಹುತಾತ್ಮರ ಆತ್ಮಕ್ಕೆ ಶಾಂತಿಕೋರುವದು, ವಿಜಯ ಸಂಪಾದಿಸಿದ್ದಕ್ಕೆ ಮೈಸೂರ ಪ್ರಜೆಗಳನ್ನು ಅಭಿನಂದಿಸುವದು. ಲೋಕ ಪ್ರಿಯಮಂತ್ರಿಗಳಿಂದ ಜನ ಹಿತ ಕಾರ್ಯಗಳು ನಡೆದು ಸಂಸ್ಥಾನಗಳಿಂದ ಒತಗೂಡಿದ ಕರ್ನಾಟಕ ವ್ಯಾಪ್ತಿ ರಚನೆ ತೀವ್ರವೇ ಸಾಧಿಸಲೆಂದು ಹಾರೈಸುವದು 2 ಕರ್ನಾಟಕ ಪ್ರಾ. ಕಾ ಕಮಿಟಿಯು ಹೈದರಾಬಾದ ಸತ್ಯಾಗ್ರಹ ಕ್ರಿಯಾ ಸಮಿತಿಗೆ ಬಳ್ಳಾರಿ ಜಿಲ್ಲೆಯಿಂದ ಶ್ರೀ ಎ ತಿರುಮಲರಾಯರನ್ನು ಆರಿಸುವದು 3 ಜಿಲ್ಲೆಯಲ್ಲಿ ಅದರಲ್ಲೂ ಗಡಿ ಸ್ಥಾನಗಳಲ್ಲಿ ತೀವ್ರವೇ ಶಾಂತಿದಳಗಳನ್ನು ಏರ್ಪಡಿಸುವದು (ಶಾಂತಿದಳಗಳನ್ನು ಸಂಘಟಿಸಲು ಶ್ರೀಗಳಾದ 1 ಎ ತಿರುಮಲರಾವ 2 ಎಚ್. ಬಸವನಗೌಡ 3 ಎ ಪಂಚಾಕ್ಷರಯ್ಯ 4 ಎ ಚನಬಸಪ್ಪ 5 ಬಿ. ಲಂಕೆಪ್ಪ 6 ವೆಂಕೋಬಶೆಟ್ಟರು ಅವರ ಉಪಸಮಿತಿ ನೇಮಿಸಿ ಹೆಚ್ಚಿನವರನ್ನು ಸೇರಿಸಿಕೊಳ್ಳಲು ಅಧಿಕಾರ ಕೊಡಲಾಯಿತು) 4 ಹೈದರಾಬಾದ ಸತ್ಯಾಗ್ರಹ ನಿಧಿ ಸಂಗ್ರಹಕ್ಕೆ ಅಧೀನ ತಾಲೂಕ ಸರ್ಕಲ ಕಾಂಗ್ರೆಸ ಕಮಿಟಿಗಳು ಪ್ರತಿ ತಿಂಗಳು ಪ್ರತಿ ತಾಲೂಕಿಗೆ ಕನಿಷ್ಠ 101 ರೂ ಕಳಿಸಬೇಕು 5 ಬಳ್ಳಾರಿ ಜಿಲ್ಲೆ ಹಾಗು ರಾಯರ ಸೀಮೆಯನ್ನು ಆಂಧ್ರ ವಿಶ್ವವಿದ್ಯಾಲಯಕ್ಕೆ ಜೋಡಿಸುವ ವಿಚಾರ ಬಿಟ್ಟು ಕೊಡಬೇಕೆಂದು ಜಿಲ್ಲೆಗಳ ಎಲ್ಲ ಸಂಘ ಸಂಸ್ಥೆಗಳು ತೀವ್ರ ಪ್ರತಿಭಟಿಸಿದ್ದನ್ನು ಸರ್ಕಾರದ ಗಮನಕ್ಕೆ ತಂದು ಈ ಜಿಲ್ಲೆಗಳನ್ನು ಆಂಧ್ರ ವಿಶ್ವವಿದ್ಯಾಲಯಕ್ಕೆ ಜೋಡಿಸಲೇಬಾರದೆಂದು ಆಗ್ರಹ ಪಡಿಸಲು ಶ್ರೀಗಳಾದ ಟಿ ಸುಬ್ರಹ್ಮಣ್ಯಂ ಏ ತಿರುಮಲರಾವ ಬಿ ಅನಂತಚಾರ್ಯ ಹಾಗು ಇನ್ನೊಬ್ಬರ ಶಿಷ್ಟಮಂಡಳ ಕಳಿಸತಕ್ಕದ್ದು.

ಇದಲ್ಲದೆ ಜಿಲ್ಲೆಯಲ್ಲಿ ಸಣ್ಣ ಸಣ್ಣ ನೀರಾವರಿ ಸೌಕರ್ಯ ರಸ್ತೆ ಮೊದಲಾದ ಯೋಜನೆಗಳನ್ನು ಹಾಗು ಒಕ್ಕಲತನ ಕೈಗಾರಿಕೆ ಹಾಗು ಸಾರ್ವಜನಿಕ ಉಪಯೋಗಗಳಿಗಾಗಿ ವಿದ್ಯುಚ್ಛಕ್ತಿ ಪೂರೈಕೆಯನ್ನು (ಅದರಲ್ಲೂ ಪಶ್ಚಿಮ ತಾಲೂಕಗಳಲ್ಲಿ ತೀವ್ರ ಒದಗಿಸುವದು) ಕೈಕೊಳ್ಳಬೇಕೆಂದೂ ಜಿಲ್ಲೆಯ ಆಹಾರ ಪರಿಸ್ಥಿತಿ

ಲಕ್ಷಿಸಿ ಹಳ್ಳಿಗಳಲ್ಲಿರುವ ಜೋಳ ರಾಗಿ ನವಣೆ ಸೆಜ್ಜೆ ಮೊದಲಾದವುಗಳ ಮೇಲಿನ ಆನೌಪಚಾರಿಕ ಸೀದಾ ಪದ್ಧತಿ ತೆಗೆದುಹಾಕಬೇಕೆಂದೂ ಅವುಗಳ ಧಾರಣೆ ನಿಯಂತ್ರಿಸಿ ರವಾನೆಯ ಸೌಕರ್ಯಕೊಡಬೇಕೆಂದೂ ಕೇಳಿಕೊಳ್ಳಲಾಯಿತು.

ಮದ್ರಾಸ ಶಾಸನ ಸಭೆಯಲ್ಲಿ ಮಾನ್ಯರಾಜನ್‌ರು ಕರ್ನಾಟಕ ಪ್ರಾಂತ ನಿರ್ಮಾಣವು ಅಷ್ಟು ಅವಶ್ಯಕ ಹಾಗು ಅವಸರದ್ದಿಲ್ಲವೆಂದು ಹೇಳಿದ್ದನ್ನು ಸಭೆಯು ತೀವ್ರ ಪ್ರತಿಭಟಿಸಿ ಕರ್ನಾಟಕ ಪ್ರಾಂತಚನೆಯ ಮಹತ್ವ ಅವರಿಗೆ ತಿಳಿದಿಲ್ಲವೆಂದು ವಿಷಾದದಿಂದ ಹೇಳುತ್ತದೆ. ಹಾಗು ಕರ್ನಾಟಕ್ಪ್ರಾಂತ ರಚನೆಯಾಗಬೇಕೆಂದು ಒತ್ತಾಯಪಡಿಸುತ್ತದೆ ಎಂದು ತೀರ್ಮಾನಿಸಿತು.

ಹಿಂದೂ ಜನರ ಸೌಹಾರ್ದ

ಪಾಟ್ನಾ,ಮುಜಫರಪುರ ಜಿಲ್ಲೆಯ ಸಿಂಘಚಿರಯಾ ಗ್ರಾಮದ ಹಿಂದುಗಳು ಮುಸ್ಲಿಂ ಕುಟುಂಬ ಒಂದನ್ನು ರಕ್ಷಿಸಿದ ಕಥೆಯೊಂದು ಈಗ ತಿಳಿದುಬಂದಿದೆ ನೆರೆಗ್ರಾಮದ ಪುಂಡರು ಇಕಬಾಲ ಹುಸೇನನ ಮನೆಯಮೇಲೆ ದಾಳಿಯನ್ನು ನಾಡಿದಾಗ ಹಿಂದುಗಳು ಆತನ ರಕ್ಷಣೆಗೆ ನಿಂತರು ಪುಂಡರ ಕೊಡೆತಕ್ಕೆ ಇಕಬಾಲ ಹುಸೇನನು ಹತನಾದರೂ ಅವನ ಮನೆಯವರು ಸುರಕ್ಷಿತ ಉಳಿದರು ಇಕಬಾಲ ಹುಸೇನನು ಗೋವಧೆ ಮಾಡಿದ್ದೇ ಪುಂಡರ ಪಿತೋಪಕ್ಕೆ ಕಾರಣವಾಯಿತೆಂದು ಹೇಳುತ್ತಾರೆ.

ಮಂತ್ರವಾದಿಯ ಮೋಸ — ಶಿಕ್ಷೆ

ಒಳ್ಳಾರಿ ತಾಲೂಕು ಯಾಳ್ಳಿ ಗ್ರಾಮದಲ್ಲಿ ಶ್ರೀ ವಿರುಪಾಕ್ಷಪ್ಪನವರ ಮನೆಯಲ್ಲಿ ನಿಧಿ ತೋರಿಸುತ್ತೇನೆಂದು ಹೇಳಿ 20 ಸಾವಿರ ರಾಣಿ ರೂಪಾಯಿಗಳನ್ನು ಮೋಟಾರ್ ಕಾರ್‌ನಲ್ಲಿ ಕದ್ದೊಯ್ದು ಕಾಕಾ ಎಂಬ ಮಲಬಾರಿ ಮುಸಲ್ಮಾನನಿಗೆ 3 ತಿಂಗಳ ಕಠಿಣ ಶಿಕ್ಷೆಯಾಯಿತು. ಇದರಲ್ಲಿ 11000/- ಪತ್ತೆಯಾಯಿತು. ಮತ್ತೆ 3000/- ಇಬ್ಬರು ಸರಾಫ ವರ್ತಕರ ಬಳಿ ಸಿಕ್ಕಿದ್ದಿತು. ಸರಾಫರು ನಿರ್ದೋಷಿಗಳೆಂದು ಬಿಡುಗಡೆಯಾಯಿತು. ಇದರಲ್ಲಿ ಒಬ್ಬ ಸ್ತ್ರೀಯ ಭಾಗವಿದ್ದಿತು. ಆಕೆಯನ್ನು ಎಚ್ಚರಿಸಿ ಬಿಡುಗಡೆಮಾಡಲಾಯಿತು. ಈ ಪತ್ತೆಯ ಕಾರ್ಯವನ್ನು ಈ ಹಿಂದೆ ಬಳ್ಳಾರಿಯಲ್ಲಿ ಸರ್ಕಲ್ ಇನ್ ರಾಗಿದ್ದ ಶ್ರೀ ಬಿ. ಎನ್. ಎನ್. ಸ್ವಾಮಿಯವರು ಯಶಶ್ವಿಯಾಗಿ ನಿರ್ವೇರಿಸಿದರು.

ಹೊಸಪೇಟೆ.

ತಾ. ಕಾಂ. ಕಮಿಟಿ ಸಭೆಯು ಶ್ರೀ ಮರಿಸ್ವಾಮೆಯ್ಯ ಮಠದ ಪಾಟೀಲ ಇವರಧ್ಯಕ್ಷತೆಯಲ್ಲಿ ಜರನೆಯ ದಿನಾಂಕ ಕೂಡಿದ್ದಿತು. ಶ್ರೀ ಮುದವೀಡು ಕೃಷ್ಣರಾವು, ಎಸ್. ಶಿ. ಕೇಳ್ಕರ್‌ರ ನಿಧನಕ್ಕಾಗಿ ದುಃಖ ಸೂಚಕ ನಿರ್ಣಯವಾಯಿತು ಜಿಲ್ಲಾ ಕಾಂಗ್ರೆಸ್‌ಸಮಿತಿ ತೀರ್ಮಾನದ ಪ್ರಕಾರಕ್ಕೆ ಹೊಸಪೇಟೆ ತಾಲೂಕಿಗೆ ಶ್ರೀ ಕ. ವೆಂಕೋಬರಾಯರ ಸಂಚಾಲಕತ್ವದಲ ಸದಸ್ಯರ ಸಮಿತಿ, ಹಡಗಲಿ ತಾಲೂಕಿಗೆ ಅಂಗಡಿ ಚನ್ನಬಸಪ್ಪನವರ ಸಂಚಾಲಕತ್ವದ ೭ ಸದಸ್ಯರ ಸಮಿತಿಯು ನಿರ್ಮಿತವಾಗಿ ಹೈದರಾಬಾದು ಸತ್ಯಾಗ್ರಹನಿಧಿಯನ್ನು ಕೂಡಿಸತಕ್ಕದ್ದೆಂದು ನಿಶ್ಚಯವಾಯಿತು. ಹೊಸಪೇಟೆ ತಾಲೂಕು ರೈತರ ಪರಿಷತ್ತನ್ನು ಶೀಘ್ರದಲ್ಲಿ ಕೂಡಿಸುವ, ಜಿಲ್ಲೆಯಲ್ಲಿ ಸರ್ಕಾರದವರು ಎಲ್ಲಾ ಪ್ರಕಟನೆಗಳನ್ನು ಕನ್ನಡದಲ್ಲೇ ಒದಗಿಸಬೇಕೆಂಬುವ ತೀರ್ಮಾನಗಳಾದವು. ಹೈದರಾಬಾದು ಸರ್ಕಾರವು ತನ್ನ ಗಡಿಯಿಂದಗಡಿಗಳನ್ನು ಐದುವೈಲುದೂರ ಹಿಂದೆ ಗೆದ್ದುಕೊಂಡತೆ, ಸಂಡೂರಿನ ಮಧ್ಯದಂಗಡಿಗಳೂ ಹಿಂದೆಗೆದುಕೊಳ್ಳಲು ವಿನಂತಿಸಲಾಯಿತು.

ಪ್ರಸಭೆಗೆ ಶ್ರೀ ಪತ್ತಿಕೊಂಡ ಗುರುನಾಥಪ್ಪನವರು ಅಧ್ಯಕ್ಷರಾಗಿಯೂ, ಶ್ರೀ ಪಂತುಲ ರಾಮಚಂದ್ರರಾಯರು ಉಪಾಧ್ಯಕ್ಷರಾಗಿಯೂ, ಆರಿಸಿ ಬಂದರು. [ಸ್ವ. ಸು]

ರಾಮದುರ್ಗ ದರ್ಬಾರವು ಘಟನಾಸಮಿತಿ ಸದಸ್ಯರಾದ ಶ್ರೀ ಮುನವಳ್ಳಿಯವರ ಆಸ್ತಿಗಳನ್ನು ಹಿಂದಕ್ಕೆ ಕೊಟ್ಟಿದೆ.

ಮೈಸೂರು ರಾಜ ಮನೆತನದ ವೇತನ ವಗೈರೆ

ರಾಜ್ಯಾದಾಯದಿಂದ ಕೊಡಲ್ಪಡುತ್ತಿದ್ದ 25 ಲಕ್ಷ ರೂ. ಗಳನ್ನು ಹೆಚ್ಚಿಸಿದ್ದಾರೆ. ಕಾಂಗ್ರೆಸ್ ಜೊಡನೆ ಸಂಧಾನವು ಯಶಶ್ವಿಯಾಗಿ ಅಕ್ಟೋಬರ್ 12 ರಿಂದ 25 ರ ವಳಿಗೆ ಅನೇಕರಿಗೆ ಹೊಸ ಉದ್ಯೋಗ ಸಂಬಳ ದಲ್ಲಿ ಪೆನ್ಸನ್‌ದಲ್ಲಿ ಬಡ್ತಿ ವಗೈರೆ ಆತುರವಾಗಿ ಹಿಂದಿನ ಮಂತ್ರಿ ವರ್ಗದವರು ಮಾಡಿದ್ದಾರೆ. ಇದನ್ನು ಕಾಂಗ್ರೆಸ್ ಮಂತ್ರಿವರ್ಗದವರು ಪರಿಶೀಲಿಸಬಹುದು.

ಮೈಸೂರು ಮಂತ್ರಿಗಳು :— ಖಾತೆಗಳು

ಶ್ರೀ ಕೆ. ಶಿ. ರೆಡ್ಡಿ	...	ಆಹಾರ ಮತ್ತು ರೆವಿನ್ಯೂ ಖಾತೆ
,, ಹೆಚ್. ಶಿ. ದಾಸಪ್ಪ	...	ಹಣಕಾಸು, ವಾರಿಶಾಮಿಕ
,, ಕೆ. ಟಿ. ಭಾಷ್ಯಂ	....	ಕೃಲಿಕಾರ ಖಾತೆ–ನ್ಯಾಯ–ವಿದ್ಯುತ್
,, ಹೆಚ್. ಸಿದ್ದಯ್ಯ	...	ಪಿ. ಡಬ್ಲ್ಯು. ಡಿ. ವ್ಯವಸಾಯ
,, ಟಿ. ಮರಿಯಪ್ಪ	...	ರೆಲ್ವೆ ಮತ್ತು ಗೃಹಖಾತೆ
,, ಆರ್. ಚನ್ನಂಗಿ ರಾಮಯ್ಯ	...	ಸ್ಥಾನಿಕ ಪ್ರಭುತ್ವ
,, ಐ. ಸುಬ್ಬರಾಮಶೆಟ್ಟಿ	...	ದೊಡ್ಡ ಮುನಿಸಿಪಾಲಿಟಿಗಳು
,, ಮುಹಮ್ಮದ್ ಶರೀಫ್	....	ವೈದ್ಯಕೀಯ, ಆರೋಗ್ಯ
,, ಡಿ. ಯಚ್. ಚಂದ್ರಶೇಖರಯ್ಯ	...	ವಿದ್ಯಾಭ್ಯಾಸ, ವಿಶ್ವವಿದ್ಯಾನಿಲಯ.

ಉಪಾಧ್ಯಾಯರಿಗೆ ತುಟ್ಟಿಭತ್ಯ.

ಖಾಸಗಿ ಮಧ್ಯಮಿಕ ಶಾಲೆಗಳಲ್ಲಿ ಉಪಾಧ್ಯಾಯರಿಗೆ ಸರ್ಕಾರದವರು ನಿಗದಿ ಮಾಡಿದ ತುಟ್ಟಿಭತ್ಯವನ್ನು ಕೊಡವಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಅವರಿಗೆ ಸಾಕಷ್ಟು ಹಣದ ಅನುಕೂಲವಿವ್ವಲ್ಲಿ ಕೊಡುವಂತೆ ಮಾಡಲು ಡಿ. ಪಿ. ಐರವರಿಗೆ ಅಧಿಕಾರ ಕೊಡಲಾಗಿದೆ. ಸರ್ಕಾರದಿಂದ ಗ್ರಾಂಟು ಪಡೆವ ಶಾಲೆಗಳವರು, ನಿಗದಿಮಾಡಿದ ಅಲೋಯೆನ್ಸ್ ಕೊಡದಿದ್ದರೆ ಗ್ರಾಂಟ್ ಪೂರಾಆಗಲಿ, ಕಲಭಾಗವಾಗಲಿ ನಿಲ್ಲಿಸಲಾಗುವುದು.

ಗೋಧಿಯ ಪೂರೈಕೆ.

ಬಳ್ಳಾರಿ ಜೀಲ್ಲೆಯ ಶೀದಾಸ್ಥಳಗಳಲ್ಲಿ ಈವಾರ ಒಂದೆರಡು ದಿನಗಳು ಗೋಧಿ ಪೂರೈಸಿ ಮತ್ತೆ ತಕ್ಷಣ ನಿಲ್ಲಿಸಿಬಿಟ್ಟರು. ಮೇಲಿಂದ ಸಾಕಷ್ಟು ಬಂದಿಲ್ಲವೆಂದು ಹೇಳುತ್ತಾರೆ.

ಮದ್ರಾಸ್ ಜಮೀಂದಾರಿ ಬಿಲ್.

ಮದ್ರಾಸ್ ಶಾಸನಸಭೆಯಲ್ಲಿ ರೆವಿನ್ಯೂ ಮಂತ್ರಿಗಳಾದ ಕಳಾವೆಂಕಟರಾಯರು ತಂದಿರುವ ಜಮೀಂದಾರಿ ಬಿಲ್ಲಿನಲ್ಲಿ ವರಿಷ್ಠ ಕಾಂಗ್ರೆಸ್‌ವರ್ಗದವರು ದೆಹಲಿಯಿಂದ ಕೆಲ ಸೂಚನೆಗಳನ್ನು ಮಾಡಿದ್ದಾರೆ. ಧಾರ್ಮಿಕಸಂಸ್ಥೆ, ದೇವಸ್ಥಾನಗಳ ಆಸ್ತಿಸ್ಥಿಕ್ಕಾಗಿ ಅವುಗಳ ಆದಾಯದಲ್ಲಿ ಕಡಮೆಯಾಗದಂತೆ ನೋಡಿಕೊಳ್ಳಬೇಕು ಸರಿಯಾದ ಪರಿಹಾರದ್ರವ್ಯವನ್ನು ಒದಗಿಸಿಕೊಡಬೇಕು. ಇನಾಂವಿಷಯಗಳಲ್ಲಿನ ಪರಿಹಾರವನ್ನು ಹೆಚ್ಚು ಉದಾರವಾಗಿ ಕೊಡಬೇಕು. ವಗೈರೆ ಈ ಸೂಚನೆಗಳು ಪಾರ್ಟಿ ಸಮರ್ಥಕೋಚನೆಯಲ್ಲಿವೆ.

ರಷ್ಯನರು ಬರುವರು.

ಪಾಕಿಸ್ತಾನದಲ್ಲಿ ಅರಾಜಕತೆಯನ್ನು ಹೀಗೆಯೇ ನಡೆಯಗೊಟ್ಟಿದ್ದರೆ ಎರಡು ವಾರಗಳೊಳಗಾಗಿ ರಷ್ಯನರು ದೆಲ್ಲಿಗೆ ಬಂದು ಆಕ್ರಮಿಸುವರೆಂದು ಜಿನ್ನಾರವರು ಬೆದರಿಕೆ ಹಾಕಿರುವರು.

212

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್,

ಮುಖ್ಯ ಕಛೇರಿ — ಬಳ್ಳಾರಿ.

ಸ್ಥಾಪಿತ : 193

ಬಳ್ಳಾರಿ, ಅನಂತಪುರ, ಕಡಪ, ಕರ್ನೂಲು ಮತ್ತು ಚಿತ್ತೂರು ಜಿಲ್ಲೆಗಳ
ಆರ್ಥಿಕಾಭಿವೃದ್ಧಿ ಉದ್ದೇಶದಿಂದ ಸ್ಥಾಪಿತವಾಗಿದೆ.

ಛೇರ್ಮನ್ ಬ್ಯಾಂಕ್ ಆಫ್ ಡಾಯರೆಕ್ಟರ್ಸ್ :- ಶ್ರೀ ಹೆಚ್. ಲಿಂಗಾರೆಡ್ಡಿ ಬಿ. ಎ. ಬಿ. ಯಲ್.
ಬಳ್ಳಾರಿ.

ಸ್ಥಾಯಿಠೇವಣಿ [ಫಿಕ್ಸೆಡ್-ಡಿಪಾಜಿಟ್] ದರಗಳು

3, 4, 5	ತಿಂಗಳುಗಳಿಗೆ	ಶೇಕಡ ಬಡ್ಡಿದರ ರೂ.	2-0-0
6	,,	,,	2-8-0
1	ವರ್ಷಕ್ಕೆ	,,	3-0-0
2	,,	,,	3-8-0

2 **ಕ್ಯಾಷ್ ಸರ್ಟಿಫಿಕೇಟುಗಳು** ಬಡ್ಡಿಯ ಸಹಿತ 100 ಕ್ಕೆ 1 ವರ್ಷಕ್ಕೆ 3-8-0
10-0-0 ಸರ್ಟಿಫಿಕೇಟ್—ಕೊಡುವ ಧರ ರೂ. 9-0-3

3 **ಚಾಲು ಖಾತೆ** (ಕರೆಂಟು ಅಕೌಂಟು) ಬಡ್ಡಿ ಶೇಕಡ ರೂ 1/-

4 **ಸೇವಿಂಗ್ಸ್ ಬ್ಯಾಂಕು ಅಕೌಂಟು** :- ವಾರದಲ್ಲಿ ಎರಡು ಸಲ ರೂ. 250/-ಗಳಿಗೆ ಮಿಂಚದ ತೆಗೆದುಕೊಳ್ಳಬೇಕು. 1 ವರ್ಷಕ್ಕೆ ಶೇಕಡ ರೂ. 2/-

ಬ್ಯಾಂಕಿನ 27 ಶಾಖೆಗಳಲ್ಲಿ ಲೆಕ್ಕಗಳನ್ನು ಪ್ರಾರಂಭಿಸಬಹುದು. ಇತರ ಎಲ್ಲಾ ವಿಧವಾದ ಬ್ಯಾಂಕು ಕಾರ್ಯಗಳು ಒದಗಿಸಲಾಗಿವೆ.

ಬಿ. ವಿ. ಶೇಷಗಿರಿರಾವ್, ಬಿ. ಕಾಂ.
ಕಾರ್ಯದರ್ಶಿ

NAVA BHARAT. BELLARY. Reg. No. M. 4746

ನವಭಾರತ ಬಳ್ಳಾರಿ.
(Nationalist Weekly)

ಚಂದಾದರಗಳು.		Subscription Rates	
ವರ್ಷಕ್ಕೆ	5-0-0	One Year	5—0—0
6 ತಿಂಗಳಿಗೆ	3-0-0	Six months	3—0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ		Subscription will not be accepted for less than 6 months.	

To
SRI..... .. ..
.. ..
....

Printed at Krishna Press Bellary QH No. B 17 FOR (Q.H. No. B-5.)
Edited & Published by T B KESHAVA RAO

2/5

ಶ್ರೀಹಿಂದ್ Reg. No. M 4746

ನವಚೇತನ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ವರ್ಷ ೧೦ | ಬಳ್ಳಾರಿ ನವೆಂಬರು ೧೦ ಸೋಮವಾರ ೧೯೪೭ | ಸಂಪಾದಕ ಮತ್ತು ಪ್ರಕಾಶಕ
ಸಂಚಿಕೆ ೪೩ | ಟಿ. ಬಿ. ಕೇಶವರಾವ್.

ಬಳ್ಳಾರಿಯಲ್ಲಿ ಹರತಾಳ ಸಭೆ — ಕಂಟ್ರೋಲ್‌ಗಳೆಲ್ಲಾ ಹೋಗಬೇಕು

ವ್ಯಾಪಾರೀ ಸಂಘ (Chamber of Commerce) ದ ಅಧ್ಯಕ್ಷರಾದ ಶ್ರೀ ಟಿ ಜಿ ಸತ್ಯನಾರಾಯಣರ ನೇತೃತ್ವದಲ್ಲಿ ವೂರಸಭಾಧ್ಯಕ್ಷರಾದ ಶ್ರೀ ಮುಂಡ್ಲೂರು ಗಂಗಪ್ಪನವರ ನೇತೃತ್ವದಲ್ಲಿ ಮೊನ್ನೆ ಬಹಿರಂಗ ಸಭೆಯು 7-11-47 ಶುಕ್ರವಾರ (ಈದಿನ ನಗರದ ಅಂಗಡಿಗಳೆಲ್ಲಾ ನಿಷೇಧ ರೂಪವಾಗಿ ಮುಚ್ಚಿದ್ದವು) ಸಾಂಬಮೂರ್ತಿ ಮೈದಾನದಲ್ಲಿ ಸಮಾವೇಶವಾಗಿದ್ದಿತು. ಎಲ್ಲಾತರದ ಸರ್ಕಾರೀ ನಿಯಂತ್ರಣಗಳನ್ನು ಆಹಾರ, ಬಟ್ಟೆ ಮತ್ತು ಇತರ ವಸ್ತುಗಳ ಮೇಲೆ ತೆಗೆದು ಬಡಜನರಿಗೂ, ಸರ್ವರಿಗೂ ಅನುಕೂಲಮಾಡಬೇಕು. ಮಹಾತ್ಮ ಗಾಂಧಿಯವರೇ ಕಂಟ್ರೋಲ್ ತೆಗೆಯಬೇಕೆಂದ ಮೇಲೆ ಯುದ್ಧ ಜನ್ಯಪರಿಸ್ಥಿತಿಯಿಂದಿಟ್ಟ ಈ ಬಂಧನಗಳಿಂದ ಪ್ರಜೆಗಳನ್ನೇಕೆ ತಪ್ಪಿಸಬಾರದು? ಪ್ರಜಾಭಿಪ್ರಾಯಕ್ಕೆ ಮನ್ನಣೆ ಕೊಡಲೇ ಬೇಕು. ಎಂಬರ್ಥದ ಭಾಷಣಗಳು ಶ್ರೀಗಳಾದ ಡಿ. ಹೆಚ್. ಕೃಷ್ಣರಾವು, ಕೆ. ವಿ. ಶೆಟ್ಟಿ, ರೇವಣಸಿದ್ದಪ್ಪ, ಕಾಂಡ್ರಯರಪ್ಪ, ಪದ್ಮನಾಭನ್, ಡಿ ಎಲ್. ಗಂಗಾಧರ್, ಅಣ್ಣಾಜಿರಾವ್, ಶ್ರೀ ರಾಂಗೋಪಾಲ, ಸೂರ್ಯನಾರಾಯಣ ಇವರು ಮಾತಾಡಿದರು. ಜಿಲ್ಲಾ ಬಟ್ಟೆ ಅಧಿಕಾರಿ ಶ್ರೀ ಸುಬ್ಬರಾಯರು, ಪ್ರಜಾ ಸರ್ಕಾರಕ್ಕೆ ಕೊಡಬೇಕಾದ ಬಿಂಬಲ ಸೂಚಿಸಿ ಸರ್ಕಾರಕ್ಕೆ ದುರುದ್ದೇಶಗಳಿಲ್ಲವೆಂದೂ ಒಂದೊಂದೇ ಆಗಿ ಎಲ್ಲಾ ನಿರ್ಬಂಧಗಳನ್ನು ತೆಗೆಯುತ್ತಾ ಬರುವೆವೆಂದೂ, ಪ್ರಜಾಭಿಪ್ರಾಯಕ್ಕೆ ಮಣಿಯ ಬೇಕಾದ್ದು ಅವಶ್ಯಕವೆಂದೂ ಹೇಳಿದರು. ಛೇಂಬರ್ ಅಧ್ಯಕ್ಷರಾದ ಶ್ರೀ ಟಿ. ಜಿ. ಸತ್ಯನಾರಾಯಣರ ವಂದನಾರ್ಪಣೆಯ ನಂತರ ಸಭೆಯು ಅಂತವಾಯಿತು. ಕೇಂದ್ರ ಮತ್ತು ಪ್ರಾಂತೀಯಸರ್ಕಾರದ ಅಧಿಕಾರಿಗಳಿಗೆ ಈ ಸಭೆಯ ತೀರ್ಮಾನದ ಮೂಲಕ ಕಳುಹಿಸಲಾಯಿತು. ಅಧ್ಯಕ್ಷ ಶ್ರೀ ಮುಂಡ್ಲೂರು ಗಂಗಪ್ಪನವರು ಕಂಟ್ರೋಲುಗಳೆಲ್ಲಾ ಹೋಗುವುದೊಳ್ಳೆಯದೆಂದರು.

ಸ್ವಾರ್ಥಿಗಳ ಕುತಂತ್ರ, ಹೈದರಾಬಾದ ಹರಿಜನರನ್ನು ಮತಾಂತರಗೊಳಿಸುವ ಪ್ರಯತ್ನ.

ಶ್ರೀ ಶಾಮಸುಂದರ ಚೇಳ್ಳಗುರ್ಕಿಯವರು ಹೀಗೆ ಬರೆಯುತ್ತಾರೆ:— "ಹೈದರಾಬಾದ ಸಂಸ್ಥಾನಗಳಲ್ಲಿ ಎಲ್ಲಾ ರಾಜಕೀಯ ಪಕ್ಷಗಳು ಕಾಂಗ್ರೆಸ್ ಸಂಸ್ಥೆಯ ನೇತೃತ್ವದಲ್ಲಿ ಹಿಂದೀ ಒಕ್ಕೂಟವನ್ನು ಸೇರಬೇಕೆಂಬ ಚಳವಳಿ ಮಾಡುತ್ತಿರುವುದು ಸರ್ವ ಸಮ್ಮತ. ಇತ್ತೆ ಹಾದುಲ ಮುಸ್ಲಿಮಾನ ಪಕ್ಷದ ಒತ್ತಾಯದ ಮೇಲೆ ಭಟ್ಯಾರಿ ಸರ್ವಾಲ್ಟರ್ ಮಾಂಕ್ಟನರು ರಾಜೀನಾಮೆ ಇತ್ತು ಹೊರಟಿದ್ದರು. ಈಗ ಮುಸಲ್ಮಾನ ಪಕ್ಷವು ಶಾಮಸುಂದರ ವೆಂಕಟರಾವ್ ಎಂಬುವ ದೇಶದ್ರೋಹಿಗಳನ್ನು ಹರಿಜನ ಮುಖಂಡರನ್ನಾ ಮಾಡಿ ಸಂಸ್ಥಾನದ 39 ಲಕ್ಷ 28 ಸಾವಿರ ಹರಿಜನರನ್ನು ತಮ್ಮ ಕಡೆಗೆಳೆದುಕೊಳ್ಳಲು ಪ್ರಯತ್ನಿಸಿರುವರು. ಪಾಕಿಸ್ತಾನ ಪ್ರತ್ಯೇಕವಾಗಿ ಇವರಿಗೆ ಕೆಲಭಾಗ ಹಂಚಿಕೊಡಲು ಜಿನ್ನಾರು ಸಿದ್ಧರಿದ್ದಾರೆಂದು ಇವರು ಘೋಷಿಸುತ್ತಿರುವರು. ಮೂರ್ಖರು ಯರಲ್ಲೆಂಬ ಕುಮಾರವ್ಯಾಸನ ಹೇಳಿಕೆಯಂತೆ ಈ ಮುಖಂಡರು ನಮ್ಮ ಹಿರಿಯರಲ್ಲ ಮಾರ್ಗದರ್ಶಕರಲ್ಲ. ಇದೊಂದು ಪೈಶಾಚಿಕ ನಾಟಕ ಇವರು ತಮ್ಮ ಸ್ವಾರ್ಥಸಾಧನೆಗಾಗಿ ದೇಶಭಕ್ತ ಹರಿಜನರನ್ನು ಇಂಥಾ ಸಂಕಟ ಸಮಯದಲ್ಲಿ ದೇಶ ದ್ರೋಹ ಕಾರ್ಯಕ್ಕಾಗಿ ಪ್ರೇರೇಪಿಸುತ್ತಿರುವರು. ಇತ್ತೆ ಹಾದುಲ ಮುಸ್ಲಿಮಿನರ ಬಲಿಗೆಬಿದ್ದರೆ ನಮ್ಮ ಪ್ರಾಚೀನ ಹಿಂದೂ ಧರ್ಮಕ್ಕೆ ಮುಹೂರ್ತವಿಡಿದಂತೆ. ಈ ಕಾರಣ ನಮ್ಮನ್ನುದ್ಧಾರಮಾಡಲು ದೇಶ ಕಲ್ಯಾಣಕ್ಕನುವಾಗಲು ದುಡಿಯುತ್ತಿರುವ ಕಾಂಗ್ರೆಸ್ ಸಂಸ್ಥೆಗೆ ಈ ಹರಿಜನರು ಸಹಾಯಮಾಡಿ ಹೈದರಾಬಾದ ಅಜ್ಞಾನ ಹರಿಜನರನ್ನು ಮೋಸಜಾಲಕ್ಕೆ ಬೀಳದಂತೆ ತಡೆಯಬೇಕು.

ಮೊಗಲಾಯಿ ಅಡಳಿತದ ಮಾದರಿ,

ಹೈದರಾಬಾದ ಸಂಸ್ಥಾನದಲ್ಲಿ ಇಂದುಸಾಗಿರುವ ಜನ ಜೀವನದ ಒಂದು ಚಿತ್ರ.

ಹೈದರಾಬಾದ ಸಂಸ್ಥಾನವು ಭಾರತದ ಎಲ್ಲ ಸಂಸ್ಥಾನಗಳಿಗಿಂತಲೂ ದೊಡ್ಡದು. ಜನಸಂಖ್ಯೆ ೧,೬೩,೦೦,೦೦೦. ಇದರಲ್ಲಿ ೨೫,೦೦,೦೦೦ ಮುಸಲ್ಮಾನರು. ಉಳಿದವರೆಲ್ಲ ಹಿಂದು, ಕ್ರೈಶ್ಚನ್ ಮತ್ತು ಪಾರ್ಸಿ ಜನರಿದ್ದಾರೆ. ಯಹೂದಿ ಜನರು ಅತ್ಯಂತ ಸ್ವಲ್ಪ. ವಾರ್ಷಿಕ ಆದಾಯ ಸುಮಾರು ೨೬ ಕೋಟಿ. ಹಿಂದುಗಳು ೧೦೦ ಕ್ಕೆ ೮೫ ಟಕ್ಕೆ ಇದ್ದರೂ ಮುಸಲ್ಮಾನರ ವರ್ಚಸ್ಸವೇ ಹೆಚ್ಚು. ಈ ಸ್ಥಿತಿಗೆ ಕೆಳಗಿನ ಕಾರಣಗಳುಂಟು.—

೧) ವರಿಷ್ಠ ಸರಕಾರೀ ಅಧಿಕಾರಿಗಳೆಲ್ಲ ಮುಸಲ್ಮಾನರೇ.

೨) ಸೈನ್ಯ ಪೋಲೀಸ ಖಾತೆಗಳಲ್ಲಿ ಎಲ್ಲರೂ ಮುಸಲ್ಮಾನರೇ.

೩) ಎಲ್ಲ ಮುಸಲ್ಮಾನರ ಕಡೆಗೂ ಆಯುಧಗಳು ತುಂಬಿಕೊಂಡಿವೆ.

೪) ಹಿಂದುಗಳಲ್ಲಿ ಸಂಘಟನೆಯ ಅಭಾವವಿದೆ. ಇದ್ದ ಆಯುಧಗಳನ್ನೆಲ್ಲ ಸರ್ಕಾರವು ಕಸಿದುಕೊಂಡಿದೆ ಇವರಲ್ಲಿ ಸಂಸ್ಥಾನಗಳೂ ಜಹಾಗೀರುಗಳೂ ಬಹಳ ಅವರೆಲ್ಲ ಸರಕಾರದ ಪಕ್ಷದವರೇ.

ಮುಸಲ್ಮಾನರೆಲ್ಲರೂ "ಇತ್ತಿಹಾದುಲ್ ಮುಸಲ್ಮೀನ ಎಂಬ ಒಂದೇ ಸಂಸ್ಥೆಯ ಅಂಕಿತದಲ್ಲಿರುವರು. ಆದರೆ ಹಿಂದುಗಳಲ್ಲಿ, ಸ್ಟೇಟ ಕಾಂಗ್ರೆಸ, ಆರ್ಯ ಸಮಾಜ, ಹಿಂದೂ ಪ್ರಜಾ ಮಂಡಳ ಎಂಬ ಅನೇಕ ಸಂಸ್ಥೆಗಳಿದ್ದು ಆಯಾ ಸಂಸ್ಥೆಗಳಲ್ಲಿ ಪರಸ್ಪರ ಸಹಕಾರವಿಲ್ಲ. ವ್ಯಾಪಾರೀ ವರ್ಗವು "ಸನಾತನಿ" ವೃತ್ತಿಯದು. ಧಾರ್ಮಿಕ ವಿಷಯಗಳಲ್ಲಿ ಲಕ್ಷ್ಯವಹಿಸಲಾಯಿ ಪೆಚ್ಚುಮಾಡುವದು. ಅವರೆ ಸಂಸ್ಥಾನದ ಕಾಂಗ್ರೆಸಿಗೆ ಮಾತ್ರ ಎಳ್ಳಷ್ಟೂ ನೆರವಾಗುವದಿಲ್ಲ.

ಹೈದರಾಬಾದದ ಸುದ್ದಿ ಸಂಗತಿಗಳು ಹೊರಗಿನವರಿಗೆ ಅಲ್ಪಸ್ವಲ್ಪ ತಿಳಿಯುವವು ಉರ್ದೂ ವೃತ್ತ ಪತ್ರಗಳೇ ಬಹಳ. ಅವೆಲ್ಲ ಬಹುತರವಾಗಿ ಮುಸ್ಲಿಮು ಲೀಗಿನವೇ. ಹಿಂದೂ ಜನರು ನಡೆಸುತ್ತಿದ್ದ ಉರ್ದೂ ಪತ್ರಗಳು ಸರಕಾರದ ನಿರ್ಬಂಧದ ಮೂಲಕ ಬಂದಾಗಿರುತ್ತವೆ. "ಡೆಕ್ಕನ್ ಕ್ರಾನಿಕಲ್" ಎಂಬ ಇಂಗ್ಲಿಷ ದೈನಿಕ, "ನಿಜಾಮ ವಿಜಯ" ವೆಂಬ ಮರಾಠಿ ಸಾಪ್ತಾಹಿಕ ಇವೇ ಕೆಲವು ರಾಷ್ಟ್ರೀಯ ಪತ್ರಗಳಿದ್ದರೂ ವೃತ್ತ ಪರೀಕ್ಷಣಾ ಮಂಡಳದವರು ಒಪ್ಪಿದ ಸುದ್ದಿಯನ್ನಷ್ಟೇ ಮುದ್ರಿಸಲಿಕ್ಕೆ ಅವುಗಳಿಗೆ ಸ್ವಾತಂತ್ರ್ಯವಿದೆ. ಈ ಸೆನ್ಸಾರ ಬೋರ್ಡಿನ ಮೇಲೆ ಮುಸ್ಲಿಮು ಸಂಪಾದಕರೇ ಹೆಚ್ಚು.

ಇಲ್ಲಿ ೧೫೫ ಜನ ಸದಸ್ಯರ ಒಂದು ಲೆಜಿಸ್ಲೇಟಿವ್ ಅಸೆಂಬ್ಲಿ ಇದೆ. ಅದರಲ್ಲಿ ಮುಸ್ಲಿಮು, ಹರಿಜನ ಹಾಗು ಸರಕಾರೀ ಅಧಿಕಾರಿಗಳ ಸಂಖ್ಯೆಯೇ ನೂರರಷ್ಟಿದೆ. ೫೫ ಜನರದೊಂದು "ಪ್ರೋಗ್ರೆಸ್ಸಿವ್ ಪಾರ್ಟಿ" ಯಿದೆ. ಅದೂ ತೀರ ಸೌಮ್ಯವಾದಿಗಳದು ಈ ಅಸೆಂಬ್ಲಿಯ ಸದಸ್ಯರ ಅಧಿಕಾರವೆಂದರೆ "ಕೇವಲ ಪ್ರಶ್ನೆಕೇಳುವದು." ಈ ಅಸೆಂಬ್ಲಿ ಸದಸ್ಯರಲ್ಲಿಯ ಇಬ್ಬರನ್ನು ಮಂತ್ರಿಮಂಡಳದಲ್ಲಿ ಸಮಾವೇಶ ಮಾಡಿದ್ದಾರೆ. ಇಲ್ಲಿಯ ಸ್ವರಾಜ್ಯವೆಂದರೆ ಇಷ್ಟೇ

ನಾಗರಿಕತೆಯ ಹಕ್ಕುಗಳು ಕೇವಲ ಮುಸಲ್ಮಾನರಿಗೇ ಉಂಟು. ಹಿಂದೂಗಳಿಗೆ ಇಲ್ಲ ಭಾಷಣವಾಪಸ್ಸಿಕ್ಕೆ ಹಿಂದೂಗಳಿಗೆ ಪ್ರತಿಬಂಧವಿದೆ. ಧಾರ್ಮಿಕ, ಸಾಮಾಜಿಕ ಸಭೆಗಳಿಗೂ ಮುಂಚಿತವಾಗಿ ಅನುಮತಿ ಪಡೆಯಲು ಅರ್ಜಿಕೊಟ್ಟು ೧೫ ದಿನಗಳ ನಂತರ ಸರಕಾರೀ ಉತ್ತರ ದೊರೆಯುವದು. ಎಲ್ಲರಿಗೂ ಉರ್ದೂ ಕಲಿಯುವ ಒತ್ತಾಯವಿದೆ. ಬಾಸರೀ ಶಾಲೆಗಳನ್ನು ಸ್ಥಾಪಿಸಲಿಕ್ಕೆ ಅನುಮತಿಯೇ ಇಲ್ಲ. ಅದಾವದರೂ ಅರ್ಜಿ ಮಾಡಿದ ೨-೩ ವರ್ಷಗಳವರೆಗೆ ಮೊಗಕುವನಿಲ್ಲ

ಲಂಚಗುಳಿತನಕ್ಕೆ ಎಣೆಯೇ ಇಲ್ಲ. ಕೆಳಗಿನಿಂದ ಮೇಲಿನವರೆಗೆ ಎಲ್ಲ ಸರಕಾರೀ ನೌಕರರು ಲಂಚಬಡಕರು. ಹೈದರಾಬಾದವು ಸ್ವಾತಂತ್ರ್ಯವನ್ನು ಸಾರಿದಿಂದಂತೂ ಲಂಚಗುಳಿತನವು ಬಹಿರಂಗವಾಗಿ ನಡೆಸಿದೆ.

ವ್ಯಾಪಾರವೆಲ್ಲ ಮೊದಲು ಹಿಂದುಗಳ ಕೈಯಲ್ಲಿತ್ತು. ಈಗ ೫ ವರುಷಗಳಿಂದ ಅದು ಹೆಚ್ಚಾಗಿ ಮುಸಲ್ಮಾನರ ಕೈಸೇರಿದೆ. ಸರಕಾರಿ ಕಂಟ್ರಾಕ್ಟು ಎಲ್ಲವೂ ಅದೇ ಜಾತಿಯವರಿಗೆ ದೊರೆಯುವವು. ಗುಜರಾತೀ, ಮಾರವಾಡಿ, ಕೊಮಟೀ ಮುಂತಾದವರ ವ್ಯವಹಾರವೆಲ್ಲ ಕಟ್ಟಾಗಿ ಹೋಗಿದೆ.

ರೈತರಿಂದ "ಲೇವ್ಹಿ" ರೂಪದಿಂದಲೂ "ಖುಷ ಖರೀದಿ" ರೂಪದಿಂದಲೂ ಎಲ್ಲ ಧಾನ್ಯವನ್ನೂ ಸರಕಾರವು ತಕ್ಕೊಳ್ಳುತ್ತಿದೆ. ಅವರ ಹೊಟ್ಟೆಗೆ ಸಾಕಷ್ಟು ಕಾಳು ಸಹ ಬಿಡುವದಿಲ್ಲ. ಎಂಟಾಣೆಯ ಜೋಳವ ಸಲುವಾಗಿ ಒಬ್ಬೊಬ್ಬ ರೈತನು ಮೂರು ಮೂರು ದಿನಗಳವರೆಗೆ ಪಟ್ಟಣಗಳಲ್ಲಿ ಕೂತ್ರ ಬೇಕಾಗುತ್ತಿದೆ.

ಹೈದರಾಬಾದು ಸ್ವತಂತ್ರವಾದಂದಿನಿಂದ ಎಲ್ಲ ಕಡೆಗೂ ಶಾಂತತಾ ಕಮೀಟಿಗಳ ಸ್ಥಾಪನೆಯಾಗಿದೆ. ಇವು ತೋರಿಕೆಗೆ ಮಾತ್ರ ಶಾಂತತಾ ಕಮೀಟಿಗಳು ಇವುಗಳ ಮುಖಾಂತರ ಸ್ವತಂತ್ರ ಹೈದರಾಬಾದಕ್ಕೆ ಲೇಪೀ ಮನ್ನಣೆಯನ್ನು ದೊರಕಿಸುವದೇ ಈ ಕಮೀಟಿಗಳ ಮುಖ್ಯೋದ್ದೇಶವು. ಜನತೆಗೆ ಮೋಸಮಾಡಿ ಎಲ್ಲ ಹಳ್ಳಿಪಳ್ಳಿಗಳಲ್ಲಿಯೂ ಈ ತರಹದ "ಆಜಾದ ಹೈದರಾಬಾದ"ದ ಘೋಷಣೆಗೆ ಹಳ್ಳಿಗರ ಅಂಕಿತ ಹಾಕಿಸಿಕೊಂಡು ಇಡಲಾಗಿದೆ. ಮುಂದೆ ಎಂದಾದರೂ "ಸಾರ್ವಮತ"ವು ತಕ್ಕೊಳ್ಳುವ ಪ್ರಸಂಗಬಂದರೆ ಈ ಅಂಕಿತಗಳನ್ನು ಮುಂದೆ ಮಾಡಬೇಕೆಂದು ಸರಕಾರದ ಕಾರಸ್ಥಾನವಿದೆ.

ಈ ಸಂಸ್ಥಾನದಲ್ಲಿ ಸೀದಾ ಪದ್ಧತಿಯಿದೆ. ಅದರಿಂದ ಹಿಂದೂ ಪ್ರಜೆಗಳಿಗೆ ಇದರಿಂದ ಏನೂ ಲಾಭವಿಲ್ಲ ಸಕ್ಕರೆ, ಕಲ್ಲೆಣ್ಣೆ ಮುಸಲ್ಮಾನರಿಗೆ ಕೊಟ್ಟು ಉಳಿದರೆ ಮಾತ್ರ ಹಿಂದುಗಳಿಗೆ ದೊರೆಯುವವು. ಹಿಂದುಗಳಿಗೆ ದೊರೆಯುವದರ ನಾಲ್ಕು ಪಟ್ಟು ಸೀದಾ ಸಾಮಗ್ರಿ ಮುಸಲ್ಮಾನರಿಗೆ ದೊರೆಯುವವು. ಆದರೆ ಪ್ರತ್ಯಕ್ಷವಾಗಿ ಹೀಗೇಕೆ ಎಂದು ಕೇಳಿದರೆ ಉತ್ತರವಿಲ್ಲ.

ಈ ರೀತಿ ಎಷ್ಟೋ ಬಗೆಯಿಂದ ಪೀಡಿತರಾದ ಹಿಂದುಗಳ ಗೋಳು ಇತ್ತಿತ್ತ ಮುಸ್ಲಿಂ ನಿರ್ವಾಸಿತರ ತುಂಡಗಳು ಬರಹತ್ತಿದ ಮೇಲೆ ಇನ್ನೂ ಹೆಚ್ಚಾಗಿದೆ. ದಿಲ್ಲಿ, ಪಾಭಾ, ಭರತಪೂರ ಮೊದಲಾದ ಸ್ಥಳಗಳಿಂದ ಮುಸ್ಲಿಂ ನಿರಾಶ್ರಿತರು ಬರಹತ್ತಿದರು. ಇತ್ತೀಚೆಗೆ ಮಧ್ಯಪ್ರಾಂತದಿಂದ ಬಹುಸಂಖ್ಯೆಯಲ್ಲಿ ಬರಹತ್ತಿದ್ದಾರೆ. ಸುಮಾರು ೨ ಲಕ್ಷ ಇಂಥ ಮುಸಲ್ಮಾನ ನಿರಾಶ್ರಿತರು ಈಗಾಗಲೇ ಬಂದಿರುವರು, ಇನ್ನೂ ದಿನಾಲು ಬರುತ್ತಲಿರುವರು. ಇವರು ನಾಲ್ಕೂ ದಿಕ್ಕಿನಿಂದ ರೈಲು ಮೋಟರ ಕಾಲುನಡಿಗೆ ಮುಂತಾಗಿ ಉಪಲಬ್ಧವಿರುವ ಎಲ್ಲ ಮಾರ್ಗದಿಂದ ಬರಹತ್ತಿದ್ದಾರೆ. "ನೆಹರು ಸರಕಾರ ಮುರ್ದಾಬಾದ" "ಆಜಾದ ಹೈದ್ರಾಬಾದ ಜಿಂದಾಬಾದ" "ನಮ್ಮ ಕೈಯಲ್ಲಿ ಆಯುಧ ಕೊಡಿರಿ, ನಾವು ಏನು ಮಾಡುವೆವು ನೋಡಿರಿ" "ಇನ್ನು ೪-೫ ದಿನಗಳಲ್ಲಿಯೇ ಇಲ್ಲಿಯ ಹಿಂದುಗಳಿಗೆ ನಾವು ಚನ್ನಾಗಿ ಪಾಠ ಕಲಿಸುವೆವು." ಇವು ಈ ಮುಸಲ್ಮಾನ ನಿರ್ವಾಸಿತರ ಘೋಷಣೆಗಳು ಈ ಜನರನ್ನು ಸರಕಾರವೇ ಮುದ್ದಾಂ ಕರೆತರುವದರಿಂದ ಅವರಿಗೆ ಎಲ್ಲಾ ಸೌಕರ್ಯಗಳು ಸರಕಾರದಿಂದಲೇ ದೊರೆಯುವವು. ಹಿಂದುಗಳು ಬಿಟ್ಟುಹೋದ ಮನೆಗಳಲ್ಲೇ ಈ ನಿರ್ವಾಸಿತರಿಗೆ ಕೊಡಿಸಬೇಕೆಂದು ಸರಕಾರದ ವಿಚಾರವಿದೆ. "ಡಿಫೆನ್ಸ ಆಫ್ ಹೈದ್ರಾಬಾದ" ಕಾಯಿದೆಯಿಂದ ಎಷ್ಟೋ ಮನೆಗಳನ್ನು ಸರಕಾರವು ಈಗ ಇವರಿಗಾಗಿ ವಶಪಡಿಸಿಕೊಳ್ಳುತ್ತಲಿದೆ. ಇವರು ಬಂದದ್ದರಿಂದ ಸೀದಾ ಅಂಗಡಿಗಳಲ್ಲಿ ಜೋಳ ಕೂಡ ದೊರೆಯದಾಗಿದೆ. ಈ ನಿರಾಶ್ರಿತರ ಸಲುವಾಗಿ ಸರಕಾರವು "ನ್ಯಾಶನಲ್ ಗಾರ್ಡ್ಸ" ಸಂಸ್ಥೆಯನ್ನು ಪ್ರಾರಂಭ ಮಾಡಿರುವದು. ಹೈದ್ರಾಬಾದ ಮುಸಲ್ಮಾನರ ಸಂರಕ್ಷಣೆಗೆಂದು ಈ ಸಂಸ್ಥೆಯು

ಹುಟ್ಟಿದ್ದಾಗಿದೆ. ಈ ದಲದಲ್ಲಿಯು ಪ್ರತಿಯೊಬ್ಬನಿಗೆ ಪುಕ್ಕಟೆ ಊಟ, ಸಮವಸ್ತ್ರ ದೊರಕುವವಲ್ಲದೆ ದಿನಾಲು ರೂ. ೨ ಭತ್ತೆ ದೊರೆಯುವವು. ನಿರಾಶ್ರಿತರು ಟಿಕೇಟು ಇಲ್ಲದೆ ರೈಲಿನಲ್ಲಿ ಸಂಚರಿಸುವರು. ಈಗ ಎಷ್ಟೋ ದಿನಗಳಿಂದ ನೈಝಾಮ ಸ್ಟೇಟ್ ರೈಲ್ವೆಯ ಮೇಲೆ ಹಿಂದೂ ಪ್ರವಾಸಿಕರಿಗೆ ಟಿಕೇಟು ಕೊಡುವದನ್ನು ನಿಲ್ಲಿಸಿಬಿಡಲಾಗಿದೆ. ಈ ನಿರಾಶ್ರಿತರ ಡಬ್ಬಿಯಲ್ಲಿ ಅಪ್ಪಿತಪ್ಪಿ ಯಾರಾದರೂ ಹಿಂದುಗಳು ಪ್ರವೇಶಿಸಿದರೆ ಅವರನ್ನು ಕಿಡಿಕಿಯೊಳಗಿಂದ ಹೊರಗೆ ನೂಕುವರು ಜಿಥವಾ ಚಾಕುವಿನಿಂದ ಬೆರಳು ಕತ್ತರಿಸುವರು. ಹೀಗಾಗಿ ಹಿಂದುಗಳಿಗೆ ಪ್ರವಾಸವೇ ಗಂಡಾತಂದ್ದಾಗಿದೆ.

ನಿಝಾಮನು "ಇತ್ತಿಹಾದುಲ್ ಮುಸಲ್ಮಾನರು" ಕೈಗೊಂಬೆಯಂತಿದ್ದಾನೆ. ಒಂದು ಕಾಲಕ್ಕೆ ಅವನೇ ಅವರನ್ನು ಏರಿಸಿ ಕೂಡಿಸಿರುವನು. ಈಗ ಅವರು ಮಣಿಯದಂತಾಗಿದ್ದಾರೆ. ಭಾರತ ಪ್ರಜಾ ರಾಜ್ಯದೊಡನೆ ರಾಜಕೀಯ ಒಪ್ಪಂದದ ಮಾತುಕತೆಗಳನ್ನು ಈ ಸಂಸ್ಥೆಯ ಅನುಮತಿಯಂತೆಯೇ ನಿಜಾಮನು ನಿಗೆ ಮಾಡಬೇಕಾಗಿದೆ. ಒಂದು ವೇಳೆ ನಿಜಾಮನು ಭಾರತ ಪ್ರಜಾ ರಾಜ್ಯವನ್ನು ಸೇರಿದರೆ ತಾವು ಬಹಿರಂಗ ಬಂಡಾಯ ಹೂಡುವದಾಗಿ ಅವರು ಸ್ಪಷ್ಟವಾಗಿ ಅವರ ಮುಖಪತ್ರವಾದ "ರಹಬರೀ ಡೆಕ್ಕನ್" ಎಂಬ ಉರ್ದೂ ಪತ್ರದಲ್ಲಿ ಸಾರಿದ್ದಾರೆ.

ಸ್ಟೇಟ ಕಾಂಗ್ರೆಸ್ಸಿನವರು "ಭಾರತ ಒಕ್ಕೂಟವನ್ನು ಕೂಡಿಕೊಳ್ಳಿರಿ ಮತ್ತು ಹೊಣೆಗಾರ ಸರಕಾರ ಸ್ಥಾಪಿಸಿರಿ" ಎಂದು ಅಹಿಂಸಾತ್ಮಕ ಚಳವಳಿಯನ್ನು ಹೂಡಿದ್ದಾರೆ., ಇದರಿಂದ ಸುಮಾರು ೫ ಸಾವಿರ ಮೇಲ್ಪಟ್ಟು ಜನರು ಬಂಧಿಸಲ್ಪಟ್ಟಿರುವರು. ಕಮ್ಯೂನಿಷ್ಟ ಪಕ್ಷದವರು ಜಂಗಲ ಸತ್ಯಾಗ್ರಹ, ತಾರು ಮತ್ತು ರೈಲ್ವೆ ಹಳಿಗಳನ್ನು ಕಡಿಯುವದು ಇವೇ ಮೊದಲಾದ ಆಂದೋಲನ ನಡೆಸಿದ್ದಾರೆ. ಅನೇಕ ಗ್ರಾಮಾಧಿಕಾರಿಗಳು ನೌಕರಿ ಬಿಟ್ಟಿದ್ದಾರೆ. ಗಣ್ವಾಲ, ವನಪರ್ತಿ ಮುಂತಾದ ಚಿಕ್ಕ ಸಂಸ್ಥಾನಗಳು ಹಿಂದೀ ಒಕ್ಕೂಟಕ್ಕೆ ಸೇರುವ ಇಚ್ಛೆ ತೋರಿಸಿವೆ ಸರಕಾರವು ಉಗ್ರವಾದ ದಬ್ಬಾಳಿಕೆಯನ್ನು ನಡೆಸಿದೆ. ಸೆರೆಮನೆಯಲ್ಲಿ ರಾಜಕೀಯ ಕೈದಿಗಳನ್ನು ಬಹಳೇ ಕೀಳುತನದಿಂದ ನಡೆಸಲಾಗುತ್ತಿದೆ. ಕೆಲವು ಹಿಂದಿ ಜನರು ಹೈಕೋರ್ಟ ಜಡ್ಜ, ಮುಂಶಿ, ಡಾಯರೆಕ್ಟರ ಜನರಲ್ ಮುಂತಾದ ಸ್ಥಳಗಳಲ್ಲಿ ಇದ್ದರೂ ಸರಕಾರದ ದಬ್ಬಾಳಿಕೆಯ ವಿರುದ್ಧ ಅವರು ಒಂದು ಅಕ್ಷರ ಸಹ ಉಚ್ಚರಿಸುವದಿಲ್ಲ. ಹಾಗೆ ಮಾಡಿದರೆ ಅವರನ್ನು ಕೂಡಲೆ ಮನೆಗೆ ಕಳಿಸಲಾಗುವದು.

ಹೈದರಾಬಾದ ಹಾಗು ಶಿಕಂದ್ರಾಬಾದ ಶಹರಗಳಿಂದ ಸುಮಾರು ಹಿಂದೂ ವ್ಯಾಪಾರಿಗಳು ಹೆಚ್ಚಾಗಿ ಈಗಾಗಲೇ ಸಂಸ್ಥಾನದ ಹೊರಬಿದ್ದಿರುವರು. ಇನ್ನೂ ದಿನಾಲು ಅನೇಕ ನಗರಂಗಳಿಂದ ಹಿಂದೂ ಜನರು ಹೊರಬೀಳಹತ್ತಿದ್ದಾರೆ. ಸ್ಟೇಶನ್ನಿನ ಮೇಲೆ ಕಸ್ಟಮ ಡಿಪಾರ್ಟ ಮೆಂಟಿನವರು ಅವರನ್ನು ನಾನಾ ತರದಿಂದ ಪೀಡಿಸುವರು. ಬಂಗಾರ, ಬೆಳ್ಳಿ, ನಾಣ್ಯ, ನೋಟು, ಯಾವದನ್ನೂ ಹೊರಗೆ ಒಯ್ಯಗೊಡುವದಿಲ್ಲ. ಸಂಸ್ಥಾನದ ನಗರಗಳಲ್ಲಿ ಪಠಾಣ ಅರಬ ಮುಂತಾದವರು ಸಶಸ್ತ್ರರಾಗಿ ಜನರನ್ನು ಅಂಜಿಸುತ್ತ ಮೆರೆಯುತ್ತಿದ್ದಾರೆ.

ಸಂಸ್ಥಾನದಲ್ಲಿಯ ಹಿಂದೂ ಪ್ರಜೆಗಳು ಅಲ್ಲಿಂದ ಹೊರಬಿದ್ದು ಹೋಗಬೇಕೆಂದು ಅರಬ ಪೋಲೀಸರೂ ನಿವೃತ್ತ ಪಂಜಾಬೀ ಮತ್ತು ಪಠಾಣ ಸೈನಿಕರೂ ಅನೇಕ ತರಹದ ಅತ್ಯಾಚಾರಗಳನ್ನು ನಡೆಸುತ್ತಿದ್ದಾರೆ. ಇದು ಹೈದರಾಬಾದದಲ್ಲಿ ಇದೀಗ ನಡೆದಿರುವ ಮೊಗಲಾಯಿ ಕಾರಭಾರ.

ಆಲೂರು (ಕೊಡ್ಲಿಗಿ)

31-10-47 ನೆಯ ತಾ. ಹರಿಜನ ಕೇರಿಯಲ್ಲಿ ಶ್ರೀ ಯಸ್ ಸಿ. ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ಹರಿಜನ ಪ್ರಚಾರಕರಾದ ಶ್ರೀ ಸೆಟ್ಟಿ ಕೊಟ್ರಪ್ಪನವರು ಹರಿಜನರ ಏಳಿಗೆಗೆ ತಮ್ಮ ಸಲಹೆಗಳನ್ನು ಕೊಟ್ಟರು ನಂತರ ಶ್ರೀ ಪಾಲಭಟ್ಟ ಚನ್ನಬಸಪ್ಪನವರು ಹರಿಜನೋದ್ಧಾರದ ನೀತಿ ಪ್ರತಿಪಾದಿಸಿದರು.

ಜಿನ್ನಾರ ಗುಟ್ಟು ಬಯಲಾಯಿತು.

ಹೊಸದಿಲ್ಲಿ:— ನೇತಾಜಿ ಸುಭಾಸ ಬೋಸರ ಜೊತೆಯಲ್ಲಿದ್ದು ಅವರು ದುರಂತಕ್ಕೆಳಗಾದ ವಿಮಾನದಲ್ಲಿ ಇದ್ದ ಐ ಎನ್. ಎ. ಸೈನ್ಯದ ಮೇಜರ್ ಜನರಲ್ ಕಿಯಾನಿ ಮತ್ತು ಮೇಜರ್ ಜನರಲ್ ಹಬೀಬುರ್ ರಹಿಮಾನ್ ಇವರಿಬ್ಬರೂ ಕಾಶ್ಮೀರದ ಮೇಲೆ ದಾಳಿ ಮಾಡುತ್ತಿರುವ ಗುಂಪಿನ ಮುಂದಾಳತನವನ್ನು ವಹಿಸಿರುವರೆಂಬ ಗುಟ್ಟು ಈಗ ಹೊರಬಿದ್ದಿದೆ. "ಡೇಲಿ ಟೆಲಿಗ್ರಾಫ್" ಪತ್ರಿಕೆಯ ಪಾಕಿಸ್ತಾನದ ಸುದ್ದಿಗಾರನು ಈ ರಹಸ್ಯವನ್ನು ಹೊರಗೆಡವಿರುವನು.

ಈತನ ವರದಿ ಪ್ರಕಾರ ಜಿನ್ನಾರವರು ಕಾಶ್ಮೀರವು ಇಂಡಿಯಾ ಒಕ್ಕೂಟಕ್ಕೆ ಸೇರಿತೆಂದು ತಿಳಿದ ಕೂಡಲೆ ಪಾಕಿಸ್ತಾನ ಸೈನ್ಯದ ಅಕಿಂದ್ ಸೇನಾಧಿಕಾರಿಯಾದ ಜನರಲ್ ಗ್ರೇಸಿಯವರಿಗೆ ಕಾಶ್ಮೀರದ ಮುತ್ತಿಗೆಗೆ ಸೈನ್ಯವನ್ನು ಕೂಡಲೆ ಕಳುಹಿಸಬೇಕೆಂದು ಟೆಲಿಫೋನಿನ ಮೂಲಕ ಆಜ್ಞೆ ಕೊಟ್ಟರು. ಆದರೆ ಜನರಲ್ ಗ್ರೇಸರು ಈ ರೀತಿ ನಾವು ಪ್ರತ್ಯಕ್ಷವಾಗಿ ಸೈನ್ಯವನ್ನು ತೆಗೆದುಕೊಂಡು ಹೋಗುವುದರಿಂದ ಇಂಡಿಯಾದ ಮೇಲೆ ಯುದ್ಧವನ್ನು ಹೂಡಿದಂತಾಗುವುದೆಂದು ಸೂಚಿಸಿದರಂತೆ. ಈ ಮಧ್ಯ ಲಿಚಿನ್‌ಲೆಕರವರು ಲಾಹೋರಿಗೆ ಧಾವಿಸಿ ಬಂದು ಕಾಶ್ಮೀರಕ್ಕೆ ಸೈನ್ಯವು ದಾಳಿಗೆ ಹೋಗುವುದಾದರೆ ತಾನೂ ಮತ್ತು ಇತರ ಬ್ರಿಟಿಶ ಸೈನ್ಯಾಧಿಕಾರಿಗಳೂ ಹಾಗೂ ಬ್ರಿಟಿಶ ಸೈನಿಕರೂ ರಾಜೀನಾಮೆ ಕೊಡುವುದಾಗಿ ಹೆದರಿಸಿದರಂತೆ. ಈ ಕಾರಣಗಳಿಂದ ಜಿನ್ನಾರವರು ತನ್ನ ಪ್ರತ್ಯಕ್ಷ ಯುದ್ಧದ ಯೋಜನೆಯಾದ ಕಾಶ್ಮೀರದ ಮುತ್ತಿಗೆಯನ್ನು ತಡೆಹಿಡಿಯಬೇಕಾಯಿತು. ಆದರೆ ಜಿನ್ನಾರವರು ಈಗ ಕಾಶ್ಮೀರದಲ್ಲಿ ನಡೆಯುತ್ತಿರುವ ದಾಳಿಯಲ್ಲಿ ತನ್ನ ಕೈವಾಡವನ್ನು ಇನ್ನೂ ಹೊರತೆಗೆದಿಲ್ಲವೆಂದು ಈ ಸುದ್ದಿಗಾರನು ತಿಳಿಸುತ್ತಾನೆ.

ಸುಮೀದ ಹಮೀದ (ಲಿಚಿನ್‌ಲೆಕರ ಮೂಜಿ ಆಪ್ತ ಕಾರ್ಯದರ್ಶಿ) ರವರು ಕಾಶ್ಮೀರದ ಮುತ್ತಿಗೆಯ ಯೋಜನೆಯನ್ನು ಜಿನ್ನಾರವರ ಮುಂದಿಟ್ಟಿದ್ದರು ಎಂದು ಗೊತ್ತಾಗಿದೆ.

ಜಗತ್ತಿನ ಸಾಂಸ್ಕೃತಿಕ ಕ್ಷೇತ್ರದಲ್ಲಿ ಏಶಿಯಾದ ಪ್ರಾಮುಖ್ಯ ಪಾತ್ರ

ನ್ಯೂಯಾರ್ಕಿನಲ್ಲಿ ವಿಜಯ ಲಕ್ಷ್ಮಿ ಪಂಡಿತರ ಭಾಷಣ.

ನ್ಯೂಯಾರ್ಕಿನ ಏಶಿಯಾ ಇನ್‌ಸ್ಟಿಟ್ಯೂಟಿನಲ್ಲಿ ತಮಗಾಗಿ ಏರ್ಪಡಿಸಿದ್ದ ಸತ್ಕಾರ ಕೂಟದಲ್ಲಿ ಶ್ರೀಮತಿ ವಿಜಯಲಕ್ಷ್ಮಿಯವರು ಈ ರೀತಿ ಭಾಷಣಮಾಡಿದರು.

ಏಶಿಯಾ ಮತ್ತು ಅಮೇರಿಕೆಯ ಮಧ್ಯೆ ಸಾಂಸ್ಕೃತಿಕ ಸಂಬಂಧವನ್ನು ಬೆಳೆಸಲು ಇಂತಹ ಸಂಸ್ಥೆಗಳು ಅತ್ಯಗತ್ಯ. ಏಶಿಯಾದ ಅನೇಕ ದೇಶಗಳು ವಸಾಹತು ರಾಜ್ಯದ ಪ್ರಭುತ್ವಕ್ಕೆ ಒಳಗಾಗುವ ಮೊದಲೇ ಅವುಗಳಲ್ಲಿ ಸಾಂಸ್ಕೃತಿಕ ಬೆಳವಣಿಗೆಯು ನಡೆದಿತ್ತೆಂಬ ಮಾತಿನಲ್ಲಿ ಸತ್ಯವಿದೆಯೆಂಬುದನ್ನು ನಾನು ಮನಗಂಡಿದ್ದೇನೆ. ಈಗ ಏಶಿಯಾ ಸ್ವತಂತ್ರವಾಗಹತ್ತಿದೆ. ಇನ್ನೇನು ಕೆಲವು ದಿನಗಳಲ್ಲಿಯೇ ಸಂಪೂರ್ಣ ಸ್ವತಂತ್ರವಾಗುವುದು. ಸ್ವಾತಂತ್ರ್ಯ ಏಶಿಯಾವು ಭಾವಿ ಜಗತ್ತಿನ ನಾಗರಿಕತೆ ಹಾಗು ಸಾಂಸ್ಕೃತಿಕ ಕ್ಷೇತ್ರದಲ್ಲಿ ಮೊದಲಿಗಿಂತ ಹೆಚ್ಚು ಪಾತ್ರವಹಿಸುವುದೆಂಬುದಕ್ಕೆ ಸಂದೇಹವಿಲ್ಲ.

ಏಶಿಯಾದ ದೇಶಗಳಿಗೆ ಪರದೇಶದ ಪ್ರಭುತ್ವವನ್ನು ಹೊರಿಸಲು ಮುಂದಾಳಾಗಿ ನಿಂತಿದ್ದ ಅಮೇರಿಕವು ಇಂದು ಏಶಿಯಾದ ಸ್ನೇಹಕ್ಕಾಗಿ ಕೈಚಾಚಿದೆ. ಈಗ ಎಲ್ಲರೊಂದಾಗಿ ಕಾದಾಟಗಳ ಕಾರ್ಪಣ್ಯದಿಂದ ಹೊರಗಾಗುವಂತಹ ನಾಗರೀಕತೆಯ ಸಂಸ್ಕೃತಿಯ ರಾಷ್ಟ್ರವನ್ನು ಕಟ್ಟುವುದಕ್ಕಾಗಿ ಈ ಸ್ನೇಹವು ವಿನಿಯೋಗವಾಗುವುದೆಂದು ನಾನು ನಂಬುತ್ತೇನೆ ಎಂದು ಹೇಳಿದರು.

ವಲ್ಲಭಾಯಿ ಇಂಡಿಯಾದ ಉಕ್ಕಿನ ಮನುಷ್ಯ

ಇಂಡಿಯಾ ಸರ್ಕಾರದ ಉಪಪ್ರಧಾನ ಮಂತ್ರಿಗಳಾದ ಶ್ರೀ ಸರ್ದಾರ್ ವಲ್ಲಭಾಯಿ ಪಟೇಲರಿಗೆ ೭೨ ವರುಷಗಳು ತುಂಬಿದವು. ಈ ಸಂದರ್ಭದಲ್ಲಿ ಯಾವ ವಿಶೇಷ ಆಚರಣೆಯೂ ನಡೆಯಲಿಲ್ಲ. ಸರದಾರರು ತಮ್ಮ ಕಚೇರಿಯಲ್ಲಿ ಕೆಲಸ ಮಾಡುತ್ತಲೇ ಕುಳಿತಿದ್ದರು. ಮಧ್ಯಾಹ್ನ ಬಲವಂತಸಿಂಗರೊಂದಿಗೆ ವಿಲಿಂಟರಿ ಆಸ್ಪತ್ರೆಗೆ ಹೋಗಿ ಕಾಶ್ಮೀರದಿಂದ ಗಾಯಗೊಂಡು ಬಂದಿದ್ದು ಚಿಕಿತ್ಸೆ ಹೊಂದುತ್ತಿದ್ದವರನ್ನು ವಿಚಾರಿಸಿಕೊಂಡು ಬಂದರು.

ಅವರ ವರ್ಧಂತಿಯ ಸಂದರ್ಭದಲ್ಲಿ ಅನೇಕ ಶುಭ ಸಂದೇಶಗಳು ಇವೀ ದಿನವೆಲ್ಲಾ ಬರುತ್ತಲೇ ಇದ್ದವು. ಆಚಾರ್ಯ ಕೃಪ್ಲಾನಿ ಶಂಕರ ರಾವದೇವ ಮತ್ತು ಆಚಾರ್ಯಜುಗಲ್ ಕಿಶೋರ್ ಮತ್ತು ಅನೇಕ ಜನ ಸ್ನೇಹಿತರು ಪಟೇಲರನ್ನು ಭೇಟಿ ಮಾಡಿ ಅವರನ್ನು ವಂದಿಸಿದರು.

ಸರ್ದಾರ್ ೭೩ ನೇ ಜನ್ಮದಿನೋತ್ಸವದ ಸಂದರ್ಭದಲ್ಲಿ ಮುಂಬಯಿಯಲ್ಲಿ ಜಿನ್ನಾ ಹಾಲಿನಲ್ಲಿ ಒಂದು ದೊಡ್ಡ ಸಭೆಯು ಸೇರಿದ್ದಿತು. ಕಾಂಗ್ರೆಸ್ ನಾಯಕ ವಲ್ಲಭ ಪಟೇಲರ ಬಗ್ಗೆ ತಮ್ಮ ಗೌರವವನ್ನು ವ್ಯಕ್ತಪಡಿಸಿದರು

ಮುಂಬೈ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀ ಎಸ್. ಕೆ. ಪಾಟಿಲರು ಮಾತನಾಡುತ್ತಾ ಶ್ರೀ ಸರ್ದಾರರು ಇಂಡಿಯಾದ ಉಕ್ಕಿನ ಮನುಷ್ಯ. ಇಂಡಿಯಾವನ್ನು ಇಂದಿನ ವಿಷ್ಪುಟ್ಟ ಪರಿಸ್ಥಿತಿಯಿಂದ ಪಾರು ಮಾಡುವ ಏಕೈಕ ಸಮರ್ಥಶಾಲಿ ಶ್ರೀ ಸರ್ದಾರ ಪಟೇಲರು ಎಂದು ಹೇಳಿದರು

ಶ್ರೀ ಗಿಡ್ವಾನಿಯನರು ಮಾತನಾಡುತ್ತಾ ಜಿನ್ನಾ ಮತ್ತು ಲಿಯಾಕತ್ ಖಾನರ ಭಾಷಣದ ಬಗ್ಗೆ ಪ್ರಸ್ತಾಪಿಸಿ ಪಾಕಿಸ್ತಾನವು ಯುದ್ಧಕ್ಕೆ ಕಾಲುಕೆರೆದು ನಿಂತಿರುವುದರಿಂದ ಇಂಡಿಯಾದ ಮುಸ್ಲಿಂ ಲೀಗಿನ ಅನುಯಾಯಿಗಳೆಲ್ಲಾ ಪಾಕಿಸ್ತಾನಕ್ಕೆ ಹೋಗಿಬಿಡಲಿ ಎಂದು ಹೇಳಿದರು. ಮತ್ತು ಯುವಕರೆಲ್ಲರೂ ರಾಷ್ಟ್ರಧ್ವಜದ ಗೌರವವನ್ನು ಕಾಪಾಡಲು ಸೈನ್ಯಕ್ಕೆ ಕೂಡಲೇ ಸೇರಬೇಕೆಂದು ಸೂಚಿಸಿದರು.

ನಿಮ್ಮ ಬಲಿದಾನದಿಂದ ಸುಂದರ ಕಾಶ್ಮೀರವನ್ನು ಉಳಿಸಿರಿ

ಹೊಪದಲ್ಲಿ – ಗಾಂಧೀಜಿ ಕನ್ನ ಪ್ರಾರ್ಥನೋತ್ತರ ಭಾಷಣದಲ್ಲಿ ಕಾಶ್ಮೀರದ ಬಗ್ಗೆ ಮಾತನಾಡುತ್ತಾ

"ಎಲ್ಲರೂ ನಿಮ್ಮ ಅಂತರ್ ದೃಷ್ಟಿಯಿಂದ ಕಾಶ್ಮೀರದ ಪರಿಸ್ಥಿತಿಯನ್ನು ಚಿತ್ರಿಸಿಕೊಳ್ಳಿ. ಕಾಶ್ಮೀರದ ಮೇಲೆ ವಿಮಾನಗಳು ಹಾರಿದ ಶಬ್ದವನ್ನು ಕೇಳಿದ ಕೂಡಲೇ ನನ್ನ ಎದೆಯು ಶೇಕ್ ಅಬ್ದುಲ್ಲಾರ ಕಡೆಗೋಡಿತು ಶೇಕ್ ಅಬ್ದುಲ್ಲಾರಿಗೆ ಹಿಂದು ಮುಸ್ಲಿಮರೆಂಬ ಬೇಧವಿಲ್ಲ. ಅವರು ಹಿಂದೂ ಮುಸ್ಲಿಮರಿಬ್ಬರ ಪ್ರತಿನಿಧಿಯೂ ಹೌದು.

ಕಾಶ್ಮೀರದ ಪರಿಸ್ಥಿತಿಯನ್ನು ನೋಡಿ ಯಾರೂ ಎದೆಗುಂದಬಾರದು ಧೈರ್ಯದಿಂದ ತಮ್ಮ ನಾಡನ್ನು ರಕ್ಷಿಸುವ ಸಲುವಾಗಿ ತಮ್ಮ ಪ್ರಾಣಾರ್ಪಣ ಮಾಡಲು ಸಿದ್ಧರಿರಬೇಕು. ಈ ನನ್ನ ಮಾತು ದೊಡ್ಡವರಿಗೂ ಚಿಕ್ಕವರಿಗೂ ಮಕ್ಕಳಿಗೂ ಮತ್ತು ಸ್ತ್ರೀಯರಿಗೂ ಅನ್ವಯಿಸುವುದು.

ಸುಂದರ ಕಾಶ್ಮೀರವನ್ನು ಉಳಿಸಿಕೊಳ್ಳುವ ಸಲುವಾಗಿ ಸೈನ್ಯವೆಲ್ಲಾ ಜೊತೆಗೆ ಕಾಶ್ಮೀರದ ಜನರಿಲ್ಲದ ಪಕ್ಷದಲ್ಲೂ ನಾವದಕ್ಕೆ ಯೋಚಿಸುವುದಿಲ್ಲಾ" ಎಂದು ಹೇಳಿದರು.

ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ನಿಜಲಿಂಗಪ್ಪನವರು ಅಖಿಲ ಕರ್ನಾಟಕ ಏಕೀಕರಣವನ್ನು ಕುರಿತು ಮೈಸೂರು ಮಹಾರಾಜರೊಡನೆ ಕಳೆದವಾರ ಚರ್ಚಿಸಿದರು.

ಹೈದರಾಬಾದು ಅತ್ಯಾಚಾರ.

ಔರಂಗಾಬಾದಿನ ಸ್ಟೇಶನ ರಸ್ತೆಯಲ್ಲಿರುವ ಪೂಜಾಮಂದಿರವನ್ನು ಮುಸಲ್ಮಾನ ಪುಂಡರು ನಾಶ ಮಾಡಿರುವದಾಗಿ ವರದಿಯಾಗಿದೆ ಹೈದರಾಬಾದ್ ಹಿಂದೂ ಪ್ರಮುಖರ ಮೇಲೆ ದಾಳಿಯಾದಾಗ ಹಿಂದೂ ಮಹಾಸಭೆ ಕಾರ್ಯದರ್ಶಿ ಶ್ರೀ ವೀರಭದ್ರಯ್ಯ, ಶ್ರೀ ಎಚ್. ರಾಮಚಂದ್ರಾವ್‌ರಿಗೆ ಭಯಂಕರ ಗಾಯಗಳಾಗಿವೆ ಹಿಂದೂಗಳನ್ನು ನಿರ್ಮೂಲನಮಾಡುವ ಕಾರ್ಯವೇ ಇದೆಂದು ಅವರು ಹೇಳಿದ್ದಾರೆ.

ಕಾಶ್ಮೀರ ರಕ್ಷಣೆಗಾಗಿ ಸರದಾರ ದಲಜಿತ ಸಿಂಗರ ನೇತೃತ್ವದಲ್ಲಿ 5000 ರಾಷ್ಟ್ರೀಯ ಸ್ವಯಂ ಸೇವಕ ದಲನವರು ಸಿದ್ಧರಿದ್ದಾರೆಂದೂ ಶೇಖ ಅಬ್ದುಲ್ಲಾರ ಕರೆಯಾದೊಡನೆ ಅವರು ಕಾಶ್ಮೀರಕ್ಕೆ ಹೋಗುವುದಾಗಿಯೂ ತಿಳಿಸಿದ್ದಾರೆ.

ರಶಿಯಾ ಇರಾಣ ಎಸ್ಸೆ ಒಂಡಬಡಿಕೆಯನ್ನು ಇರಾಣ ಪಾರ್ಲಿಮೆಂಟು ರದ್ದುಮಾಡಿರುವ ಕಾರಣ ರಶಿಯಾವು ವಚನಭಂಗದ ಆಪಾದನೆಯನ್ನು ಹೊರಿಸಿದೆ.

ಹೈದರಾಬಾದ ಚಳವಳಿ— ಕಾಲೇಜು ಹೈಸ್ಕೂಲ್ ಹಿಂದೂವಿದ್ಯಾರ್ಥಿಗಳೆಲ್ಲಾ ಶಾಲೆಗಳಿಗೆ ಬಹಿಷ್ಕಾರ ಹಾಕಿ ಚಳವಳಿಗೆ ಸೇರುತ್ತಿರುವರು. ಔರಂಗಾಬಾದದ ಗಿರಣೀ ಕೂಲಿಗಾರರು ಶಾಲಾಬಾಂಧವರು ಎಲ್ಲರೂ ಇಂಥ ನಿರ್ಣಯಮಾಡಿರುವರು ಈ ವಾರ ನಿಜಾಮರನ್ನು ಕಾಣಹೋಗುತ್ತಲಿದ್ದ ಹಿಂದೂಶಿಷ್ಟ ಮಂಡಳದ ಮೇಲೆ ಲಾಠಿ ಚಾರ್ಜು ನಡೆಯಿತು. ಮುಸಲ್ಮಾನ ಪುಂಡರು ಅವರನ್ನು ಚನ್ನಾಗಿ ಥಳಿಸಿದರು. ನಿಜಾಮರ ಪಠಾಣ ಸೈನಿಕರು ಸಿಕಂದರಾಬಾದಿನಲ್ಲಿ ಮುತ್ತಣ ಭಾಗಗಳಲ್ಲಿ ಬೆಂಕಿಯಿಟ್ಟು ಕೊಲೆ ಸುಲಿಗೆ ಸ್ತ್ರೀಯರ ಮಾನಭಂಗ ಮಾಡುತ್ತಿರುವರು. ಸರದಾರ ಪಟೇಲ ಪ್ರಧಾನಿ ಶ್ರೀ ನಿವಾರ್ತರಾಮರು ನೈಜಾಮ ಪ್ರಶ್ನೆಯ ವಿಷಯವಾಗಿ ಒಂದು ಗಂಟೆಕಾಲ ಪ್ರಧಾನಿಯಲ್ಲಿ ನಿವೇದಿಸಿದರು.

ಕಾಶ್ಮೀರ— ಪಂ. ಜವಹರಲಾಲರ ಹೇಳಿಕೆ.

ನಿನ್ನೆಯ ದಿನಾಂಕ ರಾತ್ರಿ ಪಂಡಿತ ಜವಹರಲಾಲರು ಆಕಾಶವಾಣಿ ಭಾಷಣಮಾಡುತ್ತಾ ದೀರ್ಘವಾದ ಮತ್ತು ಸ್ಪಷ್ಟವಾದ ಹೇಳಿಕೆಯನ್ನು ಕೊಟ್ಟಿರುವರು. "ಕಾಶ್ಮೀರದ ಮೇಲೆ ದಾಳಿಮಾಡುವವರು ಯಾರು? ಅವರು ಯಾವ ಮಾರ್ಗವಾಗಿ ಬಂದರು? ಅವರಿಗೆ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಒದಗಿಸಿಕೊಟ್ಟವರು ಯಾರು? ಇವರು ಪಟ್ಟಣಗಳನ್ನು ಸುಟ್ಟು ಹಿಂದೂ ಸಿಖರನ್ನು ಏಕೆ ಕೊಲ್ಲುತ್ತಿರುವರು ಎಂಬ ಪ್ರಶ್ನೆಗಳನ್ನು ಪಾಕಿಸ್ತಾನಕ್ಕೆ ಕೇಳುವ ಸಮಯ ಬಂದಿದೆ" ಎಂದು ನೆಹರೂರವರು ಕೇಳಿದ್ದಾರೆ. ನಿನ್ನೆ ಡೊಡನೆ ಸ್ನೇಹಭಾವದಿಂದಿರಬೇಕಾದುದು ಪಾಕಿಸ್ತಾನಕ್ಕೆ ತಿಳಿದೂ ಕೂಡ ಈ ಸ್ನೇಹಭಂಗ ಕಾರ್ಯವನ್ನು ಪಾಕಿಸ್ತಾನವು ಕೈಗೊಂಡದ್ದು ವಿಷಾದಕರ ಘಟನೆಯಾಗಿದೆ.

ಶೇಖ ಅಬ್ದುಲ್ಲಾ (ಕಾಶ್ಮೀರದ ಮುಖಂಡರು) ರವರಿಗೆ ಸರ್ವಾಧಿಕಾರ ಕೊಟ್ಟದ್ದು ಶಾಂತತೆಯು ಸ್ಥಾಪಿಸಲಾದಾಗ ಪ್ರಜೆಗಳ ಜೀವಿಕೆಯಂತೆ ಯಾವುದೂ ಕ್ಲೂಟಕ್ಕಾದರೂ ಸೇರಿಕೊಳ್ಳುವ ಕಲಂನ್ನು ಜೋಡಿಸಿದ್ದು ಆಗ ಭಾರತ ಸೈನ್ಯವನ್ನು ಹಿಂದಕ್ಕೆ ತೆಗೆದುಕೊಳ್ಳುವ ಸೂಚನೆ ಈ ವಿಷಯಗಳನ್ನು ನೆಹರೂರವರು ಸ್ಪಷ್ಟಪಡಿಸಿದರು.

ಕಾಶ್ಮೀರದಲ್ಲಿ ದಂಗೆಕೋರರು ಇನ್ನೂ ಶ್ರೀನಗರದ ಸುತ್ತಮುತ್ತ ಇರುವರು. ಭಾರತ ಸೈನ್ಯದಳಪತಿಯ ಮರಣದ ನಂತರ ಹಿಂದೂಸ್ತಾನ ಸೈನ್ಯವು ಸಂಘಟಿತವಾಗುತ್ತಲಿದೆ. ಕಾಶ್ಮೀರದ ಪೋಷ್ಟ ಟೆಲಿಗ್ರಾಫ್ ಶಾಖೆಯನ್ನು ಭಾರತ ಸರ್ಕಾರವು ವಹಿಸಿಕೊಂಡಿದೆ. ಪಾಕಿಸ್ತಾನವು ಇದನ್ನು ಪ್ರತಿಭಟಿಸಿದೆ.

ನವೆಂಬರ್ ತಿಂಗಳಿನಲ್ಲಿ ಮದ್ರಾಸ್ ಸರ್ಕಾರಕ್ಕೆ ಕೇಂದ್ರವು 3000 ಟನ್ ಗೋಧಿಯನ್ನು ಕೊಡಲಿದೆ.

ನವಭಾರತಕ್ಕೆ ಚಂದಾದಾರರಾಗಿರಿ

ಮೋಟಾರ ಕೆಲಸಗಾರರಿಗೆ ಎಚ್ಚರಿಕೆ.

ಮೋಟಾರ ಕೆಲಸಗಾರರಿಗೆ ಮಾಲೀಕರು ತಕ್ಕ ಸಂಬಳ ಅಲೋಯನ್ಸ್ ಕೊಡುತ್ತಲಿಲ್ಲ. ಕೆಲಸ ಹೆಚ್ಚು-ಕಾಲನಿಯಮವಿಲ್ಲ. ಸಂಬಳ ಕಡಮೆ ಮದ್ರಾಸ್ ಪ್ರೋವಿನ್ಸಿಯಲ್ ಮೋಟಾರ ಟ್ರಾನ್ಸಪೋರ್ಟ ಅಂಡ ಜನರಲ್ ವರ್ಕರ್ಸ್ ಫೆಡರೇಶನ್‌ದ 59 ಸಂಘಗಳಿವೆ 79 ಸಾವಿರ ಮೋಟಾರ ಕೆಲಸಗಾರರು ಇದುವರಿವಿಗೆ ಸಂಘಗಳಲ್ಲಿ ಸೇರಿರುವರು. ಈ ಸಂಪತ್ತು ಸರ್ಕಾರವನ್ನು ಒತ್ತಾಯಪಡಿಸಿ ಇದನ್ನೆಲ್ಲಾ ವಿಚಾರಿಸಲು ಸರ್ಕಾರದವರು ಇಬ್ಬರು ಜಡ್ಜಿಗಳನ್ನು ನಿಯಮಿಸುವಂತೆ ಮಾಡಿರುತ್ತಾರೆ. ಈಗ ಸದ್ಯಕ್ಕೆ 50/- ಸಂಬಳದ ವಳಗಿರುವವರಿಗೆ 7-8-0, 55/-ಮೇಲಿದ್ದವರಿಗೆ 5/-ಹೆಚ್ಚು ಕಿಂಗಳಿಗೊಂದಕ್ಕೆ ಕೊಡಬೇಕೆಂದು ಸರ್ಕಾರದವರು ತಾತ್ಕಾಲಿಕವಾಗಿ ಏರ್ಪಡಿಸಿರುವರು. ಇದನ್ನು ಏಪ್ರೆಲ್ 1 ರಿಂದ ಕೊಡಬೇಕು. ಬೋನಸ್ಸನ್ನು ಕೂಡ ಕೊಡಲು ಆಜ್ಞಾಪಿಸಿರುವರು. ರೇಷನ್‌ಕೂಡ ಹೆಚ್ಚಿಗೆ ಕೊಡಬೇಕೆಂದಾಗಿದೆ ಕೆಲಸಗಾರರು ತಮ್ಮ ಹಕ್ಕುಗಳಿಗಾಗಿ ಹೋರಾಡದಿದ್ದರೆ ಅವರ ಪರಿಸ್ಥಿತಿ ಹೇಗೆ ಸುಧಾರಿಸಬೇಕು? ಕೆಲ ಕಾಲದಲ್ಲಿ ಸರ್ಕಾರದವರೇ ಮೋಟಾರ ವ್ಯವಸ್ಥೆಯನ್ನು ಕೈಗೊಳ್ಳುವರು ನೀವು ಈಗಿನಿಂದಲೇ ಬಲಗೊಳ್ಳದಿದ್ದರೆ ಮುಂದೆ ಗವರ್ನಮೆಂಟ ಮೋಟಾರ ಸರ್ವಿಸ್ ನಡೆಸಲು ಮಿಲಟರಿಯವರು ಬರಬಹುದು. ಈ ಕಾರಣ ಸಂಘವನ್ನು ಸೇರಿ ಬಲಪಡಿಸಿರಿ. ಬಳ್ಳಾರಿ ಜಿಲ್ಲಾ ಸಂಘದ ಸಭೆಯು 10-11-47 ಸಾಯಂಕಾಲ ಮಲ್ಲಸಜ್ಜನ ವ್ಯಾಯಾಮಶಾಲೆಯ ಆವರಣದಲ್ಲಿ ನಡೆಯುತ್ತದೆ. ಎಲ್ಲರೂ ಬರಬೇಕು.

ಬಿ. ಭೀಮಸೇನಾಚಾರ್ಯ,
ಬಳ್ಳಾರಿ ಶಾಖೆಯ ಕಾರ್ಯದರ್ಶಿ
ಯಂ. ಸೀತಾರಾಮನಾಯಿಡು,
ಮದ್ರಾಸ್ ಪ್ರಾಂತದ ಫೆಡರೇಷನ್ ಅಧ್ಯಕ್ಷ.

ರೈತರಿಗೆ ತಕಾವಿಸಾಲ.

ತಕಾವಿ ಸಾಲಗಳನ್ನು ಕೊಡುವದರಲ್ಲಿ ರೈತರಿಗೆ ಬಹಳ ತಡವಾಗುತ್ತಿರುವ ಕಾರಣ, ಈ ಅಲಸ್ಯವನ್ನು ಕಡಮೆ ಮಾಡಲು ಸರಕಾರದವರು ನಿಶ್ಚಯಿಸಿರುವರು. ತಕಾವಿಸಾಲಕ್ಕಾಗಿ ಇಟ್ಟ ಅರ್ಜಿಯ ವಿಷಯವು ಎರಡು ತಿಂಗಳಲ್ಲಿ ಇತ್ಯರ್ಥವಾಗಲೇ ಬೇಕು. ಒಂದೊಂದು ತಾಲೂಕಿನಲ್ಲಿ 30 ಜನರಿಗಿಂತಲೂ ಹೆಚ್ಚಿನ ಅರ್ಜಿದಾರರಿದ್ದಲ್ಲಿ ಕಲೆಕ್ಟರವರು ಪ್ರತ್ಯೇಕವಾಗಿ ಒಬ್ಬ ರೆವಿನ್ಯೂ ಇನ್‌ಸ್ಪೆಕ್ಟರನ್ನು ನಿಯಮಿಸಿ ಅರ್ಜಿಗಳನ್ನು ಬಗೆಹರಿಸಬೇಕು.

ರೈತರಿಗಿರುವ ಸಾಲಗಳ ವಿಷಯ ಶೀಘ್ರವಾಗಿ ತಿಳಿಯಲು ರಿಜಸ್ಟ್ರಾರ್ ಆಫೀಸಿನ ಮುಖ್ಯರಿಗೆ ತಿಳಿಸಲಾಗಿದೆ.

ನೋಟೀಸು

ರಾಜಾ ಹೊಸಪೇಟೆ ಡಿಸ್ಟ್ರಿಕ್ಟ ಮುನ್ಸಿಫ್ ಕೋರ್ಟಿನಲ್ಲಿ

OP 23/47

ಶೀಲವಂತ್ರ ಡೀಕಪ್ಪ ವಗೈರೆ | **ಅರ್ಜಿದಾರರು**

ಲೇಟು ಶೀಲವಂತ್ರ ವೀರಪ್ಪನವರು ನಿ ಜನರಲ್ ಅಶೂರೆನ್ಸ್ ಸೊಸೈಟಿ ಲಿಮಿಟೆಡ್ ಅಜ್ಮೀರದಲ್ಲಿ (The General Assurance Society Ltd Ajmer) ಇನ್‌ಶೂರ್ ಮಾಡಿದ ಬಾಬತು ಬರತಕ್ಕ ಮೊತ್ತ 750/-ಗಳಿಗೆ ಅತನ ಹೆಂಡರು ಮತ್ತು ಮೈನರು ಮಗ ವಸೂಲು ಮಾಡಿಕೊಳ್ಳಲು ವಾರಸು ಸರ್ಟಿಫಿಕೇಟಿಗಾಗಿ ಅರ್ಜಿ ಇಟ್ಟಿರುತ್ತಾರೆ. ಸದರ ಅರ್ಜಿ 21-11-47 ಕ್ಕೆ ವಾಯಿದಾ ಇರುತ್ತದೆ. ತಕರಾರು ಇದ್ದವರು ಹಾಜರಾಗತಕ್ಕದ್ದು.

ಹೊಸಪೇಟೆ 5-11-47 | **ಎಸ್. ನಾರಾಯಣರಾವ್**
ಅರ್ಜಿದಾರರ ವಕೀಲರು

ಸರ್ಕಾರ ನವಕರರ ಸಹಕಾರ ಸಂಘ, ಸಿರುಗುಪ್ಪ.

ಮಹಾಶಯರೆ— ಈಗಿರುವ ಆಹಾರ ದುಸ್ಥಿತಿಯ ನಿವಾರಣೆಯಾಗಬೇಕೆಂದರೆ ಪ್ರತಿ ಗ್ರಾಮದಲ್ಲಿ ಸಹಕಾರ ಸಂಘಗಳು ಏರ್ಪಾಟಾಗಬೇಕಾದುದು ಬಹಳ ಅಗತ್ಯವೆಂದು ಬೇರೆ ಹೇಳಬೇಕಿಲ್ಲ. ಆಹಾರ ಧಾನ್ಯಗಳ ಸಂಗ್ರಹವಾದರೂ ಈ ಸಂಘಗಳ ಮೂಲಕವಾಗಿಯಾದರೆ ಬಡಜನರಿಗೆ ಕಷ್ಟವಿಲ್ಲದೆ ಕಾಳುಮೊರೆಯುತ್ತದೆ. ಧನಿ, ನಿರ್ಧನಿಗಳ ಭೇದ ಮತ್ತು ಇವರಲ್ಲಿನ ಸಂಘರ್ಷಣ ಬಹಳಕಾಲವಿದ್ದೀತು. ಅಸ್ಪೃಶ್ಯತಾ ನಿವಾರಣೆ, ಹರಿಜನಾಭಿವೃದ್ಧಿ ಗ್ರಾಮದಲ್ಲಿ ವಿದ್ಯಾವಂತರಾದ ಉಪಾಧ್ಯಾಯರು, ಸುಧಾರಕರು ಎಲ್ಲರುದುರಿದರೆ ಹಳ್ಳಿಗಳ ಬೀಡಾದ ಹಿಂದೂಸ್ತಾನದ ಕಲ್ಯಾಣವು, ಶೀಘ್ರದಲ್ಲಾದೀತು

ಸಾಲದ ಸಂಘ ೧ ಷೇರು ಮೊತ್ತ ರೂ. ೫—೦—೦ ರುಸುಮು ೦—೪—೦
ಸ್ಪೋರ್ಟ ಸಂಘ ೧ ಷೇರು ,, ರೂ. ೨೫—೦—೦ ,, ೧—೪—೦

ಕೊಡ್ಲಿಗಿ ವೆಂಕೋಬರಾವು
ಕಾರ್ಯದರ್ಶಿ
ಸರಕಾರಿನವಕರರ ಸಹಕಾರ ಸಂಘ ಸೀರುಗುಪ್ಪ

ಕರ್ನಾಟಕದ ಏಳಿಗೆಗೆ ದಕ್ಷಿಣಸಂಸ್ಥಾನಗಳು ಬದ್ಧಾಗಬೇಕು.

ಕರ್ನಾಟಕ, ಮಹಾರಾಷ್ಟ್ರಗಳಲ್ಲಿ ಫಲ್ಟನ್, ಔಂಧ, ಭೋರ, ಕುರಿಂದವಾಡ, ರಾಮದುರ್ಗ, ಮೀರಜ್ ಸಾಂಗ್ಲಿ ಈ ಏಳು ಸಂಸ್ಥಾನಗಳು 3495 ಚದರ ಮೈಲಿ ವಿಸ್ತೀರ್ಣ 7,48,000 ಜನ ಸಂಖ್ಯೆ, 58, 83000 ವರಮಾನವನ್ನುಳ್ಳವಾಗಿವೆ. ಲೂಡ್ಲಿಯಾನಾ ಅಧಿವೇಶನದ ನಿರ್ಣಯದ ಪ್ರಕಾರಕ್ಕೆ 50 ಲಕ್ಷ ಕಡಮೆ ವರಮಾನವಿರುವ ಸಂಸ್ಥಾನಗಳು ಭಾಷಾಪ್ರಯುಕ್ತ ವಿಭಜಿಸಲ್ಪಡುವ ರಾಷ್ಟ್ರಗಳಲ್ಲಿ ಸೇರಬೇಕು. ಈ ಪ್ರಕಾರ ಕೆಲವು ಕರ್ನಾಟಕಕ್ಕೂ, ಕೆಲವು ಮಹಾರಾಷ್ಟ್ರಕ್ಕೂ ಸೇರಬೇಕು. ಬ್ರಿಟಿಶ ಕುತಂತ್ರದಿಂದ ಈ ಸಂಸ್ಥಾನಗಳು ಒಂದಾಗಿ ರಾಜ್ಯಭಾರ ಸೂತ್ರಗಳನ್ನು ನಡೆಸುವುದು ತಮ್ಮ ನಿರಂಕುಶತೆಯನ್ನು ಸಾಗಿಸಿದಂತೆ! ಈ ವಿಧಾನದಲ್ಲಿ ಮೋಸವಿರಬೇಕೆಂದು ಗಾಂಧೀಜೀಯವರೂ ಹೇಳಿದ್ದಾರೆ. ಶ್ರೀ ಮುದವಳ್ಳಿ, ನಿಜಲಿಂಗಪ್ಪ ಮುಂತಾದ ಮುಖಂಡರು ಇದನ್ನು ಖಂಡಿಸಿರುವರು ಉದಾಹರಣೆಗಾಗಿ ರಾಮದುರ್ಗ ಸಂಸ್ಥಾನವು ಕರ್ನಾಟಕದ ಧಾರವಾಡ ಬಿಜಾಪುರ, ಬೆಳಗಾವಿಯ ಮಧ್ಯದಲಿದೆ. ಶ್ರೀ ವಿಶ್ವೇಶ್ವರಯ್ಯನವರು ಹೇಳಿದ ಪ್ರಕಾರಕ್ಕೆ 1 ಕೋಟಿ ಖರ್ಚಿಟ್ಟು ನೀರಾವರಿ ಕಾರ್ಯವನ್ನೇರ್ಪಡಿಸಿದರೆ 12 ಚದರ ಮೈಲಿಯ ಜಲಾಶ್ರಯವು ನಿರ್ಮಿತವಾಗಿ ಮೂರು ಜಿಲ್ಲೆಗಳಲ್ಲಿ 2 ಲಕ್ಷ ಎಕರೆ ಸಾಗುವಳಿಯಾಗುತ್ತದೆ. ಅನೇಕ ಹಳ್ಳಿಗಳ ನೀರಿನ ಅಭಾವವು ಮಾಯವಾಗುತ್ತದೆ ಈ ಒಕ್ಕೂಟವು ಆರ್ಥಿಕ ದೃಷ್ಟಿಯಿಂದಲೂ ಹಾನಿಕರವಿದೆ ಸ್ವಜಿಗಳು ಬಲವಾದ ಆಂದೋಳನ ಹೂಡುವವರಿದ್ದಾರೆ. ಈಗಾಗಲೇ ಏಮಿತೋತ್ಸಾಹವು ವ್ಯಕ್ತವಾಗುತ್ತಲಿದೆ.

ಮೈಸೂರು ವಿಜಯೋತ್ಸವವು— ದೇಶದಾದ್ಯಂತ ಅಪೂರ್ವ ಸಂಭ್ರಮದಿಂದ ನಡೆಯಿತು. ಅಂದು ಅನೇಕ ಕೈದಿಗಳ ಬಿಡುಗಡೆಯಾಯಿತು. ಮುಖ್ಯಮಂತ್ರಿಗಳು ತಮ್ಮ ಸಂದೇಶದಲ್ಲಿ ಆಹಾರ ಪರಿಸ್ಥಿತಿಯನ್ನು ಸುಧಾರಿಸುವದಾಗಿಯೂ, ಕಳ್ಳಪೇಟೆ ಲಂಚಗುಳಿತನವನ್ನು ನಿರ್ಮೂಲಗೊಳಿಸುವದಾಗಿಯೂ ಹೇಳಿದ್ದಾರೆ. ಜಾತೀಯ ಸೌಹಾರ್ದ, ಜನತೆ ಸೌಕರರಲ್ಲಿ ಸಮ್ಮಗ ಭಾವ ಹುಟ್ಟಿಸುವರಂತೆ. ಜನಸಾಮಾನ್ಯರ ಜೀವನಮಟ್ಟವನ್ನೇರಿಸಲು ಪ್ರಯತ್ನವಾಗುವುದು

ನಿಜಾಮರಿಗೆ ಸೊಸೆಯ ಬುದ್ಧಿಮಾತು.

ಈಗ ಫ್ರಾನ್ಸ್‌ದೇಶದ ಪ್ಯಾರಿಸ್‌ನಲ್ಲಿರುವ ನಿಜಾಮರ ಹಿರಿಯಸೊಸೆ ರಾಜಪುತ್ರಿ ದುರಾಶಾವಾರ ಈ ಕೆಯು ಹಿಂದೂಸ್ತಾನ ಒಕ್ಕೂಟ ಸೇರಬೇಕೆಂದು ನಿಜಾಮರಿಗೆ ನಮ್ರ ಪೂರ್ವಕವಾಗಿ ಬಿನ್ನವಿಸುವ ತಂತಿಯೊಂದನ್ನು ಕಳುಹಿದ್ದಾಳೆ, ಹಿಂದೂಸ್ತಾನದ ವಿಷಯವಾಗಿ ಸ್ನೇಹದ ಧೋರಣ ತಳೆಯಬೇಕು ಕಠೋರವರ್ತನೆಯನ್ನು ಇಟ್ಟುಕೊಳ್ಳಬಾರದು. ನನ್ನತಂದೆಯಾದ ತುರ್ಕಸ್ತಾನದ ಹಿಂದಿನ ಖಲೀಫನ ಅವಸ್ಥೆ ಏನಾಯಿತೆಂಬುದನ್ನು ಲಕ್ಷದಲ್ಲಿಟ್ಟುಕೊಂಡು ವರ್ತಿಸಬೇಕು. ಎಂದು ಅವಳು ತಂತಿಯಲ್ಲಿ ವಿವರಿಸಿದ್ದಾಳೆ ಎಂದು ಗೊತ್ತಾಗಿದೆ.

ಕಾಶ್ಮೀರದ ಗದಿಯಲ್ಲಿರುವ ಚಿತ್ರಾಲ ಸಂಸ್ಥಾನವು ಕಾಶ್ಮೀರ ಚಕ್ರಾಧಿಪತ್ಯವನ್ನು ಧಿಕ್ಕರಿಸಿ ಪಾಕಿಸ್ತಾನವನ್ನು ಸೇರಿರುವದಾಗಿ ಲಾಹೋರ ಪ್ರಕಟನೆ ತಿಳಿಸುತ್ತದೆ.

ಬೀಹಾರದ ಸಭಾರ್ಥಂಗಾ ಜಿಲ್ಲೆಯಲ್ಲಿ ಐದು ಲಕ್ಷ ಕಾಂಗ್ರೆಸ್ ಸದಸ್ಯರಲ್ಲಿ ಒಂದು ಲಕ್ಷ ಮುಸ್ಲಿಮರು ಕಾಂಗ್ರೆಸ್ ಸೇರಿರುವರು.

— ಕಂಪ್ಲಿ —

ಈ ನೆಯ ದಿನಾಂಕ ಶ್ರೀ ಗಂಗಾಧರಪ್ಪ ದೊಡ್ಡಮನೆ ಇವರ ನೇತೃತ್ವದಲ್ಲಿ ಒಂದು ಸಭೆಯು ಸಮಾವೇಶವಾಗಿದ್ದಿತು. ಬೆಳಗಾವಿಯ ಶ್ರೀ ವೀರಭದ್ರಪ್ಪ ಹಾಲವಾರ್ ಸಂಸ್ಥಾನಗಳ ವಿಷಮ ಪರಿಸ್ಥಿತಿಯನ್ನು ನಿವೇದಿಸಿ ಪ್ರಜೆಗಳ ಸ್ವತಂತ್ರವಾಗಬೇಕೆಂಬ ಆಂದೋಲನಕ್ಕೆ ಎಲ್ಲರು, ಮುಖ್ಯವಾಗಿ ತರುಣರು ಸಹಕರಿಸಬೇಕಾದುದನ್ನು ವಿವರಿಸಿದರು. ಬಳ್ಳಾರಿಯ ಶ್ರೀ ಶಾಂತರುದ್ರಪ್ಪನವರು ತರುಣರ ಕರ್ತವ್ಯಗಳನ್ನು ಸೂಚಿಸಿದರು ತರುಣ ಸಂಘವೊಂದು ಸ್ಥಾಪನೆಯಾಗಿ ಶ್ರೀ ಕೆ. ರಾಚಪ್ಪನವರು ಅಧ್ಯಕ್ಷರಾಗಿಯೂ, ಶ್ರೀ ಬಿ. ಶರಭಣ್ಣನವರು ಕಾರ್ಯದರ್ಶಿಗಳಾಗಿಯೂ, ಆರಿಸಲ್ಪಟ್ಟರು. ಖಾದಿ, ಹಾಗು ವಿಧಾಯಕ ಕಾರ್ಯ, ಸ್ಥಿತ ಸೇವಾದಲ ಸಂಘಟನೆ ಜಾತೀಯ ಸೌಹಾರ್ದ ಇವೇ ಗುರಿ.

ಬಳ್ಳಾರಿ:—ಕಳೆದ ತಿಂಗಳ ಕೊನೆಯದಿನ ಜಿಲ್ಲಾ ಆಹಾರ ಸಮಿತಿಯ ಸಭೆಯು ಸೇರಿದಾಗ ಜಿಲ್ಲೆಯಲ್ಲಿನ ಆಹಾರ ಪರಿಸ್ಥಿತಿ ಸುಧಾರಿಸಿರುವುದನ್ನು ಕಲೆಕ್ಟರವರು ನಿವೇದಿಸಿದರು. ಶ್ರೀ ಭೀಮರಾಯರು ಕಂಟ್ರೋಲಗಳು ಮಾರ್ಚಿ ಅಖೈರವರೆವಿಗೆ ಇರಬೇಕೆಂಬುದನ್ನು ಸೂಚಿಸಿದರು; ಅರ್ಧ ಸಂಖ್ಯಾಕ ಸದಸ್ಯರು ಆಹಾರ ವಸ್ತುಗಳ ನಿಯಂತ್ರಣ ಹೋಗಬೇಕೆಂದು ಅಭಿಪ್ರಾಯಪಟ್ಟರು ಇಲ್ಲಿಯವರೆವಿಗೆ ೧೫೦೦ ಕಂಬ್ಳಿಗಳನ್ನು ಈಗ ಪಂಜಾಬ್ ನಿರಾಶ್ರಿತರಿಗೆ ಕಳುಹಿಸಲಾಗಿದೆ.

ಜುನಾಗಢ– ಕ್ಕೆ ಸೇರಿದ ಬಾಬಾರಿಯಾವಾಡ ಸಂಸ್ಥಾನಗಳಲ್ಲಿ ಹಿಂದೂಸ್ತಾನದ ಸೈನ್ಯವು ಪ್ರವೇಶವಾಗಿದೆ. ಜನಹಿತಕ್ಕಾಗಿ ಆಡಳಿತ ವಹಿಸಿಕೊಳ್ಳಲಾಯಿತೆಂದು ಡೆಲ್ಲಿಯಿಂದ ಪ್ರಕಟನೆಯು ಹೊರಟಿದೆ. ಜುನಾಗಢದ ದಿವಾನನು ಪೋಲೀಸ ಕಮೀಶನರು ಇತರ ಉದ್ಯೋಗಸ್ಥರು ತಮ್ಮ ಹುದ್ದೆಗಳನ್ನು ಬಿಟ್ಟು ಕೊಟ್ಟು ಕರಾಚಿಯಕಡೆ ಪಲಾಯನ ನಡೆಸಿದ್ದಾಗಿ ಗೊತ್ತಾಗಿದೆ.

ಕಾಶ್ಮೀರ ದಾಳಿ:—ಸರ್ದಾರ ಬಲದೇವಸಿಂಗ್ ಮತ್ತು ಸರ್ದಾರ ವಲ್ಲಭಭಾಯಿಪಟೇಲರು ಕಾಶ್ಮೀರಕ್ಕೆ ಹೋಗಿ ಸೈನ್ಯಗಳ ಚಲನ ವಲನ ಪರಿಸ್ಥಿತಿಯನ್ನರಿತು ತಕ್ಕ ಸಲಹೆಗಳನ್ನು ಕೊಟ್ಟು ಬಂದರು. ಹಿಂದುಸ್ತಾನ ಸೈನ್ಯವು ದಾಳಿಗಾರರ ಮೇಲೆ ಏರಿಹೋಗಿ ಅವರಿಗೆ ವಿಶೇಷ ಹಾನಿಮಾಡಿಬಂದಿದೆ. ಶ್ರೀ ನಗರಕ್ಕೆ ಇನ್ನೂ ಅಪಾಯ ತಪ್ಪಿದ್ದಲ್ಲವೆಂದು ಹೇಳಲಾಗಿದೆ

ಕಾನಾಮಡುಗು.

30-10-47 ನೆಯ ದಿನಾಂಕ ಸಾಯಂಕಾಲ 4 ಗಂಟೆಗೆ ಬಾಪೂಜಿ ತರುಣಸಂಘದ ಉಪಾಧ್ಯಕ್ಷರಾದ A. S. M. ಚನ್ನಬಸಯ್ಯನವರ ಅಧ್ಯಕ್ಷತೆಯಲ್ಲಿ ಹರಿಜನೋದ್ಧಾರ ವಿಷಯದ ಮೇಲೆ ಶ್ರೀ ಕೊಟ್ರಪ್ಪನವರ ಸವಿಸ್ತಾರ ಭಾಷಣವಾಯಿತು. ಬಾ. ತ. ಸಂಘದ ಕಾರ್ಯದರ್ಶಿಗಳು ಆಭಾರ ಮನ್ನಣೆ ಮಾಡಿದರು.

224

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್,

ಮುಖ್ಯ ಕಛೇರಿ — ಬಳ್ಳಾರಿ. ಸ್ಥಾಪಿತ : 193

ಬಳ್ಳಾರಿ, ಅನಂತಪುರ, ಕಡಪ, ಕರ್ನೂಲ ಮತ್ತು ಚಿತ್ತೂರು ಜಿಲ್ಲೆಗಳ
ಆರ್ಥಿಕಾಭಿವೃದ್ಧಿ ಉದ್ದೇಶದಿಂದ ಸ್ಥಾಪಿತವಾಗಿದೆ.

ಛೇರ್ಮನ್ ಬ್ಯಾಂಕ್ ಆಫ್ ಡಾಯರೆಕ್ಟರ್ಸ :- ಶ್ರೀ ಹೆಚ್. ಲಿಂಗಾರೆಡ್ಡಿ ಬಿ. ಎ. ಬಿ. ಯಲ್.
ಬಳ್ಳಾರಿ.

ಸ್ಥಾಯಿಠೇವಣಿ [ಫಿಕ್ಸಡ್-ಡಿಪಾಜಿಟ್] ದರಗಳು

3, 4, 5	ತಿಂಗಳುಗಳಿಗೆ	ಶೇಕಡ ಬಡ್ಡಿದರ ರೂ.	2-0-0
6	,,	,,	2-8-0
1	ವರ್ಷಕ್ಕೆ	,,	3-0-0
2	,,	,,	3-8-0

2 **ಕ್ಯಾಷ್ ಸರ್ಟಿಫಿಕೇಟುಗಳು** ಬಡ್ಡಿಯ ಸಹಿತ 100 ಕ್ಕೆ 1 ವರ್ಷಕ್ಕೆ 3-8-0
10-0-0 ಸರ್ಟಿಫಿಕೇಟ್ — ಕೊಡುವ ಧರ ರೂ. 9-0-3

3 **ಚಾಲು ಖಾತೆ** (ಕರೆಂಟು ಅಕೌಂಟು) ಬಡ್ಡಿ ಶೇಕಡ ರೂ 1/-

4 **ಸೇವಿಂಗ್ಸ್ ಬ್ಯಾಂಕು ಅಕೌಂಟು** :- ವಾರದಲ್ಲಿ ಎರಡು ಸಲ ರೂ. 250 ಗಳಿಗೆ ಮಿಂಚದೆ ಹಣ ತೆಗೆದುಕೊಳ್ಳಬೇಕು. 1 ವರ್ಷಕ್ಕೆ ಶೇಕಡ ರೂ 2/-

ಬ್ಯಾಂಕಿನ 27 ಶಾಖೆಗಳಲ್ಲಿ ಲೆಕ್ಕಗಳನ್ನು ಪ್ರಾರಂಭಿಸಬಹುದು. ಇತರ ಎಲ್ಲಾ ವಿಧವಾದ ಬ್ಯಾಂಕು ಸೌಕರ್ಯಗಳು ಒದಗಿಸಲಾಗಿವೆ.

ಬಿ. ವಿ. ಶೇಷಗಿರಿರಾವ್, ಬಿ. ಕಾಂ.
ಕಾರ್ಯದರ್ಶಿ

NAVA BHARAT, BELLARY. Reg. No. M. 1746

ನವಭಾರತ ಬಳ್ಳಾರಿ.
(Nationalist Weekly)

ಚಂದಾದರಗಳು.	Subscription Rates
ವರ್ಷಕ್ಕೆ 5-0-0	One Year 5 0—0
6 ತಿಂಗಳಿಗೆ 3-0-0	Six months 3 0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months

To
Sri.....
.....
.....
.....
.....
.....
.....
.....

Printed at Krishna Press Bellary QH No. B 17 FOR (Q.H. NO. B-5.)
Edited & Published by T. B. KRISHNA RAO

ಜೈಹಿಂದ್ Reg. No. M. 4746

ಸಮಾಚಾರ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ಸಂಪುಟ ೧೦ ಸಂಚಿಕೆ ೪೪ | ಬಳ್ಳಾರಿ ನವಂಬರು ೧೭ ಸೋಮವಾರ ೧೯೪೭ | ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವ್.

The Bellary Central Co-operative Stores Ltd.

Applications are invited for the posts of Managers, Branch Managers and Accountants. The candidates should have passed at least S. S. L. C and Co-operative training. Persons with previous experience in accounts and business will be preferred. Cash security is essential.

BELLARY
10—11—47

H. LINGA REDDY, B.A., B.L.,
President.

ಬಳ್ಳಾರಿ ಶೆಂಟ್ರಲ್ ಕೋ ಆಪರೇಟಿವ್ ಸ್ಟೋರ್ಸ್ ಲಿಮಿಟೆಡ್.

ವ್ಯವಸ್ಥಾಪಕ, ಶಾಖಾವ್ಯವಸ್ಥಾಪಕ, ಮತ್ತು ಗಣಿತಜ್ಞರ ಸ್ಥಳಗಳಿಗಾಗಿ ಅರ್ಜಿಗಳನ್ನು ಸ್ವಾಗತಿಸುತ್ತೇನೆ. ಅರ್ಜಿದಾರರು ಕೊನೆಯಪಕ್ಷಕ್ಕೆ ಎಸ್. ಎಸ್. ಎಲ್. ಸಿ ಯಲ್ಲಿ ತೇರ್ಗಡೆಹೊಂದಿ, ಸಹಕಾರಿ ಶಿಕ್ಷಣವನ್ನು ಪಡೆದವರಾಗಿರಬೇಕು. ಲೆಕ್ಕ ಪತ್ರ ಮತ್ತು ವ್ಯಾಪಾರೀವ್ಯವಹಾರದಲ್ಲಿ ಹಿಂದಿನ ಅನುಭವನಿದ್ದವರಿಗೆ ಪ್ರಾಶಸ್ತ್ಯ ಕೊಡಲಾಗುವುದು. ಹಣದ ಜೇವು ಅಗತ್ಯವುಂಟು.

ಬಳ್ಳಾರಿ.
10-11-1947

ಹೆಚ್. ಲಿಂಗಾರೆಡ್ಡಿ ಬಿ. ಎ. ಬಿ. ಯಲ್
ಅಧ್ಯಕ್ಷ.

ಹೊಸ ವಿಶ್ವವಿದ್ಯಾಲಯಗಳು.

ಕಳೆದ ಸಲ ಹರಿಜನದಲ್ಲಿ ಮಹಾತ್ಮ ಗಾಂಧಿಯವರು "ಹೊಸ ವಿಶ್ವವಿದ್ಯಾಲಯಗಳು" ಎಂಬ ವಿಷಯದ ಮೇಲೆ ಬರೆದ ಲೇಖನದಲ್ಲಿ ಹೀಗೆ ಅಭಿಪ್ರಾಯ ವ್ಯಕ್ತಮಾಡಿದ್ದಾರೆ.

"ಇತ್ತೀಚೆಗೆ" ಹೊಸ ವಿಶ್ವವಿದ್ಯಾಲಯ ಸ್ಥಾಪಿಸುವ ಪಿಡುಗು ಹಬ್ಬಿದೆ. ಗುಜರಾತಿಗಳಿಗಾಗಿ ಗುಜರಾತ, ಮರಾಠಿಗರಿಗಾಗಿ ಮಹಾರಾಷ್ಟ್ರ, ಕನಡಿಗರಿಗಾಗಿ ಕರ್ನಾಟಕ, ಒರಿಯ ಜನರಿಗಾಗಿ ಒರಿಸಾ, ಅಸಾಮಿ ಜನರಿಗಾಗಿ ಅಸಾಮ, ಹೀಗೆ ಅನೇಕಾನೇಕ ವಿಶ್ವವಿದ್ಯಾಲಯಗಳ ಬೇಡಿಕೆ ಇದೆ. ಪ್ರಾಂತಗಳ ಜನರ ಮಾತೃಭಾಷೆ ಹಾಗೂ ಆ ಭಾಷಗಳನ್ನಾಡುವ ಜನರ ಉತ್ಕರ್ಷವಾಗಲು ಇಂಥ ಭಾಷಾವಾರು ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವ ಅವಶ್ಯಕತೆ ಇದೆ ಎಂದು ನಾನು ನಂಬುತ್ತೇನೆ.

ಆದರೆ ಅನಾವಶ್ಯಕ ಅವಸರದಿಂದ ಇಂಥ ಪ್ರಾಂತಿಕ ವಿಶ್ವವಿದ್ಯಾಲಯ ಸ್ಥಾಪಿಸುವದರಿಂದ ನಾವು ನಮ್ಮ ಗುರಿಯನ್ನು ಸಾಧಿಸಲು ಅತುರಪಡುತ್ತಿರುವೆವೆಂದು ನಾನು ಭಾವಿಸುವೆ ಮೊದಲನೆಯ ಕೆಲಸವೆಂದರೆ ಭಾಷಾವಾರು ಪ್ರಾಂತರಚನೆಮಾಡಬೇಕು. ಆ ಬಳಿಕ ಪ್ರಾಂತದ ಆಡಳಿತ ಬೇರೆಯಾಗಿ ಸಾಗಿದ ನಂತರ ಸ್ವಾಭಾವಿಕವಾಗಿ ಯಾವ ಪ್ರಾಂತದಲ್ಲಿ ವಿಶ್ವವಿದ್ಯಾಲಯವಿಲ್ಲವೋ ಅಲ್ಲಿ ವಿಶ್ವವಿದ್ಯಾಲಯ ಸ್ಥಾಪಿಸಲಾಗುವದು. ಮುಂಬಯಿ ಪ್ರಾಂತದಲ್ಲಿ ಗುಜರಾತಿ, ಮರಾಠಿ, ಕನ್ನಡ ಹೀಗೆ ಮೂರು ಭಾಷೆಗಳ ಪ್ರದೇಶ ಅಡಕವಾಗಿದೆ. ಮದ್ರಾಸು ಪ್ರಾಂತದಲ್ಲಿ ತಮಿಳು, ತೆಲುಗು, ಮಳೆಯಾಳ, ಕನ್ನಡ ಹೀಗೆ ನಾಲ್ಕು ಭಾಷೆಗಳ ಪ್ರದೇಶ ಸೇರಿಕೊಂಡಿದೆ. ಆಂಧ್ರ ದೇಶಕ್ಕೆ ಆಂಧ್ರ ವಿಶ್ವವಿದ್ಯಾಲಯವಿದ್ದರೂ ಅದಕ್ಕೆ ಆಂಧ್ರ ಪ್ರಾಂತವಿದ್ದರೆ ಇರಬೇಕಾದ ಸ್ಥಾನಮಾನ ಈಗ ಇಲ್ಲ ಇದೇ ಮಾತನ್ನೇ ಅನ್ನಾಮಲೈ ವಿಶ್ವವಿದ್ಯಾಲಯದ ಬಗ್ಗೆಯೂ ಹೇಳಬಹುದು. ಈ ವಿಶ್ವವಿದ್ಯಾಲಯದಲ್ಲಿ ತಮಿಳು ಭಾಷೆಗೆ ಇರಬೇಕಾದ ಸ್ಥಾನವಿದೆ. ಎಂದು ಯಾರು ಹೇಳಬಲ್ಲರು? ವಿದೇಶ ಪ್ರಭುತ್ವದ ಬಲೆಯಿಂದ ಹಿಂದೂಸ್ಥಾನವು ಬಿಡುಗಡೆ ಹೊಂದಿ ಈಗ ಎರಡು ತಿಂಗಳು ಮಾತ್ರ ಆಗಿದೆ.

ವಿಶ್ವವಿದ್ಯಾಲಯವು ಸ್ಥಾಪಿಸಲು ಯೋಗ್ಯವಾ ತಾವರಣ ಉಂಟಾಗಬೇಕು ಆ ಸಂಖ್ಯೆಯಶಾಲೆ ಕಾಲೇಜುಗಳು ವಿಶ್ವವಿದ್ಯಾಲಯ ಶಿಕ್ಷಣಕ್ಕೆ ವಿದ್ಯಾರ್ಥಿಗಳನ್ನು ಪ್ರಾಂತದ ಭಾಷೆಯಲ್ಲಿಯೇ ಶಿಕ್ಷಣ ಕೊಟ್ಟು ಅಣಿ ಮಾಡಬೇಕಾಗುವದು. ಅಂದರೆ ವಿಶ್ವವಿದ್ಯಾಲಯ ಸ್ಥಾಪನೆಗೆ ಅನುಕೂಲವಾಗುವದು. ಯೋಗ್ಯ ತಳಹದಿ ಇದ್ದರೆ ಮಾತ್ರ ಮೇಲಿನ ಭವ್ಯ ಕಟ್ಟಡ ನಿಲ್ಲಬಲ್ಲದು.

ನಾವು ರಾಜಕೀಯ ದೃಷ್ಟಿಯಿಂದ ಸ್ವತಂತ್ರರಾಗಿದ್ದರೂ ಪಾಶ್ಚಾತ್ಯ ಸೂಕ್ಷ್ಮ ವರ್ಚಸ್ಸಿನಿಂದ ಇನ್ನೂ ಸ್ವತಂತ್ರರಾಗಿಲ್ಲ. ವಿದೇಶ ಪ್ರಭುತ್ವ ಹೋದೊಡನೆಯೇ ವಿದೇಶೀಯರ ವರ್ಚಸ್ಸೂ ಅವರ ಭಾಷೆಯ ಪ್ರಭಾವವೂ ಹೋಗುವವೆಂದು ತಿಳಿಯುವದು ತಪ್ಪಾಗಬಹುದು. ಹೊಸ ವಿಶ್ವವಿದ್ಯಾಲಯ ಸ್ಥಾಪನೆಗಿಂತ ಮೊದಲು ನಾವು ಹೊಸದಾಗಿ ಪಡೆದಿರುವ ಸ್ವಾತಂತ್ರ್ಯದ ಫಲವನ್ನು ಅನುಭವಿಸಬೇಕು. ವಿಶ್ವವಿದ್ಯಾಲಯಕ್ಕೆ ಭವ್ಯವಾದ ಅನೇಕ ಕಟ್ಟಡ, ಗ್ರಂಥಧನ ಸಂಗ್ರಹ ಇವಾವುವೂ ಬೇಕಿಲ್ಲ. ವಿಶ್ವವಿದ್ಯಾಲಯಕ್ಕೆ ಬೇಕಾದುದು ಜನತಾ ಬೆಂಬಲ, ಹಾಗೂ ಅಸಂಖ್ಯ ಶಿಕ್ಷಕರ ತಂಡ. ವಿಶ್ವವಿದ್ಯಾಲಯಕ್ಕೆ ಜನರೇ ಹಣ ಕೂಡಿಸಬೇಕು. ವಿದೇಶೀಯರ ಪ್ರಭುತ್ವದಲ್ಲಿ ಎಲ್ಲವೂ ಮೇಲಿನಿಂದಲೇ ಬರುವ ವಾಡಿಕೆ ಇರುವದು ಸ್ವಾಭಾವಿಕ. ಆಗ ಸರಕಾರವೇ ಹಣ ಹಾಕಿ ವಿಶ್ವವಿದ್ಯಾಲಯ ಸ್ಥಾಪಿಸುತ್ತಿದ್ದಂತೆ ಈಗ ಪ್ರಜಾಪ್ರಭುತ್ವದ ಕಾಲದಲ್ಲಿ ಹಾಗೆ ಅಪೇಕ್ಷಿಸುವದು ಯೋಗ್ಯವಲ್ಲ.

ವಿಶ್ವವಿದ್ಯಾಲಯಕ್ಕೆ ಹಾಕಿದ ಹಣವು ಯೋಗ್ಯ ಭೂಮಿಯಲ್ಲಿ ಬಿತ್ತಿದ ಬೀಜದಂತೆ ಒಳ್ಳೆಯಫಲ ಕೊಡ ಬಲ್ಲದು. ಆದುದರಿಂದ ಜನರು ತಾವೇ ಹಣ ಹಾಕಿ ತಮಗೆ ಬೇಕಾದ ವಿಶ್ವವಿದ್ಯಾಲಯವನ್ನು ಯೋಗ್ಯ ಸಮಯ ಬಂದಾಗ ಸ್ಥಾಪಿಸಿಕೊಳ್ಳಬಹುದು.

ಸ್ವತಂತ್ರ ಹಿಂದುಸ್ತಾನದಲ್ಲಿ ಮೂಲ ಶಿಕ್ಷಣಕ್ಕೆ ಪ್ರಾಧಾನ್ಯವಿರಬೇಕು. ವಿಶ್ವವಿದ್ಯಾಲಯದಲ್ಲಿ ಅವರ ಸ್ಥಾನಮಾನ ನಿರ್ಧಾರವಾಗಲು ಕೆಲ ವರ್ಷಗಳು ಬೇಕಾಗಬಹುದು. ಈಗಲೆ ವಿಶ್ವವಿದ್ಯಾಲಯ ಸ್ಥಾಪಿಸಿದರೆ ಮೂಲ ಶಿಕ್ಷಣದ ವ್ಯವಸ್ಥೆಏನು?

ಮೂಲ ಶಿಕ್ಷಣವು ಕಳೆದ 8 ವರ್ಷಗಳ ಹಿಂದೆಯೇ ಜನತೆಯ ಮುಂದೆ ಬಂದಿದೆ. ಯಾವ ಶಿಕ್ಷಣ ತಜ್ಞನಿಗೂ ಈ ಶಿಕ್ಷಣ ಪದ್ಧತಿಯನ್ನು ಅಲ್ಲಗಳೆಯುವದು ಜಾಣತನದ್ದಾಗಲಾರದು. ಈ ಶಿಕ್ಷಣವು ಹಳ್ಳಿಗಳ ವಾತಾವರಣದಲ್ಲಿ ಹುಟ್ಟಿ ಬೆಳೆದು ಬಂದಿದೆ. ಹಿಂದುಸ್ತಾನವೆಂದರೆ ಅಸಂಖ್ಯ ಹಳ್ಳಿಗಳೇ ಹೊರತು ಪಾಶ್ಚಾತ್ಯರ ಆಳಿಕೆಯಲ್ಲಿ ತಲೆ ಎತ್ತಿದ ನಗರಗಳಲ್ಲ. ಈ ಹಳ್ಳಿಗಳನ್ನು ಮರೆತರೆ ಹಿಂದುಸ್ತಾನವನ್ನೇ ಮರೆತಂತೆ. ಈ ಮೂಲ ಶಿಕ್ಷಣದ ಮೂಲತತ್ವಗಳು ಇಂತಿವೆ.

1 ನಿಜವಾದ ಎಲ್ಲ ಶಿಕ್ಷಣವೂ ಸ್ವಾವಲಂಬಿಯಾಗಿರಬೇಕು.

2 ಶಿಕ್ಷಣವು ಕೈಕೆಲಸದ ಮೂಲಕ ಕೊಡಲಾಗುವದು.

3 ಈ ಶಿಕ್ಷಣದಲ್ಲಿ ಯಾವದೊಂದು ಧರ್ಮದ ಇಲ್ಲವೆ ಪಂಗಡದ ಶಿಕ್ಷಣಕ್ಕೆ ಸ್ಥಾನವಿಲ್ಲ. ಇದರಲ್ಲಿ ಮಾನವತೆಯ ಮುಲಭೂತ ನೀತಿ ತತ್ವಗಳಿಗೆ ಮಾತ್ರ ಸ್ಥಾನವಿದೆ.

4 ಈ ಶಿಕ್ಷಣವೆಲ್ಲ ಪ್ರಾಂತಿಕ ಭಾಷೆಯಮೂಲಕವೇ ಕೊಡತಕ್ಕದ್ದು

5 ಶಿಕ್ಷಣವನ್ನು ಬಾಲ, ವೃದ್ಧ, ಸ್ತ್ರೀಪುರುಷ– ಯಾರಿಗೇ ಕೊಟ್ಟರೂ ಅವರ ಮನೆಯಲ್ಲಿ ಈ ಶಿಕ್ಷಣದ ಪ್ರವೇಶ ತಂತಾನೇ ಆಗಬೇಕು.

6 ಈ ಶಿಕ್ಷಣ ಪಡೆಯು ವಿದ್ಯಾರ್ಥಿಗಳು ಹಿಂದುಸ್ತಾನದ ನಾಗರಿಕರಾಗುವದರಿಂದ ಅಂತಃ ಪ್ರಾಂತೀಯ ಹಿಂದುಸ್ತಾನಿ, ಉರ್ದು ಮತ್ತು ನಾಗರಿ ಲಿಪಿಗಳೂ ಕಲಿಸಲ್ಪಡುವವು.

ಆದುದರಿಂದ ಎಲ್ಲ ಶಿಕ್ಷಣಾಭಿಮಾನಿಗಳಿಗೂ ವಿಶ್ವವಿದ್ಯಾಲಯ ಸ್ಥಾಪನೆಗೆ ನ್ಯಾಯವಾಗಿ ಕೆಲವೊಂದು ಸಮಯ ಕಾಯಬೇಕಾಗುವದೆಂಬ ಮಾತು ಮನದಟ್ಟಾಗಬಹುದೆಂದು ನಾನು ಭಾವಿಸುವೆ.

3೫ ಲಕ್ಷ ಕನ್ನಡಿಗರ ನಿರೋಪ.

"ಭಾಷಾವಾರು ಪ್ರಾಂತರಚನೆಯ ತತ್ವದ ಮೇಲೆ ಕರ್ನಾಟಕ ಪ್ರಾಂತದ ನಿರ್ಮಾಣವು ಭಾರತ ವಕ್ಕೂಟಕ್ಕೆ ಪೋಷಕ ಎರಡುಕೋಟಿ ಜನ ಕನ್ನಡಿಗರ ಪ್ರಜಾಪ್ರಭುತತ್ವಕ್ಕನುಗುಣವಾದ ಬೇಡಿಕೆಯನ್ನು ಮಾನ್ಯಮಾಡಬೇಕು" ಎಂದು ಪ್ರತಿಯೊಂದು ಹಾಳಿಯಮೇಲ್ಬಾಗದಲ್ಲಿ ಬರೆದು ಸಂಖೆ ಹೆಸರು ಉದ್ಯೋಗ ಸಹಿಹಾಕಿಸಿ ಹಿಂದೀಒಕ್ಕೂಟದ ಘಟನಾಸಮಿತಿ ಅಧ್ಯಕ್ಷರಾದ ರಾಜೇಂದ್ರಬಾಬುಗಳಿಗೆ ವಿಕೀಕರಣ ಮಹಾಸಮಿತಿ ಹುಬ್ಬಳ್ಳಿ ಇವರ ಮುಖಾಂತರ ಕಳುಹಿಸಬೇಕು. ಎಂದು ಅಧ್ಯಕ್ಷರಾದ ಶ್ರೀ ಎಸ್. ನಿಜಲಿಂಗಪ್ಪನವರು ಕೋರಿರುವರು.

ಗಡಿನಾಡ ಮುಖ್ಯ ಮಂತ್ರಿ ಕಾಶ್ಮೀರ ದಾಳಿಗಾರರ ನಾಯಕರು.

ಕಾಶ್ಮೀರ ದಾಳಿಗಾರರ ಮುಖ್ಯಠಾಣೆಯು ಹಜಾರಾದಲ್ಲಿದೆ. ಅದರ ಎಲ್ಲಾ ಚಟುವಟಿಕೆಗಳನ್ನು ಗಡಿನಾಡ ಮುಖ್ಯ ಮಂತ್ರಿ ಕಯ್ಯೂಮ್ ಖಾನರು ಸೇನಾಧಿಪತಿಗಳಾದ ಅವರ ತಮ್ಮಂದಿರ ಮೂಲಕ ನಡೆಸುತ್ತಿರುವರು. ಎಂದು ಅಮೃತ ಬಜಾರ ಪತ್ರಿಕೆಯು ಬರೆದಿದೆ.

ಕ್ರಾಂತಿಕಾರಿ ಸಮತಾವಾದಿಸಂಘ

೧೧ ನೆಯ ದಿನಾಂಕ ಪ್ರಭಾತಟಾಕೀಜದಲ್ಲಿ ಶ್ರೀ ಸತ್ಯವಂತರಾವ್, ರಮೇಶ್ ಇವರು ಕ್ರಾಂತಿಕಾರಿ ಸಮತಾವಾದಿ ಸಂಘದ ತತ್ವಗಳನ್ನು ಹೇಳಿದರು. ಕಾಮ್ರೇಡ್ ನಿಪಾಣಿಯವರು ಮಾತಾಡುವಾಗ ಗಲಭೆಯಾಯಿತು. ಸಂಗೀತ ಕಾರ್ಯಕ್ರಮವಿತ್ತು.

10th Year of Publication
Monday, 17th November 1947.

ಜುನಾಗಡವು ಶರಣಾಗತವಾಯಿತು.

ಜುನಾಗಡ ನವಾಬರು ಕೇಳಿಕೊಂಡ ಪ್ರಕಾರಕ್ಕೆ ಇಂಡಿಯಾ ಒಕ್ಕೂಟ ಸೈನ್ಯವು 9 ನೆಯ ದಿನಾಂಕ ಜುನಾಗಢನನ್ನು ಪ್ರವೇಶಿಸಿತು. ಜುನಾಗಢದ ನಾಗರೀಕರು ರಸ್ತೆಗಳ ಇಬ್ಬಂದಿಯಲ್ಲಿಯೂ ನಿಂತು ಸೈನಿಕರನ್ನು ಹರ್ಷೋದ್ಗಾರಗಳಿಂದ ಸ್ವಾಗತಿಸಿದರು. ಮೇಜರ್ ಹಾವೇಜೋನ್ಸರವರು ತಾತ್ಪೂರ್ತಿಕ ಸರಕಾರದ ಅಧ್ಯಕ್ಷರಾದ ಶ್ರೀ ಶಾಮಲದಾಸ ಗಾಂಧಿಯವರಿಂದ ಪಟ್ಟಣವನ್ನು ವಶಪಡಿಸಿಕೊಂಡರು. ಜುನಾಗಢದಲ್ಲಿ ಶಾಂತಿ ಸುವ್ಯವಸ್ಥೆಗಳಿಗೆ ಭಂಗ ಬರುವಂತಿರುವ ಕಾರಣ ಜುನಾಗಢದಾಡಳಿತವನ್ನು ಇಂಡಿಯಾ ಒಕ್ಕೂಟ ಸರ್ಕಾರವು ವಹಿಸಬೇಕೆಂದು ಮಂತ್ರಿಮಂಡಳಿಯ ನಿರ್ಧಾರವನ್ನು ತಿಳಿಸಿದರು. ಮಂತ್ರಿಮಂಡಳಿಯ ಈ ನಿರ್ಧಾರಕ್ಕೆ ಮುಸ್ಲಿಂ ಜನಾಯತ್ ಪಕ್ಷದ ಮತ್ತು ದಿವಾನ ಶಹಾನವಾಜ ಭೂತೋರವರ ಸಂಪೂರ್ಣ ಒಪ್ಪಿಗೆ ಇದೆಯೆಂದು ಪ್ರಕಟವಾಗಿದೆ. ಜುನಾಗಢ ಸೈನಿಕರನ್ನು ನಿಶ್ಶಸ್ತ್ರಗೊಳಿಸಲಾಗಿದೆ

ಭಾರತ ಒಕ್ಕೂಟವನ್ನು ಸೇರದಿರುವ ಹೈದರಾಬಾದು ಸಂಸ್ಥಾನವು ಇದರಿಂದ ಪಾಠಕಲಿಯಬೇಕು. ಹೈದರಾಬಾದಿನಲ್ಲಿ ಶೇಕಡ 85 ಜನ ಹಿಂದೂಗಳಿದ್ದಾರೆ ಅಲ್ಲದೆ ಹೈದರಾಬಾದು ಸುತ್ತ ನೂರಾರು ಮೈಲಿಗಳ ದೂರ ಭಾರತ ಒಕ್ಕೂಟದ ಪ್ರಾಂತಗಳೇ ಇವೆ. ಹೀಗಿದ್ದೂಕೂಡ ಪ್ರಜರ ಆಕಾಂಕ್ಷೆಗಳನ್ನು ಬದಿಗೊತ್ತಿ ಅವರ ಜಳುವಳಿಯನ್ನು ಅಮಾನುಷ ಕ್ರೂರನೀತಿಯಿಂದ ಬಗ್ಗುಬಡಿಯುತ್ತಿರುವುದು, ಹೈದರಾಬಾದ ನಿಜಾಮರಿಗೆ ಶೋಭಿಸದು. ತಮ್ಮ ನಾಶವನ್ನು ತಾವೇ ಮಾಡಿಕೊಳ್ಳುತ್ತಿರುವರು. ಮೈಸೂರು ರಾಜರು ಕಣ್ಣಿಗೆದು ಭವಿಷ್ಯವನ್ನು ನೋಡಿ ಪ್ರಜಾಮುಖಂಡರೊಡನೆ ಕೂಡಲೇ ರಾಜಿಗೆ ಬಂದರು. ಆದರೆ ಹೈದರಾಬಾದಿನಲ್ಲಿ ಗೂಂಡಾ ಜನರ ರಾಜ್ಯಭಾರವು ಸಾಗಿದೆ. ಇತ್ತೆ ಹಾದುಲ್ ಮುಸ್ಲಿಮೀನ್ ಎಂಬ ಸಂಸ್ಥೆಗೆ ನಿಜಾಮರು ರಾಜ್ಯದಾಡಳಿತವನ್ನು ಒಪ್ಪಿಸಿರುವಂತೆ ತೋರುತ್ತಲಿದೆ ಕೊಲೆ, ಸುಲಿಗೆ, ಸ್ತ್ರೀಯರ ಅಪಹರಣ ಮತ್ತಾಂತರಗಳು ಹೈದರಾಬಾದ್ ರಾಜ್ಯದಲ್ಲಿ ಸಾಗಿವೆ. ಇವನ್ನು ಹೀಗೆಯೇ ನಡೆಯಗೊಟ್ಟರೆ ಭಾರತವಕ್ಕೂಟದ ಶಾಂತಿಗೆ ಭಂಗವು ಬರುವುದರಲ್ಲಿ ಸಂದೇಹವೇ ಇಲ್ಲ. ಈ ಕಾರಣ ಭಾರತವಕ್ಕೂಟ ಸರ್ಕಾರವು ಹೈದರಾಬಾದ್ ರಾಜ್ಯದಾಡಳಿತವನ್ನು ಕೂಡಲೇ ವಶಪಡಿಸಿಕೊಂಡು ಅಲ್ಲಿಯ ಹಿಂದೂ ಜನರ ಮಾನ ಪ್ರಾಣ ಆಸ್ತಿಗಳನ್ನು ಕಾಪಾಡಬೇಕೆಂದು ಸೂಚಿಸುತ್ತೇವೆ.

ರಾಜಾಜಿಯವರು ಭಾರತದ ನ್ಯೆಸ್ರಾಯಿ

ಲಾರ್ಡ ಮೌಂಟ್ ಬ್ಯಾಟನ್‌ರು ತಮ್ಮ ಸತೀಮಣಿಯೊಂದಿಗೆ ಇಂಗ್ಲೆಂಡಿನ ರಾಜಕುಮಾರಿ ಎಲಿಜಬೆಥಳ ಲಗ್ನಕ್ಕಾಗಿ ಹೊರಟ ಕಾರಣ ಅವರ ನೈರುಹಾಜರಿಯಲ್ಲಿ ಬಂಗಾಳದ ಗವರ್ನರರಾಗಿದ್ದ ಶ್ರೀ ರಾಜಗೋಪಾಲಾಚಾರ್ಯರು ತಾತ್ಪೂರ್ತಿಕ ಭಾರತದ ಗವರ್ನರ್ ಜನರಲ್‌ರಾಗಿ ನಿಯಮಿಸಲ್ಪಟ್ಟಿದ್ದು, ಅವರ ಪ್ರತಿಜ್ಞಾ ವಿಧಿಯು 10 ನೆಯ ತಾ. ಆಯಿತು.

ಪುದುಕೋಟೆ– ಅರಸರು ಕಾಂಗ್ರೆಸಿನ ಬೇಡಿಕೆಗಳನ್ನೆಲ್ಲಾ ಮನ್ನಿಸಿ ಹೊಸಸರ್ಕಾರವನ್ನು ಸ್ಥಾಪಿಸುವ ಆಶ್ವಾಸನವಿತ್ತಕಾರಣ ಈ ತಿಂಗಳ 15 ಕ್ಕೆ ಪ್ರಾರಂಭವಾಗಬೇಕಾಗಿದ್ದ ಸತ್ಯಾಗ್ರಹವು 30 ಕ್ಕೆ ಮುಂದುವರಿದಿದೆ.

ಉಜ್ಜಿನಿ.

ತಾ|| 5-11-47 ರಲ್ಲಿ ಉಜ್ಜಿನಿ ಗ್ರಾಮದ ಮಹಾಜನರು ಈ ಕೆಳಗಿನ ವಿಷಯಗಳನ್ನು ತೀರ್ಮಾನಿಸಿರುತ್ತಾರೆ.

1. ಮುಖ್ಯವಾಗಿ ಸದ್ಯದ ಪರಿಸ್ಥಿತಿಯಲ್ಲಿ ಆಹಾರ ಬಟ್ಟೆ ಇವುಗಳ ನಿಯಂತ್ರಣೆಯಿಂದಾಗಿ ಬಡ ರೈತನಿಗೆ ಅವಶ್ಯವಾದ ಆಹಾರ, ಬಟ್ಟೆ ಇವುಗಳು ಸಿಗದಂತಾಗಿದೆ. ಬೆಳೆದ ರೈತನಿಂದ ಕಾಳು ವಸೂಲ್ಮಾಡಿದ ಸರಕಾರವು ರೈತನು ಹಸಿನಿನಿಂದ ಬಳಲುತ್ತಿರುವಾಗ ಕಾಳನ್ನು ಸರಕಾರವು ಒದಗಿಸದಾಗಿದೆ ಎನ್ನುವುದಕ್ಕೆ ವಿಷಾದ ಸೂಚಿಸುತ್ತೇವೆ.

2. ಸದರಿ ನಿಯಂತ್ರಣಗಳ ಕಾರಣದಿಂದ ಕಳ್ಳ ಪೇಟೆಗಾರರ ಹೆಚ್ಚಳ ಅಲ್ಲದೆ ಅಧಿಕಾರಿಗಳ ಲಂಚಗುಳಿತನವು ಹೆಚ್ಚಿದೆ ಎಂದೂ, ಈ ಎಲ್ಲವುಗಳಿಗೂ ನಿವಾರಣೋಪಾಯವೆಂದರೆ ನಿಯಂತ್ರಣಗಳನ್ನು ಕಿತ್ತೊಗೆಯುವುದೊಂದೇ ಶ್ರೇಷ್ಠವಾದ ಮಾರ್ಗವೆಂದು ತೀರ್ಮಾನಿಸಲಾಗಿದೆ.

3. ಸದರಿ ಮೇಲಿನ ತೀರ್ಮಾನಗಳ ಸಾರಾಂಶವನ್ನು ತಂತಿಯ ಮೂಲಕ ಹಿಂದಿ ಒಕ್ಕೂಟ ಪ್ರಧಾನರಾದ ಜವಹರಲಾಲ ನೆಹರೂರವರಿಗೂ ಹಿಂದಿ ಒಕ್ಕೂಟ ಆಹಾರ ಖಾತೆಯ ಮಂತ್ರಿಗಳಾದ ರಾಜೇಂದ್ರ ಪ್ರಸಾದರಿಗೂ, ಮಹಾತ್ಮ ಗಾಂಧೀಜಿಯವರಿಗೂ, ಆಂಧ್ರಪ್ರಾಂತ ಕಾಂಗ್ರೆಸ್ ಅಧ್ಯಕ್ಷರೂ ಕಿಸಾನ ನಾಯಕರೂ ಆದ ಪ್ರೊ. ರಂಗಾರವರಿಗೂ, ಮದ್ರಾಸ ಪ್ರಧಾನರಿಗೂ ತಿಳುಹಲು ತೀರ್ಮಾನಿಸಿರುತ್ತೇವೆ ಅಲ್ಲದೆ ತೀರ್ಮಾನದ ನಕಲುಗಳನ್ನು ಜಿಲ್ಲಾಧಿಕಾರಿಗಳಿಗೆ ತಿಳುಹಲು ಮತ್ತು ವೃತ್ತ ಪತ್ರಿಕೆಗಳಿಗೆ ಪ್ರಕಟಿಸಲು ಅಲ್ಲದೆ ಮತ್ತಿತರ ಯೋಜಿತ ಮುಖಂಡರಿಗೆ ಕಳುಹಲು ತೀರ್ಮಾನಿಸಲಾಯಿತು.

ನವಭಾರತಕ್ಕೆ ಚಂದಾದಾರರಾಗಿರಿ

ಕಾಶ್ಮೀರದಲ್ಲಿ ಪಾಕೀಸ್ತಾನಿಗಳ ಹಿನ್ನಡೆ

ಕಾಶ್ಮೀರದ ದಾಳಿಗಾರರು ಬಾರಮೂಲಾ ಎಂಬ ನಗರದಿಂದ ಓಡಿಸಲ್ಪಟ್ಟರು. ಅವರ ಓಟವು ಹಾಗೆಯೆ ಸಾಗಿದೆ ಶ್ರೀನಗರದ ಸುತ್ತ 20 ಮೈಲುಗಳ ದೂರದಲ್ಲಿ ದಾಳಿಗಾರರ ದೊಡ್ಡತಂಡಗಳಿಲ್ಲ. ಚಿಕ್ಕ ಚಿಕ್ಕ ತಂಡಗಳು ಅಲ್ಲಲ್ಲಿ ಅವಿತುಕೊಂಡಿರಬಹುದು. ಶ್ರೀನಗರವು ಕೋಟೆಯಂತಿದ್ದು ಅದಕ್ಕೆ ಯಾವ ಅಪಾಯವೂ ಈಗ ಇಲ್ಲವೆಂದು ಹೇಳಬಹುದು. ಪಂಡಿತ ಜವಹರಲಾಲರು ಶ್ರೀನಗರಕ್ಕೆ ಹೋಗಿಬಂದರು.

ಬಾರಮೂಲಾ ಎಂಬ ನಗರದಲ್ಲಿ ಮುಸಲ್ಮಾನ ಪುಂಡರು ಹಿಂದೂ ಸೀಖರ ಮನೆಗಳನ್ನೆಲ್ಲಾ ಲೂಟಿ ಮಾಡಿ ಅನೇಕ ಸ್ತ್ರೀಯರನ್ನು ಅಪಹರಿಸಿಕೊಂಡು ಹೋಗಿರುವರು. ಕೆರೆ ಭಾವಿಗಳಿಗೆ ನೀರಿಗಾಗಿ ಹೋಗಿದ್ದ ಸ್ತ್ರೀಯರ ಆಭರಣಗಳನ್ನು ಕಿವಿ ಮೂಗು ಕೊಯ್ದು ತೆಗೆದುಕೊಂಡು ಹೋಗಿದ್ದಾರೆ. ಕಾಶ್ಮೀರ ಮಹಾರಾಜರು ಇಂಡಿಯಾ ಸರ್ಕಾರದ ಸಹಾಯಕ್ಕಾಗಿ ಅವರಿಗೆ ಕೃತಜ್ಞತಾ ಪೂರ್ವಕವಂದನೆಗಳನ್ನರ್ಪಿಸಿ ಶೇಖ ಅಬ್ದುಲ್ಲಾರ ಸೇವೆಗಾಗಿ ಅವರನ್ನು ಕೊಂಡಾಡಿದ್ದಾರೆ.

ಹೈದರಾಬಾದ ಅಕೃತ್ಯಗಳ ನಿಷೇಧ

ಹೈದರಾಬಾದ ಅಕೃತ್ಯಗಳನ್ನು ಖಂಡಿಸುವ ಪ್ರಜಾಹೋರಾಟದಲ್ಲಿ ಸಹಾಯ ಭರವಸೆಯನ್ನೀಯುವ, ಹೈದರಾಬಾದಿನಲ್ಲಿ ಪ್ರಜಾರಾಜ್ಯಭಾರವು ಸ್ಥಾಪಿತವಾಗದಿದ್ದರೆ ನಿಜಾಮರ ಅಸ್ತಿತ್ವಕ್ಕೆ ಭಂಗ ಬರುವುದೆ ದಿಟ್ಟರಿಸುವ, ಬಳ್ಳಾರಿಯಲ್ಲಿ ಮಿಲಿಟರಿ ಕಾಲೇಜನ್ನು ಸ್ಥಾಪಿಸಬೇಕೆಂಬುವ ತೀರ್ಮಾನಗಳು ಶ್ರೀ ಹೆಚ್. ರಾಮಲಿಂಗಾರೆಡ್ಡಿ ವಕೀಲ ಇವರಧ್ಯಕ್ಷತೆಯಲ್ಲಿ ಸಮಾವೇಶವಾದ ಸಭೆಯಲ್ಲಿ 9-11-47 ರದಿನ ಸ್ವೀಕೃತವಾದವು. ಶ್ರೀಗಳಾದ ಸತ್ಯವಂತರಾವು, ಕೃಷ್ಣರಾವು, ರಮೇಶ ಇವರು ಎಲ್ಲಾ ಅಂಶಗಳನ್ನರುಹಿ ಸದ್ಯದ ರಾಜಕೀಯ ಪರಿಸ್ಥಿತಿಯನ್ನು ನಿವೇದಿಸಿದರು.

ಹೈದರಾಬಾದದ ತೊಡಕು.

ಭಾರತದ ಇತಿಹಾಸದಲ್ಲಿ, ಕ್ಲೈವ ಹೇಸ್ಟಿಂಗ್ಸ್‌ರ ರಾಜನೀತಿಯನ್ನೇ ಇಂದು ಹೈದರಾಬಾದ ಸಂಸ್ಥಾನವು ಅನುಸರಿಸುವಂತೆ ಅದು ನಡೆಸಿದ ರೀತಿ ನೀತಿಗಳಿಂದ ಕಂಡುಬರುತ್ತಿದೆ. ಇತ್ತ ಅಧಿಕಾರದಲ್ಲಿದ್ದ ಮುಖ್ಯ ಮಂತ್ರಿಗಳ ಮುಖಾಂತರವಾಗಿ ಹಿಂದು ಸ್ಥಾನ ಸರಕಾರದೊಡನೆ ಒಪ್ಪಂದದ ಮಾತು ಕತೆಗಳನ್ನೂ ನಡೆಸಿದೆ. ಅತ್ತ ಪಾಕಿಸ್ತಾನಕ್ಕೆ 'ಇತ್ತಿಹಾದುಲ್ ಮುಸ್ಲಿಮೀನ' ಮತಿಯಿಂದ ಕೆಲವರನ್ನು ಸಲಹೆ ಸೂಚನೆಗಳನ್ನು ಪಡೆಯಲೆಂದು ಕಳುಹಿಸಿದೆ. ಇನ್ನೊಂದು ಕಡೆಗೆ ಇಂಗ್ಲೆಂಡಿನಲ್ಲಿ ಮದ್ದುಗುಂಡು, ಶಸ್ತ್ರಾಸ್ತ್ರ ಮೊದಲಾದ ಯುದ್ಧೋಪಯೋಗಿ ಸಾಮಾನು ಕೊಳ್ಳುವುದನ್ನೂ ನಡೆಸಿ ಅವನ್ನು ಹೈದರಾಬಾದಕ್ಕೇ ನೇರವಾಗಿ ವಿಮಾನದಿಂದ ತರಿಸುವುದು ನಡೆದಿದೆ ಈ ರೀತಿಯಾಗಿ ಮೂರು ಬಟ್ಟೆಯ ಪ್ರಯತ್ನಗಳಿಂದ ಇಂದು ಹೈದರಾಬಾದವು ಮೂರಾಬಟ್ಟೆಯ ದಾರಿಯಲ್ಲಿ ಭರದಿಂದ ಸಾಗಿದೆ.

ಗಳಿಗೆಗೊಂದು ಮಾತು, ಕ್ಷಣಕ್ಕೊಂದು ಕತೆ. ಇತ್ತಕಡೆ ಸ್ನೇಹ ಹಸ್ತ ಚಾಚುವುದು, ಅತ್ತದುರಾಲೋಚನೆ ನಡೆಸುವುದು. ಸಂಸ್ಥಾನದಲ್ಲಿಯಂತೂ ದಬ್ಬಾಳಿಕೆಯ ಸತ್ರ ಅಖಂಡವಾಗಿ ನಡೆದೇ ಇದೆ. ಒಂದು ನಿಶ್ಚಿತವಾದ ಧೋರಣೆಯಿಲ್ಲ; ಅದಕ್ಕನುಸರಿಸಿ ಮಾತು ಕತೆಗಳೂ ಇಲ್ಲ. ಹೀಗಾಗಿ ಇಂದು ಹೈದರಾಬಾದು ಹಿಂದುಸ್ಥಾನ ಪಾಕಿಸ್ತಾನಗಳ ನಡುವೆ "ತ್ರಿಶಂಕು ಸ್ವರ್ಗ"ದಲ್ಲಿ ನಿರಾಧಾರವಾಗಿ ನೇತಾಡತೊಡಗಿದೆ ಹೆಸರಿಗೆತಕ್ಕಂತೆ "ಮೊಗಲಾಯಿ ದರ್ಬಾರ" ನಡೆಸಿದೆ. ಹೈದರಾಬಾದಿಗೆ ಇಂದು ಏನು ಅಂದರೆ ಏನಾಗುವುದೋ ಎಂದು ಭೀತಿ ಹುಟ್ಟಿದಂತೆ ಕಾಣುತ್ತದೆ ನಿರ್ಧಾರವಾಗಿ ಯಾವ ಮಾತನ್ನೂ ಆಡಲಿಕ್ಕೆ ಅದು ಇಂದು ಅಸಮರ್ಥವಾಗಿದೆ. ಭೀತಿಯ ಭೂತ ಬಡಿದುಕೊಂಡವರಂತೆ ಕ್ಷಣಕ್ಕೊಂದು ರೀತಿಯಿಂದ ವಿಕಾರವಾಗಿ ಚಲನ ವಲನ ನಡೆಯಿಸಿದೆ.

ಹೀಗಾಗಲಿಕ್ಕೆ ಕಾರಣವೇನು? ಹೈದರಾಬಾದಕ್ಕೆ ಈ ಹೆದರಿಕೆ ಏಕೆ ಬರಬೇಕು? ಇದಕ್ಕೆ ಕಾರಣಗಳಿವೆ. ಅವ್ಯವಹಾರ್ಯವಾದರೂ ಹಟದ ಸ್ವಭಾವವುಳ್ಳ ಜನರಿಗಾಗಿ, ಅನಿವಾರ್ಯವಾಗಿ ಒಪ್ಪಿಕೊಂಡು ಉದ್ಭೂತವಾದ ಪಾಕಿಸ್ತಾನದ ಗತಿ ಇಂದು ಏನಾಗಿದೆ? ಕಾಶ್ಮೀರದಿಂದ ಪ್ರಕಟವಾದಂತೆ ಇನ್ನೂ ಪಾಕಿಸ್ತಾನದಲ್ಲಿ ಸರಕಾರವೇ ಸ್ಥಾಪಿತವಾಗಿಲ್ಲವಂತೆ! ಪೂರ್ವ ಬಂಗಾಲದಲ್ಲಂತೂ ಅರಾಜಕತೆಯೆ ಆಗಿ "ಪುಂಡ ರಾಜ್ಯ" ವೇ ನಡೆದಿದೆಯಂತೆ ಭೌಗೋಲಿಕವಾಗಿಯಾಗಲಿ, ಐತಿಹಾಸಿಕವಾಗಿಯಾಗಲಿ ಈ ಪಾಕಿಸ್ತಾನವು ಅವ್ಯವಹಾರವೇ ಆಗಿದೆಯೆಂದು ಪ್ರಾಂಜಲ ಮನಸಿನ ಯಾವ ವಿಚಾರಿಯಾದರೂ ಹೇಳಬಹುದು. ಹೈದರಾಬಾದದ ಸ್ಥಿತಿಯೂ ಅದರಂತೆಯೇ ಇದೆ. ಮುಸ್ಲಿಂ ರಾಜ್ಯ, ಹಿಂದೂ ಪ್ರಜೆಗಳು, ದಕ್ಷಿಣ ಹಿಂದುಸ್ಥಾನದ ನಟ್ಟನಡುವೆ ಈ ಸಂಸ್ಥಾನವಿದೆ. ಹಿಂದುಸ್ಥಾನದಲ್ಲಿ ಕಾಲಿಡದ ಅದಕ್ಕೆ ಹೊರಗೆ ಹೋಗಲು ಬರೆವಂತೆಯೇ ಇಲ್ಲ. ಭೌಗೋಲಿಕ ಪರಿಸ್ಥಿತಿ ಹೀಗೆ ಅಸಹಾಯಕವಾಗಿದ್ದರೂ ಯಾವ ಕಾರಣದಿಂದ ಯಾವ ಅನುಕೂಲಕ್ಕಾಗಿ ಅದು ಸ್ವತಂತ್ರವಾಗಿ ಇರಬಯಸುತ್ತಿದೆಯೋ ಅಥವಾ ಪಾಕಿಸ್ತಾನ ಸೇರಬಯಸುತ್ತಿದೆಯೋ ತಿಳಿಯುವಂತೆಯೇ ಇಲ್ಲ. ಇನ್ನು ಐತಿಹಾಸಿಕದೃಷ್ಟಿಯಿಂದ ನೋಡಿದರೂ ಪಾಳೇಗಾರರ ರಾಜ್ಯದ ಕಾಲವನ್ನು ಬಿಟ್ಟರೆ ಅದು ಸ್ವತಂತ್ರವಾಗಿ ಎಂದು ಇತ್ತು? ಈ ಸುದಿನ ಬ್ರಿಟಿಶ ರೆಸಿಡೆಂಟರ ಮೇಲ್ವಿಚಾರಣೆಯಲ್ಲಿದ್ದ ಈ ಸಂಸ್ಥಾನ ಇಂದು ಕಾಂಗ್ರೆಸ ಪ್ರಭಾವದಿಂದ ಭಾರತವು ಸ್ವತಂತ್ರವಾದೊಡನೆ ತಾನೂ ಸ್ವತಂತ್ರವೆಂದೂ ಬೇಕಾದ 'ಸ್ಥಾನ'ಕ್ಕೆ ಸೇರಲು ತನಗೆ ಅಧಿಕಾರವಿದೆಯೆಂದೂ ಹೇಳುವ ಧೈರ್ಯವನ್ನು ಇಂದು ಮಾಡುತ್ತಿದೆ.

ಮೇಲೆ 'ಮುಸಲ್ಮಾನ ರಾಜ್ಯ, ಹಿಂದೂ ಪ್ರಜೆಗಳು' ಎಂಬ ಮಾತು ಬಂದಿದೆ ೧೦೦ ಕ್ಕೆ ಲಂ ರಷ್ಟು ಹಿಂದೂ ಪ್ರಜೆಗಳು ಹೈದರಾಬಾದ ಸಂಸ್ಥಾನದಲ್ಲಿ ಸುಮಾರಾಗಿ ಇದ್ದಾರೆ. ಇಂದಿನದು ಪ್ರಜಾಪ್ರಭುತ್ವದ ಕಾಲ ಪ್ರಜರ ಹಿತಸಂಬಂಧಗಳ ರಕ್ಷಣೆ ಮಾಡುವುದೇ ರಾಜರಿಗೆ ವಿಹಿತವಾದ ಕಾರ್ಯ. ಅದನ್ನು ತೊರೆದು ಪ್ರಜೆಗಳನ್ನು ಕುರಿಗಳಂತೆಣಿಸಿ ತಮ್ಮ ಮನ ಬಂದಂತೆ ಕಾರ್ಯ ಮಾಡಲು ನಾವು ಸ್ವತಂತ್ರರೆಂದು ಈ ಹೈದರಾಬಾದಿನ ಅರಸರು ಅಂದರೆ ಅದಕ್ಕೆ ಅವರ ಪ್ರಜೆಗಳೇ ತಕ್ಕ ಉತ್ತರ ಕೊಟ್ಟಾರು. ಈಗ ಈ 'ಉತ್ತರ ಕೊಡುವದು ನಡೆದೇ' ಇವೆ ೧೦೦ ಕ್ಕೆ ಲಂ ರಷ್ಟಿರುವ ಹಿಂದೀ ಪ್ರಜೆಗಳೆಲ್ಲ ಹೈದರಾಬಾದವನ್ನು ಹಿಂದುಸ್ಥಾನಕ್ಕೇ ಸೇರಿಸಬೇಕೆಂದೂ ಪ್ರಜರಿಗೆ ಹೊಣೆಗಾರ ರಾಜ್ಯಪದ್ಧತಿಯನ್ನು ಕೊಡಲಿಕ್ಕೆ ಬೇಕೆಂದೂ ಪ್ರಚಂಡ ಆಂದೋಲನ ಹೂಡಿದ್ದಾರೆ. ವ್ಯಾಪಾರ ಹಾನಿ, ಧನದ ಹಾನಿ, ಮಾನ ಹಾನಿ ಏನೇ ಆದರೂ ಪ್ರಜೆಗಳು ತಮ್ಮ ಸತ್‌ಹೇತುವಿನಿಂದ ಒಂದು ಹೆಜ್ಜೆಯನ್ನೂ ಹಿಂದೆ ಸರಿಸಿಲ್ಲ. ಹೈದರಾಬಾದದ ಅರಸರಾದರೂ ತುಸು ಕಣ್ಣು ಹೊರಳಿಸಿ ಪ್ರಪಂಚದತ್ತ ನೋಡುವುದು ಉಭಯ ಕ್ಷೇಮ. ಇಂದು ಕಾಶ್ಮೀರದ ಪರಿಣಾಮವೇನಾಗಿದೆ? ಅಲ್ಲಿಯೂ ಹಿಂದೂ ಅರಸರು ಮುಸ್ಲಿಂ ಪ್ರಜೆಗಳು. ಅಲ್ಲಿಯ ಮುಸ್ಲಿಂ ಪ್ರಜೆಗಳೇ ಕಾಶ್ಮೀರ ಸಂಸ್ಥಾನವನ್ನು ಪಾಕಿಸ್ತಾನಕ್ಕೆ ಸೇರಗೊಡದೆ ಹಿಂದುಸ್ಥಾನವನ್ನು ಸೇರಬೇಕೆಂದು ನಿರ್ಧರಿಸಿದ್ದಾರೆ. ಕಾಶ್ಮೀರದ ಪ್ರಜಾ ಪ್ರಮುಖರಾದ ಶೇಕ ಅಬ್ದುಲ್ಲಾರವರು ಆ ಬಗ್ಗೆ ಘೋಷಣೆಯನ್ನೂ ಹೊರಡಿಸಿದ್ದಾರೆ. ಕಾಶ್ಮೀರದ ಅರಸರೂ ಶೇಕ ಅಬ್ದುಲ್ಲಾರವರಿಗೆ ನಡುಗಾಲ ಸರಕಾರವನ್ನು ಸ್ಥಾಪಿಸಲು ಕೇಳಿಕೊಂಡು ಪ್ರಜಾಭಿಪ್ರಾಯಕ್ಕೆ ತಮ್ಮ ಸಮ್ಮತಿಯನ್ನು ಸೂಚಿಸಿದ್ದಾರೆ. ಹೀಗೆ ಯಾವ ಜಾತಿಯ ತಳಹದಿಯ ಮೇಲೆ ಪಾಕಿಸ್ತಾನ ನಿರ್ಮಾಣವಾಯಿತೋ ಆ ಜಾತಿಯವರೇ ಇಂದು ಪಾಕಿಸ್ತಾನಕ್ಕೆ ಸೇರದೆ ಹಿಂದುಸ್ಥಾನಕ್ಕೆ ಸೇರಲು ಸಿದ್ಧರಾಗಿರುವದನ್ನು ನೋಡಿದರೆ ಈ ಪಾಕಿಸ್ತಾನ ನಿರ್ಮಾಣವು ಅವ್ಯವಹಾರ್ಯವೆಂದು ಖಂಡಿತವಾಗಿ ಹೇಳಬಹುದು.

ಇಷ್ಟೆಲ್ಲವನ್ನೂ ನೋಡಿದರೆ ಮತ್ತು ಇಂದು ಕಾಶ್ಮೀರದಲ್ಲಿ ನಡೆದ 'ಗುಡ್ಡಗಾಡು' ಜನರ ದಾಳಿಯ ಹಿಂದೆ ಲೀಗಿನವರ ಅಧಿರ್ಹಾತ್ ಪಾಕಿಸ್ತಾನದ ಕೈವಾಡವಿರುವುದನ್ನು ಗಮನಿಸಿದರೆ ಮುಸ್ಲಿಂ ಜನತೆ ಇಂದು ಯಾವ ದಾರಿಯನ್ನು ತುಳಿಯುತ್ತಲಿದೆ ಎಂಬುದು ಸ್ಪಷ್ಟವಿದೆ. ಪರಕೀಯರಿಂದ ಸಹಾಯ ಯೋಚನೆಗಾಗಿ ಕೈಚಾಚುತ್ತಿರುವ ಮಿ. ಜಿನ್ನಾರವರು ಇಂದು ಮುಸ್ಲಿಂರಿಗೆ 'ವಿರೋಚಿತ' ಕಾರ್ಯ ಮಾಡಲು ಕೇಳಿಕೊಳ್ಳುತ್ತಲಿದ್ದಾರೆ. ಹೈದರಾಬಾದದಲ್ಲಿ ೩೫ ಲಕ್ಷ ಮುಸ್ಲಿಂ ಜನತೆ ಹೈದರಾಬಾದದ ಸ್ವಾತಂತ್ರ್ಯ (?) ಕ್ಕಾಗಿ ಪ್ರಾಣಾರ್ಪಣೆಗೂ ಸಿದ್ಧರೆಂದು ಕಾಶೀಮ್ಮರರು ವಿಯವರು ಸಾರಿದ್ದಾರೆ. ಅದರಂತೆಯೇ ಸುಮಾರು ಒಂದು ಕೋಟಿ ಹಿಂದೂ ಪ್ರಜೆಗಳು ಹೈದರಾಬಾದವನ್ನು ಹಿಂದುಸ್ತಾನಕ್ಕೆ ಸೇರಿಸಬೇಕೆಂದೂ ಹೊಣೆಗಾರ ಅಡಳಿತವನ್ನು ಪ್ರಾರಂಭಿಸ ಹಚ್ಚಬೇಕೆಂದೂ ಪ್ರಚಂಡ ಆಂದೋಲನ ಹೂಡಿದ್ದಾರೆ. ಸತ್ಯವೂ ಯೋಗ್ಯವೂ ಆದ ಉದ್ದೇಶವಿದ್ದುದರಿಂದ ಅವರು 'ಕೊನೆಯ ವಿಜಯ' ತಮ್ಮದೇ ಎಂದು ಧೃಡವಾಗಿ ನಂಬಿ ಆಂದೋಲನವನ್ನು ಸಾಗಿಸಲು ಏನು ಕಷ್ಟ ನಷ್ಟಗಳು ಒಂದರೂ ಸಹಿಸಲು ಸಿದ್ಧರಿದ್ದಾರೆ.

ಮುಸ್ಲಿಂರು ಮುಸ್ಲಿಮರತ್ತ ಹೊರಳುವದೂ ಕೂಡಿಕೊಳ್ಳುವದೂ ಸ್ವಾಭಾವಿಕವೂ ಸಹಜವೂ ಆಗಿರುವಂತೆ 100 ಕ್ಕೆ 80 ರಷ್ಟು ಹಿಂದೂಗಳಿರುವ ಹೈದರಾಬಾದ ಸಂಸ್ಥಾನವು ಹಿಂದೂಸ್ತಾನ ಒಕ್ಕೂಟಕ್ಕೇ ಸೇರುವದು ಸ್ವಾಭಾವಿಕವೂ ಸಹಜವೂ ಆಗಿದೆ. ಅಲ್ಲದೆ ಅಲ್ಲಿಯ ಪ್ರಜೆಗಳು ಹೊಣೆಗಾರ ರಾಜ್ಯಪದ್ಧತಿ ಸ್ಥಾರಂಭವಾಗುವವರೆಗೆ ತಮ್ಮ ಆಂದೋಲನವನ್ನು ನಿಲ್ಲಿಸಲಿಕ್ಕಿಲ್ಲವೆಂದು ಪ್ರತಿಜ್ಞೆಯನ್ನೇ ಮಾಡಿದ್ದಾರೆ. ಈ ಯೋಗ್ಯವಾದ ಮತ್ತು ನ್ಯಾಯ ಬೇಡಿಕೆಗೆ ಜಯ

ದೊರತೇ ದೊರೆಯುವುದೆಂಬ ಮಾತು ಭಾರತ ಸ್ವಾತಂತ್ರ್ಯ ಸಂಗ್ರಾಮದಿಂದ ಕಂಡುಬಂದ ವಿಷಯವಾಗಿದೆ. ಹೈದರಾಬಾದಿನ ತೊಡಕು ಎಷ್ಟೇ ಬಿಕ್ಕಟ್ಟಿನದಾದರೂ ಮುಸ್ಲಿಮರು ಎಷ್ಟೇ ಅತ್ಯಾಚಾರ ನಡೆಸಿದರೂ ಅಡ್ಡಿ ತಡೆಗಳನ್ನು ಒಡ್ಡಿದರೂ. ಬಹುಸಂಖ್ಯಾಕರಾದ ಹಿಂದೂಜನರು ತಮ್ಮ ನ್ಯಾಯವಾದ ಬೇಡಿಕೆಗಳಲ್ಲಿ ಜಯವನ್ನು ಸಂಪಾದಿಸಿಯೇ ತೀರಬಲ್ಲರು. [ಜಯಹಿಂದ]

ರಾಯಲಸೀಮೆ ಮಹಾಸಭೆ

ಶ್ರೀ ಡಿ. ಯಸ್. ಹನುಮಂತರಾಯರ ರಾಜೀನಾಮೆ

ಬಳ್ಳಾರಿಯ ಸುಪ್ರಸಿದ್ಧ ಅಡ್ವೊಕೇಟರೂ, ಸಂಡೂರು ಸಂಸ್ಥಾನ ಶಾಸನಸಭೆಯ ಅಧ್ಯಕ್ಷರೂ ಆದ ಶ್ರೀ ಡಿ. ಯಸ್. ಹನುಮಂತರಾಯರು ರಾಯಲಸೀಮೆ ಮಹಾಸಭೆಯ ಕಾರ್ಯಕಾರಿಣಿ ಸಮಿತಿಗೆ ರಾಜೀನಾಮೆ ಕೊಟ್ಟಿರುವರು. ತಮ್ಮನ್ನು ಕೇಳದಲೆ ಆಂಧ್ರಪ್ರಾಂತದಲ್ಲಿ ಸೇರ್ಪಡೆಗಾಗಿ ಬಳ್ಳಾರಿಯ ಪರವಾಗಿ ಸಂಧಾನ ಸಮಿತಿಯ ಸಭ್ಯರನ್ನಾಗಿ ಸೇರಿಸಿದ್ದನ್ನು ಪ್ರತಿಭಟಿಸಿ ಅದಕ್ಕೂ ರಾಜೀನಾಮೆ ಇತ್ತಿರುವರು. ರಾಯಲಸೀಮೆ ಮಹಾಸಭೆಯಲ್ಲಿದ್ದ ಏಕಮಾತ್ರ ಕನ್ನಡಿಗರಿವರು.

— ಇಲ್ಲಿಂದ ಕೂಡಲೇ ತೊಲಗಿರಿ —

– ಹೈದರಾಬಾದ್ ಅಧಿಕಾರಿಗಳಿಗೆ ಸುಗ್ರೀವಾಜ್ಞೆ –

ಹೈದರಾಬಾದ್ ಸಿವಿಲ್ ಸರ್ವಿಸ್ ಉದ್ಯೋಗಿಗಳು ಮದ್ರಾಸ್ ಪ್ರಾಂತದ ವಿವಿಧ ಉದ್ಯೋಗಗಳಲ್ಲಿ ಅನುಭವ ಹೊಂದಲು ಮದ್ರಾಸ್ ಸರ್ಕಾರದ ಸಮ್ಮತಿಯಿಂದ ಸರ್ಕಾರದ ವಿವಿಧ ಶಾಖೆಗಳಲ್ಲಿ ಶಿಕ್ಷಣ ಹೊಂದುತ್ತಿದ್ದರು. ಮದ್ರಾಸ್ ಸರ್ಕಾರದವರು ಇತ್ತೀಚಿನ ಹೈದರಾಬಾದ್ ಘಟನೆಗಳಿಂದ ಅವರು ತಮ್ಮ ಶಸ್ತ್ರಾಸ್ತ್ರಗಳನ್ನೊಪ್ಪಿಸಿ ಕೂಡಲೇ ತೊಲಗಿ ಹೋಗಬೇಕೆಂದು ಆಜ್ಞೆ ಹೊರಡಿಸಿರುವುದು ಗೊತ್ತಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ಇಬ್ಬರು ಅಧಿಕಾರಿಗಳಿದ್ದರು.

ಬಳ್ಳಾರಿ ಅಖಿಲ ಭಾರತ ಮಹಿಳಾ ಶಾಖೆ

ವಾರ್ಷಿಕೋತ್ಸವವು 8 ನೆಯ ದಿನಾಂಕ ಬಳ್ಳಾರಿ ವಾರ್ಡಲಾಸ್ಕೂಲ್ ಭವನದಲ್ಲಿ ಮದ್ರಾಸ್ ಮಂತ್ರಿ ಶ್ರೀ ಮಾಧವಮೆನನ್ ರವರ ಪತ್ನಿ ಶ್ರೀಮತಿ ಕುಟ್ಟಿಮಾಳಮ್ಮ ಎಂ. ಎಲ್. ಎ. ಇವರಧ್ಯಕ್ಷತೆಯಲ್ಲಿ ಸಾಗಿತು. ಬಳ್ಳಾರಿ ಶಾಖೆಯ ಅಧ್ಯಕ್ಷರಾದ ಶ್ರೀಮತಿ ರಾಯ್‌ರವರು ಸ್ವಾಗತ ಭಾಷಣ ಮಾಡಿದನಂತರ ಸಭಾಧ್ಯಕ್ಷರು ಸ್ತ್ರೀಯರ ಪ್ರಗತಿಗೆ ಕುಂಠಿತವಾದ ಕಾರಣಗಳನ್ನರುಹಿ ಸಮಾನ ಹಕ್ಕುಗಳಿಗಾಗಿ ಹೋರಾಡಬೇಕೆಂದು ದೇಶ ಹಿತಕಾರ್ಯಗಳಲ್ಲಿ ಸ್ತ್ರೀಯರು ಭಾಗವಹಿಸದೆ ಯಶಸ್ಸು ದೊರೆಯುವುದು ಕಠಿಣವೆಂದು ಗಾಂಧೀಜೀಯವರೇ ಅಭಿಪ್ರಾಯಪಟ್ಟಿರುವಾಗ ತಾವು ಸಂಘಟಿತರಾಗಿ ಮುಂದೆ ಬರಬೇಕೆಂದರು. ಸಮಾಜ ಪ್ರಗತಿಗೆ ವಿದ್ಯೆಯು ಪ್ರಾಮುಖ್ಯವಲ್ಲೆಂಬುದನ್ನು ಸೂಚಿಸಿ ಕಸ್ತೂರಬಾರ ಉಚ್ಚ ಸಂಸ್ಕೃತಿಯ ಉದಾಹರಣೆಯನ್ನು ಕೊಟ್ಟರು. ಮಹಿಳಾ ಸಭೆಗೆ ಸದಸ್ಯರಾಗಲು ಎಲ್ಲರನ್ನು ಬೇಡಿದರು.

ತೀರ್ಮಾನಗಳು

ಹಳ್ಳಿಗಳಲ್ಲಿ ಜಿಲ್ಲಾ ಬೋರ್ಡು ಉಪಾಧ್ಯಾಯಿನಿಯರಿಗೆ ಮನೆಗಳನ್ನು ಕಟ್ಟಿಸಿಕೊಳ್ಳುವ ಸೌಕರ್ಯವನ್ನು ಕೊಡಬೇಕು. ಮನೆ ಕಟ್ಟುವ ಸಹಕಾರಿ ಸಂಘದವರು ಷೇರ್ ಮೊತ್ತದ ಮೇಲೆ ಹತ್ತರಷ್ಟು ಸಾಲ ಕೊಡುವಂತಾಗಬೇಕು. ನಗರದ ಕೊಳೆಯು ಪ್ರದೇಶಗಳನ್ನು ಶುದ್ಧೀಕರಿಸಬೇಕು. ಇತ್ತೀಚೆಗೆ ಅಸ್ಪೃಶ್ಯತಾ ನಿವಾರಣೆ ಹರಿಜನೋದ್ಧಾರ ಕಾರ್ಯಕ್ಕೆ ತೊಡಕು ತರುವ ಕೆಲಸ ನಡೆದದ್ದು ವಿಷಾದಕರವಾಗಿ ಎಲ್ಲರು ಅದರಲ್ಲೂ ಸ್ತ್ರೀಯರು ಈ ಉದ್ಧಾರ ಕಾರ್ಯದಲ್ಲಿ ಶ್ರದ್ಧೆವಹಿಸಬೇಕು ಪ್ರೌಢ ಶಿಕ್ಷಣ ಶಾಲೆಯವರಿಗೆ ಬಹುಮಾನ ವಿವಿಧ ವಿನೋದಗಳ ನಂತರ ಸಭೆಯು ಮುಗಿಯಿತು.

ಸರ್ಕಾರಿ ನವಕರರ ಸಹಕಾರ ಸಂಘ, ಸಿರುಗುಪ್ಪ.

ಮಹಾಶಯರೇ:— ಈಗಿರುವ ಆಹಾರ ದುಸ್ಥಿತಿಯ ನಿವಾರಣೆಯಾಗಬೇಕೆಂದರೆ ಪ್ರತಿ ಗ್ರಾಮದಲ್ಲಿ ಸಹಕಾರ ಸಂಘಗಳು ಏರ್ಪಾಟಾಗಬೇಕಾದುದು ಬಹಳ ಅಗತ್ಯವೆಂದು ಬೇರೆ ಹೇಳಬೇಕಿಲ್ಲ. ಆಹಾರ ಧಾನ್ಯಗಳ ಸಂಗ್ರಹವಾದರೂ ಈ ಸಂಘಗಳ ಮೂಲಕವಾಗಿಯಾದರೆ ಬಡಜನರಿಗೆ ಕಷ್ಟವಿಲ್ಲದೆ ಕಾಳುದೊರೆಯುತ್ತದೆ. ಧನಿ, ನಿರ್ಧನಿಗಳ ಭೇದ ಮತ್ತು ಇವರಲ್ಲಿನ ಸಂಘರ್ಷಣ ಬಹಳಕಾಲವಿದ್ದೀತು. ಅಸ್ಪೃಶ್ಯತಾ ನಿವಾರಣೆ, ಹರಿಜನಾಭಿವೃದ್ಧಿ ಗ್ರಾಮದಲ್ಲಿ ವಿದ್ಯಾವಂತರಾದ ಉಪಾಧ್ಯಾಯರು, ಸುಧಾರಕರು ಎಲ್ಲರೂ ದುಡಿದರೆ ಹಳ್ಳಿಗಳ ಬೀಡಾದ ಹಿಂದೂಸ್ಥಾನದ ಕಲ್ಯಾಣವು ಶೀಘ್ರದಲ್ಲಾದೀತು.

ಸಾಲದ ಸಂಘ ೧ ಷೇರು ಮೊತ್ತ ರೂ. ೫—೦—೦ ರುಸ್ತುಮು ೦—೪—೦

ಸ್ಟೋರ್ಸ ಸಂಘ ೧ ಷೇರು ಮೊತ್ತ ರೂ. ೨೫—೦—೦ ರುಸುಮು ೧—೪—೦

ಕೊಡ್ಲಿಗಿ ವೆಂಕೋಬರಾವು,
ಕಾರ್ಯದರ್ಶಿ.

ಬಳ್ಳಾರಿ ಜಿಲ್ಲಾ ರೈತರಸಭೆ

ಕುರುಗೋಡಿನಲ್ಲಿ ೧೪ ನೆಯ ದಿನಾಂಕ ಶ್ರೀ ಟಿ. ಸುಬ್ರಹ್ಮಣ್ಯಂರ ಅಧ್ಯಕ್ಷತೆಯಲ್ಲಿ ನಿರವೇರಲಿದೆ. ಆಹಾರಸಮಸ್ಯೆ ಕಂಟ್ರೋಲತೆಗೆದುಹಾಕುವ ವಿಷಯ ವಿಮರ್ಶಿಸಲ್ಪಟ್ಟು ತೀರ್ಮಾನಗಳಾಗಲಿವೆ. ಕರ್ನಾಟಕ ಧುರೀಣರು ಬರಲಿರುವರು. ಎಲ್ಲರೂ ಆಗಮಿಸಲು ಸ್ವಾಗತಸಮಿತಿಯವರು ಕೋರುತ್ತಾರೆ.

ವಿದ್ಯಾರ್ಥಿ ಕಾಂಗ್ರೆಸ್.

೧೦ ನೆಯ ತಾ. ಕೆ. ಶಿ. ಶಾಸ್ತ್ರಿಗಳಧ್ಯಕ್ಷತೆಯಲ್ಲಿ ಜವಹರಲಾಲರ ಹುಟ್ಟುಹಬ್ಬವನ್ನು ೧೪ ನೆಯ ತಾ ಆಚರಿಸಲು, ಅನೇಕಸಂಸ್ಥಾನಗಳಲ್ಲಿನಡೆದ ಸ್ವಾತಂತ್ರೋದ್ಯಮದಲ್ಲಿ ಪ್ರಾಣಾರ್ಪಣ ಮಾಡಿದವರಿಗೆ ಬಾಷ್ಪಾಂಜಲಿ ಸಲ್ಲಿಸುವ ತೀರ್ಮಾನಗಳಾದವು 1947-48 ಕ್ಕೆ ಈ ಕೆಳಗಿನವರು ಆರಿಸಲ್ಪಟ್ಟರು. ಅಧ್ಯಕ್ಷ ವೃಷಭೇಂದ್ರಸ್ವಾಮಿ, ಉಪಾಧ್ಯಕ್ಷ ಬಿ ಶಿವಲಿಂಗಶೆಟ್ಟಿ, ಕಾರ್ಯದರ್ಶಿಗಳು ದಾನಯ್ಯ ತಿಮ್ಮಪ್ಪ ಶೆಟ್ಟರು ಖಜಾಂಚಿ ವಿ. ನಾಗರಾಜರಾವು.

ಬಳ್ಳಾರಿ ಹೀರದ ಸೂಗಮ್ಮನವರ ಶಾಲೆಯ ವಿದ್ಯಾರ್ಥಿಸಂಘದಾಶ್ರಯದಲ್ಲಿ ಸ್ವತಂತ್ರ ಹಿಂದೂಸ್ಥಾನದಲ್ಲಿ ಶಿಕ್ಷಕ ವಿದ್ಯಾರ್ಥಿಗಳ ಕರ್ತವ್ಯವನ್ನು ಕುರಿತು ಶ್ರೀ ಕೃಷ್ಣಾಚಾರ್ಯರು ಉಪನ್ಯಾಸವೆಸಗಿದರು. ಶ್ರೀ ಕೆ. ಚನ್ನಬಸಪ್ಪನವರು ಅಧ್ಯಕ್ಷರು.

— ರಾಯಲಸೀಮ ಮಹಾಸಭೆ —

ಆಂಧ್ರಪ್ರಾಂತ ಈಗ ಬೇಡ.

ಅನಂತಪುರದ ಶಾಸನ ಸಭ್ಯರಾದ ಶ್ರೀ ನೀಲಂ ಸಂಜೀವರೆಡ್ಡಿಯವರ ಅಧ್ಯಕ್ಷತೆಯಲ್ಲಿ ರಾಯಲಸೀಮ ಮಹಾಸಭೆಯ ಸಂಧಾನ ಸಮಿತಿಯು 12 ನೆಯ ತಾ. ಸರ್ವಾವೇಶವಾಗಿ ಹೈದರಾಬಾದ್ ಪ್ರಶ್ನೆಯು ಇತ್ಯರ್ಥವಾಗುವವರೆಗೂ ಕರ್ನೂಲು, ಕಡಪಾ, ಬಳ್ಳಾರಿ, ಅನಂತಪುರ ಮತ್ತು ಚಿತ್ತೂರುಗಳನ್ನೊಳಗೊಂಡ ಆಂಧ್ರಪ್ರಾಂತ ನಿರ್ಮಾಣವಾಗಬಾರದೆಂದರು. ಅಲ್ಲದೆ ನಂದ್ಯಾಲ ನಿರ್ಣಯದ ಪ್ರಕಾರಕ್ಕೆ ಉತ್ತರ ಸರ್ಕಾರ ಜಿಲ್ಲೆಗಳು ಮತ್ತು ರಾಯಲಸೀಮೆಯವರಲ್ಲಿ ಒಸ್ಸಂದವಾಗಬೇಕೆಂದರು.

ಅಧ್ಯಕ್ಷ, ಕಾರ್ಯದರ್ಶಿಗಳಲ್ಲದೆ ಜಿಲ್ಲೆಗೊಬ್ಬರಂತೆ ಪ್ರತಿನಿಧಿಗಳನ್ನೊಳಗೊಂಡ ಶಿಷ್ಟಮಂಡಳಿಯು ಡೆಲ್ಲಿಗೆ ಹೋಗಿ ಘಟನಾ ಸಮಿತಿ ಭಾರತ ಸರ್ಕಾರವೊಡನೆ ಈ ಅಂಶವನ್ನು ತಿಳಿಸಬೇಕು ಮದ್ರಾಸಿನ ರಾಯಲಸೀಮೆ ಶಾಸನ ಸಭ್ಯರಿಗೆ ಈ ವಿಷಯ ತಿಳಿಸಲು ನಿಶ್ಚಯವಾಯಿತು.

ನವಭಾರತಕ್ಕೆ ಚಂದಾದಾರರಾಗಿರಿ

ಪಾಕಿಸ್ತಾನದ ಚಿಂತಾಜನಕ ಆರ್ಥಿಕ ಪರಿಸ್ಥಿತಿ.

ಪೆಂಜಾಬದ ಜನಸಮುದಾಯವು ಮುಂದುಗಾಣದೆ ದಿಕ್ಕೆಟ್ಟು ಚದುರಿ ಹೋಗುತ್ತಿರುವದರ ಪರಿಣಾಮವಾಗಿ ಸಿಂಧ ಮತ್ತು ಪಂಜಾಬಗಳಲ್ಲಿ ಆರ್ಥಿಕ ಅರಾಜಕತೆ ಉಂಟಾಗಿಹೋಗಿದೆ. ಇದರಿಂದ ವ್ಯಾಪಾರ ವ್ಯವಹಾರ ಉದ್ದಿಮೆಗಳಿಗೆ ದೊಡ್ಡ ಆಘಾತವಾಗಿದೆ ಮಹಾಯುದ್ಧಾನಂತರ ಮಾತ್ರ ಇಂತಹ ಆರ್ಥಿಕ ಅನಾಹುತಗಳು ಸಂಭವಿಸುವದುಂಟು. ಮುಸಲ್ಮಾನೇತರರ ನಿರ್ಗಮನದಿಂದಲೇ ಪಾಕಿಸ್ತಾನಕ್ಕೆ ಈ ಆರ್ಥಿಕ ವಿಪತ್ತು ಒದಗಿದೆ ಎಂಬುದಾಗಿ ಎಲ್ಲಾ ವರದಿಗಳಿಂದೂ ತಿಳಿದುಬರುವ ಒಂದು ದೊಡ್ಡ ಅಂಶ. ತಮ್ಮ ಈ ನಿರ್ಗಮನಕ್ಕೆ ಅನುವಂಶಿಕವಾಗಿ ನೆಲಸಿದ ಮನೆಮಾರು ಎಲ್ಲ ತೊರೆದು ಹೊರಹೊರಡುವದಕ್ಕೆ ಅಳವಾದ ಕಾರಣ ವಿಲ್ಲದಿಲ್ಲ ಎಂಬುದಾಗಿ ಮುಸಲ್ಮಾನೇತರರು ಹೇಳುತ್ತಾರೆ. ಅವರ ಆಸ್ತಿತ್ವಕ್ಕೇ ಅರೆದಾರ ತೊಡೆಯಬಂದ ಹೊಸ ಪರಿಸ್ಥಿತಿಯ ಇರುಕಿನಿಂದ ಕಸ್ಪಿಸಿಕೊಂಡು ಅವರು ಓಡಿಹೋಗುತ್ತಿದ್ದಾರೆ. ಸಿಂಧ ಶಾಸನ ಸಭೆಯ ಸದಸ್ಯರಾದ ಪ್ರೊ. ಎಸ್. ಆರ್. ಮಲ್ಕಾನಿ ಎಂಬವರು ಈ ಬಗ್ಗೆ ಹೀಗೆ ಉಸುರಿದ್ದಾರೆ:- "ಪಾಕಿಸ್ತಾನದಲ್ಲಿ ಇನ್ನುಮುಂದೆ ತಮಗೆ ಆರ್ಥಿಕ ಭವಿತವ್ಯವೇ ಇಲ್ಲ ವೆಂದೂ ವ್ಯಾಪಾರದಲ್ಲಿ ದೊಡ್ಡ ಉದ್ಯೋಗಗಳಲ್ಲಿ ದಿವಾಣಿ ಅಥವಾ ದಂಡಿನ ನೌಕರಿಗಳಲ್ಲಿ ತಮಗೆ ಸಲ್ಲ ತಕ್ಕ ಸ್ಥಾನಮಾನಗಳಿಂದ ತಾವು ವಂಚಿತರೆಂದೂ ಇಷ್ಟರಲ್ಲಿ ಹಿಂದುಗಳೆಲ್ಲರ ಮನವರಿಕೆಯಾಗಿಹೋಗಿದೆ" ಹೀಗಿದ್ದ ಪಕ್ಷಕ್ಕೆ ಇದು ನಿಜವಾಗಿಯೂ ಶೋಚನೀಯ. ಯಾಕೆಂದರೆ ಸರಿಯೋ ತಪ್ಪೋ ಅಂತೂ ಈವರೆಗೆ ಹಿಂದುಗಳೇ ತಮ್ಮ ಬುದ್ಧಿಯ ಬಲದಿಂದ ತಮ್ಮ ಸಾಹಸದಿಂದ ತಮ್ಮ ಅಮಿತ ಉತ್ಸಾಹದಿಂದ ಈ ಎಲ್ಲಾ ವಿಭಾಗಗಳಲ್ಲಿಯೂ ಮುಂದಾಗಿದ್ದರು. ಈ ನಿರ್ಗಮನಕ್ಕೆ ಅದೇನೇ ಕಾರಣವಿದ್ದರೂ ಇದರ ಫಲ ಮಾತ್ರ ಪಾಕಿಸ್ತಾನಕ್ಕೆ ತೀರ ಕಹಿಯಾಗಿದೆ. ಪಾಕಿಸ್ತಾನದ ಈ ಅಲ್ಪಸಂಖ್ಯಾಕರೇ ದೊಡ್ಡ ದೊಡ್ಡ ಕಾರಖಾನೆಗಳ ಮತ್ತು ವ್ಯವಹಾರಗಳ ಯಜಮಾನರಾಗಿ, ವ್ಯವಸ್ಥಾಪಕರಾಗಿ, ಸಂಚಾಲಕರಾಗಿ ಮತ್ತು ಸಂಯೋಜಕರಾಗಿ ಪ್ರಮುಖ ಪಾತ್ರವಹಿಸುತ್ತ ಬಂದಿದ್ದಾರೆ. ಇವರ ನಿರ್ಗಮನದಿಂದ ಈ ಆರ್ಥಿಕ ವ್ಯವಹಾರವೇ ಕಟ್ಟಾದುದರಲ್ಲಿ ಆಶ್ಚರ್ಯವೇನು? ವಿಶೇಷವಾಗಿ ಲಾಹೋರದಲ್ಲಿ, ಪಶ್ಚಿಮಪಂಜಾಬದಲ್ಲಿ ಸಾಮಾನ್ಯವಾಗಿ ಹಿಂದುಗಳೇ ವಾಣಿಜ್ಯ ವ್ಯಾಪಾರಗಳ, ಬ್ಯಾಂಕುಗಳ ವಿಮಾವ್ಯವಹಾರಗಳ ಯಂತ್ರಗಳನ್ನು ಸುಗಮವಾಗಿ ಸಾಗಿಸಿಕೊಂಡಿದ್ದರು. ಅಂತೂ ಮುಸಲ್ಮಾನೇತರರ ನಿರ್ಗಮನದ ಮೂಲಕವಾಗಿ ಪಾಕಿಸ್ತಾನದ ಆರ್ಥಿಕ ಪರಿಸ್ಥಿತಿ ತೀರ ಚಿಂತಾಜನಕ ಸ್ಥಿತಿಗೆ ಬಂದಿದೆ.

ಈ ಅನಾಹುತಗಳು ಸಂಭವಿಸಿದಂದಿನಿಂದ ಲಾಹೋರ ಒಂದರಲ್ಲಿಯೇ ಬ್ಯಾಂಕುಗಳಿಗೆ ಲಕ್ಷಾವಧಿ ರೂಪಾಯಿಗಳ ಹಾನಿ ಕಟ್ಟಿದೆ; ಓರ್ವ ವರಿಷ್ಠಾಧಿಕಾರಿಯ ಮಾತುಗಳಲ್ಲಿ ಹೇಳಬೇಕಾದರೆ "ಲಾಹೋರ ಬ್ಯಾಂಕುಗಳು ಇಂದು ಎದುರಿಸುತ್ತಿರುವ ಗಂಭೀರ ಸಮಸ್ಯೆಗಳನ್ನು ಯಾವ ಬ್ಯಾಂಕುಗಳೂ ಎದುರಿಸಲಾರವು. ಇಷ್ಟೇ ಅಲ್ಲ ಯಾವದೇಶದ ಬ್ಯಾಂಕ ವ್ಯವಹಾರದ ಇತಿಹಾಸದಲ್ಲಿಯೂ ಇಂಥ ಉದಾಹರಣೆ ಸಿಕ್ಕದು ಮುಲಗಿ ಏಳುವದರೊಳಗೆ ಬ್ಯಾಂಕ ವ್ಯವಹಾರದ ರಹಸ್ಯವನ್ನು ಕಲಿಯಲಾದೀತೆ? ಅಲ್ಲದೆ ಹೊಸದಾಗಿ ನಿಯುಕ್ತರಾದ ಕೆಲಸಗಾರರು ಈವಿಷಯದಲ್ಲಿ ನಿಷ್ಣಾತರಾಗಿರುವಂತೆಯೂ ಕಂಡುಬರುವುದಿಲ್ಲ." ಆದ್ದರಿಂದ ಪ್ರಕ್ಷುಬ್ಧ ಪಾಕಿಸ್ತಾನದ ವಿಭಾಗಗಳಲ್ಲಿದ್ದ ಬ್ಯಾಂಕ ವ್ಯವಹಾರವೆಲ್ಲ ಕಟ್ಟಾಗಿ ಹೋದುದಂಲ್ಲಿ ಆಶ್ಚರ್ಯವೇನಿದೆ? ಈ ವ್ಯವಹಾರವು ಎಂದಿನಂತೆ ಸುಗಮವಾಗಿ ಎಂದಿಗೆ ಪ್ರಾರಂಭವಾಗ ಬಹುದೆಂಬುದನ್ನೂ ಕೇಳಲಿಕ್ಕಾಗುವಂತಿಲ್ಲ ಮೇಲಾಗಿ, ಈಗೆರಡು ತಿಂಗ

ಳಿಂದ ತುಂಬ ಕೂಡಿಬಿದ್ದ ಕೊಳ್ಳಕೊಳ್ಳುವದನ್ನು ಪಶ್ಚಿಮ ಪಂಜಾಬವು ಅದೆಂತು ತಪ್ಪಿಸಿಕೊಳ್ಳಿಸುವದೋ? ಯುರೋಪಿಯನ್ನರಿಂದ ನಡೆಸಲ್ಪಟ್ಟ ಕೆಲವೊಂದು ಪ್ರಮುಖ ಬ್ಯಾಂಕುಗಳು ಮಾತ್ರ ಅತ್ಯಂತ ಪ್ರಯಾಸ ಪೂರ್ವಕವಾಗಿ ಚಕ್ಕುಗಳಿಗೆ ಹಣಕೊಡುವ ವ್ಯವಸ್ಥೆ ಮಾಡಬಲ್ಲವು ಎಂಬುದಾಗಿ ಇತ್ತೀಚಿನ ವರದಿಯಿಂದ ತಿಳಿದು ಬರುತ್ತಿದೆ. ಇವೇ ಬಗೆಯಾಗಿ ವಿವಿಧ ವ್ಯವಹಾರವೂ ಇನ್ನುಳಿದ ವ್ಯವಸಾಯಗಳೂ ಬದುಕಲೇ ಬೇಡಲೇ ಎನ್ನುವ ಸ್ಥಿತಿಗೆ ಬಂದಿವೆ.

ಸಿಂಧದ ಹಣೆಯಬರಹವು ಕೂಡ ಇದಕ್ಕೆ ಹೊರತಿಲ್ಲದಾಗಿದೆ ಸಾಮಾನ್ಯವಾಗಿ ಸಿಂಧದ ಎಲ್ಲ ವಾಣಿಜ್ಯ ವ್ಯವಹಾರವನ್ನೂ ತಮ್ಮ ಹಿಡಿತದಲ್ಲಿಟ್ಟು ಕೊಂಡು ಸಿಂಧಿ ವರ್ತಕರನೇಕರು ಮುಂಬಯಿಗೂ ಪೋರ್ಟ ಓಕಾಕ್ಕೂ ಹೋಗಿಬಿಟ್ಟಿದ್ದಾರೆ. ಹಿಂದೂಸ್ತಾನ ಪಾಕಿಸ್ತಾನಗಳಲ್ಲಿ ಈ ಬಗೆಯ ವೈಷಮ್ಯ ಭಾವವೇ ಮುಂದರಿದುದಾದರೆ ಕಾಲಿಯಾವಾದದಲ್ಲಿ ಹೊಸ ಹೊಸ ಬಂಧುಗಳು ನಿರ್ಮಾಣವಾಗಿ ಕರಾಚಿಯ ವ್ಯಾಪಾರ ವ್ಯವಹಾರದ ಬಹುಭಾಗವು ಕಡಿಮೆ ಆಗಲಬಹುದೆಂಬ ದೂರದೃಷ್ಟಿಯು ಪಾಕಿಸ್ತಾನದ ಅಧಿಕಾರಿಗಳಿಗೆ ಇದುವಂತೆ ಕಂಡುಬರುವುದಿಲ್ಲ.

ಅದ್ದರಿಂದ ಪಾಕಿಸ್ತಾನದ ಆರ್ಥಿಕ ಭದ್ರತೆಯೂ ಅದರ ಸತ್ತ್ವ ಇಂದು ಹೊಯ್ದಾಡುವ ಪರಿಸ್ಥಿತಿಯ ಘಾಟು ಎಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಿಕ್ಕಿಲ್ಲ ಇಷ್ಟೆಲ್ಲವರ ಪರಿವೆ ಪಾಕಿಸ್ತಾನ ಸರಕಾರಕ್ಕೆ ಇಲ್ಲದಿಲ್ಲ ಎಂಬುದು ಅದು ಇತ್ತೀಚೆಗೆ ಫಾಯನಾನ್ಸ ಕಾರ್ಪೋರೇಶನ್ ಎಂಬ ಸಂಸ್ಥೆಯನ್ನು ತೆಲಿಬಿಟ್ಟ ರೀತಿಯನ್ನು ಪರಿಶೀಲಿಸಿದರೆ ಕಂಡುಬರದಿರದು. ಈ ಫಾಯನಾನ್ಸ ಕಾರ್ಪೋರೇಶನ್ ಸಂಸ್ಥೆಯು ಐದು ಕೋಟಿ ರೂಪಾಯಿಗಳ ದೈನಂದಿನದ ವೆಚ್ಚದ ಮೂಲ ಧನದಿಂದ ಕರಾಚಿಯಲ್ಲಿ ಸ್ಥಾಪಿಸಲ್ಪಟ್ಟಿದೆ. ಕಾರಖಾನೆಗಳ ಯಜಮಾನರಿಗೆ ಈ ವರ್ಷದ ಅರಳಿಯ ಬೆಳೆಯನ್ನು ಕೊಳ್ಳಲು ಮತ್ತು ಕೊಡಲು ಸಹಾಯ ನೀಡಲೋಸುಗ ಈ ಸಂಸ್ಥೆಯ ಜನನವಾಗಿದೆಯಂತೆ. ಇದರ ತೆತ್ತಮೂಲಧನವು ಒಂದು ಕೋಟಿಯಾಗುವದು. ಇದರ ಪಾಲುಗಳು ಪಾಕಿಸ್ತಾನ ಸರಕಾರ, ಹಬೀಬ ಬ್ಯಾಂಕ ಮತ್ತು ಬ್ಯಾಂಕ್ ಆಫ್ ಅಸ್ಟೆಲೇಸಿಯಾಗಳ ನಡುವೆ ಹಂಚಲ್ಪಟ್ಟಿವೆ. ಪಾಕಿಸ್ತಾನದ ಇಂದಿನ ಆರ್ಥಿಕ ಪರಿಸ್ಥಿತಿಯ ಮೂಲಕ ಈ ಸಂಸ್ಥೆಯಲ್ಲಿ ಜನರಾರೂ ಹಣತೊಡಗಿಸಲು ಮುಂದೆ ಬರಲಾರರೆಂದು ಪಾಕಿಸ್ತಾನ ಸರಕಾರಕ್ಕೆ ಮನವರಿಕೆಯಾದಂತೆ ತೋರುತ್ತದೆ ಎಂದೇ ಇದರ ಪಾಲುಗಳನ್ನು ಕೂಡ ಜನತೆಗೆ ಹಂಚಹೋಗಿಲ್ಲ ಈ ವಿಷಯದಲ್ಲಿ ಈ ವಿಧವಾಗಿ ಪಾಕಿಸ್ತಾನ ಸರಕಾರವು ನಡೆದುದರ ರಹಸ್ಯವೇನೇ ಇರಲಿ ಆಗಷ್ಟ ೧೫ ನೇ ತಾರೀಖಿನಿಂದ ಪಾಕಿಸ್ತಾನದ ಆರ್ಥಿಕ ಭದ್ರತೆಯು ಶಿಥಿಲವಾಗಿದೆ ಎಂಬುದೇನು ಸುಳ್ಳಲ್ಲ.

ಜೂಜಾಟ-ಬಂಧನ-ಬಿಡುಗಡೆ.

ಬಳ್ಳಾರಿಯ ಸಿಟಿ ಪ್ರೆಸ್‌ನಲ್ಲಿ 8-11-47 ನೆಯ ಸಾಯಂಕಾಲ ಸಶಸ್ತ್ರ ಪೋಲೀಸರ ಸಹಾಯದಿಂದ ಪತ್ತಮಂಡಲದ ಜಿಲ್ಲೆಗಳ ಜೂಜುಗಾರರು ಬಂಧಿಸಲ್ಪಟ್ಟರು ಸುಮಾರು ರೂ. 7000/- ಮತ್ತು ಸಾರಾಯಿ ವಗೈರೆ ದೊರೆಯಿತು. ಅವರನ್ನು ಜಾಮೀನಿನಮೇಲೆ ಬಿಡುಗಡೆ ಮಾಡಲಾಗಿದೆ.

ಬಳ್ಳಾರಿ ಜಿಲ್ಲಾ ಮೋಟಾರು ಕೆಲಸಗಾರರ ಸಭೆಯು ಮಲ್ಲಸಜ್ಜನ ವ್ಯಾಯಾಮ ಶಾಲೆಯಲ್ಲಿ 10 ನೆಯ ಕಾ. ಸತ್ಯವಂತರಾಯಪ್ಪನವರ ಅಧ್ಯಕ್ಷತೆಯಲ್ಲಿ ಸಮಾವೇಶವಾಗಿ ತಮ್ಮ ಭವಿತವ್ಯವನ್ನು ಕುರಿತು ಚರ್ಚಿಸಿ, ಮದ್ರಾಸ್ ಪ್ರಾಂತೀಯ ಸಂಘಕ್ಕೆ ಸಂಬಂಧವನ್ನಿಟ್ಟುಕೊಳ್ಳಲು ನಿಶ್ಚಯಿಸಿತು ಶ್ರೀ ಬಿ. ಭೀಮಸೇನಾಚಾರ್ಯರು ಇಲ್ಲಿಯವರೆಗೆ ನಡೆದ ಕೆಲಸ ವರದಿ ಲೆಕ್ಕಪತ್ರಗಳನ್ನೊಪ್ಪಿದರು. ರಮೇಶ ಜ್ವಾಲಾಪತಿ ಟಾಗೆಟ್, ಮಹಮ್ಮದ್‌ರವರು ಸಂಘಟನೆಯ ಮಹತ್ವವನ್ನು ತಿಳಿಸಿದರು.

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್,

ಮುಖ್ಯ ಕಛೇರಿ — ಬಳ್ಳಾರಿ. ಸ್ಥಾಪಿತ : 1939

ಬಳ್ಳಾರಿ, ಅನಂತಪುರ, ಕಡಪ, ಕರ್ನೂಲು ಮತ್ತು ಚಿತ್ತೂರು ಜಿಲ್ಲೆಗಳ ಆರ್ಥಿಕಾಭಿವೃದ್ಧಿ ಉದ್ದೇಶದಿಂದ ಸ್ಥಾಪಿತವಾಗಿದೆ.

ಛೇರ್ಮನ್ ಬ್ಯಾಂಕ್ ಆಫ್ ಡಾಯರೆಕ್ಟರ್ಸ :- ಶ್ರೀ ಹೆಚ್. ಲಿಂಗಾರೆಡ್ಡಿ ಬಿ. ಎ. ಬಿ. ಯಲ್.

ಬಳ್ಳಾರಿ.

ಸ್ಥಾಯೀಠೇವಣಿ [ಫಿಕ್ಸೆಡ್-ಡಿಪಾಜಿಟ್] ದರಗಳು

3, 4, 5	ತಿಂಗಳುಗಳಿಗೆ	ಶೇಕಡ ಬಡ್ಡಿದರ ರೂ.	2-0-0
6	,,	,,	2-8-0
1	ವರ್ಷಕ್ಕೆ	,,	3-0-0
2	,,	,,	3-8-0

2 **ಕ್ಯಾಷ್ ಸರ್ಟಿಫಿಕೇಟುಗಳು** ಬಡ್ಡಿಯ ಸಹಿತ 100 ಕ್ಕೆ 1 ವರ್ಷಕ್ಕೆ 3-8-0
10-0-0 ಸರ್ಟಿಫಿಕೇಟ್—ಕೊಡುವ ಧರ ರೂ. 9-0-3

3 **ಚಾಲು ಖಾತೆ** (ಕರೆಂಟು ಅಕೌಂಟು) ಬಡ್ಡಿ ಶೇಕಡ ರೂ 1/-

4 **ಸೇವಿಂಗ್ಸ್ ಬ್ಯಾಂಕು ಅಕೌಂಟು** :- ವಾರದಲ್ಲಿ ಎರಡು ಸಲ ರೂ. 250/-ಗಳಿಗೆ ಮಿಂಚದೆ ಹಣ ತೆಗೆದುಕೊಳ್ಳಬೇಕು. 1 ವರ್ಷಕ್ಕೆ ಶೇಕಡ ರೂ. 2/-

ಬ್ಯಾಂಕಿನ 27 ಶಾಖೆಗಳಲ್ಲಿ ಲೆಕ್ಕಗಳನ್ನು ಪ್ರಾರಂಭಿಸಬಹುದು. ಇತರ ಎಲ್ಲಾ ವಿಧವಾದ ಬ್ಯಾಂಕು ಸೌಕರ್ಯಗಳು ಒದಗಿಸಲಾಗಿವೆ.

ಬಿ. ಸಿ. ಶೇಷಗಿರಿರಾವ್, ಬಿ. ಕಾಂ.
ಕಾರ್ಯದರ್ಶಿ

NAVA BHARAT, BELLARY. Reg. No. M. 4746

ನವಭಾರತ ಬಳ್ಳಾರಿ.
(Nationalist Weekly)

ಚಂದಾದರಗಳು.		Subscription Rates	
ವರ್ಷಕ್ಕೆ	5-0-0	One Year	5—0—0
6 ತಿಂಗಳಿಗೆ	3-0-0	Six months	3—0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ		Subscription will not be accepted for less than 6 months.	

To
SRI.....
.....
.....

Printed at Krishna Press Bellary QH No. B 17 FOR (Q.H. No. B-5.)
Edited & Published by T. B. KESHAVA RAO

ನವಚೇತನ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ವರ್ಷ ೧೦ ಸಂಚಿಕೆ ೪೫ | ಬಳ್ಳಾರಿ ನವಂಬರು ೨೪ ಸೋಮವಾರ ೧೯೪೭ | ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವ್.

ಹಿಂದೂಸ್ತಾನಕ್ಕೆ ಸುತ್ತಲಿಂದ ಗಂಡಾಂತರ

ಪಂ. ಜವಾಹರರ ಭಾಷಣ

"ಕಳೆದ ಎರಡು ತಿಂಗಳಲ್ಲಿ ನಡೆದ ಘಟನೆಗಳಿಂದ ಹಿಂದುಸ್ತಾನಕ್ಕೆ ಎಲ್ಲ ಕಡೆಗಳಿಂದಲೂ ಗಂಡಾಂತರವಿದೆ ಎಂಬ ಮಾತು ಸ್ಪಷ್ಟವಾಗಿದೆ" ಎಂದು ಹಿಂದುಸ್ತಾನದ ಮುಖ್ಯ ಮಂತ್ರಿಗಳಾದ ಪಂಡಿತ ಜವಾಹರಲಾಲನೆಹರೂರು ದಿಲ್ಲಿಯ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತ ಹೇಳಿದರು.

"ಹಿಂದುಸ್ತಾನದ ಜನರು ಕೂಡಲೆ ಪರಿಸ್ಥಿತಿಯನ್ನು ಎದುರಿಸಲು ಯೋಗ್ಯರೀತಿಯಿಂದ ಸಿದ್ಧತೆ ಮಾಡಿಕೊಳ್ಳದಿದ್ದರೆ ನನಗೆ ದೊರೆತ ಸ್ವಾತಂತ್ರ್ಯವು ಅಲ್ಪಕಾಲದ್ದಾಗಬಹುದು.

ಕೆಲ ದಿನಗಳ ಹಿಂದೆ ಜುನಾಗಡ ಸಮಸ್ಯೆಯನ್ನು ನಾವು ಬಿಡಿಸಬೇಕಾಗಿತ್ತು. ಈಗ ಜುನಾಗಡ, ಬಾಬರಿವಾಡ, ಮುಂಗ್ರೋಲುಗಳಿಗಿಂತ ಭೀಕರವಾದ ಕಾಶ್ಮೀರ ಸಮಸ್ಯೆಯನ್ನು ಬಿಡಿಸಲು ತೊಡಗಿದೆವು. ಕಾಶ್ಮೀರ ದಾಳಿಯ ಬಗ್ಗೆ ಪಾಕಿಸ್ತಾನ ಸರಕಾರವು ನಡೆಸಿದ್ದ ಸಿದ್ಧತೆಗಳತ್ತ ಲಕ್ಷ್ಯ ಹೋಗಕೂಡದೆಂದು ಜುನಾಗಡದತ್ತ ನಮ್ಮ ಲಕ್ಷ್ಯವನ್ನೆಳೆಯಲಾಗಿತ್ತೆಂಬುದು ಈಗ ನಿಚ್ಚಳವಾಗಿದೆ. ಕಾಶ್ಮೀರದ ಮೇಲೆ ದಾಳಿ ನಡೆಸಿದವರು ಕೇವಲ ಗುಡ್ಡಗಾಡು ಜನರಲ್ಲ. ಪಾಕಿಸ್ತಾನದ ಅಧಿಕಾರಿಗಳ ನಿಯಂತ್ರಣದಲ್ಲಿ ಅಧುನಿಕ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತರಾದ ಪಾಕಿಸ್ತಾನ ಜನರೂ ಅದರಲ್ಲಿದ್ದಾರೆ. ಸಕಾಲದಲ್ಲಿ ಸೈನ್ಯ ಕಳಿಸಿದ್ದರಿಂದ ಕಾಶ್ಮೀರ ಪರಿಸ್ಥಿತಿ ಹದಗೆಡಲಿಲ್ಲ. ಈಗ ಹಿಂದುಸ್ತಾನವು ಸೈನ್ಯಬಲ ಬೆಳೆಸಬೇಕಾಗಿದೆ. ಉತ್ಪತ್ತಿಯನ್ನು ಹೆಚ್ಚಿಸಬೇಕಾಗಿದೆ. ಅಂತರಿಕ ಶಾಂತತೆ ಕಾಯ್ದುಕೊಳ್ಳಬೇಕಾಗಿದೆ' ಎಂದು ಅವರು ಹೇಳಿದರು

ವೈಮಾನಿಕರ ಸ್ತುತ್ಯಕಾರ್ಯ— ಕಾಶ್ಮೀರವನ್ನು ಸಂರಕ್ಷಿಸಲು ಅತ್ಯಂತ ಪ್ರಶಂಸನೀಯವಾದ ಕಾರ್ಯವನ್ನು ಮಾಡಿ ದಾಳಿಗಾರರನ್ನೋಡಿಸುವ ಕಾರ್ಯದಲ್ಲಿ ವಿಮಾನಗಳ ಮೂಲಕ ಸೈನ್ಯಗಳನ್ನು ಸಾಗಿಸಲು ಕಾರಣರಾದ ವೈಮಾನಿಕರಿಗೆ ಪಂಡಿತ ನೆಹರೂರವರು ಹಾರ್ದಿಕವಂದನೆಗಳನ್ನರ್ಪಿಸಿ ರಾಯಲ್ ಏರಫೋರ್ಸ ದಳವು ಪ್ರಪಂಚದಲ್ಲೇ ಸುಪ್ರಶಿಕ್ಷಿತವಾಯ್ತೆಂದುಸಿರಿದರು

ಬರುವವಾರ ರಜಾ.

ರೈತ ಪರಿಷತ್ತಿಗಾಗಿ 'ನವಭಾರತ' ದ 1-12-47 ನೇ ಸಂಚಿಕೆಯು ಹೊರಡುವುದಿಲ್ಲ.

8-12-47 ನೇ ಸಂಚಿಕೆ ಹೊರಡುವುದು.

ಗಾಂಧಿಯವರ ಪ್ರಾರ್ಥನೋತ್ತರ ಭಾಷಣ.

ಆಹಾರ ನಿಯಂತ್ರಣ ತೆಗೆಯಿರಿ.

ಡಾ. ರಾಜೇಂದ್ರ ಪ್ರಸಾದರು ಮುಖ್ಯ ಮಂತ್ರಿಗಳ ಇಲ್ಲವೆ ಅವರ ಪ್ರತಿನಿಧಿಗಳ ಸಭೆಯೊಂದನ್ನು ಕರೆದಿದ್ದಾರೆ. ಆಹಾರ ನಿಯಂತ್ರಣ ಕಾರ್ಯದಲ್ಲಿ ಸಹಾಯ ಸೂಚನೆಗಳನ್ನು ಅವರಿಂದ ರಾಜೇಂದ್ರರು ಪಡೆಯಲಿದ್ದಾರೆ. ಅದರಿಂದ ಈ ಸಂಜೆಯನ್ನು ಮುಖ್ಯವಾದ ಆ ವಿಷಯದ ಬಗ್ಗೆ ವಿನಿಯೋಗಿಸಬೇಕೆನಿಸುತ್ತದೆ. 6 ತಿಂಗಳೊಳಗೆ ನಿಯಂತ್ರಣವನ್ನು ಪೂರ್ಣವಾಗಿ ತೆಗೆದುಹಾಕಬೇಕೆಂದು ನಾನು ಮೊದಲಿನಿಂದಲೂ ಹೇಳುತ್ತ ಬಂದಿದ್ದೇನೆ. ನನ್ನ ಅಭಿಪ್ರಾಯವನ್ನು ಬದಲಿಸಲು ಇಲ್ಲಿಯವರೆಗೆ ಕೇಳಿದ ಯಾವ ಸಮಾಚಾರವೂ ಸಮರ್ಥವೆನಿಸದು. ಕಾಗದಗಳೂ ತಂತಿಗಳೂ ಬರದಿದ್ದ ದಿವಸವಿಲ್ಲ. ಅವುಗಳೆಲ್ಲವೂ ಖಂಡಿತೋಕ್ತಿಯಿಂದ ಎರಡೂ ನಿಯಂತ್ರಣಗಳನ್ನು ತೆಗೆದುಹಾಕಬೇಕೆಂದು ಹೇಳುತ್ತವೆ. ಸದ್ಯಕ್ಕೆ ಬಟ್ಟೆಯ ನಿಯಂತ್ರಣವನ್ನು ಬಿಟ್ಟು ಬಿಡುತ್ತೇನೆ.

ನಿಯಂತ್ರಣದಿಂದ ಕೇಡು

ನಿಯಂತ್ರಣದಿಂದ ಮೋಸ ಹುಟ್ಟುತ್ತದೆ. ಸತ್ಯ ತಲೆಹೆತ್ತಲಾರದಾಗುತ್ತದೆ, ಕಳ್ಳಪೇಟೆ ಮತ್ತು ಕೃತಕ ಬರಗಾಲ ಹೆಚ್ಚುತ್ತವೆ. ಇದರ ಮೇಲೆ ಒಂದು ತಲೆಮಾರಿಂದ ಕಲಿಯುತ್ತ ಬಂದಿರುವ ಸ್ವಸಹಾಯದ ಪಾಠವನ್ನು ಜನ ಮರೆಯುವಂತಾಗುತ್ತದೆ. ಅವರು ಕೇವಲ ಇನ್ನೊಬ್ಬರು ಹೇಳಿದಂತೆ ಕೇಳುವ ಬುದ್ಧಿಯವರಾಗುತ್ತಾರೆ. ಆಗಲೇ ಬಹು ದೊಡ್ಡ ಅಳತೆಯಲ್ಲಿ ಭಾತೃಹತ್ಯೆ ನಡೆದಿದೆ. ಪ್ರಜಾ ವಿನಿಮಯದ ಹುಚ್ಚು ಹಾಗೇ ಸಾಗಿದೆ. ಅದರಿಂದ ಅನವಶ್ಯಕವಾಗಿ ಜನರು ಸಾಯುವುದು. ಉಪವಾಸ ಬೀಳುವುದು. ಮನೆ ಮಠಗಳಿಲ್ಲದೆ ಅಲೆಯುವುದು. ಬರಲಿರುವ ಚಳಿಗಾಲದಲ್ಲಿ ಒಟ್ಟೆ ಸಾಲದೆ ನರಳುವುದು ಮುಂತಾದ ಹಲವು ದುರಂತಗಳು ಸಂಭವಿಸುವುವು. ಎರಡನೆಯದು ಮತ್ತೂ ಭಯಂಕರವಾಗಿದೆ. ಅದರಿಂದಲೇ ನಾವು ಒಂದನೆಯದನ್ನು ಮರೆಯಬೇಕಾಗಿದೆ.

ಈ ಆಹಾರ ನಿಯಂತ್ರಣವೆಂಬುದು ಕಳೆದ ಮಹಾಯುದ್ಧ ನಮಗೆ ಕೊಟ್ಟು ಹೋದ ಕೆಟ್ಟ ಆಸ್ತಿ. ಬಹು ದೊಡ್ಡ ಪರಿಮಾಣದಿಂದ ಕಾಳುಕಡಿ ಮೊದಲಾದ ಇತರ ಆಹಾರ ಧಾನ್ಯಗಳನ್ನು ನಿರ್ಯಾತ ಮಾಡಲಾಗುತ್ತಿದ್ದುದರಿಂದ ಆಗ ನಿಯಂತ್ರಣ ಅವಶ್ಯಕವಿತ್ತು. ಈ ಅಸ್ವಾಭಾವಿಕವಾದ ನಿರ್ಯಾತವು ಬಹುತಃ ಕೃತಕ ಪ್ರಯತ್ನ ಹೆಚ್ಚು ಮಾಡಬಲ್ಲುದಲ್ಲದೆ ಅದರಿಂದ ಎಷ್ಟೇ ಸದೋಷವೆನಿಸಿದ್ದರೂ ದೇಶನಿಂಗ ಪದ್ಧತಿಯನ್ನು ಜಾರಿಗೆ ತರಲೇಬೇಕಾಗುವುದು. ಈಗ ನಾವು ನಿರ್ಯಾತಮಾಡಕೂಡದು. ಹಾಗೆ ಬಯಸಿದರೂ ಅದನ್ನು ತಪ್ಪಿಸಲಾಗದು. ಆಹಾರದ ರೂಪದಲ್ಲಿ ಪರದೇಶದ ಸಹಾಯ ಬರಬೇಕೆಂದು ಅಪೇಕ್ಷಿಸದಿದ್ದರೆ ಜಗತ್ತಿನಲ್ಲಿಯ ವಿವಿಧ ಭಾಗಗಳ ದರಿದ್ರರಿಗೆ ಸಹಾಯ ನೀಡಲು ಬಗೆವೆವು.

ನನ್ನ ಜೀವನದಲ್ಲಿ ಎಷ್ಟೋ ದೇವದತ್ತ ಕುಟುಂಬಗಳನ್ನು ನೋಡಿದ್ದೇನೆ. ಅದರೆ ದೇಶನಿಂಗಿನ ಆಲೋಚನೆ ಕೂಡ ತಲೆಗೆ ಬಂದದ್ದು ನೆನಪಿಲ್ಲ.

ಇಂದು ದೇವರ ದಯೆಯಿಂದ ಮಳೆ ನಮಗೆ ತೊಂದರೆ ಕೊಟ್ಟಿಲ್ಲ. ಆದುದರಿಂದ ನಿಜವಾದ ಅನ್ನಾ

ಭಾವನೆಂಬುದಿಲ್ಲ. ಭಾರತದ ಹಳ್ಳಿಗಳಲ್ಲಿ ಬೇಕಾದ ಹಾಗೆ ಕಾಳುಗಳಿವೆ. ಬೆಳೆಯಿದೆ. ಎಣ್ಣೆಯ ಬೀಜವಿದೆ ಕೃತಕವಾದ ನಿಯಂತ್ರಣದ ಅರ್ಥವನ್ನು ಹಳ್ಳಿಗನು ತಿಳಿದುಕೊಳ್ಳಲಾರನು ಅವನು ಆ ಕಾರಣದಿಂದ ಸಂತೆಯ ಧಾರಣೆಗಿಂತ ಕಡಿಮೆ ಧಾರಣೆಗೆ ಮಾರಲು ಮನಸಾ ಒಪ್ಪುವುದಿಲ್ಲ ಈ ನಗ್ನ ಸತ್ಯಕ್ಕೆ ಬೇರೆ ನಿದರ್ಶನ ಬೇಡ ಅದಕ್ಕೆ ಅಂಕೆ ಸಂಖ್ಯೆ ಕಲೆಹಾಕಬೇಕಾಗಿಲ್ಲ ಗುಮಾಸ್ತಗಿರಿ ಮಾಡಬೇಕಾಗಿಲ್ಲ, ಹಳ್ಳಿಯ ಜಪ್ತರ ಹಿಡಿದು ನೌಕರರು ಕೊಗತೆಯಿದೆಯೆಂದು ದೊಡ್ಡ ದೊಡ್ಡ ಹೇಳಿಕೆ ತಯಾರಿಸಿ ಸಿದ್ಧಮಾಡಿ ತೋರಿಸಬೇಕಾಗಿಲ್ಲ ಜನಸಂಖ್ಯೆ ಹೆಚ್ಚಿದೆಯೆಂಬ ಕುರುಡು ನೆವನನ್ನು ಯಾರೂ ನಮ್ಮ ಮುಂದಿಡಲಾರರೆಂದು ನಂಬುವೆ.

ಅನುಭವಸ್ಥರ ಬುದ್ಧಿವಾದ

ನಮ್ಮ ಮಂತ್ರಿಗಳು ಜನರಿಂದ ಬಂದವರು, ಜನರಿಗೆ ಸೇರಿದವರು, ನಮ್ಮಲ್ಲಿ ಮಂತ್ರಿಗಳ ಸ್ಥಾನವನ್ನಲಂಕರಿಸದ ಎಷ್ಟೋ ಅನುಭವಸ್ಥರಿದ್ದಾರೆ. ಅವರಿಗಿಂತ ತಮಗೇ ಹೆಚ್ಚು ಜ್ಞಾನವಿದೆಯೆಂದು ತಿಳಿದುಕೊಂಡು ಮಂತ್ರಿಗಳು ನಿಯಂತ್ರಣ ಹೋಗಬೇಕೆಂಬ ಅವರ ಅಭಿಪ್ರಾಯವನ್ನು ಅಲ್ಲಗಳೆಯದಿರಲಿ. ರೇಶನ್ನಿನ ದವಸದ ಮೇಲೆಯೇ ಅವಲಂಬಿಸಿದವರಿಗೆ ತಿನ್ನಲು ಯೋಗ್ಯವಾದ ಕಾಳು ಬೇಳೆಗಳು ಸಿಗುವುದು ಕಠಿನ. ರೇಶನ್ನಿನ ಕೊಳೆ ದಿನಸು ತಿಂದು ಅನಿವಾರ್ಯಕವಾಗಿ ಜನರು ಕಾಹಿಲೆ ಬೀಳಬೇಕಾಗುತ್ತದೆ.

ಪ್ರಜಾಪ್ರಭುತ್ವ ಮತ್ತು ವಿಶ್ವಾಸ

ನಿಯಂತ್ರಿತ ಆಹಾರದ ಬದಲು ಅದೇ ರೇಶನ್ ಅಂಗಡಿಗಳಲ್ಲಿ ಸರಕಾರವು ಒಳ್ಳೆಯ ಧಾನ್ಯಗಳನ್ನು ಮಾರಬಹುದ. ಅವನ್ನು ಜನರು ಸಂತೆಯಲ್ಲಿ ಕೊಂಡಂತೆಯೇ ಕೊಳ್ಳಬಹುದು. ಹಾಗೆ ಮಾಡಿದರೆ ತನ್ನಿಂದತಾನೇ ಬೆಲೆ ಹತೋಟೆಯಲ್ಲಿ ಬರುತ್ತದೆಮತ್ತು ಕೂಡಿಟ್ಟಕಾಳು ಬೇಳೆ ಎಣ್ಣೆಯ ಬೀಜಗಳು ಹೊರ ಬೀಳುತ್ತವೆ. ಕೊಳ್ಳುವ ಬೆಳೆವ ಮತ್ತು ವ್ಯಾಪಾರವನ್ನು ಅವರು ನಂಬರೇ? ಕಡಿವಾಣದ ಕಟ್ಟಿನಲ್ಲಿ ಪ್ರಜಾಪ್ರಭುತ್ವ ಕಂಗಾಲಾಗುತ್ತದೆ. ಅದು ಕೇವಲ ನಂಬಿಕೆಯ ಮೇಲೆ ನಿಲ್ಲಬಲ್ಲುದು. ಸೋಮಾರಿಗಳಾಗಿದ್ದು ಪರಸ್ಪರರನ್ನು ವಂಚಿಸಿ ಜನರು ಸತ್ತರೆ ಸೀಡೆ ಚೂಲಗ್ನಿತೆಂದು ಉಳಿದವರಾದರೂ ಆಗ ಸೋಮಾರಿಯಾಗಿರುವ ಮತ್ತು ಕ್ರೂರಸ್ವಾರ್ಥಿಯಾಗಿರುವ ವಾಸವನ್ನು ಪುನಃ ಆಚರಿಸರು.

ಸರ್ಕಾರಿ ನವಕರರ ಸಹಕಾರ ಸಂಘ, ಸಿರುಗುಪ್ಪ.

ಮಹಾಶಯರೇ:— ಈಗಿರುವ ಆಹಾರ ದುಸ್ಥಿತಿಯ ನಿವಾರಣೆಯಾಗಬೇಕೆಂದರೆ ಪ್ರತಿ ಗ್ರಾಮದಲ್ಲಿ ಸಹಕಾರ ಸಂಘಗಳು ಏರ್ಪಾಟಾಗಬೇಕಾದುದು ಬಹಳ ಅಗತ್ಯವೆಂದು ಬೇರೆ ಹೇಳಬೇಕಿಲ್ಲ. ಆಹಾರ ಧಾನ್ಯಗಳ ಸಂಗ್ರಹವಾದರೂ ಈ ಸಂಘಗಳ ಮೂಲಕವಾಗಿಯಾದರೆ ಬಡಜನರಿಗೆ ಕಷ್ಟವಿಲ್ಲದೆ ಕಾಳುದೊರೆಯುತ್ತದೆ. ಧನಿ, ನಿರ್ಧನಿಗಳ ಭೇದ ಮತ್ತು ಇವರಲ್ಲಿನ ಸಂಘರ್ಷಣ ಬಹಳಕಾಲವಿದ್ದೀತು. ಅಸ್ಪೃಶ್ಯತಾ ನಿವಾರಣೆ, ಹರಿಜನಾಭಿವೃದ್ಧಿ ಗ್ರಾಮದಲ್ಲಿ ವಿದ್ಯಾವಂತರಾದ ಉಪಾಧ್ಯಾಯರು, ಸುಧಾರಕರು ಎಲ್ಲರೂ ದುಡಿದರೆ ಹಳ್ಳಿಗಳ ಬೀಡಾದ ಹಿಂದೂಸ್ಥಾನದ ಕಲ್ಯಾಣವು ಶೀಘ್ರದಲ್ಲಾದೀತು.

ಸಾಲದ ಸಂಘ ೧ ಷೇರು ಮೊತ್ತ ರೂ. ೫-೦-೦ ರುಸುಮು ೦-೪-೦

ಸ್ಟೋರ್ಸ್ ಸಂಘ ೧ ಷೇರು ಮೊತ್ತ ರೂ. ೨೫-೦-೦ ರುಸುಮು ೧-೪-೦

ಕೂಡ್ಲಿಗಿ ನಂಕೋಬರಾವು,
ಕಾರ್ಯದರ್ಶಿ.

2.20

Correspondence :-

[*The editor is not responsible for the opinions expressed in the course of this article. Editor Nava Bharat.*]

"Rayalaseema, Nandyal Session and After"

(B K. G. Rao Yemmiganur)

Though the activities and achievements of Rayalaseema Mahasabha have not been startling or striking from its inception to this day, its founders sincerely and justifiably feel that what little good has accrued economically to our district, during the last 6 or 7 years has been due mainly if not entirely to their agitation. Indeed, their ideals and objects have been directed, without an eye on power politics, only towards obtaining a satisfactory all round material progress of all those residing in our poor and back ward district, before these are incorporated in one or other of the linguistic provinces into which our big Madras Province is decided to be dismembered some day or other; but it is a sorry fact that the Mahasabha has made only a little advance on its onward march of progress.

While the materialisation of our important schemes & projects big and small, is still in the offing, and while our leaders continue to grope in the darkness of diffidence, inertia and undecidedness, our more enthusiastic and practical minded brothers in the circars are trying their level best to get constituted their Andhra province in the immediate future, declaring that our districts shall surely be included in their new province, brushing aside unceremoniously our adverse feelings in the matter.

Has our Negotiating Committee started functioning? It is indeed unfortunate, the Committee itself was formed under very dubious circumstances, and the members are all not of one mind, some of them cherishing even diametrically opposite views as against the rest. There is not among them a leader who can compel universal respect and inspire uniform confidence and can be trusted to guide the committee in carrying on successful negotiations with the powerful body that is being formed by Acharya Ranga to meet them.

I desire to focus the attention of our negotiators and other well wishers of Rayalaseema, on the following.

(1) The importance of our long agitated Gandikota and Sangameswara projects has just now dawned on our Andhra horizen, only after their costly "Ramapada Sagar" has practically become a "fait accompli".

(2) Even our smaller projects like Kumudvati, Upper Pennar, and Bhairavanthippa etc, have

only emerged from the stage of investigation, at this period of our agitation, and their estimates are not yet included in our Provincial Budgets.

(3) Even if the Circars negotiators readily consent for the execution of all our projects alongwith their Ramapada sagara, do you sincerely feel that with the limited resources and revenues of a separate Andhra Province, it will be possible for us get, all our cherished objects, realised within a reasonable time?

(4) Will it not be in our interest, to remain in the present bigger Madras Province and claim necessary allotments from the aggregate provincial revenues, till all our important projects are completed.

(5) Is this the proper time to trouble the Indian Government, while their hands are full with Evacuees, Kashmir & Hyderabad problems, for the formation of linguistic provinces, and whether favourable circumstances are really obtainable for the immediate formation of not only Andhra, but also of Karnataka, Kerala and Maharashtra Provinces for whose creation also the Congess is equally committed?

ಒರಿಸ್ಸಾದಲ್ಲಿನ ನೀಲಗಿರಿ ಸಂಸ್ಥಾನದ ಆಡಳಿತವನ್ನು ಇಂಡಿಯಾ ಸರ್ಕಾರವು ವಹಿಸಿಕೊಂಡು ಅರಸರ ಆಡಳಿತವನ್ನು ಕೊನೆಗಾಣಿಸಿದಮೇಲೆ ಅಲ್ಲಿ ಪ್ರಜೆಗಳ ಮೇಲಣ ಅತ್ಯಾಚಾರ - ದಬ್ಬಾಳಿಕೆ ನಿಂತವು.

ನೆಹರು ಜಯಂತಿ.

ಬಳ್ಳಾರಿ ವಿದ್ಯಾರ್ಥಿ ಕಾಂಗ್ರೆಸಿನವರು 14 ನೇ ದಿನಾಂಕ ಪ್ರಾತಃಕಾಲ ಜವಹರಲಾಲ ನೆಹರು ಜಯಂತಿಯನ್ನು ವೈಭವದಿಂದ ನೆರವೇರಿಸಿದರು. ಉದಯ ಪ್ರಭಾತಫೇರಿ ಸಾಯಂಕಾಲ ನೆಹರೂ ಭಾವಚಿತ್ರದ ಮೆರವಣಿಗೆಯನಂತರ ಸಾಂಬಮೂರ್ತಿ ವೈದಾನದ ಬಹಿರಂಗ ಸಭೆಯಲ್ಲಿ ವೀ ಕಾಲೇಜಿನ ವ್ಯಾಖ್ಯಾಪಕರಾದ ಶ್ರೀ ನಾರಾಯಣರಾಯರ ಅಧ್ಯಕ್ಷತೆಯಲ್ಲಿ ಶ್ರೀ ಹಿ. ನು. ನಾಗಯ್ಯ ವೃಷಭೇಂದ್ರ ಸ್ವಾಮಿ ಟೆಕ್ಸ್‌ಟೈಲ್ ಆಫೀಸರ್ ಸುಬ್ಬರಾವ್ ಕೃಷ್ಣರಾವ್ ಸಬರಾಜನ್‌ರು ನೆಹರೂರ ಜೀವನದಿಂದ ಕಲಿಯಬೇಕಾದ ಪಾಠಗಳನ್ನು ಹೇಳಿದರು.

ಮದ್ರಾಸ್ ಪ್ರಾಂತದ ಮದ್ಯನಿಷೇಧ ವಿಚಾರಣಾ ಸಮಿತಿಯು ಬಳ್ಳಾರಿ ಜಿಲ್ಲೆಯಲ್ಲಿ ಸಂಚರಿಸಿ ಸಂಬಂಧಿಸಿದವರಿಂದ ಮದ್ಯನಿಷೇಧವು ಹೇಗೆ ನಡೆಯುತ್ತಿರುವದೆಂಬ ಬಗ್ಗೆ ಸಾಕ್ಷ್ಯವನ್ನು ತೆಗೆದುಕೊಂಡರು.

ಹೊಸಪೇಟೆ ಜಿಲ್ಲಾ ಮುನ್ಸಿಫ್ ಕೋರ್ಟಿನಲ್ಲಿ

O. S. Fp 123/47 os 350/46.

ಪುರಾಣದ ಶ್ರೀನಿವಾಸಾಚಾರು – ಡಿಕ್ರಿ ಹೋಲ್ಡರ್

ವಿರುದ್ಧ

ಎಚ್. ನಾಗರಾಜಾಚಾರು – ಜಡ್ಜ್‌ಮೆಂಟ್ ಡೆಟರ್

ಸೇಲು – ನೋಟೀಸು

ವಾದಿ ಶೀಘ್ರ ಮುಂಚಿತ ಜಪ್ತಿಮಾಡಿಸಿದ ಪ್ರತಿವಾದಿ ಆಸ್ತಿಗಳನ್ನು ಯಾಕಾಲಂಗೆ ಕೋರಿರುತ್ತಾನೆ. ಪ್ರತಿವಾದಿಗೆ ತಕರಾರು ಇದ್ದಲ್ಲಿ ಖುದ್ದಾಗಲಿ, ವಕೀಲರ ದ್ವಾರ ಆಗಲಿ 29-11-47 ನೆಯ ತೇದಿ ಕೋರ್ಟಿಗೆ ಹಾಜರು ಆಗತಕ್ಕದ್ದು

ಎ. ಆರ್ ಕೃಷ್ಣರಾವು

ಡಿಕ್ರಿ ಹೋಲ್ಡರ್ ಪರವಾಗಿ ಅಡ್ವೊಕೇಟರು.

2.4.2

ಮದ್ರಾಸ್ ಪ್ರಾಂತದಲ್ಲಿ ಆಹಾರ ಸಮಸ್ಯೆ

— ಬಳ್ಳಾರಿ ಜಿಲ್ಲೆಯ ಉದಾಹರಣೆ —

[ಟಿ. ಬಿ. ಕೇಶವರಾವ್.]

ಆಹಾರ ಧಾನ್ಯಗಳು – ಸೀದಾಪದ್ಧತಿ

1943 ರಲ್ಲಿ ಅಕ್ಕಿಯ ಪರಿಸ್ಥಿತಿ ಕೆಟ್ಟು ಮದ್ರಾಸ್ ಆಧಿಪತ್ಯದ ಮುನಿಸಿಪಲ್ ನಗರಗಳಲ್ಲಿ ಸೀದಾಪದ್ಧತಿ ಜಾರಿಯಲ್ಲಿ ಬಂದಿತು. ಮಳೆಯ ಅಭಾವದಿಂದ ಬೆಳೆಯು ಕ್ಷೀಣಿಸಿ, ನಾಶವಾಗಿ, ಇತರ ಧಾನ್ಯಾದಿಗಳ ಕೊರತೆಯಾಗಿ 1944-45 ರಲ್ಲಿ ಮದ್ರಾಸ ಸರ್ಕಾರಕ್ಕೆ ಕಕ್ಕಾಬಿಕ್ಕಿಯಾಯಿತು. ಕ್ಷಾಮದ ಭಯದಿಂದ ಯುಕ್ತಪ್ರಾಂತ (U. P.) ವಗೈರೆ ಭಾಗಗಳಿಂದ ಜೋಳವನ್ನು ತರಿಸಿ ಜನರ ಹಸಿವೆನ್ನು ಇಂಗಿಸಿದರು. ಯುದ್ಧದ ಬಿಸಿಯ ಬಡಿತವು ಯುದ್ಧನಿರತಮೋಲೆ ಭಾರತೀಯರಿಗೆ ತಾಕಹತ್ತಿತು. ಆಗ ಅನೌಪಚಾರಿಕ ಸೀದಾಪದ್ಧತಿ (Informal Rationing) ಯು ಹಳ್ಳಿಗಳಲ್ಲಿ ಜಾರಿಗೆ ತರಲಾಯಿತು. ಭೂಸ್ವಾಮಿಗಳಲ್ಲದವರಿಗೆ ಕೂಲಿಕಾರರಿಗೆ ಮತ್ತು ಹಳ್ಳಿಗಳಲ್ಲಿ ನೆಲೆಸಿರುವ ಇತರ ಉದ್ಯೋಗಸ್ಥರಿಗೆ ಹಳ್ಳಿಗಳಲ್ಲಿ ಡಿಪೋಸ್ಥಾಪಿಸಿ ಕಾಳನ್ನು ಹಂಚಬೇಕೆಂಬುವೇ, ಸರ್ಕಾರದ ಸದುದ್ದೇಶವಾಗಿದ್ದಿತು. ಬೆಳೆದು ತಮ್ಮ ಬೇಡಿಕೆಗಿಂತ ಹೆಚ್ಚಿಗೆ ಆಹಾರಧಾನ್ಯಗಳನ್ನುಳ್ಳವರಿಂದ (Surplus Producers) ಕಾಳನ್ನು ಸಂಗ್ರಹಿಸಿ ಅದನ್ನು ಕೇಂದ್ರದಲ್ಲಿಟ್ಟು ಹಳ್ಳಿಗಳ ಡಿಪೋ ಮಾಲೀಕರ ಮೂಲಕ ಅದರ ವಿತರಣೆ ಮಾಡಲು ಸರ್ಕಾರೀನವಕರರಾದ ಫಿಕಾಲಸಪ್ಲೈ ಆಫೀಸರ್, ತಾಲೂಕ್ ಸಪ್ಲೈ ಆಫೀಸರ್, ಡಿಸ್ಟ್ರಿಕ್ಟ್ ಸಪ್ಲೈ ಆಫೀಸರ್ ಮತ್ತು ಇತರ ಸಿಬ್ಬಂದಿ ಅಣಿಯಾದರು. ಮದ್ರಾಸ್ ರಾಜಧಾನಿಯಲ್ಲಿ ಈ ಆಹಾರ ಖಾತೆಯು ಸಮುದ್ರತೀರದ ಕಛೇರಿಯಲ್ಲಿ ಸಮುದ್ರಪೋಪಾದಿಯಲ್ಲಿ ವಿಸ್ತೃತವಾಯಿತು. ಸರಕಾರವು ಈ ವ್ಯವಸ್ಥೆಗಾಗಿ ಕೋಟಿಗಟ್ಟಲೆ ಹಣವ್ಯಯವಮಾಡಿತು. ಇನ್ನೂ ಮಾಡುತ್ತಲಿದೆ.

ಹಳ್ಳಿಗಳ ಸೀದಾದ ನಿರುಪಯುಕ್ತತೆ

ಮುನಿಸಿಪಲ್ ನಗರಗಳನ್ನು ಬಿಟ್ಟು (ಬಳ್ಳಾರಿ ಜಿಲ್ಲೆಯಲ್ಲಿ ಆದವಾನಿ, ಬಳ್ಳಾರಿ, ಹೊಸಪೇಟೆ) ಇತರ ದೊಡ್ಡ ಪಂಚಾಯ್ತಿ ಗ್ರಾಮಗಳಲ್ಲಿ ಸಣ್ಣಪುಟ್ಟ ಹಳ್ಳಿಗಳಲ್ಲಿ ಅನೌಪಚಾರಿಕಸೀದಾ ಪದ್ಧತಿಯು ಕುಸಿದು ಬಿದ್ದಿತು. ಕೋ ಆಪರೇಟಿವ್ ಸಂಸ್ಥೆಗಳಲ್ಲಿ ಮೋಸಪುಲ್ಲದೆ ವ್ಯವಹಾರವು ನಡೆಯುವುದೆಂಬ ನಂಬಿಕೆ ಇದ್ದಿತಾದರೂ, ಪರಿಸ್ಥಿತಿಗಳಿಂದ ಆ ಸಂಸ್ಥೆಗಳೂ ನಿಸ್ಸಹಾಯವಾಯವು. ಶಾಸನಬದ್ಧವಾದ ಸೀದಾ ಪದ್ಧತಿಯ ವಿಧಾನಕ್ಕೆ (Statutory Rationing areas) ಸಂಬಂಧಿಸಿದ ಕ್ಷೇತ್ರಗಳಿಗೆ ಮಾತ್ರ ಗಮನಕೊಟ್ಟು, ಸರಕಾರವು ಹಳ್ಳಿಗಳನ್ನು ದುರ್ಲಕ್ಷಿಸಿತು. ಮೊದ ಮೊದಲು ಕಾಳಿನ ಸಂಗ್ರಹಾಧಿಕಾರಿಗಳು ಕಾಳನ್ನು ಸರಿಯಾಗಿ ಸಂಗ್ರಹಿಸಲಿಲ್ಲ. ಸಂಗ್ರಹಿಸಿದ ಭಾಗಗಳಲ್ಲಿ ಸರಿಯಾದ ಹಂಚೋಣವಾಗಲಿಲ್ಲ. ದೊಡ್ಡ ದೊಡ್ಡ ವೈತರನ್ನು ಅಶ್ರಯಿಸಬೇಕೆಂಬುದೋ ಯಾವುದೋ ಒಂದು ತಮಗೆ ತೋಚಿದ ಕಾರಣಗಳಿಗಾಗಿ ಸಂಗ್ರಹಾಧಿಕಾರಿಗಳು ತಮ್ಮ ಅನುಕೂಲಗಳನ್ನು ನೋಡಿಕೊಂಡಿದ್ದರಿಂದ ಬಡವರ ಕಷ್ಟಪರಂಪರೆಗಳು ಬೆಳೆದವು

ಜಿಲ್ಲೆಯಲ್ಲಿನ ಡಿಪೋದವರಿಗೆ ಕಾಳನ್ನು ಸರಿಯಾಗಿ ಪೂರೈಕೆ ಮಾಡಲಿಲ್ಲ ಕಾಳಿನ ಬದಲು ಹಾಗಿರಲಿ ಚಿಮ್ಮು ಎಣ್ಣೆಯನ್ನು ಕೂಡ ತಿಂಗಳುಗಟ್ಟಲೆ ಕೊಡಲಿಲ್ಲ ಹಳ್ಳಿಗಳವರು ಬೊಬ್ಬೆಇಟ್ಟು ತಾರುಕೊಟ್ಟರೂ ಸರಕಾರದವರು 'ಜುಂ' ಎನ್ನಲಿಲ್ಲ ಹಳ್ಳಿಗಳ ಡಿಪೋಗಳವರು ಹಳ್ಳಿಯ ಪೂರೈಕೆಗಾಗಿ ತೆಗೆದುಕೊಂಡಿ

(11 ನೇ ಪುಟದಿಂದ)

ಇರುವ ಸರ್ಕಾರ ಉದ್ಯೋಗಸ್ಥರು ಕಂಟ್ರೋಲು ತಗೆದುಹಾಕಿದರೆ ಕಾಳುಸಿಗುವದಿಲ್ಲವೆಂಬ ಗಾಬರಿಯಿದ್ದರೆ, ಅದಕ್ಕೆ ನಮ್ಮ ಉತ್ತರ ಏನಂದರೆ? ವ್ಯಾಪಾರ ಮಾಡತಕ್ಕವರು ಯಥೇಷ್ಟವಾಗಿ ಕಾಳು ಹೆಚ್ಚಿಗೆಬೆಳೆದ ಪ್ರದೇಶಗಳಿಗೆ ಹೋಗಿ. ಇಲ್ಲದ ಸ್ಥಳಗಳಿಗೆ ತಂದು ಮಾರುತ್ತಾರೆ, ಮಾರುವವರು ಒಬ್ಬರೆ ಅಲ್ಲ ಅಲ್ಪಲಾಭಸಿಕ್ಕರೆ ಸಾಕುಅಂತ ಒಬ್ಬರಿಗೊಬ್ಬರು ಪೋಟಿಯಾಗಿ ಮಾರಾಟ ಮಾಡುತ್ತಾರೆ, ಈ ಕಂಟ್ರೋಲಲ್ಲಿ ತರತಕ್ಕ ಜೋಳ ಅನ್ನಲು ನೆಲ್ಲು ನವಣೆ ಸಜ್ಜೆ ಜೋಳ ಮುಂತಾದ ಧಾನ್ಯಗಳು ಯಾವತ್ತು ಹುಳ ಹಿಡಿದ ಕಾರಣ ಜನರು ತಿಂದು ಹಲವು ಬೇನೆಗಳನ್ನು ಅನುಭವಿಸುತ್ತಾರೆ.

9-11-47 ನೇ ತೇದಿ ಮಹಾತ್ಮ ಗಾಂಧಿಯವರು ಬಿರ್ಲಾ ಭವನದಲ್ಲಿ ಭಾಷಣ ಮಾಡುತ್ತಾ. ನಾನು ಆಹಾರಸೀದ ಹಾಗೂ ನಿಯಂತ್ರಣ ಕಿತ್ತು ಹಾಕಲು ಚಳವಳಿ ಹೂಡಲು ಸ್ವತಃ ಇಡೀ ಹಿಂದೂಸ್ಥಾನದಲ್ಲೆಲ್ಲಾ ಸಂಚಾರ ಮಾಡುವೆನು. ನಿಯಂತ್ರಣದಿಂದ ಕಂಟ್ರೋಲುಗಳಿ ದಾ ಕಳ್ಳಪೇಟೆ ಲಂಚಗೂಳಿತನಗಳು ಬೆಳೆದು ಜನರ ನೈತಿಕ ಶಕ್ತಿ ಕೆಟ್ಟಿದೆ ಆದುದರಿಂದ ಆಹಾರ ನಿಯಂತ್ರಣ ಸೀದಾ ಪದ್ಧತಿ, ಇವು ಹೋಗಲೇಬೇಕು. ಇದರಿಂದ ಜನರು ಉಪವಾಸ ಸತ್ತರು ಪರವೆಯಿಲ್ಲ ಎಂದು ಹೇಳಬೇಕಾದಗೆ ಈ ಕಂಟ್ರೋಲ ಹಾವಳಿಗಳಿಂದ ಬಡಜನರಿಗೂ ರೈತರಿಗೂ ಎಷ್ಟು ಪೀಡಾಕಾರವಾಗಿರುವುದೋ ತಾವೇ ಆಲೋಚಿಸತಕ್ಕದ್ದು.

ಜಿಲ್ಲೆಯ ಪ್ರಮುಖ ಕಾಂಗ್ರೆಸ್ ಕಾರ್ಯಕರ್ತರೂ, ಮಾಡಿ ಅನೇಕತರದ ಕಷ್ಟನಷ್ಟಗಳಿಗೆ ಗುರಿಯಾದವರೂ, ಆದ ನಮ್ಮ ಮಾನ್ಯ ಶ್ರೀ ಟೀಕೂರು ಸುಬ್ರಹ್ಮಣ್ಯಂರವರು ಅಧ್ಯಕ್ಷರಾಗಿ ದೊರೆತದ್ದು ನಮ್ಮ ಸುದೈವವೆಂದೇ ಭಾವಿಸಿದ್ದೇವೆ. ನಮ್ಮ ಅಧ್ಯಕ್ಷರ ಮುಂದಾಳುತನದಿಂದ ನಮ್ಮ ಕಷ್ಟಗಳು ದೂರವಾಗುವವೆಂದು ನಮಗೆ ಸಂಪೂರ್ಣ ಭರವಸೆಯಿದೆ.

ಅಧ್ಯಕ್ಷರಾದ ಶ್ರೀ ಟಿ. ಸುಬ್ರಹ್ಮಣ್ಯಂರವರು ತಮ್ಮ ಭಾಷಣದಲ್ಲಿ ರಾಜಕೀಯ ಚರಿತ್ರೆಯ ಅದ್ಯಂತ ಇತಿಹಾಸವನ್ನು ಸ್ವಾತಂತ್ರ್ಯ ಪ್ರದಾನದವರಿಗೆ ಹೇಳಿ ಸಂಸ್ಥಾನಗಳಲ್ಲೂ ಕ್ರಾಂತಿಯು ಯಶಶ್ವಿಯಾಗಲಿಬೆಯೆಂದರು, ಕಾಶ್ಮೀರ, ಹೈದರಾಬಾದುಗಳ ಪ್ರಶ್ನೆಯು ಶೀಘ್ರವಾಗಿ ಇತ್ಯರ್ಥವಾಗಬಹುದೆಂದರು.

ಹಳ್ಳಿಗರ ಕಷ್ಟವನ್ನು ನಾನು ಚನ್ನಾಗಿ ಬಲ್ಲೆ, ಯುದ್ಧ ಮುಗಿದ ಮೇಲೆಯೂ ನಿಯಂತ್ರಣಗಳು ಜಾರಿಯಲ್ಲಿದ್ದು ಹಳ್ಳಿಗರಿಗೆ ತೊಂದರೆಯಾಗುತ್ತಿರುವುದು ವಿಷಾದಕರವಾಗಿದೆ. ಆಹಾರ ಧಾನ್ಯಗಳ (ಅಕ್ಕಿಯ ಹೊರತಾಗಿ) ನಿಯಂತ್ರಣವು ಹೋಗಬೇಕೆಂದು ಮುಖ್ಯಮಂತ್ರಿ ಮತ್ತು ಇತರ ಅಧಿಕಾರಿಗಳೊಡನೆ ಮಾತಾಡಿದ್ದೇನೆ, ನನ್ನ ಕೈಲಾದಷ್ಟು ಈ ದಿಶೆಯಲ್ಲಿ ದುಡಿಯಲಿರುವೆನು, ರೈತರು ಸಂಘಟಿತರಾಗಿ ತನ್ನ ನ್ಯಾಯವಾದ ಬೇಡಿಕೆಗಳನ್ನು ಮುಂದಿಟ್ಟು ಉದ್ದೇಶ ಸಾಧನೆಮಾಡಿಕೊಳ್ಳಲು ಸಲಹೆ ಕೊಟ್ಟರು.

ಶ್ರೀ ಅಂದಾನಪ್ಪ, ದೊಡ್ಡಮೇಟಿ ಎಂ. ಎಲ್ ಎ. ಶ್ರೀಮತಿ ಸುಮಂಗಳಮ್ಮ ಎಂ ಎಲ್. ಎ. ರವರು, ನಿಯಂತ್ರಣದ ನಿರ್ಮೂಲನಕ್ಕಾಗಿ ದುಡಿಯುತ್ತೇವೆಂದು ವಾಗ್ದಾನಮಾಡಿದರು. ನಂತರ ಶ್ರೀ ರೇವಣಸಿದ್ದಯ್ಯ, ಸಂಗಯ್ಯಶಾಸ್ತ್ರಿಗಳು, ನಿಟ್ಟೂರು ಸಣ್ಣನಗೌಡರು, ಬಸವನಗೌಡ, ಎನ್. ಸಿದ್ದಪ್ಪ, ಮತ್ತು ಬಿ ಲಂಕೆಪ್ಪ ವಗೈರೆ ಮಹನೀಯರು ಮಾತಾಡಿ ಹಳ್ಳಿಗರ ರೈತರ ಕಷ್ಟ ಪರಂಪರೆಗಳನ್ನು ನಿವೇದಿಸಿದರು, ಚರ್ಚೆಯನಂತರ ಈ ಕೆಳಗೆ ಕಾಣಿಸಿದ ತೀರ್ಮಾನಗಳು ಸ್ವೀಕೃತವಾದವು

(1) ಸದ್ಯದ ಅನ್ನ, ವಸ್ತ್ರ, ನಿಯಂತ್ರಣದಿಂದ ಹಳ್ಳಿಜನರು ಉಪದ್ರವಕ್ಕೊಳಗಾಗಿ ಪ್ರಭುತ್ವಕ್ಕೆ ದ್ರವ್ಯ ನಷ್ಟವಾಗಿ, ಪ್ರಜಾಸತ್ತಾತ್ಮಕ ರಾಜ್ಯಭಾರ ತತ್ವಗಳಿಗೆ ಕುಂದುಂಟಾಗುತ್ತಿರುವ ಕಾರಣ, ಮತ್ತು ಮಹಾತ್ಮ ಗಾಂಧಿಯವರಂಥ ಶ್ರೇಷ್ಠ ಪುರುಷರು, ನಿಯಂತ್ರಣದ ಕಾರಣ, ಕಳ್ಳಸಂತೆ, ಲಂಚ ವಗೈರೆ ಅನೀತಿ ವ್ಯಾಪಾರ

ಗಳು ಹೆಚ್ಚುವದಾಗಿ ಅದು ಹೋಗಲೇಬೇಕೆಂದು ಅಭಿಪ್ರಾಯಪಟ್ಟಿರುವುದರಿಂದ ಕೇಂದ್ರ ಮತ್ತು ರಾಷ್ಟ್ರೀಯ ಪ್ರಭುತ್ವದವರು ಇದನ್ನು ತೆಗೆದುಹಾಕಲು, ಈ ಸಭೆಯು ಒತ್ತಾಯಪಡಿಸುತ್ತದೆ.

(2) ಹಳ್ಳಿಗರ ಹಿತದದೃಷ್ಟಿಯಿಂದ ನಿಜವಾದ ಪಂಚಾಯ್ತಿ ರಾಜ್ಯಭಾರ ಕ್ರಮವನ್ನು ಜಾರಿಯಲ್ಲಿ ತರಲು ಈ ಸಭೆಯು ಸೂಚಿಸುತ್ತದೆ.

(3) ಬಳ್ಳಾರಿ ನಗರದಲ್ಲಿ ಒಂದು ವ್ಯವಸಾಯ ಕಾಲೇಜನ್ನು ಮತ್ತು ಜಿಲ್ಲೆಯ ವಿವಿಧ ಕೇಂದ್ರಗಳಲ್ಲಿ ವ್ಯವಸಾಯ ಶಾಲೆಗಳನ್ನು ಸ್ಥಾಪಿಸಬೇಕೆಂದು ಈ ಸಭೆಯು ಕೋರುತ್ತದೆ

(4) ಏಕೀಕೃತ ಕರ್ನಾಟಕ ಪ್ರಾಂತ ರಚನೆಯಿಂದ ಭಾರತ ಒಕ್ಕೂಟಕ್ಕೆ ಬೆಂಬಲ ದೊರಕುವ ಕಾರಣ, ಈ ಸಭೆಯು ಎರಡು ಕೋಟಿ ಕನ್ನಡಿಗರ ಈ ಬೇಡಿಕೆಯನ್ನು ಕೂಡಲೇ ಪೂರೈಸಬೇಕೆಂದು ಕೇಂದ್ರ ಸರ್ಕಾರವನ್ನು ಬೇಡುತ್ತದೆ

(5) ಹೊಸಪೇಟೆ ತಾಲೂಕಿನಲ್ಲಿ ಕಳೆದ ವರ್ಷ ಉತ್ಪನ್ನವಾಡಿದ ಬೆಲ್ಲವು ಅತಿಶಯವಾಗಿದ್ದು, ಈ ವರ್ಷವೂ ಅಧಿಕವಾಗಿ ಬರುವ ಸಂಭವವಿರುವದರಿಂದ ಹೊರಗೆ ರವಾನೆಮಾಡಲು ಸರ್ಕಾರದವರು ಪರ್ಮಿಟ್ ಕೊಟ್ಟು ಕಬ್ಬಿನ ರೈತರನ್ನು ಸಂಕಟದಿಂದ ಪಾರುಮಾಡಬೇಕೆಂದು ಈ ಸಭೆಯು ಸೂಚಿಸುತ್ತದೆ (ಶ್ರೀ ದಳವಾಯಿ ಅಂಬಣ್ಣನವರು ಈ ನಿರ್ಣಯದ ವಿಷಯವನ್ನು ವಿವರ ಪೂರ್ವಕವಾಗಿ ತಿಳಿಸಿದರು.)

(6) ಆಹಾರ, ಬಟ್ಟೆ ನಿಯಂತ್ರಣ ಹೋಗಲಾಡಿಸಲು, ಡಿಶಂಬರ್ 31 ರ ಒಳಗಾಗಿ ಹೋಗದಿದ್ದರೆ ತಕ್ಕ ಚರ್ಯೆ ತೆಗೆದುಕೊಳ್ಳಲು, ಜಿಲ್ಲೆಯ ಎಲ್ಲಾ ತಾಲೂಕುಗಳ ಪ್ರತಿನಿಧಿಗಳಿಂದ ಕೂಡಿದ ಉಪಸಮಿತಿಯ ನಿರ್ಮಾಣವಾಯಿತು.

ಬಳ್ಳಾರಿ ತಾಲೂಕು ಶ್ರೀ ಎನ್. ಮರಿಬಸವನಗೌಡ,
ಹೊಸಪೇಟೆ ,, ,, ಬಿ ವಿಶ್ವನಾಥಶಿಂಗ್,
ಪಡಗಲಿ ,, ,, ಬಿ. ಲಂಕೆಪ್ಪ,
ಹರಪನಹಳ್ಳಿ ,, ,, ಎನ್. ಸಿದ್ದಪ್ಪ,
ಕೂಡ್ಲಿಗಿ ,, ,, ಗುರುಬಸಪ್ಪ,
ರಾಯದುರ್ಗ ,, ,, ಚನ್ನವೀರಶಾಸ್ತ್ರಿಗಳು,
ಆಲೂರು ,, ,, ಹೆಚ್. ರಾಮಲಿಂಗಾರೆಡ್ಡಿ,
ಆದವಾನಿ ,, ,, ಬಿ. ರಂಗನಗೌಡ,

ಶ್ರೀ ಕೆ. ಆರ್. ಗುಪ್ತರು ಆಭಾರವನ್ನರ್ಪಿಸಿದನಂತರ ಸಭೆಯು ರಾಷ್ಟ್ರೀಯ ಗೀತೆಯಿಂದ ಮುಕ್ತಾಯವಾಯಿತು.

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್., ಮು. ಕ. ಬಳ್ಳಾರಿ. ಸ್ಥಾಪಿತ: 1939.

ಬಳ್ಳಾರಿ, ಅನಂತಪುರ, ಕಡಪ, ಕರ್ನೂಲು ಮತ್ತು ಚಿತ್ತೂರು ಜಿಲ್ಲೆಗಳ ಆರ್ಥಿಕಾಭಿವೃದ್ಧಿ ಉದ್ದೇಶದಿಂದ ಸ್ಥಾಪಿತವಾಗಿದೆ.

ಛೇರ್ಮನ್ ಬ್ಯಾಂಕ್ ಆಫ್ ಡಾಯರೆಕ್ಟರ್ಸ:- ಶ್ರೀ ಹೆಚ್. ಲಿಂಗಾರೆಡ್ಡಿ ಬಿ. ಎ, ಬಿ. ಎಲ್., ಬಳ್ಳಾರಿ.

ಸ್ಥಾಯಿಠೇವಣಿ [ಫಿಕ್ಸ್‌ಡ್-ಡಿಪಾಜಿಟ್] ದರಗಳು

3, 4, 5 ತಿಂಗಳುಗಳಿಗೆ ಶೇಕಡ ಬಡ್ಡಿದರ ರೂ. 2-0-0 6 ತಿಂಗಳಿಗೆ ಶೇಕಡ ಬಡ್ಡಿದರ ರೂ. 2-8-0
1 ವರ್ಷಕ್ಕೆ ,, ,, ,, 3-0-0 2 ವರ್ಷಕ್ಕೆ ,, ,, ,, 3-8-0

(2) **ಕ್ಯಾಷ್ ಸರ್ಟಿಫಿಕೇಟುಗಳು** ಬಡ್ಡಿಯ ಸಹಿತ 100 ಕ್ಕೆ 1 ವರ್ಷಕ್ಕೆ 3-8-0 10-0-0 ಸರ್ಟಿಫಿಕೇಟ್ ಕೊಡುವ ದರ ರೂ. 9-0-3 (3) **ಚಾಲು ಖಾತೆ** (ಕರೆಂಟು ಅಕೌಂಟು) ಬಡ್ಡಿ ಶೇಕಡ ರೂ. 1-0-0

(4) **ಸೇವಿಂಗ್ಸ್ ಬ್ಯಾಂಕು ಅಕೌಂಟು** :- ವಾರದಲ್ಲಿ ಎರಡು ಸಲ ರೂ. 250/- ಗಳಿಗೆ ಮಿಂಚದೆ ಹಣ ತೆಗೆದುಕೊಳ್ಳಬೇಕು. 1 ವರ್ಷಕ್ಕೆ ಶೇಕಡ ರೂ 2-0-0

ಬ್ಯಾಂಕಿನ 27 ಶಾಖೆಗಳಲ್ಲಿ ಲೆಕ್ಕಗಳನ್ನು ಪ್ರಾರಂಭಿಸಬಹುದು. ಇತರ ಎಲ್ಲಾ ವಿಧವಾದ ಬ್ಯಾಂಕು ಸೌಕರ್ಯಗಳು ಒದಗಿಸಲಾಗಿವೆ.

ಬಿ. ವಿ. ಶೇಷಗಿರಿರಾವ್ ಬಿ. ಕಾಂ. — ಕಾರ್ಯದರ್ಶಿ.

ಮುನ್ಸಿಫರಾದ ಶ್ರೀ ಹೊಸಪೇಟೆ ಜಿಲ್ಲಾ ಮುನ್ಸಿಫ್ ಕೋರ್ಟಿನಲ್ಲಿ

Sc. No. 352 of 47

ವಾದಿ: ಈಡಿಗರ ರುದ್ರಪ್ಪ — ಪ್ರತಿವಾದಿ: ವೊಂಟಿ ಫಕ್ರುಸಾಬ್

ಕೂಡ್ಲಿಗಿ ತಾಲೂಕು ಜೋರನೂರು ಗ್ರಾಮದಲ್ಲಿರುವ ಈಡಿಗರ ರುದ್ರಪ್ಪನು – ಬಂಡ್ರಿಗ್ರಾಮದಲ್ಲಿರುವ ವೊಂಟಿ ಫಕ್ರುಸಾಬನ ಮೇಲೆ ರೂ. 32-6-3 ಗೆ ಮೇಲಿನ ಕೋರ್ಟಿನಲ್ಲಿ ದಾವಾ ಮಾಡಿರುತ್ತಾನೆ ವಾಯ್ದೆ 28-11-47 ಕ್ಕೆ ಇರುತ್ತದೆ. ಆದಿನ 11 ಗಂಟೆಗೆ ಪ್ರತಿವಾದಿಯಾಗಲಿ ಆತನ ಪರವಾಗಿ ನಿಯಮಿಸಲಾದ ವಕೀಲರ ದ್ವಾರವಾಗಲಿ ತಕರಾರು ಇದ್ದರೆ ಹಾಜರಾಗಿ ತಕರಾರು ಕೊಡಬೇಕು. ತಪ್ಪಿದ ಪಕ್ಷದಲ್ಲಿ ಕೋರ್ಟಿನವರು ದಾವಾ ಮೊತ್ತಕ್ಕೆ, ಕೋರ್ಟು ಕರ್ಚಿಗೆ ದಾವಾಮಾಡುವುದು ಆಗುತ್ತದೆ.

ಜಿ. ವೆಂಕಟಾಚಲಯ್ಯ ಬಿ.ಎ, ಬಿ. ಎಲ್.
ಪ್ಲೀಡರ್ — ಹೊಸಪೇಟೆ

ಹೊಸಪೇಟೆಯ ಜಿಲ್ಲಾ ಮುನ್ಸಿಫ್‌ರವರ ಕೋರ್ಟಿನಲ್ಲಿ.

Between:— Sc. 334 of 1947

ವಾದಿ:— ರಾಚರ್ಲ ಗೋಪಾಲಪ್ಪ ಮಲ್ಲಾನಿ – ಹಾಲಪ್ಪ ಪರ್ವ್ – ಬೈ – ಪಾರ್ಟನರ್ ಕ್ಷಿಪ್ಪಪ್ಪನವರ ಮಗ ವಯಸ್ಸು 60 ವೈಶ್ಯ – ವ್ಯಾಪಾರಿ ಕೊಟ್ಟೂರು. ಕೂಡ್ಲಿಗಿ ತಾಲೂಕು.

ಪ್ರತಿವಾದಿ:— ಕಳಾಪುರದ ಬಸಪ್ಪ ಶಿದ್ದಲಿಂಗಪ್ಪನವರ ಮಗ – (ಮೇಜರ್) ಲಿಂಗಾಯ್ತ – ಜಿರಾಯ್ತಿ ಕೆಲಸ – ವಾಸಸ್ಥ – ಮೈದೂರು ಹರಪನಹಳ್ಳಿ ತಾಲೂಕು.

ವಾದಿಯು ನಿಮ್ಮ ಮೇಲೆ ರು. 40-10-0 ಗಳಿಗೆ ದಾವಾ ಮಾಡಿರುತ್ತಾನೆ. ಸದ್ರಿದಾವಾದ ವಿಷಯವಾಗಿ ತಕರಾರು ಹೂಡಲು 5-12-47 ಕ್ಕೆ ವಾಯಿದಾ ಹಾಕಿರುತ್ತಾರೆ. ಆ ದಿನ ನೀವು ಮೇಲ್ಕಂಡ ಕೋರ್ಟಿಗೆ ಹಾಜರಾಗಿ ತಕರಾರು ತಿಳಿಯಪಡಿಸತಕ್ಕದ್ದು, ತಪ್ಪಿದಲ್ಲಿ ಯಕ್ಸ್ ಪಾರ್ಟಿಮಾಡಿ ತೀರ್ಮಾನಿಸಲಾಗುವದೆಂದು ಈ ಪ್ರಕಟನೆಯು ಮೂಲಕ ತಿಳಿಯಪಡಿಸಿರುತ್ತದೆ.

ಎಂ. ರಂಗನಾಥಾಚಾರು – ವಾದಿ ವಕೀಲರು.

ಹೊಸಪೇಟೆಯ ಜಿಲ್ಲಾ ಮುನ್ಸಿಫ್‌ರವರ ಕೋರ್ಟಿನಲ್ಲಿ.

Between:— Sc. 367 of 1947.

ವಾದಿ:— **ಎಸ್. ಎ. ಎಂ. ರೊಕ್ಕಪ್ಪಳ ಶಿವರುದ್ರಯ್ಯ** (ಶಿವಲಿಂಗಯ್ಯನವರ ಮಗ)
ವಯಸ್ಸು 45, ಲಿಂಗಾಯ್ತ, ಜಿರಾಯ್ತಿ, ಕೂಡ್ಲಿಗಿ ತಾಲೂಕು, ಅಯ್ಯನಹಳ್ಳಿ ವಾಸಸ್ಥ.

ಪ್ರತಿವಾದಿ:- **ಉಜ್ಜಪ್ಪಳ ಕೊಟ್ರಬಸಪ್ಪ** (ದೊಡ್ಡಕೊಟ್ರಪ್ಪನವರ ಮಗ)
ವಯಸ್ಸು 35, ಲಿಂಗಾಯ್ತ, ಜಿರಾಯ್ತಿ, ಕೂಡ್ಲಿಗಿ ತಾಲೂಕು, ಅಯ್ಯನಹಳ್ಳಿ ವಾಸಸ್ಥ.

ಮೇಲಿನ ನಂಬರಿನಲ್ಲಿ ವಾದಿ, ಪ್ರತಿವಾದಿಯಮೇಲೆ ರೂ. 190-6-0 ದಾವ ತಂದಿರುತ್ತಾನೆ ಈ ನಂಬರು ವಾಯ್ದೆ 11-12-47 ಕ್ಕೆ ಇರುತ್ತದೆ. ಕೋರ್ಟು ದ್ವಾರ ಸಮನ್ಸು ಜಾರಿ ಆಗದಿದ್ದಕಾರಣ ಈ ಪ್ರಕಟನೆ ಹಾಕಿಸಲಾಗಿದೆ. ವಾಯ್ದೆ ದಿನ ಪ್ರತಿವಾದಿ ಕೋರ್ಟಿಗೆ ಹಾಜರಾಗದಿದ್ದಲ್ಲಿ ಎಕ್ಸ್ ಪಾರ್ಟಿಮಾಡಿ ನಂಬರ್ ಡಿಕ್ರಿಮಾಡೋಣವಾಗುತ್ತದೆಂದು ಖಂಡಿತ ತಿಳಿಯಬೇಕು. **ಎಂ. ರಂಗನಾಥಾಚಾರು** – ವಾದಿವಕೀಲರು.

24-6

ಹೊಸಪೇಟೆ ಜಿಲ್ಲಾ ಮುನ್ಸೀಫ್‌ರವರ ಕೋರ್ಟಿನಲ್ಲಿ.

Between:— O. S. 236/47.

ವಾದಿ:- **ಬಣಕಾರ ಮಲ್ಲಪ್ಪ** ತಂದೆ ನುಲ್ಲಪ್ಪ, 34, ವೀರಶೈವ, ಜಿರಾಯ್ತಿ, ತಾವರೆಗೊಂದಿ, ಹರಪನಹಳ್ಳಿ ತಾ॥

ಪ್ರತಿವಾದಿ:- **ಮುಳ್ಳಪ್ಪಳ ಚನ್ನ ಬಸಪ್ಪ**, ತಂದೆ ಹನುಮನಗೌಡ, 32 ವೀರಶೈವ, ಜಿರಾಯ್ತಿ, ಕಳಸಾಪುರ, ದಾಸನ ಹಳ್ಳಿಮಜರ, ಹಡಗಲಿ ತಾಲೂಕು.

ಮೇಲಿನ ನಂಬರಿನಲ್ಲಿ ವಾದಿ ಪ್ರತಿವಾದಿಗೆ 5-5-44 ನೇ ತೇದಿ ಪ್ರತಿವಾದಿ ಭೂಮಿಕೊಳ್ಳಬೇಕೆಂದು ಕೊಟ್ಟ ಅಡ್ವಾನ್ಸು ರೂ. 400/- ವಾಪಸು ಬರಬೇಕೆಂದು ಪ್ರತಿವಾದಿಯ ಮೇಲೆ ರೂ. 473-8-0 ಗೆ ದಾವಾಮಾಡಿರುತ್ತಾನೆ. ಪ್ರತಿವಾದಿಯು 29-11-47 ನೇ ತೇದಿ 11 ಘಂಟೆಗೆ ಕೋರ್ಟಿಗೆ ಖುದ್ದಾಗಲಿ ವಕೀಲರ ದ್ವಾರ ಆಗ್ಯಲಿ ಹಾಜರು ಆಗದಿದ್ದರೆ ಪ್ರತಿವಾದಿಯಮೇಲೆ ಎಕ್ಸ್ ಪಾರ್ಟಿ ಡಿಕ್ರಿ ಆಗುತ್ತದೆ.

ಎ. ಆರ್. ಕೃಷ್ಣರಾವು – ವಾದಿ ವಕೀಲರು.

ಡಾ. ರಾಜೇಂದ್ರಪ್ರಸಾದ

ಶ್ರೀ ಕೃಪಾಲಿನಿಯವರ ಸ್ಥಳದಲ್ಲಿ ಡಾಕ್ಟರ್ ರಾಜೇಂದ್ರ ಪ್ರಸಾದರು ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ. ಅವರು ಆಹಾರ ಮಂತ್ರಿ ಪದವಿಯಿಂದ ರಾಜೀನಾಮೆ ಕೊಡಲಿದ್ದಾರೆ.

ಬಳ್ಳಾರಿ ಜಿಲ್ಲೆಯಲ್ಲಿ

ಪ್ರಧಾನಮಂತ್ರಿ ಮತ್ತು ಔದ್ಯೋಗಿಕಮಂತ್ರಿ

ಬಳ್ಳಾರಿ ಜಿಲ್ಲೆಯ ಆದವಾನಿ, ಬಳ್ಳಾರಿ, ಕಂಪ್ಲಿ, ಕಾಮಲಾಪುರ, ಹೊಸಪೇಟೆ, ಹಂಪಸಾಗರ, ವಗೈರೆ ತುಂಗಭದ್ರಾತೀರ ಪ್ರದೇಶಗಳನ್ನು ಸಂದರ್ಶಿಸಿ ಅಲ್ಲಿಯ ಜನರಿಗೆ ಸ್ವಸಂರಕ್ಷಣೆ, ಮತ್ತು ಸರಕಾರದ ರಕ್ಷಣೋಪಾಯಗಳನ್ನು ತಿಳಿಯಪಡಿಸಿ, ಧೈರ್ಯವಾಗಿರಲು ಮದ್ರಾಸ್ ಪ್ರಧಾನ ಮಂತ್ರಿಗಳಾದ ಶ್ರೀ ರಾಮಸ್ವಾಮಿ ರೆಡ್ಡಿಯಾರರು ಮತ್ತು ಔದ್ಯೋಗಿಕ ಮಂತ್ರಿ ಶ್ರೀ ಹಾ ಶೇತಾರಾಮರೆಡ್ಡಿಯವರು 16, 17, ಮತ್ತು 18, ನೆಯ ತಾ. ಉಪದೇಶಿಸಿದರು.

ಪೂರ್ವ ಸಂಸ್ಥಾನಗಳ ಒಕ್ಕೂಟವನ್ನು ತಾವು ಒಪ್ಪುವದಿಲ್ಲೆಂದೂ, ಅವುಗಳನ್ನು ಕೂಡಲೇ ವಿಸರ್ಜಿಸಬೇಕಾಗಿಯೂ, ಇಂಡಿಯಾ ಸರ್ಕಾರವು ಆಜ್ಞೆ ಇತ್ತಿದೆ

ವಿದ್ಯಾರ್ಥಿ ಕಾಂಗ್ರೆಸ್, ಕಲಾಪಗಳು.

ಕೂಡ್ಲಿಗಿ ತಾ॥ (ಬಳ್ಳಾರಿ ಜಿಲ್ಲಾ)

ಶ್ರೀಮಾನ್ ಶ್ರೀನಿವಾಸರಾವ್, R. ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಶ್ರೀ ಜಿ. ಎಸ್. ಸಿದ್ದಪ್ಪ, ಇವರನ್ನು ಸಂಘದ ಅಧ್ಯಕ್ಷರನ್ನಾಗಿ ಚುನಾಯಿಸಿದರು. ಎರಡನೆಯ ಜಿಲ್ಲಾ ವಿದ್ಯಾರ್ಥಿ ಕಾಂಗ್ರೆಸ್‌ನ ಮಹಾಧಿವೇಶನವು ಕೂಡ್ಲಿಗೆಯಲ್ಲಿ ಜರುಗಿಸಬೇಕೆಂದು ನಿರ್ಧರಿಸಿತು. ಪರಿಷತ್ತಿನ ಅವಶ್ಯಕತೆ ಮತ್ತು ಹೊಣೆಗಾರಿಕೆಯ ಬಗ್ಗೆ ಶ್ರೀಮಾನ್ ಎಲ್. ವಿ. ಜೋಷಿ, ಕೆ. ರಾಮುರಾವ್, ಇವರು ಮಾತನಾಡಿದರು. ನೆಹರು ತರುಣ ಸಂಘದ ಅಧ್ಯಕ್ಷರಾದ ಶ್ರೀಮಾನ್ ಸುಮಿತ್ರ, ಇವರು ತಾಲೂಕು ರೈತ ಪರಿಷತ್ತನ್ನು ಜನವರಿ ತಿಂಗಳಲ್ಲಿ ಕೂಡಿಸುವುದಾಗಿಯೂ ಆಗ್ಗೆ ವಿದ್ಯಾರ್ಥಿಗಳ ಪರಿಷತ್ತನ್ನು ಕೂಡಿಸಿದಲ್ಲಿ ಅನುಕೂಲವೆಂದೂ ಸೂಚಿಸಿದರು. ಅವರ ಸೂಚನೆಯ ಮೇರೆಗೆ ರೈತರ ಪರಿಷತ್ತುಗಳು ಒಟ್ಟಿಗೆ 1948 ರ ಜನವರಿ ಎರಡನೆವಾರ ಜರುಗುವುದು. ಜಿ ಎಸ್. ಸಿದ್ದಪ್ಪ-ಅಧ್ಯಕ್ಷ.

ಪಕಾಣಿಸ್ತಾನ— ಗಡಿನಾಡಿನಲ್ಲಿ ಪಠಾಣಿಸ್ತಾನ ಸ್ಥಾಪಿಸಲು ಆಫಗಾನರು ನೆರವಾಗಬೇಕೆಂದು ಪೆಶಾವರ್‌ದಲ್ಲಿರುವ ಆಫಗಾಣ ಸರದಾರರಾದ ಹಾಫಿ ಜುಲ್ಲಾ ಖಾನ, ಇನಾಯತಖಾನ, ಸಯ್ಯದ ಮಹಮ್ಮದ ಯಾಕೂಬರು ಒಂದು ಪ್ರಕಟನೆಯಲ್ಲಿ ಹೇಳಿದ್ದಾರೆ.

ಅಕ್ಕಿ, ಸಕ್ಕರೆ, ಚಿಮ್ನಿಎಣ್ಣೆ, ಪಟ್ಟಣಗಳಲ್ಲೇ ಮಾರಿ ಕೊಂಡು ಹೋದರೂ, ಅದಕ್ಕೆ ಸರಿಯಾದ ಕಡೆಯಾಗಲಿಲ್ಲ. ಹೊಟ್ಟೆನೋವಿದ್ದವನಿಗೆ ರೋಗಗಳಿಗೆ ಬರುವ ಬಾಣಂತಿಗಳಿಗೆ ಅಕ್ಕಿಯು ದೊರೆಯದೆ ಹಣವಿದ್ದವರು ಮಾತ್ರ ಕಳ್ಳಪೇಟೆಯನ್ನಾಶ್ರಯಿಸಿದರು. ಇತರರು ಸರಕಾರವನ್ನು ಶಪಿಸಲಿಕ್ಕಾರಂಭಿಸಿದರು.

ಜಿಲ್ಲಾ. ತಾಲೂಕು ಗ್ರಾಮಸಮಿತಿಗಳು

ಮದ್ರಾಸ್ ಸರ್ಕಾರದ ಈ ಸಮಿತಿಗಳ ಕಾರ್ಯಾವರ್ಣನೆಯು ವೃತ್ತಪತ್ರಿಕೆಗಳಲ್ಲಿ ಸೊಗಸಿದರು ತ್ತದೆ ಕಾರ್ಯತಃ ಇವುಗಳ ಉಪಯೋಗವೇ ಇಲ್ಲ. ಜಿಲ್ಲಾ ಸಮಿತಿಯಲ್ಲಿ ಮಾತುಹೆಚ್ಚು ಕೃತಿಕಡಿಮೆ, ತಾಲೂಕು ಗ್ರಾಮಸಮಿತಿಗಳ ತೀರ್ಮಾನಗಳಿಗೆ ಬೆಂಬಲವಿಲ್ಲ. ಗ್ರಾಮಗಳಲ್ಲಿ ಭೂಮಿಗಳಿಲ್ಲದವರ ಕೂಲಿಕಾರರ ಪಟ್ಟಿಗಳನ್ನೇನೊ ತಯಾರುಮಾಡಿಟ್ಟಿರುವರು ಕೆಲಗ್ರಾಮಗಳಲ್ಲಿ ಕಾರ್ಡುಕೂಡ ಕೊಟ್ಟಿರುವುದುಂಟು ಆದರೆ ಸರಿಯಾಗಿ ಕಾಳು ದೊರೆಯುತ್ತದೆಂಬ ಭರವಸೆ ಯಾರಿಗೂ ಇಲ್ಲ ಗ್ರಾಮಸಮಿತಿಗಳ ಕೆಲವ್ಯೂರಿನ ಕೆಲವರಿಗೆ ಮಾತ್ರ ಅನುಕೂಲವಾಗಿದೆಯೆಂದು ಕೇಳು ತ್ತೇವೆ ಏನೇ ಆಗಲಿ ಅದು ಧನಿಕನಿಗೆ, ಬಾಯಿಬ್ಬವನಿಗೆ ಈ ಗ್ರಾಮಸಮಿತಿಗಳ ಉಪಯೋಗವಿಲ್ಲೆಂದೂ ಇವುಗಳನ್ನು ರದ್ದುಪಡಿಸಬೇಕೆಂದೂ ರೈತ ಸಭೆಗಳಲ್ಲಿ ಈಚೆಗೆ ಪ್ರತಿಪಾದಿಸಲಾಗಿದೆ. ಅಲ್ಲಲ್ಲಿ ಕೆಲವ್ಯೂರಿನ ಗ್ರಾಮಸಮಿತಿಗಳವರು ತಮ್ಮ ಊರಿನ ಹಿತದೃಷ್ಟಿ ಯಿಂದ ತೀರ್ಮಾನಗಳನ್ನು ಕಳುಹಿಸಿ ಅಮಲಿನಲ್ಲಿ ಬರಬೇಕೆಂದು ಬೇಡಿಕೊಂಡರೂ ಕಾರ್ಯಕರೂಪಕ್ಕೆ ಕರ ಣಗಳಿಲ್ಲ

ಧಾನ್ಯಸಂಗ್ರಹ - ರೈತರಿಗೆ ನಷ್ಟ.

ಕಳ್ಳಪೇಟೆ ಧರಕ್ಕೂ ಸರ್ಕಾರದವರು ನಿಗದಮಾಡಿದಧರಕ್ಕೂ ಬಹಳ ವ್ಯತ್ಯಾಸವಿದ್ದಕಾರಣ ಹೆಚ್ಚು ಬೆಳೆದ ದೊಡ್ಡರೈತರು ಕಳ್ಳಪೇಟೆಯಲ್ಲಿ ಮಾರಿಕೊಳ್ಳುವ ಸಂಗವಾಯಿತು. ಬಳ್ಳಾರಿಜಿಲ್ಲೆಯಲ್ಲಿ ಕಾಮಲಾಪುರ ಕಂಪ್ಲಿ, ಗಾಮಸಾಗರ ಭಾಗಗಳಿಂದ ಸಾವಿರಾರುಚೀಲ ಗಳ ಭತ್ತವು ತುಂಗಭದ್ರಾದ ಆಚೆಯ ಗಡಿಯನ್ನು ಸೇರಿ ಹೈದರಾಬಾದಿನಲ್ಲಿ ಪ್ರವೇಶಿಸಿತು. ಸರಾಗುಪ್ಪೆಯು ಲ್ಲಿಯೂ ಅತ್ಯಧಿಕವಾದ ವ್ಯಾಪಾರವಾಯಿತು ಗಡಿಪ್ರ ದೇಶಗಳಲ್ಲಿ ಈಗ ಅಲ್ಪ ಪ್ರಮಾಣದಲ್ಲಾದರೂ ಕಳ್ಳವ್ಯ ವಹಾರವು ಸಾಗಿದೆ. ಯುದ್ಧಜನ್ಯ ಕಾರಣಗಳಿಂದ ಜೀವನವುಟ್ಟವು ಬಹಳ ಏರಿರುವಾಗ ರೈತರ ಒಂದೇ ಲಾಭಾಮಾರ್ಗವಾದ ಧಾನ್ಯಕ್ಕೆ ಹೆಚ್ಚಿನಬೆಲೆ ದೊರೆ ಯದಿದ್ದರೆ ಅವರು ಜೀವಿಸುವದೆಂತು? ಆಹಾರ ಧಾನ್ಯಗಳ ಬೆಲೆ ಜೀವನಪಲನಗಳ ನಿಗದಿ ನಿಬಂಧ ನೆಗಳಿಂದ ದೊಡ್ಡರೈತರಲ್ಲಿ ಕೆಲವರು ಪೆಟ್ಟುತಿಂದು ಸಾಲ ಮಾಡಿಕೊಂಡರು. ಕೆಲವರು ಧೈರ್ಯವಾಗಿ ಸಂಗ್ರಹ ಅಭಿಪ್ರಾಯಗಳನ್ನು ಕಿಸೆಯಲ್ಲಿ ಹಾಕಿಕೊಂಡು ಕಳ್ಳ ಸೇಟಿನವರು.

ಹಳ್ಳಿಗಳ ಬಡರೈತರಿಗೆ ಕಾಳೆಲ್ಲಿ ಪೊರೆಯುತ್ತದೆ? ಕಳ್ಳಪೇಟೆಯೆ ಆಶ್ರಯ

ಸರಕಾರದವರು ಸಂಗ್ರಹದಲ್ಲಿ ತೋರಿದ ಶ್ರದ್ಧೆ ಬುದ್ಧಿ ಪಲವಾಗಿ ಪಂಚುವಿಕೆಯಲ್ಲಿ ತೋರಿಸಿದ್ದರೆ ಸೈಕರ ನಷ್ಟಗಳು ಕಳಮೆಯಾಗುತ್ತಿದ್ದವು. ಪರಿಣಾಕರ ದವರು ದಿವ್ಯೋಪದೇಶಗಳಿಗೆ ಪೂರ್ವಿಕೆಮಾಡಲಿಲ್ಲವೇ? ಅಧಿಕ ವಾದಿವ್ಯೋಪದವರು ತನುಗೆ ಬೇಕಾದವರಿಗೆ ಕೊಟ್ಟು ಕಳ್ಳಪೇಟೆಯಲ್ಲಿ ಮಾರಿಕೊಂಡಿರೇ?. ಇವೆರಡರಲ್ಲೂ ನಿಜವುಂಟು. ನಿಜವಿರಲಿ, ಬೆಳೆಯದ ಹಳ್ಳಿಗನಿಗೆ (Non-Producer) ಕಾಳುದೊರೆತದ್ದು ದೊರೆ ಯುತ್ತಿರುವುದು ಕಳ್ಳಪೇಟೆಯಲ್ಲಿ ಕೆಲವೂರುಗಳಲ್ಲಿ ಬಡವರು ಸ್ವಸಹಾಯ-ಕೂಲಿಗಾರರ ಸಾನುಭೂತಿಯನ್ನಪೇಕ್ಷಿಸಿಕೊಳ್ಳಬೇಕಂಬ ದೊಡ್ಡ ಭೂಮೂಲೀಕರು ಸಂಗ್ರಹಾಧಿಕಾರಿಗಳ ಕಣ್ಣಿಗೆ ಮುಸ್ಸೆರಚಿ ಉಳಿಸಿದ ಕಾಳನ್ನು ಹಟ್ಟಿನ ಪರದಿಂದಲಾದರೂ ತಾವೇ ತಮ್ಮ ರೈತನಿಗೆ ಮಾರಿ ಹೀಗೆ ಹೇಳಿದರು. "ಊರನ್ನು ಕಾವಾಡುವವರು ನಾವು! ಈ ಸರ್ಕಾರವನ್ನು ನಂಬಿ

248

ದ್ದರೆ ನೀವೆಲ್ಲಾ ಸಾಯಬೇಕಿತ್ತು" ಹಳ್ಳಿಗಳಲ್ಲಿ ಕಾಳು ವಗೈರೆ ಬೇಕೆಂದರೆ ಕಳ್ಳ ಪೇಟೆಯಿಂದ ಎಂಬುವಂಶವು ಸರಕಾರದವರಿಗೇಕೆ ಮಂತ್ರಿಗಳಿಗೂ ಕೂಡ ಗೊತ್ತಿದೆ. ಆದರೂ ಈ ಅನೌಪಚಾರಿಕ ಶೀದಾ ಪದ್ಧತಿ ಇರಬೇಕೆಂದು ಅವರು ವಾದಿಸುತ್ತಾರೆ.

ಸರಕಾರದ ವಾದಸರಣಿ

ಬಳ್ಳಾರಿ ಜಿಲ್ಲಾಕಲೆಕ್ಟರವರ ಪ್ರಕಟನೆ.

ಸರಕಾರದವರಿಗೆ ದಯಾ - ದಾಕ್ಷಿಣ್ಯಗಳುಂಟು ಅವರು ಸಾರ್ವಜನಿಕ ಸೇವೆಯನ್ನು ವೈತನಿಕ ರೂಪದಿಂದ ಮಾಡುತ್ತಿದ್ದರೂ ಜನತೆಯ ಬೇಡಿಕೆಗಳಿಗೂ ಲಕ್ಷಿಗೊಡುವಕು. ಸಭಾ ಸಮ್ಮೇಳನಗಳ ತೀರ್ಮಾನ ರೂಪಸಲಹೆಗಳನ್ನು ಬಯುಮುಟ್ಟಿಗೆ ಸ್ವೀಕರಿಸುವರು. ನೀತಿಯ ಪ್ರತಿಪಾದನೆ ಬದಲಾವಣೆಗಳಿಗೆ ಜನತೆಯ ಸಕ್ರಿಯ ಪ್ರತೀಕಾರವೇ ಕಾರಣ. ಒಂದೂರಲ್ಲಿ ಕಾಳಿಲ್ಲ ವೆಂದರೆ ಕೇಳಿದಷ್ಟಲ್ಲದಿದ್ದರೂ ಸ್ವಲ್ಪವಾಗಿಯಾದರೂ ಸರ್ಕಾರದ ಉಗ್ರಾಣದಿಂದ ಕೊಡುವರು. ಇಲ್ಲಿ ಕಾಳಿಲ್ಲದಿದ್ದರೆ ಬೇರೊಂದು ಕಡೆಯಿಂದ ತರಿಸಿಕೊಡುವರು ಆತಳಿತದಲ್ಲಿ ಸೇರಿಕೊಂಡ ಅಯೋಗ್ಯ (Inefficient Staff) ಅಧಿಕಾರಿಗಳಿಂದ ಹಳ್ಳಿ ರೇಷನಿಂಗ್‌ದಲ್ಲಿ ಲೋಪ ದೋಷಗಳು ತಲೆದೋರಿದವು. ಇಂಥಾ ಗುರುತರವಾದ ಹೊಣೆಯನ್ನು ಹೊರಲು ಸರ್ಕಾರವೇ ಸಮರ್ಥವಿದೆ. ಇದನ್ನು ಲಾಭಬಡಕ ವರ್ತಕರ ಮೇಲೆ ಬಿಡಲು ಸಾಧ್ಯವಲ್ಲ ಸೂಕ್ತವೂ ಅಲ್ಲ ಇದನ್ನು ವರ್ತಕರ ಮೇಲಾಗಲಿ ಕೆಲ ಮುಖಂಡರ ಮೇಲಾಗಲಿ ಬಿಟ್ಟರೆ ಕ್ಷಾಮಪರಿಸ್ಥಿತಿಗಳು ತಲೆದೋರಬಹುದು. 1946-47 ರಲ್ಲಿ ಸಂಗ್ರಹವಾದ 1,20,000 ಟೀಲ ಧಾನ್ಯ ಸಂಗ್ರಹದಲ್ಲಿ (ಬಳ್ಳಾರಿ ಜಿಲ್ಲೆಯ ವಿಷಯ) ಅರ್ಧಕ್ಕಿಂತಲೂ ಹೆಚ್ಚಿಗೆ ಹಳ್ಳಿಯ ಭಾಗದಲ್ಲೇ ಹಂಚಲಾಗಿದೆ. ಹಂಚುವವ್ಯವಸ್ಥೆಯಲ್ಲಿ ಸುಧಾರಿಸಬೇಕೆಂದು ಹೇಳುವುದು, ಒಳ್ಳೆಯದಾಗಲಿ ಇದನ್ನೇ ಅಂತಗೋಳಿಸಬೇಕೆನ್ನುವುದು ಹುಚ್ಚತನ ಪ್ರಜಾಸರ್ಕಾರದ ಕಾಲದಲ್ಲಿ ಸಾಮೂಹಿಕ ವಿಧಾನವನ್ನು ಕೈಗೊಳ್ಳುವ ಕಾರ್ಯಕ್ಕೆ ಪ್ರಜೆಗಳು ಸಹಕಾರ ನೀಡದಿದ್ದರೆ ಪ್ರಜಾಸರ್ಕಾರವು ಯಶಶ್ವಿಯಾಗಬೇಕಾದುದು ಹೇಗೆ ? ತಮ್ಮ ಕಾಲ ಮೇಲೆ ತಾವೇ ಕೊಡಲಿ ಹಾಕಿಕೊಂಡಂತಾಗುವುದಿಲ್ಲವೇ ?

ಇದು ಸರಕಾರದ ವಾದಸರಣಿ, ಬಳ್ಳಾರಿ ಜಿಲ್ಲಾ ಕಲೆಕ್ಟರರ ಪ್ರಕಟನೆಯ ಸಾರಾಂಶ.

ರೈತನ-ಕೂಲಿಕಾರನ ವಾದ

ಮೇಲಧಿಕಾರಿಗಳಿಗೆ ಹಳ್ಳಿಗಳ ಪರಿಸ್ಥಿತಿ ಗೊತ್ತಿಲ್ಲ ಹಿಂಸೆ ಒತ್ತಾಯಗಳಿಂದ ಜನಗಳಿಗೆ ಸೌಕರ್ಯ ಒದಗಿಸುವ ದಿನಗಳೇ ದೂರವಾದವು. ರೈತನು ತಾನು ಕಷ್ಟ ಪಟ್ಟುಬೆಳೆದ ಧಾನ್ಯಕ್ಕೆ ಒಳ್ಳೆಯ ದರಗಳನ್ನು ಅಪೇಕ್ಷಿಸುವುದು ಸಹಜವಾಗಿದೆ. ಇಂತಿಷ್ಟು ದರಕ್ಕೇ ಕೊಡಬೇಕೆನ್ನುವುದು ಒತ್ತಾಯ ಹಿಂಸೆಯಾಗುತ್ತದೆ.

ಈ ಒತ್ತಾಯ, ಹಿಂಸೆಗಳನ್ನು ತಾಳಲಾರದೆ ನೆಲ್ಲು ಬೆಳೆಯುವ ರೈತರು ಈ ವರ್ಷ ಹೊಸವೇಟಿ ಶಿರುಗುಪ್ಪೆ ಭಾಗಗಳಲ್ಲಿ ಶೇಕಡ 75 ಭಾಗದ ತಮ್ಮ ಗದ್ದೆಗಳಲ್ಲಿ ಕಬ್ಬನ್ನು ಹಾಕಿರುವರು. ಸರ್ಕಾರದವರ **'ಹೆಚ್ಚು ಬೆಳೆ ಎಂಬ ಪ್ರಚಾರ'** ವು, (Grow-more Food Campaign) ಈರೀತಿಯಲ್ಲಿ ಪರಿಣಮಿಸುತ್ತಲಿದೆ. ಸರ್ಕಾರದ ವಿಷಯದಲ್ಲಿ ಜನತೆಗೆ ಅಸಹ್ಯ ನಿರಸನ ಬುದ್ಧಿ ಹುಟ್ಟುತ್ತಲಿದೆ. ಸರ್ಕಾರದ ಮೂಲಸ್ತಂಭವಾದ ರೈತನ ಪರಿಸ್ಥಿತಿಯನ್ನು ಸುಧಾರಿಸದೆ ತಮ್ಮ ವಿಧಾನಗಳನ್ನು ಅನುಲಿನಲ್ಲಿ ತಂದರೆ ದೇಶ ವೇಕ್ಷೀಣಗತಿಯನ್ನು ಹೊಂದಬೇಕಾಗುತ್ತದೆ. ಯಾವ ಮೇಲಧಿಕಾರಿಗಳು ಯಾವ ಮಂತ್ರಿಗಳು ಹಳ್ಳೀ ಪ್ರದೇಶಗಳಲ್ಲಿ ಸಂಚರಿಸಿ ಹಳ್ಳೀ ಜನರ ಕಷ್ಟಗಳನ್ನು ನಿರೀಕ್ಷಿಸಿರುವರು ? ಅಥವಾ ಅವರ ಕಷ್ಟಗಳನ್ನು ಕೇಳಿಯಾದರೂ ಯಾವ ಪರಿಹಾರವನ್ನೊದಗಿಸಿರುವರು ? ಸರಕಾರದವರು ಮಾಡುವ ಉಪಕಾರವೆಲ್ಲಾ ಪಟ್ಟಣಗಳಿಗೆ ! ಪಟ್ಟಣಿಗರು ಆಂದೋಲನ ಮಾಡುವವರು ! ವೃತ್ತ ಪತ್ರಿಕೆಗಳಲ್ಲಿ ಬಯ್ಯುವವರು ! ಸಭೆಗಳನ್ನು ಮಾಡಿ ತೀರ್ಮಾನಗಳನ್ನು ಕಳುಹಿಸುವವರು! ಅವರು

ಬದುಕಿದ್ದರೆ ಸಾಕು, ಹಳ್ಳಿಗಳು ಹಾಳಾದರೇನು ಅವರಿಗೆ ಚಿಂತೆ? ಹಳ್ಳಿಯ ಜನರೆಲ್ಲಾ ಪಟ್ಟಣಗಳನ್ನು ಸೇರುತ್ತಲಿರುವರು 1941-42ರಲ್ಲಿ 50 ಸಾವಿರ ಜನ ಸಂಖ್ಯೆಯಿಂದಿದ್ದ ಬಳ್ಳಾರಿ ನಗರವು ಈಗಿನ ಸೀದಾ ಕಾರ್ಡುಗಳ ಲೆಕ್ಕಾಹಾಕಿದರೆ 84 ಸಾವಿರವಾಗುತ್ತದೆ. ಹೀಗೆ ಎಲ್ಲಾ ಪಟ್ಟಣಗಳ ಜನ ಸಂಖ್ಯೆಯೂ ಹೆಚ್ಚಿದೆ. ಇದರಿಂದ ಸರ್ಕಾರದವರು ಹಳ್ಳಿಗಳನ್ನು ದುರ್ಲಕ್ಷಿಸುತ್ತಿರುವರೆಂಬುದು ಚೆನ್ನಾಗಿ ಅರ್ಥವಾಗುತ್ತದೆ ಜಿಲ್ಲೆಯ 952 ಹಳ್ಳಿಗಳಲ್ಲಿನ ಜನ ಸಂಖ್ಯೆಯ 1/6 ಭಾಗವು ಈಗಾಗಲೇ ಮೂರು ಮುನಿಸಿಪಲ್ ನಗರಗಳಲ್ಲುಂಟು ಈಗಾಗಲೇ ಹಳ್ಳಿಗಳಲ್ಲಿ ವ್ಯವಸಾಯ ಕೂಲಿಗಾರರು ದೊರೆಯುವಂತಿಲ್ಲ. ಅನೇಕ ಹೊಲ ಗದ್ದೆಗಳು ಬೀಳು ಬಿದ್ದಿವೆ. ಹಳ್ಳಿಗಳು ಅಭಿವೃದ್ಧಿಯಾಗಬೇಕೆಂಬುದು ಗಾಂಧೀಜಿಯವರ ತತ್ವವಾಗಿ ಕಾಂಗ್ರೆಸ್ ಸರಕಾರಗಳು ಅವನ್ನು ಸ್ವೀಕರಿಸಿವೆ. ಹಳ್ಳಿಗಳ ಉದ್ಧಾರವು ಕಾಗದಗಳ ಮೇಲಣ ಯೋಜನೆ (Paper Schemes) ಗಳಿಂದ ಸಾಧ್ಯವಲ್ಲೆಂಬುದನ್ನು ಮಂತ್ರಿವರ್ಗದವರು ಅರಿತಿರಲಿಕ್ಕೆ ಸಾಕು. ಇನ್ನು ಮೇಲಾದರೂ ಕಣ್ತೆರದು ಈ ಅನೌಪಚಾರಿಕ ಸೀದಾವನ್ನು ಕೊನೆಗಾಣಿಸಿ ಜಿಲ್ಲೆಯಲ್ಲಿ ಒಂದೆಡೆಯಿಂದ ಮತ್ತೊಂದು ಕಡೆ ತೆಗೆದುಕೊಂಡು ಹೋಗಲು ಎಡೆ ತಡೆಗಳಿರಬಾರದು.

ಮುಖ್ಯ ಸೂಚನೆ

ಅನೌಪಚಾರಿಕ ಸೀದಾಪದ್ಧತಿಯು ಹೋಗಬೇಕೆಂದು (Informal Rationing) ಮದ್ರಾಸ್ ಪ್ರಾಂತದ 24 ಜಿಲ್ಲೆಗಳಲ್ಲಿ, 16 ಜಿಲ್ಲೆಗಳ ಕಲೆಕ್ಟರವರು ತಮ್ಮ ಅಭಿಪ್ರಾಯಗಳನ್ನು ಕೊಟ್ಟಿರುವರು. ಸ್ವಾನುಭವದಿಂದ ಹೀಗೆ ಅವರು ಹೇಳಿದ ಮೇಲೆ ಸರಕಾರದವರು ತಮ್ಮ ಹಟವನ್ನು ಬಿಡಬೇಕು. ಜಿಲ್ಲೆಯಲ್ಲಿ ಕಾಳು ಓಡಾಡಲು ಎಡೆ ತಡೆಗಳಿಲ್ಲದಂತಾದರೆ (Free movement of Food grains) ರೈತನ ಪರಿಸ್ಥಿತಿಯು ಸುಧಾರಿಸುವುದು. ಜಿಲ್ಲೆಯಿಂದ ಕಾಳು ಹೊರಗೆ ಹೋಗದಂತೆ ಬೇಕಾದರೆ ನಿರ್ಬಂಧಿಸಬಹುದು. ಹೆಚ್ಚು ಬೆಳೆದ ರೈತರಿಂದ ಒಳ್ಳೆಯ ಧರ ಕೊಟ್ಟು ಧಾನ್ಯ ಸಂಗ್ರಹಿಸಿ ಪಟ್ಟಣಿಗರಿಗೆ ಪೂರೈಕೆ ಮಾಡಬಹುದು. ಇಲ್ಲವೇ ಪಟ್ಟಣಿಗರು ಸಂತೆಗಳಲ್ಲಿ ಕೊಳ್ಳುವರು ಜಿಲ್ಲೆಯಲ್ಲಿ ನಡೆದ ರೈತ ಪರಿಷತ್ತುಗಳಲ್ಲಿ ಇಂಥಾ ತೀರ್ಮಾನಗಳಾಗಿವೆ ಬಳ್ಳಾರಿ. ಜಿಲ್ಲಾ ರೈತ ಪರಿಷತ್ತಿನವರು ಮದ್ರಾಸ್ ಮಂತ್ರಿಗಳ ಬಳಿ ಶಿಷ್ಟ ಮಂಡಳವನ್ನೊಯ್ಯಲಿರುವರೆಂದು ತಿಳಿದುಬಂದಿದೆ.

ಶ್ರೀ ಪಂಡಿತ ಜವಾಹರಲಾಲ ನೆಹರುಗಳ ೫೮ ನೇ ಹುಟ್ಟುಹಬ್ಬದಲ್ಲಿ ಅರ್ಪಿಸಿದ

ರತ್ನತ್ರಯ ಪದ್ಯಮಾಲಾ

ಜಯತು ಜಯ ಶ್ರೀ ಜವಹರ್ ಲಾಲರೆ।
ಜಯಸ್ವತಂತ್ರ ಪತಾಕೆ ಮೆರೆದರೆ।
ಜಯ ಸುಸ್ವಾಗತ ತಮ್ಮ ಏವತ್ತೆಂಟು ವತ್ಸರಕೆ।
ಜಯತು ಜಯತಪ ಪಡೆದ ಜನನಿಗೆ।
ಜಯವು ತಪಸಿತ ಮೋತಿಲಾಲಗೆ।
ಜಯವು ಶ್ರೀ ಪಂಡಿತ ಜವಹರ್‌ಲಾಲ ನೆಹರುಗಳೇ।

ಭರತಮಾತೆಯ ಧನ್ಯಪುತ್ರರೆ।
ಭರತಖಂಡದ ಭಾಗ್ಯರತ್ನರೆ।
ನಿರುತವರಮುದಾ ಮಂತ್ರಿಪದವಿಯೊಳ್ ಸೇವೆಗೈಯುವಿರ್ಕೆ
ತೊರೆದಿರೈ ಸುಖ ಸ್ವಾರ್ಥಭೋಗವ।
ಒರಗಿವಿರಿ ಸೆರೆಮನೆಯೊಳ್ ಬಹುಪರಿ!
ಧರಿಸಿ ಕಾಂಗ್ರೆಸ್ ಹಿರಿಯ ಪದವಿಯ ಧಾತ್ಯಹರಿಸಿದಿರ್ಕೆ।

ಧನ್ಯಹಿಂದೂನೇಕ ಮಾತೆಯು।
ಧನ್ಯ ಸಮಕಾಲೀನವರೆಲ್ಲರು।
ನಿನ್ನ ಎನಕೆಯು ನಿಜಸ್ವತಂತ್ರ ಬಳಲಿ ಎಲ್ಲರಿಗೇ।
ಇನ್ನು ಆಯುಶ್ಶಕ್ತಿ ಹೆಚ್ಚಲಿ।
ಗನ್ನ ಗಮುಳರು ಚನ್ನರಾಗಲಿ।
ಪನ್ನಗಧರನು ತಮ್ಮ ಹಾರೈಕೆಗಳ್ಗೆ ಕೈ ಗೊಡಲೀ।

ಆ. ನಾಗಪ್ಪ.
ವೀ. ಕೈ. ಕಾಲೇಜು, ಬಳ್ಳಾರಿ.

ನವಭಾರತಕ್ಕೆ ಚಂದಾದಾರರಾಗಿರಿ

2-50

ಬಳ್ಳಾರಿ ಜಿಲ್ಲಾ ರೈತ ಮಹಾಸಭೆ.

ಬಳ್ಳಾರಿ ಜಿಲ್ಲಾ ರೈತ ಮಹಾ ಸಭೆಯು ಕುರುಗೋಡಿನಲ್ಲಿ 18 ನೆಯ ದಿನಾಂಕ ಶ್ರೀ ಟಿ. ಸುಬ್ರಹ್ಮಣ್ಯಂರವರ ಅಧ್ಯಕ್ಷತೆಯಲ್ಲಿ ಸಮಾವೇಶವಾಗಿದ್ದಿತು. ಜಿಲ್ಲೆಯ ಎಲ್ಲಾ ಭಾಗಗಳಿಂದ ಸುಮಾರು 2000 ಪ್ರತಿನಿಧಿಗಳು ಆಗಮಿಸಿದ್ದರು, ಪ್ರತಿನಿಧಿಗಳಿಗೆ ಅತಿಥಿಗಳಿಗೆ ಗೌಡರ ತೋಟದಲ್ಲಿ ಸತ್ಕಾರ ವೇರ್ಪಟ್ಟಿತ್ತು, ಮಧ್ಯಾಹ್ನಾತ್ಪರ ಬಸವೇಶ್ವರದೇವಾಲಯದ ಭವ್ಯ ಮೈದಾನದಲ್ಲಿ ಸಭೆಯು ಪ್ರಾರಂಭವಾಯಿತು.

ಪ್ರಾರ್ಥನಾನಂತರ ಶ್ರೀ ಮರಿಬಸವನಗೌಡರು ಅಧ್ಯಕ್ಷರಾದ ಶ್ರೀ ಸುಬ್ರಹ್ಮಣ್ಯಂರವರ ಪರಿಚಯ ಮಾಡಿಸಿ, ಅವರ ಅಪಾರತ್ಯಾಗವನ್ನು ಪ್ರಶಂಶಿಸಿ ಇಂಥವರ ಅಧ್ಯಕ್ಷತೆಯಲ್ಲಿ ರೈತರ ಏಳಿಗೆಯ ವಿಚಾರಗಳಿಗೆ ಕಾರ್ಯತಃ ಯಶಸ್ಸು ದೊರೆಯುವುದರಲ್ಲಿ ಸಂದೇಹವಿಲ್ಲೆಂದರು.

ಶ್ರೀ ಬೆಲ್ಲದ ಚನ್ನಪ್ಪನವರು ಪ್ರಾರಂಭೋತ್ಸವವನ್ನು ನೆರವೇರಿಸುತ್ತಾ, ರೈತರೂ, ವರ್ತಕರೂ ಪ್ರಾಮಾಣಿಕ ರೀತಿಯಲ್ಲಿ ವ್ಯವಹರಿಸಿ ಬಡವರಿಗೂ, ಕೂಲಿಕಾರರಿಗೂ, ಸುಜೀವನದಮಾರ್ಗ ಕಲ್ಪಿಸಬೇಕೆಂದರು ಹಳ್ಳಿಗರ ಕಷ್ಟಗಳ ನಿವಾರಣೆಗಾಗಿ, ನಿಯಂತ್ರಣವು ಹೋಗಬೇಕೆಂದರು.

ಈಂತರ ಸ್ವಾಗತ ಸಮಿತಿ ಅಧ್ಯಕ್ಷರಾದ ಶ್ರೀ ಎನ್. ಮರಿಬಸವನಗೌಡರು ತಮ್ಮ ಭಾಷಣದಲ್ಲಿ ಹೀಗೆ ಹೇಳಿದರು.

ಪರಕೀಯರ ಆಳಿಕೆಯಿಂದ ಹಳ್ಳಿಗಳ ಕ್ಷೀಣವಾಗಿ ಮಹಾತ್ಮಗಾಂಧಿಯವರ ಆಂದೋಲನ ಫಲಿತವಾಗಿ ಆಗಸ್ಟ 15 ರಿಂದ ನಮಗೆ ಸ್ವರಾಜ್ಯವು ಲಭಿಸಿ, ಪಂಡಿತ ಜವಹರಲಾಲನೆಹರೂರವರು ರಾಜ್ಯಸೂತ್ರಗಳನ್ನು ವಹಿಸಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ.

"ನಾಳೆನಿಂತರೂ ಮರದಹಣ್ಣು ನಿಲ್ಲಲಿಲ್ಲ, ಎನ್ನುವಂತೆ ಬ್ರಿಟಿಷರ ಸ್ವಾರ್ಥದ ಮತ್ತು ಕುತಂತ್ರದ ಆಳಿಕೆಯು ಮುಗಿದರೂ, ಅವರಿಂದ ನಿರ್ಮಿಸಲ್ಪಟ್ಟ, ಕಂಟ್ರೋಲ್, ರೇಷನ್, ಕೋಟ-ಸಿಸ್ಟವ್ ಮೊದಲಾದ ಮರಿಸಿಡುಗುಗಳು, ಇದುವರಿವಿಗೂ ಅಳಿಯದೆ, ಉಳಿದದ್ದು ನಮ್ಮ ಮರ್ದೈವವೇ ಸರಿ! ರೈತನು ವರ್ಷದ ಉದ್ದಕ್ಕೂ, ಭೂಮಿಯನ್ನು ಉತ್ತಿ, ಬಿತ್ತಿ, ಬೆಳೆದು, ತನ್ನ ಹಾಗೂ ತನ್ನ ಹೆಂಡರು ಮಕ್ಕಳ ಹೊಟ್ಟೆಗೂ ಸಾಕಷ್ಟು ಇಲ್ಲದಂತೆ, ಆ ಬೆಳೆಯನ್ನು ಸಂಗ್ರಹಿಸುವ ಅಧಿಕಾರ (Procurement Officer) ಸ್ವಾಧೀನ ಮಾಡಿ ಅಕಾಶದ ಕಡೆಗೆ ಸಿಳಿ, ಸಿಳಿ, ಕಣ್ಣಿಡುತ್ತ ನಿಟ್ಟುಸಿರು ಬಿಡುವ ರೈತನ ಕಂಗಾಲ ಸ್ಥಿತಿಯನ್ನು ಕಂಡರೆ ಎಂಥ ಕಟುಕನ ಹೃದಯವು ಕರಗಿ ನೀರಾಗದು!!

ನಾವು ಇಂದು ಸ್ವತಂತ್ರ ಭಾರತದ ಪ್ರಜೆಗಳಾದರೂ ರೈತನಿಗೆ ಬೇಕಾದ ಬೇಸಾಯದ ಸಾಮಾನುಗಳಂತೂ, ಎಲ್ಲಿಯೂ ಕಂಟ್ರೋಲ್ ಧಾರಣೆಗೆ ಸಿಕ್ಕುವುದಿಲ್ಲ. ದಶರೆ, ದಿವಾವಳಿ ಯಂಥ ದೊಡ್ಡ ಹಬ್ಬಗಳಲ್ಲಿಯೂ, ರೈತನು, ಅಕ್ಕಿ, ಸಕ್ಕರೆಯ, ಮುಖವನ್ನು ಸಹಾ ಕಾಣಲಾರನು. ವರ್ಷದವರೆಗೂ ದುಡಿದು. ಹಣ್ಣು ಹಣ್ಣಾಗಿ, ತನಗೊಂದು ಹಚ್ಚಡ, ಹೆಂಡತಿಗೊಂದು ಶೀರೆ, ಮಗಳಿಗೊಂದು ಲಂಗ ಕೊಳ್ಳಬೇಕೆಂದರೆ, ಕಂಟ್ರೋಲ್, ಎಂಬ ಬ್ರಹ್ಮರಾಕ್ಷಸಿಯು, ಇದಿರು ನಿಂತು, ತನ್ನ ಮರಿಗಳಾದ, ಬ್ಲಾಕ್ ಮಾರ್ಕೆಟ್ ಕಳ್ಳ ವ್ಯಾಪಾರಿಗಳನ್ನು ರೈತನ ಮೇಲೆ ಬಿಟ್ಟು ರೈತನಲ್ಲಿ ಅಳಿದುಳಿದ ರಕ್ತವನ್ನು ಹೀರಿ ಹಿಪ್ಪೆ ಮಾಡುತ್ತದೆ. ಈ ಎಲ್ಲಾ ಕಂಟ್ರೋಲ್, ಬ್ರಹ್ಮರಾಕ್ಷಸಿ, ಬ್ಲಾಕ್ ಮಾರ್ಕೆಟ್ ಮರಿ ಪಿಶಾಚಿಗಳು ಕಾಂಗ್ರೆಸ್ ವೇಷದ ಮರಿಯಲ್ಲಿಯೇ, ಮೆರೆಯುತ್ತಿರುವುದನ್ನು ನೋಡಿದರೆ ಬಹಳ ದುಃಖವೆನಿಸುತ್ತದೆ. ನಮ್ಮ ಮುಖಂಡರು, ನಮ್ಮ ಪ್ರತಿನಿಧಿಗಳಾಗಿ, ಶಾಸನ ಸಭೆ ಮೊದಲಾದ ಸಭೆಗಳಿಗೆ ಆರಿಸಿಹೋದ ಮಹನೀಯರು, ನಮ್ಮನ್ನು ಮರೆತಿರಬಹುದೋ? ಮತ್ತು ಪ್ರಜೆಗಳಿಂದ ಶಾಳನ್ನು

ವಸೂಲುಮಾಡಿ ಬಡವರಿಗಾಗಿ ಹಂಚುವ food department ಖರ್ಚು 1946, 47 ರಲ್ಲಿ 1 ಕೋಟಿ 27 ಲಕ್ಷ ರೂಪಾಯಿಗಳು ನಮ್ಮ ಮದ್ರಾಸ್ ಸ್ಥಾನಕ್ಕೆಯೊಂದೇ ಖರ್ಚಾಗಿದೆ.

ರೈತನು ಮಳೆ, ಬಿಸಿಲು, ಗಾಳಿ ಎನ್ನದೆ ಎಷ್ಟೋ ಕಷ್ಟಗಳಿಂದ ವರ್ಷದ ಉದ್ದಕ್ಕೂ ಅತಿ ಶ್ರಮಪಟ್ಟು ಬೆಳೆಸಿದ ಧಾನ್ಯವನ್ನು ಭೂಮಿಯಿಲ್ಲದ ಕೂಲಿಗಾರರಿಗೂ ಸೇದ್ಯವಿಲ್ಲದ ಕೈಗಾರಿಕೆ ಜನರಿಗೆ ಕೊಡುತ್ತೀವಿ ಅಂದು ರು. 15 ರೂಪಾಯಿಗಳಿಗೆ 102 ಶೇರಿ ಪ್ರಕಾರ ಹಳ್ಳಿಗಳಿಂದ ಲಾರಿದ್ವಾರಾ ಪಟ್ಟಣಗಳಿಗೆ ತೆಗೆದುಕೊಂಡು ಹೋಗಿ ಮತ್ತು ಅಲ್ಲಿಂದ ಹಳ್ಳಿಗಳ ರೇಷನ್ ಡಿಪೋಗಳಿಗೆ ರು. 19 ರೂಪಾಯಿಗಳಿಗೆ ಒಂದು ಪಲ್ಲದ ಪ್ರಕಾರ ಅದೇ ಧಾನ್ಯವನ್ನೇ ಬಡಜನಗಳಿಗೆ ಕೊಡಬೇಕೆಂದು ಡಿಪೋ ಕೀಪರುಗಳಿಗೆ ಕೊಡ್ತಾರೆ. ಅವರು ಸದ್ರಿ ದವಸ ತರುವ ಖರ್ಚು ವಗೈರಾದಿಗಳನ್ನು ಅದಕ್ಕೆ ಸೇರಿಸಿ ಮಾರುತ್ತಾರೆ. ಆದರೂ ಆ ಬಡ ಜನಕ್ಕೆಂದು ಕೊಟ್ಟ ಕಾಳುನ್ನು ಸಹಾ ಪ್ರತಿ ಡಿಪೋದಲ್ಲಿ ಅನೇಕ ಬಡ ಜನರಿಗೆ ಸಿಕ್ಕದೆ. ಅತಿ ತೊಂದರೆಯಾಗಿರುತ್ತದೆ. ಆ ಬಡಜನರು, ಅದೇ ಕಂಟ್ರೋಲ್ ಪ್ರಕಾರ ಕೊಡಬೇಕೆಂದ ಕಾಳನ್ನೇ ಬ್ಲಾಕ್ ಮಾರ್ಕೆಟ್ಟು ಮಾರ್ಗವಾಗಿ ಅತಿ ರಹಸ್ಯದಿಂದ ಪಡೆದು ತಮ್ಮ ಜೀವನವನ್ನು ಅತಿ ದುಃಖಮಯವಾಗಿ ಸಾಗಿಸುತ್ತಾಯಿದ್ದಾರೆ. ಇದು ಮಿಲಿಟ್ರಿ ಪದ್ಧತಿಯಂತೆಯೇ ಇದೆ ಮತ್ತು ಗ್ರಾಮಗಳಲ್ಲಿ ಅನೇಕರು ಬೇನೆಬೇಸರಿಕೆ, ಹೆರಿಗೆ ಶುಭ, ಶೋಭನ ಮುಂತಾದ ಕಾರ್ಯಗಳಿಗಂತೂ, ಅಕ್ಕಿಯುಸಿಗದೆ ಎಲ್ಲಿಂದಾದರೂ ಬ್ಲಾಕಿನಲ್ಲಿ ತಂದರೂ ಸಹಾ ಅದಕ್ಕೆ ಎಷ್ಟೋ ಕಷ್ಟ ನಿಷ್ಠೂರಗಳಿಗೆ ಗುರಿಯಾಗುತ್ತಾರೆ. ಇದು ಅಲ್ಲದೆ ಸಕ್ಕರಿಯು ಕೂಡ, ಗ್ರಾಮದ ಮುಖಂಡರಿಗೂ ಮತ್ತು ಉದ್ಯೋಗಸ್ಥರಿಗೂ ಕೊಡುತ್ತಾ ಮಿಕ್ಕ ಜನರಿಗೆ ಏನು ಪ್ರಯತ್ನಪಟ್ಟರೂ ಸಿಗುವಂತಿರುವುದಿಲ್ಲ. ಅಲ್ಲದೆ ಹಳ್ಳಿಗಳ ಡಿಪೋಗಳಲ್ಲಿ ಚಿಮಣಿ ಎಣ್ಣೆಯನ್ನು 0–3–0 ಗೆ ಸೀಸದಂತೆ ಮೊದಲು 0–6–0 ಗೆ 0–8–0 ಗೆ ಒಂದು ಸೀಸದಂತೆ ಎಷ್ಟೋ ಊರುಗಳಲ್ಲಿ ಮಾರುತ್ತಾಯಿದ್ದಾರೆ ಇದನ್ನು ಕೇಳುವರಂತೂ ಮೊದಲೇ ಯಿಲ್ಲದಂತಾಗಿರುವುದು.

1945 ರಲ್ಲಿ ಚುನಾವಣೆ (ಎಲೆಕ್ಷನ್) ಕಾಲದಲ್ಲಿ ಪ್ರತಿಗ್ರಾಮದ ರೈತರು, ಕಾಂಗ್ರೆಸ್ ಪರವಾಗಿ ತಮ್ಮ ಓಟುಗಳನ್ನು ಕೊಟ್ಟು ಪ್ರತಿನಿಧಿಗಳನ್ನಾಗಿ ಮಾಡಿ ಯುದ್ಧ ಸಂಬಂಧದಿಂದ ಆಗಿರುವ, ಕಂಟ್ರೋಲು, ರೇಷನ್ ಎಂಬ ದುಃಖಗಳಿಂದ ಪಾರಾಗುತ್ತೇವೆಂಬ ಭರವಸೆಯಿಂದ ಕಳಿಸಿದರು. ಆದರೆ ಶಾಸನ ಸಭ್ಯರು ಶಾಸನಸಭೆಯಲ್ಲಿ ತಮ್ಮ ಕರ್ತವ್ಯಗಳನ್ನು ನೆರವೇರಿಸಲಿಲ್ಲ. ಈ ಕಂಟ್ರೋಲು ರೇಷನ್ ಎಂದಕೂಡಲೇ ಯಿದ್ದಕಾಳು ಕೂಡಾ ಮಾಯವಾಗಿ ಹೋಗಿಬಿಡುತ್ತವೆ ಈ ನಿರ್ಬಂಧಗಳಿಂದ ಕಣ್ಣಿಗೆ ಕಂಡ ದವಸ ಕಾಣದಂತಾಗುವುದು. ಪ್ರತಿ ಪಟ್ಟಣವಾಸಿಗಳಿಗೂ ಮತ್ತು ಉದ್ಯೋಗಸ್ಥರಿಗೂ ಸುಖವಾದ ಭೋಜನ ಧಾನ್ಯಗಳನ್ನು ಬೆಳೆಯಿಸುವ ಈ ರೈತನಿಗ ಇಂಥಾ ನಿರ್ಬಂಧವೇ? ಈ ರೈತನು ತನ್ನ ಹೆಂಡರ ಮಕ್ಕಳು ಸಹಿತವಾಗಿ ಕಷ್ಟಬಟ್ಟು ಬೆಳೆಯಿಸಿದ ಬೆಳೆಯು ಅವನ ಸ್ವತಂತ್ರವಿಲ್ಲದೆ, ನಿರುತ್ಸಾಹಿಯಾಗಿ ಇದೆಂಥ ಸ್ವತಂತ್ರ ರಾಜ್ಯವೆಂದು ದುಃಖಿಸುವನು ಹೀಗೆಯೇ ಪ್ರತಿರೈತನ ಮನಸ್ಸು ಬೆಂದು ನೊಂದು ಕೊಂಡರೆ ಜಗತ್ತಿನ ಕಲ್ಯಾಣವೇ ಕೆಟ್ಟಿತೆಂದು ಧೃಡವಾಗಿ ಹೇಳಬೇಕು. ಜಗತ್ತಿನ ಉದ್ಧಾರಕ್ಕೆ, ಮೂಲಾಧಾರವಾದವನೆ ರೈತ. ಪ್ರಪಂಚದ ಇತಿಹಾಸಗಳಲ್ಲಿ ನೋಡಲು ಯಾವಕಾಲದಲ್ಲಿಯೂ, ಇಂಥಾ ಕಂಟ್ರೋಲು ರೇಷನ್ ಎಂಬ ನಿರ್ಭಂಧನೆಗಳು ಕಾಣವು. ಹಣವಿದ್ದವರು ತಮ್ಮ ಹಣದ ಬಲದಿಂದ ಎಷ್ಟುಕಷ್ಟವಾದರೂ ಲೈಸನ್ಸ್ ಪರಮಿಟ್ಟುಗಳನ್ನು ಹೊಂದಿ ಬಡಜನರನ್ನು ಉದ್ಧಾರಮಾಡುತ್ತೀನೆಂದು ಹೇಳುತ್ತಾ ತಮ್ಮ ಬ್ಲಾಕು ಮಾರ್ಕೆಟುಗಳ ಸಂತೆಯನ್ನು ಜರಿಗಿಸುತ್ತಾ ಹೆಚ್ಚು ಶ್ರೀಮಂತರಾಗುವರು. ಪಟ್ಟಣಗಳಲ್ಲಿ

(13 ನೇ ಪುಡವನ್ನು ನೋಡಿರಿ)

THE GENERAL ASSURANCE SOCIETY LTD.

Estd : 1907

Head Office : AJMER. — **Branch : BELLA**

Recognised as stronghold of SERVICE, SAFETY AND SECURITY

1946 Another year of all round progress. The figures that speak.

	1944	1945	1946
New Business	2,63,00,000	5,04,16,000	5,66,28,000
Total Income	39,45,000	53,42,000	73,19,000
Assets	1,47,30,000	1,66,87,000	1,99,39,000

Patronise this popular, progressive and purely Swadeshi Life Offic

For Insurance and Agency particulars please write to | **K. M. Ramachar** – Branch Manager, Car Street, BELLARY.

ದಿ ಜನರಲ್ ಅಶೂರೆನ್ಸ್ ಸೊಸೈಟಿ, ಲಿಮಿಟೆಡ್.

ಸ್ಥಾಪನೆ - 1907

ಮುಖ್ಯಕಾರ್ಯಾಲಯ : ಅಜ್ಮೀರ — ಬ್ರಾಂಚು : ಬಳ್ಳಾ

ಸೇವೆ, ಸುರಕ್ಷಿತತೆ, ಭದ್ರತೆಗಳಿಗೆ ಬಲವಾದ ಕೇಂದ್ರವೆಂದು ಗಣಿಸಲಾಗಿದೆ.

1946 ಎಲ್ಲಾ ದಿಶೆಗಳಲ್ಲಿನ ಪ್ರಗತಿಯ ನುತ್ತೊಂದು ವರ್ಷ ತಿಳಿ ಹೇಳುವ ಅಂಕೆಗಳಿ ಸಾಕು.

	1944	1945	1946
ಹೊಸದಾಗಿ ನಡೆದ ಕಾರ್ಯ	2,63,00,000	5,04,16,000	5,66,28,0
ಒಟ್ಟು ಆದಾಯ	39,45,000	53,42,000	73,19,0
ಆಸ್ತಿಗಳು	1,47,30,000	1,66,87000	1,99,39,0

— ಈ ಜನಪ್ರಿಯ, ಪ್ರಗತಿಪರ, ಮತ್ತು ಶುದ್ಧ ಸ್ವದೇಶೀ ಸಂಸ್ಥೆಯಲ್ಲೇ ನಿಮ್ಮ ವಿಮೆ ಇಳಿಸಿರಿ —

ವಿಮೆ ಮತ್ತು ಏಜನ್ಸಿ ವಿವರಗಳಿಗಾಗಿ ನಮಗೆ ಬರೆಯಿರಿ | **ಕೆ. ಯಂ. ರಾಮಾಚಾರಿ, ಶಾಖಾ ವ್ಯವಸ್ಥಾಪಕ.** ಶೇರು ಬಜಾರ, ಬಳ್ಳಾರಿ.

NAVA BHARAT, BELLARY. Reg. No. M. 4746

ನವಭಾರತ ಬಳ್ಳಾರಿ.

(Nationalist Weekly)

ಚಂದಾದರಗಳು.		Subscription Rates	
ವರ್ಷಕ್ಕೆ	5-0-0	One Year	5—0—0
6 ತಿಂಗಳಿಗೆ	3-0-0	Six months	3—0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ		Subscription will not be accepted for less than 6 months.	

To

SRI.....

.....

.....

Printed at Krishna Press Bellary QH No. B 17 FOR (Q.H. No. B-5.)

Edited & Published by T. B. KESHAVA RAO

ಹೈಹಿಂದ್

ಸಮತೆ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ವರ್ಷ ೧೦ ಸಂಚಿಕೆ ೪೭ | ಬಳ್ಳಾರಿ ಡಿಸೆಂಬರು ೮ ಸೋಮವಾರ ೧೯೪೭ | ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವ್.

ಪಾಕಿಸ್ತಾನ — ಹಿಂದೂಸ್ತಾನ

ಪಾಕಿಸ್ತಾನವು ಒಮ್ಮಿಂದೊಮ್ಮೆಲೆ ಹಿಂದೂಸ್ತಾನದ ಮೇಲೆ ಬಿದ್ದಾಗ ನಾವು ಸರ್ವಸಿದ್ಧರಾಗಿ ಅದನ್ನು ಎದುರಿಸಬೇಕು ನಾವು ಬಿಟ್ಟು ಬಂದ ಆಸ್ತಿ ಮುಸ್ಲಿಮರ ಭೋಗಕ್ಕೆ ಈಡಾಗುತ್ತಲಿದೆ ಎಂದು ಮಾಸ್ಟರ್ ತಾರಾಸಿಂಗರವರು ಒಂದು ಹೇಳಿಕೆಯಿತ್ತಿರುವರು. ಮುಂಜಾಗ್ರತೆಯ ಕ್ರಮಗಳನ್ನು ರಹಸ್ಯವಾಗಿಟ್ಟಿರುವೆವು ಎಂದು ಒಂದು ಪ್ರಶ್ನೆಗೆ ದಕ್ಷಿಣಾಮಂತ್ರಿಗಳಾದ ಸರ್ದಾರ ಬಲದೇವ ಸಿಂಗರು ಉತ್ತರವಿತ್ತರು.

ಪಾಕಿಸ್ತಾನ —

ವಿಭಜನೆಯು ನಿಶ್ಚಯವಾದ ನಂತರ ಅರಬರು ಯುದ್ಧಕ್ಕೆ ಆಣಿಮಾಡುತ್ತಿರುವರು. ಪ್ರತಿಯೊಂದು ಅರಬರಾಷ್ಟ್ರದಿಂದ ಹತ್ತು ಸಾವಿರ ಅರಬರನ್ನು ಪಾಲಿಸ್ತಾನದಲ್ಲಿ ನೆಲೆಸಲು ಕಳುಹಿಸಬೇಕೆಂದು ನಿಶ್ಚಯಿಸಿರುವರು. ಇದು ಯೂರೋಪದಲ್ಲಿ ಯುದ್ಧದ ಕಿಡಿ ಇದ್ದಂತಿದೆ.

ಕಾಸ್ಮೀರ —

ಭಾರತ ಮತ್ತು ಪಾಕಿಸ್ತಾನ ಮಂತ್ರಿಗಳಲ್ಲಿ ಕಾಸ್ಮೀರದ ಬಗ್ಗೆ ಚರ್ಚೆಯುಸಾಗಿ ಮುಂದುವರಿದಿದೆ. ಕಾಶ್ಮೀರದಲ್ಲಿಯ ಕೊಟ್ಲಿಭಾಗವನ್ನು ದಾಳಿಗಾರರಿಂದ ಮುಕ್ತಮಾಡಲಾಯಿತು. ಜಮ್ಮೂವಿನ ದಕ್ಷಿಣ ಪ್ರದೇಶದಲ್ಲಿ ದಾಳಿಗಾರರ ಚಟುವಟಿಕೆ ಸಾಗಿದೆ. ಪಂಜಾಬಿನ ಗುಜ್ರಾತ ಭಾಗದಿಂದ ದಾಳಿಗಾರರು ಕಾಸ್ಮೀರಕ್ಕೆ ಬರುತ್ತಿರುವರೆಂಬುದು ಗೊತ್ತಾಗಿದೆ.

ಕರ್ನಾಟಕ ವಿಕೀಕರಣ ಪ್ರಚಾರ

ಮಹಾಸಮಿತಿ ಕಾರ್ಯದರ್ಶಿಗಳಾದ ಶ್ರೀ ಅಂದಾನಪ್ಪ ದೊಡ್ಡಮೇಟಿಯವರು ಅನಂತವುರ ಜಿಲ್ಲೆ ಹಿಂದೂಪುರ ಮಡಕಸಿರ ವಗೈರೆ ಭಾಗಗಳಲ್ಲಿ ಪ್ರಚಾರ ಮಾಡಿ ಕನ್ನಡ ಸಂಘಗಳನ್ನು ಏರ್ಪಡಿಸಿದರು.

ಹಿಂದೂಸ್ತಾನ ಪಾಕಿಸ್ತಾನಗಳ ಮಧ್ಯೆ ಲ ಶಬ್ದದ ಕನಿಷ್ಟತಾರಿಗೆ ೧-೬-೦ ಮತ್ತೆ ಪ್ರತಿಯೊಂದು ಶಬ್ದಕ್ಕೆ ೦-೨-೦ ಎಕ್ಸಪ್ರೆಸ್ ತಂತಿಗೆ ಇಮ್ಮಡಿ ಛಾರ್ಜುಬೀಳುವುದು. ತಾರಿನ ಮೇಲೆ ಪಾಕಿಸ್ತಾನವೆಂದು ಬರೆಯದಿರುವ ತಾರನ್ನು ಸ್ವೀಕರಿಸುವುದಿಲ್ಲ.

ಮಸೀದುಗಳಲ್ಲಿ ಹಿಂದೂದೇವರ ವಿಗ್ರಹಗಳನ್ನಿಡುವುದು ಹಿಂದೂಧರ್ಮದ ಅಪಮಾನ. ಹಿಂದೂ ಸೀಖರು ಹುಚ್ಚಾಟವಾಡದಿರಲಿ, ಹಿಂದೂಮಹಾಸಭೆ ರಾಷ್ಟ್ರೀಯ ಸ್ವಯಂಸೇವಕರು ತಾಳ್ಮೆಗೆಡದಿರಲಿ ಎಂಬುದಾಗಿ ಗಾಂಧೀಜಿಯವರು ತಮ್ಮ ಪ್ರಾರ್ಥನೋತ್ತರ ಭಾಷಣದಲ್ಲಿ ಹೇಳಿದರು.

ಪ್ರಾಥಮಿಕ ಶಾಲೋಪಾಧ್ಯಾಯರಿಗೆ ಸೂಚನೆ.

ಜಿಲ್ಲಾಬೋರ್ಡು, ಮುನಿಸಿಪಾಲಿಟಿ ಲೇಬರ್ ಮತ್ತು ಇತರ ಖಾಸಗೀ ಶಾಲೆಗಳಲ್ಲಿ ದುಡಿಯುತ್ತಿರುವ ಪ್ರಾಥಮಿಕ ಶಾಲೋಪಾಧ್ಯಾಯರ ಸಂಬಳ ವೇತನಗಳು ಸಮಾನವಾಗಿರ ಬೇಕೆಂದು ಆಂದೋಳನ ಹೂಡಲಾಗಿತ್ತು. ಈ ವಿಷಯದಲ್ಲಿ ಸರ್ಕಾರದವರು ಪರ್ಯಾಲೋಚಿಸಿ ಕೆಲ ಆಜ್ಞೆಗಳನ್ನು ಮಾಡಿದರು. ಸರ್ಕಾರದ ಆಜ್ಞೆಗಳು ಉಪಾಧ್ಯಾಯರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವುದರಲ್ಲಿ ಅತೃಪ್ತಿಕರವಿದ್ದರೂ ಉಪಾಧ್ಯಾಯರು ಸಂಪ್ರಹೂಡುವ ಆಲೋಚನೆಯನ್ನು ದೂರವಾಡಿದ್ದರು. ಆದರೆ ಸರ್ಕಾರದವರ ಆಜ್ಞೆಗಳು ಯಾವ ರೀತಿಯಲ್ಲಿ ಜಾರಿಗೆ ತರಲ್ಪಟ್ಟಿವೆಯೆಂಬುದು ತಿಳಿಯಬೇಕಾಗಿದೆ. ಈ ಕಾರಣ ಈ ಸಂಸ್ಥೆಗಳಿಗೆ ಹೊಂದಿಕೊಂಡ ಉಪಾಧ್ಯಾಯರು ತಮಗಿರುವ ಕುಂದು ಕೊರತೆಗಳನ್ನು ಮತ್ತು ಸದ್ಯದ ಸಂಬಳ ಅಲೋಯನ್ಸಗಳನ್ನು ನಮಗೆ ತಿಳಿಸಲು ಕೋರುತ್ತೇವೆ. ಸಂಪಾದಕ ನವಭಾರತ

೨೫ ಲಕ್ಷ ಕನ್ನಡಿಗರ ಅಂಕಿತದ ಮನವಿ.

ಆದವಾನಿ, ಬಳ್ಳಾರಿ, ಆಲೂರು, ಶಿರಗುಪ್ಪಿಯ ಈ ಎಲ್ಲ ತಾಲೂಕುಗಳಲ್ಲಿಯ ಅನೇಕ ಗ್ರಾಮಗಳಿಂದ ಎಷ್ಟೋಸಾವಿರ ಜನರು ಸಹಿಮಾಡಿದ ಅನೇಕ ಮನವಿಗಳು ತಮ್ಮ ಕಾರ್ಯಾಲಯದಲ್ಲಿ ತಲ್ಪಿವೆ. ಸಹಿ ಮಾಡಿಸಿ ಕಳುಹುವ ಕ್ರಮವನ್ನು ವಹಿಸಿದವರಿಗೂ ಎಲ್ಲ ಗ್ರಾಮಗಳ ನಿವಾಸಿಗರಿಗೂ ಬೇರೆ ಬೇರೆ ಪತ್ರಗಳನ್ನು ಬರೆಯಲು ಅಸಾಧ್ಯವಾಗಿದೆಯಾದ್ದರಿಂದ ಈ ಪ್ರಕಟನೆಯ ಮೂಲಕವೇ ಅವರೆಲ್ಲರಿಗೆ ಮಹಾಸಮಿತಿಯ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳನ್ನು ಅರ್ಪಿಸುತ್ತೇವೆ

ಇನ್ನೂ ಹೆಚ್ಚು ಸಹಿಗಳುಳ್ಳ ಮನವಿಗಳನ್ನು ಕಳಿಸಲು ಪ್ರತಿಯೊಂದು ಗ್ರಾಮದವರೂ ನಿರವಾಗ ಬೇಕೆಂದು ಈ ಮೂಲಕ ಇನ್ನೊಮ್ಮೆ ವಿನಂತಿಮಾಡಿಕೊಳ್ಳುತ್ತೇವೆಂದು ಕರ್ನಾಟಕ ಏಕೀಕರಣ ಮಹಾಸಮಿತಿಯ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಕೊಡ್ಲಿಗಿ ತಾಲೂಕು

ಆಹಾರಸಮಿತಿ ಸದಸ್ಯರ ರಾಜೀನಾಮೆ.

"ಈ ಸಮಿತಿ ಸಭೆಗಳಲ್ಲಾದ ನಿರ್ಣಯಗಳು ಅಲಕ್ಷಿಸಲ್ಪಟ್ಟಿವೆ ಆಹಾರ-ಧಾನ್ಯ, ಬಟ್ಟೆ, ಚಿಮ್ಮಿ ಎಣ್ಣೆ ಮತ್ತು ವ್ಯವಸಾಯ ಸಾಮಗ್ರಿಗಳನ್ನು ಇದ್ದಷ್ಟಾದರೂ ಸರಿಯಾಗಿ ಪೂರೈಸದೆ ಅಯುಕ್ತವಾಗಿಯಾದರು. ಅಧಿಕಾರಿಗಳು ಜನಸಾಮಾನ್ಯರ ಬೇಡಿಕೆ ಸಹಕಾರವನ್ನು ನಿರ್ಲಕ್ಷಿಸುತ್ತಿರುವರು. ಆಹಾರ ಧಾನ್ಯಗಳ ನಿಯಂತ್ರಣ ತೆಗೆದುಹಾಕಲಿಲ್ಲ ಸಂಗ್ರಹಣಾಧಿಕಾರಿಗಳ, ಸಗಾಟುಗಾರರ, ಚಿಮ್ಮಿ ಎಣ್ಣೆ ಸಕ್ಕೆ ಸಂಚಾಲಕರ ಅಕ್ರಮಗಳನ್ನು ತೋರಿಸಿಕೊಟ್ಟರೂ ಕ್ರಮತೆಗೆದುಕೊಳ್ಳಲಿಲ್ಲ. ನಮ್ಮ ಪ್ರಯಾಣ ಭತ್ತವನ್ನೆಷ್ಟು ಸಲ ಕೇಳಿದರೂ ಕೊಡಲಿಲ್ಲ ಈಕಾರಣ ಸಮಿತಿ ಸದಸ್ಯರಾಗಿರಲು ಇಷ್ಟವಿಲ್ಲ"

ಈ ತ್ಯಾಜ್ಯಪತ್ರವನ್ನು ಗೌರವಪೂರ್ವಕವಾಗಿ ಸ್ವೀಕರಿಸಲು ಕೋರಿಕೆ.

ಬಿ. ಯಂ. ಅಜ್ಜಯ್ಯ ಆರ್. ಬಸವನಗೌಡ
ಬಿ ಮುದುಕಪ್ಪ ಚಲವಾದಿ ಸಿದ್ಲಿಂಗಪ್ಪ
ಬಿ. ಯಂ. ವೀರಭದ್ರಯ್ಯ ಎಂ. ಪಂಪನಗೌಡ

ಈ ತ್ಯಾಜ್ಯ ಪತ್ರದ ನಕಲು ತಹಶೀಲ್ದಾರ್, ಕಲೆಕ್ಟರ್, ಶ್ರೀ ಅನಂತಾಚಾರ್ಯ 'ನವಭಾರತ' ಪತ್ರಿಕೆಗೆ ಕಳುಹಿಸಲಾಗಿದೆ

ರಷ್ಯಾ ಇರಾಣ ಎಣ್ಣೆಯ ಒಪ್ಪಂದವನ್ನು ರದ್ದು ಮಾಡಿದಕಾರಣ ರಷ್ಯಾವು ರೊಚ್ಚಿಗೆದ್ದಿದೆ. ಉತ್ತರ ಇರಾಣದಲ್ಲಿ ರಷ್ಯನರು ತುಂಬುತ್ತಿರುವರು. ಸಮತಾವಾದಿ ಪಕ್ಷವು ಕಾಂಗ್ರೆಸ್‌ನಿಂದ ಬೇರ್ಪಡುವುದೆಂದು ಜಯಪ್ರಕಾಶರು ಸಾರಿದ್ದಾರೆ.



10th Year of Publication
Monday, 8th December 1947.

ಹೈದರಾಬಾದು.

ಒಪ್ಪಂದ:—

ಕಾಶ್ಮೀರ ಪ್ರದೇಶದಲ್ಲಿ ಪಾಕಿಸ್ತಾನ ಸರಕಾರ ಪ್ರೇರಿತ ಸೈನ್ಯಗಳಿಗೆ ಸೋಲುಂಟಾಗಿ ಓಡಿಹೋಗುವ ಪ್ರಸಂಗವುದ್ಭವವಾದುದನ್ನು ಕಂಡು ಹೈದರಾಬಾದು ಸರ್ಕಾರವು ಭಾರತ ಸರ್ಕಾರದೊಡನೆ ಒಪ್ಪಂದ ಮಾಡಿಕೊಳ್ಳದೆ ಗತ್ಯಂತರವಿಲ್ಲೆಂದು ಕಳೆದವಾರ ಒಂದು ವರ್ಷದವರೆಗೆ ಒಪ್ಪಂದ ಮಾಡಿಕೊಂಡಿತು. ಈ ಹಿಂದೆ ಭಟ್ಯಾರಿ ಮಂತ್ರಿವರ್ಗವು ಮುಂದಿಮಾಡಿದ ಒಪ್ಪಂದಕ್ಕೂ ಇದಕ್ಕೂ ಏನೂ ವ್ಯತ್ಯಾಸವಿಲ್ಲ ಇದಕ್ಕೆ ನಿಜಾಮರು ಸಹಿಮಾಡಿರುವರು. ಈ ಒಪ್ಪಂದದ ಅನ್ವಯ ನಿಜಾಮರು ತಮ್ಮ ವ್ಯಾಪಾರಿ ಏಜಂಟರನ್ನು ಪರದೇಶಗಳಲ್ಲಿಡಬಹುದಾಗಲಿ ರಾಜಕೀಯ ಚರ್ಚೆಯನ್ನು ಯಾವೊತನೆಯೂ ಸಾಗಿಸುವಂತಿಲ್ಲ. ಈ ವ್ಯಾಪಾರೀ ಏಜಂಟರಾದರೂ ಭಾರತ ಸರ್ಕಾರದ ಪ್ರತಿನಿಧಿಗಳ ತಿಳುವಳಿಕೆಯಿಲ್ಲದೆ ಗುಪ್ತವಾಗಿ ಏನೂ ಮಾಡಬರುವಂತಿಲ್ಲ. ಹೈದರಾಬಾದು ಸರ್ಕಾರವು ಸ್ವತಂತ್ರವಾಗಿ ಪರದೇಶಗಳಿಂದ ಅಸ್ತ್ರ ಮದ್ದು ಗುಂಡುಗಳನ್ನು ತರಿಸಬಾರದು. ತಮ್ಮ ನ್ಯಾಯವಾದ ಬೇಡಿಕೆಗಳನ್ನು ಭಾರತ ಸರ್ಕಾರವು ಪೂರೈಸುವುದು. ತಮ್ಮನಾಣ್ಯ ಚಲಾವಣೆಯಲ್ಲಿ ಪೂರ್ವದಲ್ಲಿದ್ದ ಸ್ವಾತಂತ್ರವೇ ಈಗಲೂ ಇದೆ. ಇನ್ನೇ ಒಪ್ಪಂದದ ಮುಖ್ಯಾಂಶಗಳು—

ಆಂತರಿಕ ಶಾಂತಿ-ಜವಾಬ್ದಾರಿ ಸರ್ಕಾರ

ಸಂಸ್ಥಾನ ಶಾಖೆಯ ಮಂತ್ರಿಗಳಾದ ಸರ್ದಾರ ವಲ್ಲಭಭಾಯಿ ಪಟೇಲರು ಆಂತರಿಕ ಶಾಂತಿ ಮತ್ತು ಜವಾಬ್ದಾರಿ ಸರ್ಕಾರದ ಕಡೆ ಹೊರಳಿ ಹೈದರಾಬಾದ ಸರ್ಕಾರವು ಇದಕ್ಕೆ ಮಾದರಿಯಾಗಬೇಕೆಂದು ಬಯಸಿರುವರು. ಆದರೆ ಈ ವಿಷಯದಲ್ಲಿ ಹೆಚ್ಚಿನ ಆಶೆಯಿಲ್ಲ. ಏತಕ್ಕೆಂದರೆ ಇತ್ತೆಹಾದುಲ್ ಮುಸ್ಲಿಮೀನ್ ಎಂಬ ಮುಸಲ್ಮಾನರ ಸಂಸ್ಥೆಯು ಮುಸಲ್ಮಾನ ಜನರನ್ನು ಸಶಸ್ತ್ರರನ್ನಾಗಿ ಮಾಡಿ ಹಿಂದೂಗಳ ಕೊಲೆ, ಸುಲಿಗೆ ಅತ್ಯಾಚಾರಗಳನ್ನು ಮಾಡುವದರಲ್ಲಿ ತೊಡಗಿದೆ. ನಿಜಾಮರು ತಮ್ಮ ಸಾರ್ವಭೌಮತ್ವನನ್ನು ಎಲ್ಲರೂ ಒಪ್ಪಬೇಕೆಂದು ಹಟಹಿಡಿದು ಪ್ರಜೆಗಳ ಆಶಾಕಾಂಕ್ಷೆಗಳನ್ನೆಲ್ಲಾ ಮೂಲೆಗೊತ್ತಿರುವರು. ತಾವು ಈಗ ರಚಿಸುವ ಸರ್ಕಾರದಲ್ಲಿ ಇತ್ತೆಹಾದುಲ್ ಸಂಸ್ಥೆಯ 4, ನಿಜಾಮರ ನಾಮಕರಣ ಸದಸ್ಯರು 4, ಕಾಂಗ್ರೆಸ್ 3, ಮತ್ತು ಹರಿಜನ 1, ಈ ಪ್ರಕಾರ ಪ್ರಾತಿನಿಧ್ಯವನ್ನು ಕೊಟ್ಟಿರುವರು. ಹೈದರಾಬಾದಿನ ಪ್ರಜೆಗಳಲ್ಲಿ ಶೇಕಡ 12, ಮುಸಲ್ಮಾನರಿದ್ದು ಹಿಂದೂಗಳಿಗೆ ಪರಮ ಅನ್ಯಾಯವಾಗುವ ಈ ನಡುಗಾಲ ಸರ್ಕಾರವನ್ನು ಅಷ್ಟಗೌರವವಿರುವ ಯಾವ ಹಿಂದುವೂ ಒಪ್ಪಲಾರನು 1 ಕೋಟಿ 50 ಲಕ್ಷ ಹಿಂದೂಗಳು, 25 ಲಕ್ಷ ಮುಸಲ್ಮಾನರು ಮಾತ್ರವಿರುವ ಹೈದರಾಬಾದದಲ್ಲಿ ಇಂಥಾ ರಾಜ್ಯಭಾರ ಕ್ರಮವೆಂದರೆ ಪ್ರಜಾರಾಜ್ಯತತ್ವದ ಸೂತ್ರಗಳಿಗೆ ತಿಲಾಂಜಲಿಯೇ ಸರಿ, ಈ ಕಾರಣ ಸಂಸ್ಥಾನ ಕಾಂಗ್ರೆಸ್ ಮತ್ತು ಹೈದರಾಬಾದ ಸರ್ಕಾರದಲ್ಲಿ ಒಪ್ಪಂದವಾಗಲಿಲ್ಲವೆಂದರೆ ಅದೇನೂ ಆಶ್ಚರ್ಯವಲ್ಲ.

ಸ್ವಾತಂತ್ರ್ಯೋದ್ಯಮ-ಭಾರತೀಯರ ಕರ್ತವ್ಯ

ಇನ್ನು ಹೈದರಾಬಾದ ಸ್ವಾತಂತ್ರ್ಯೋದ್ಯಮವು ಭರದಿಂದ ಸಾಗಬೇಕು. ಅದಕ್ಕೆ ಎಲ್ಲಾಭಾರತೀಯರು ತನುಮನ ಧನಗಳಿಂದ ಸಹಾಯ ಮಾಡಬೇಕು. ಸ್ವತಂತ್ರ ಭಾರತದ ಹೊಟ್ಟೆಯಲ್ಲಿ ಗುಲಾಮಿ ಹೈದರಾಬಾದು ಇರಲು ಸಾಧ್ಯನೇ ಇಲ್ಲ. ಹೈದ

ಇತ್ತೆಹಾದ ಮುಗಲ್ಮಾನರು ನಿಜಾಮರ ನಿರಂಕುಶತ್ವವನ್ನು ಕಾಪಾಡಲು ಹಿಂದೂಗಳನ್ನು ವಿಚಿತ್ರ ಹಿಂಸೆಗೆ ಗುರಿಮಾಡುವರೆಂಬುದರಲ್ಲಿ ಸಂಶಯವೇಇಲ್ಲ. ಈಗಾಗಲೇ ಹಿಂದುಗಳ ಮಾನ, ಪ್ರಾಣ, ಆಸ್ತಿಗಳ ಕ್ಷೇಮವಿಲ್ಲ. ಹಳ್ಳಿಯ ಭಾಗಗಳಲ್ಲಿ ಅವರ್ಣನೀಯವಾದ ಹಿಂಸೆಯು ಸಾಗಿದೆ ಈ ಮುಖ್ಯಸಂಸ್ಥಾನದಲ್ಲಿ ಬಹು ಸಂಖ್ಯಾಕ ಪಂಗಡದವರ ವಿಚಿತ್ರ ಹಿಂಸೆಯನ್ನು ನೋಡುತ್ತ ಸ್ತಬ್ಧವಾಗಿರಲು ಭಾತರ ಸರ್ಕಾರಕ್ಕೆ ಇನ್ನು ಮೇಲೆ ಸಲ್ಲಲಾರದು. ಸ್ವಾತಂತ್ರ್ಯವು ಮರದಿಂದ ಹಣ್ಣಿನೋಪಾದಿಯಲ್ಲಿ ಕಳಚಿ ಬೀಳಲಾರದು. ಇದಕ್ಕೆ ಅಪಾರತ್ಯಾಗವು ಆವಶ್ಯಕ. ರಕ್ತದ ಕಾಲುವೆಯೂ ಹರಿಯಬೇಕಾಗುವ ಸಂದರ್ಭವಿದಗೀತು ಜವಾಬ್ದಾರಿ ಸರ್ಕಾರವು ಸ್ಥಾಪಿಸಲ್ಪಡಲಿ ಎಂದು ಆಶಿಸುತ್ತೇವೆ.

ಪತ್ರವ್ಯವಹಾರ—

ಕೂಡ್ಲಿಗಿ ತಾಲೂಕು ತಹಶೀಲ್ದಾರರ ತಿರಸ್ಕಾರ

೨೫-೧೧-೪೭ ನೆಯ ದಿನಾಂಕ ತಹಶೀಲ್ದಾರರ ತಾಕೀತಿನ ಪ್ರಕಾರಕ್ಕೆ ಕೂಡ್ಲಿಗಿ ತಾಲೂಕು ಆಹಾರ ಸಮಿತಿಯ ಸದಸ್ಯರು ದೂರ ಪ್ರದೇಶಗಳಿಂದ ಬಂದು ಸಾಯಂಕಾಲದವರೆಗೆ ಕಾದರು. ಸಾಯಂಕಾಲ ಆರು ಗಂಟೆಯ ಮೇಲೆ ದಯಮಾಡಿಸಿ "ನನಗೆ ಇಂದು ಬಹಳ ಕೆಲಸವಿದೆ. ನೀವು ಬಂದಂತೆ ಬರೆದುಕೊಳ್ಳುತ್ತೇನೆ" ಎಂದರು. ಸಮಾವೇಶ ಜರುಗಿಸದಿದ್ರೆ ರಾಜೀನಾಮೆ ಸ್ವೀಕರಿಸಬೇಕೆಂದು ಸದಸ್ಯರು ಹೇಳಿದಾಗ ಗ್ರಾಮ ಸಮಿತಿಗಳನ್ನು ತೆಗೆದುಹಾಕುವುದಾಗಿಯೂ, ತಾಲೂಕು ಜಿಲ್ಲಾ ಸಮಿತಿಗಳು ಮಾತ್ರ ಅಸ್ತಿತ್ವದಲ್ಲಿ ಇರಬಹುದೆಂದೂ ತಹಶೀಲ್ದಾರರು ಉತ್ತರವಿತ್ತರು. ತ್ಯಾಜ್ಯ ಪತ್ರಗಳನ್ನು ಸ್ವೀಕರಿಸಲು ಕೂಡ ಸಮಯವಿಲ್ಲೆಂದೂ, ಬೇಕಿದ್ದರೆ ಪೋಸ್ಟ ಮೂಲಕ ಕಳುಹಿಸಬಹುದೆಂದೂ ಹೇಳಿದರು. ಈ ತಿರಸ್ಕೃತ ಸದಸ್ಯರು ತಮ್ಮ ರಾಜೀನಾಮೆಗಳನ್ನು ಟಪಾಲು ಮೂಲಕ ಕಳುಹಿಸಿ ಈ ವಿಷಯವನ್ನು ತಹಶೀಲ್ದಾರ್, ಕಲೆಕ್ಟರ, ಶಾಸನಸಭ್ಯರಾದ ಶ್ರೀ ಅನಂತಾಚಾರ್ಯರಿಗೆ ತಿಳಿಸಿದ್ದಾರೆ.

ಕಳೆದ ವಂದು ವರ್ಷದಿಂದ ಎಷ್ಟುಬೇಡಿದರೂ, ತೀರ್ಮಾನಗಳನ್ನು ಕಳುಹಿಸಿದರೂ, ನಮ್ಮ ಬೇಡಿಕೆಗಳು ಮಾನ್ಯವಾಗಲಿಲ್ಲ, ಈ ಆಹಾರಸಮಿತಿಗಳಿಂದ ಜನತೆಗೆ ಉಪಯೋಗವಿಲ್ಲೆಂಬುದು ಸಿದ್ಧವಾಗಿದೆ.

ಬಿ. ಯಂ. ಅಜ್ಜಯ್ಯ

ತಾಲೂಕು ಪ್ರಡಾ ಕಮಿಟಿ ಮೆಂಬರ್-ಬೆಣ್ಣಿಕಲ್ಲು.

[NOTE:- If what is stated above is correct, we think the members deserved courteous and better treatment. The concerned Tahasildar would have done well if he had explained the policy of the Govt with particular reference to the snags & flaws, that creep in unknowingly or knowingly with the connivance of only the corrupt and inefficient subordinates of the Civil Supplies Dept.

Editor-Nava Bharat.

ಬಟ್ಟೆಯು ಹೊಸ ಲೈಸನ್ಸುದಾರರು

ಬಳ್ಳಾರಿ ಜಿಲ್ಲೆಯ ಬಟ್ಟೆ ಅಧಿಕಾರಿಗಳು ಹೊಸದಾಗಿ ಹೆಚ್ಚು ಲೈಸನ್ಸದಾರರನ್ನು ಮಾಡಿ ಬಟ್ಟೆ ಅಭಾವದಲ್ಲಿ ಹಳಬರಿಗೆ ಲಾಭವಿಲ್ಲದಂತೆ ಮಾಡಿರುವುದೂ ಮತ್ತು ಇದು ಸರ್ಕಾರದ ನೀತಿಗೆ ವಿರುದ್ಧವಿರುವುದೂ ಎಂಬ ಕಾರಣಗಳಿಂದಲೋ ಏನೋ ಎಂಬಂತೆ ಅವರ ಲೈಸನ್ಸಗಳನ್ನು ರದ್ದುಪಡಿಸಲು ಆಜ್ಞೆಯು ಬಂದಿತ್ತು. ಆದರೆ ಅದನ್ನು ಜಾರಿಯಲ್ಲಿತರಬಾರದೆಂದು (Stay order) ಮತ್ತೊಂದು ಆಜ್ಞೆಯು ಬಂದಿದೆ

ಕಾಶ್ಮೀರ ರಣರಂಗದಲ್ಲಿ ಕೋಟ್ಲ ಭಾಗದಿಂದ ಭಾರತ ಸೈನೀಕರು ಹಿಂದಿರುಗಿ ಬಂದಿದ್ದಾರೆ ನಗರವು ಉದಯಿಸುತ್ತಿರುವದಂತೆ.

ತಂಬ್ರಹಳ್ಳಿ ರೈತರ ಪರಿಷತ್ತು.

22 ನೆಯ ದಿನಾಂಕ ಹಂಸಾಪಟ್ಟಣದಲ್ಲಿ ಈ ಭಾಗದ ರೈತರ ಪರಿಷತ್ತು ಶ್ರೀ ಅನಂತಾಚಾರ್ಯರ ಅಧ್ಯಕ್ಷತೆಯಲ್ಲಿ ಯಶಶ್ವಿಯಾಗಿ ಜರುಗಿತು. ಶ್ರೀ ಲಕ್ಷ್ಮಣ ಮೂರ್ತಿಯವರು ಸಭೆಯ ಉದ್ಘಾಟನೆಮಾಡುತ್ತಾ ಕಂಟ್ರೋಲಿನ ಕಷ್ಟ ನಿಷ್ಠೂರಗಳನ್ನು ತಿಳಿಯ ಹೇಳಿ ಸೂಕ್ತ ತೀರ್ಮಾನಕ್ಕೆ ಬರಲು, ಯಂತ್ರ ಅಧುನಿಕ ಪದ್ಧತಿಗಳಿಂದ ವ್ಯವಸಾಯ ಸುಧಾರಣೆ ಫಲವತ್ತಾದ ಗೊಬ್ಬರದ ಉಪಯೋಗ ಇವುಗಳ ಅನುಕರಣೆಮಾಡಲು ರೈತರನ್ನು ಕೋರಿದರು ಸ್ವಾಗತಾಧ್ಯಕ್ಷರಾದ ಶ್ರೀ ಬಾ. ಚನ್ನಬಸವನಗೌಡರು ಸದ್ಯದ ರೈತರ ಪರಿಸ್ಥಿತಿಯನ್ನರುಹಿದ ಮೇಲೆ ಅ. ತಿರುಮಲರಾಯರು ಮರಿಸ್ವಾಮಿ, ಸಿದ್ದಲಿಂಗಪ್ಪನವರು ಭಾಷಣಮಾಡಿದರು ಸಭಾ ಕಾರ್ಯಕಲಾಪಗಳಲ್ಲಿ ಬೆಲ್ಲದ ಚನ್ನಪ್ಪ ಆರ್. ವಿ ದೇಶಾಯಿವಗೈರೆ ಅನೇಕಮಿತ್ರರು ಭಾಗವಹಿಸಿದರು ಶಿವದೇಶಾಯಿಯವರು ಕೆಳಗಿನ ತೀರ್ಮಾನಗಳನ್ನು ತಂದರು. ಅವು ಸರ್ವಾನುಮತದಿಂದ ಸ್ವೀಕೃತವಾದವು.

೧) ನಿಯಂತ್ರಣಗಳಿಂದ ಲಂಚಗೂಳಿತನ ಕಳ್ಳ ಪೇಟೆ ಹೆಚ್ಚುವಕಾರಣ ಎಲ್ಲಾ ನಿಯಂತ್ರಣಗಳು ರದ್ದಾಗಬೇಕು.

೨) ಕರ್ನಾಟಕ ಪ್ರಾಂತರಚನೆಯು ಅತಿಶೀಘ್ರದಲ್ಲಾಗಬೇಕು. ಶ್ರೀ ರಾಜಾಜಿ ಮುರಾರಜಿ ದೇಶಾಯಿಯವರ ಅಭಿಪ್ರಾಯ ಖಂಡನೀಯ.

೩) ಮಾರ್ಗಸೌಕರ್ಯ, ಕೆರೆ ಬಾವಿಗಳ ರಿಪೇರಿ ವೈದ್ಯಕೀಯ ಸೌಕರ್ಯ, ವ್ಯವಸಾಯ ಉಪಕರಣಗಳ ಪೂರೈಕೆ ಎಲ್ಲಾ ಹಳ್ಳಿಗಳಲ್ಲಾಗಬೇಕು.

೪) ಹೈದರಾಬಾದ ಗಡಿಹಳ್ಳಿಗಳಲ್ಲಿ ಸಶಸ್ತ್ರ ಪೋಲೀಸ್ ಕಾವಲುಬೇಕು.

೫) ಚಿಮ್ಮನಹಳ್ಳಿ ಕೋಗಳಿಯ ಹಗರಿ ಅಣೆಕಟ್ಟಾಗಬೇಕು.

ಎಲ್ಲಾತೀರ್ಮಾನಗಳನ್ನು ಸಂಬಂಧಿಸಿದ ಅಧಿಕಾರಿಗಳಿಗೆ ಕಳುಹಿಸುವದಾಯಿತು.

ಪ್ರಯಾಣ ಬಸ್ಸುಗಳಲ್ಲಿ ಪ್ರಥಮಸ್ಥಾನ ಪ್ರಭುತ್ವ ಪ್ರಕಟನೆ.

ಪೋಲೀಸ್ ಮತ್ತು ಇತರ ಸರ್ಕಾರಿ ನೌಕರರು ಪ್ರಯಾಣ ಬಸ್ಸುಗಳಲ್ಲಿ ಫ್ರಂಟು ಸೀಟು ರಿಸರ್ವಮಾಡಿಸಿಯೂ, ಕೆಲ ಸಂದರ್ಭಗಳಲ್ಲಿ ಪ್ರಯಾಣೀಕರನ್ನಿಳಿಸಿ ತಾವು ಆ ಸ್ಥಳವನ್ನು ಆಕ್ರಮಿಸುವ ಪದ್ಧತಿಯೂ ಇನ್ನೂ ಜಾರಿಯಲ್ಲಿದೆ. ಮದ್ರಾಸ್ ಮೋಟಾರ ವೆಹಿಕಲ್ಸ ಏಕ್ಟ ಪ್ರಕಾರಕ್ಕೆ ಸರ್ಕಾರಿ ಉದ್ಯೋಗಸ್ಥರು ಹೀಗೆ ವರ್ತಿಸಬಾರದು. ಬಸ್ಸು ಕಂಡಕ್ಟರಾಗಲಿ ಡ್ರೈವರ್ ಆಗಲಿ ಈ ವಿಷಯದಲ್ಲಿ ಪ್ರಯಾಣೀಕರೊಡನೆ ಅವಮರ್ಯಾದೆಯಿಂದ ವರ್ತಿಸಿದರೆ ಸಂಬಂಧಿಸಿದವರು ಮೋಟಾರ್ ಟ್ರಾನ್ಸಪೋರ್ಟ ಆಫೀಸರವರಿಗೆ ವರದಿಮಾಡಿದಲ್ಲಿ ಅವರ ಮೇಲೆ ತಕ್ಕಚರ್ಯೆ ತೆಗೆದುಕೊಳ್ಳಲಾಗುವುದು.

ಪಾಕಿಸ್ತಾನದಲ್ಲಿ ಹರಿಜನರ ಗೋಳು.

ಪಾಕಿಸ್ತಾನದಲ್ಲಿಯ ಹರಿಜನರು ಹಿಂದುಸ್ತಾನಕ್ಕೆ ಬಂದು ನೆಲೆಸಬೇಕೆಂದು ಉಪದೇಶಿಸುವ ಡಾ॥ ಅಂಬೇಡಕರರ ಇತ್ತೀಚಿನ ಹೇಳಿಕೆಯನ್ನು ಸ್ವಾಗತಿಸುತ್ತ ಅ. ಭಾ. ಹಿಂದುಳಿದ ವರ್ಗದ ಸಂಘದ ಉಪಾಧ್ಯಕ್ಷರಾದ ಶ್ರೀ ಕಜರೋಲ್ಕರ ಅವರು "ದೇಶದ ವಿಭಜನೆಯ ಅನರ್ಥವನ್ನು ಈಗ ಅರಿಯುತ್ತಿರುವ ಡಾ॥ ಅಂಬೇಡಕರರು ಪಾಕಿಸ್ತಾನದ ಪ್ರಚಾರಕರನ್ನು ವಿರೋಧಿಸುತ್ತಿದ್ದ ಕಾಂಗ್ರೆಸ್ಸನ್ನು ಈ ಮೊದಲು ಸಮರ್ಥಿಸಲಿಲ್ಲ. ಈಗವರು ಪಾಕಿಸ್ತಾನದ ಅನ್ನದಾತ ಮಿ. ಜಿನ್ನಾರವರ ವಚನಗಳು ಸುಳ್ಳು ಎಂಬುದನ್ನರಿತಿದ್ದಾರೆ. ಪಾಕಿಸ್ತಾನದಲ್ಲಿ ಅಧಿಕಾರ ಸ್ವೀಕರಿಸಿರುವ ಶ್ರೀ ಜೋಗೇಂದ್ರನಾಥ ಮಂಡಲರು ಪಾಕಿಸ್ತಾನದಲ್ಲಿ ಹರಿಜನರನ್ನು ದುರ್ಲಕ್ಷಿಸಲಾಗುತ್ತಿದೆಯೆಂದು ಹೇಳುತ್ತಿದ್ದಾರೆ. ಪಾಕಿಸ್ತಾನದಲ್ಲಿಯ ನಮ್ಮ ಬಂಧುಗಳ ಅಸ್ತಿತ್ವಕ್ಕೆ ಗಂಡಾಂತರವೊದಗಿದೆ. ಡಾ. ಅಂಬೇಡಕರರ ವಿನಂತಿಯು ಸಾರ್ಥಕವಾಗುವಂತೆ ನಾವೆಲ್ಲ ಪ್ರಯತ್ನಿಸಬೇಕಾದುದು ಅವಶ್ಯವಾಗಿದೆ." ಎಂದು ಹೇಳಿದರು.

ಇತ್ತೆಹಾದ—ಉಲ್—ಮುಸಲ್ಮೀನ್ ಸಂಸ್ಥೆಯ ಪರಿಚಯ.

ಈ ಸಂಸ್ಥೆಯು ಹೈದರಾಬಾದ ಸಂಸ್ಥಾನದಲ್ಲಿ ನಡೆಸಿದ ಕಟಾಟೋಪದ ಪರಿಚಯವು ಸರ್ವರಿಗಾಗಿದೆ. ಅದರ ಬಗ್ಗೆ ಹೆಚ್ಚಿನ ವಿವರಗಳು ಸಿಕ್ಕಿದ್ದು ಅವುಗಳು ನಮ್ಮ ವಾಚಕರಿಗೆ ಬೋಧಪ್ರದವಾಗುವವೆಂದು ತಿಳಿದು ಇಲ್ಲಿ ಕೊಡಲ್ಪಟ್ಟಿವೆ.

ಮಹಾತ್ಮಾ ಗಾಂಧಿಯವರ ನೇತೃತ್ವದಲ್ಲಿ ರಾಜಕೀಯ ಹೋರಾಟವು ಭರದಿಂದ ಸಾಗಲು ಆಗ ಮಾತ್ರ ಬ್ರಿಟಿಶರು ತಮ್ಮ ಹಿಂದುಸ್ಥಾನದ ಬಗ್ಗೆ ಬೆದರಿದರು. ಇಲ್ಲಿಯ ಪ್ರತಿಗಾಮೀ ಶಕ್ತಿಗಳನ್ನು ಎದುರು ನಿಲ್ಲಿಸಿ ಕಾಂಗ್ರೆಸ್ಸಿನ ಶಕ್ತಿಯನ್ನು ಕುಗ್ಗಿಸಲು ಅವರು ಹೆಣಗಿದರು. ಅದೇ ತರಹದ ಪ್ರಯತ್ನವು ಹೈದರಾಬಾದ ಸಂಸ್ಥಾನದಲ್ಲಿ ಕೂಡ ನಡೆಯಿತು.

೧೯೨೭ ನೇ ಇಸ್ವಿಯಲ್ಲಿ ಇತ್ತೆಹಾದ-ಉಲ್-ಮುಸಲ್ಮೀನ್ ಎಂಬ ಸಂಸ್ಥೆಯು ಅಲ್ಲಿ ಸ್ಥಾಪಿಸಲ್ಪಟ್ಟಿತು. ಹಿಂದುಸ್ಥಾನದಲ್ಲಿ ಕಾಂಗ್ರೆಸ್ಸಿನ ಶಕ್ತಿಯಲ್ಲಾಗುವ ಹೆಚ್ಚುಕಡಿಮೆಗಳ ಮೇಲೆ ಈ ಸಂಸ್ಥೆಯ ಕಾರ್ಯಕಲಾಪಗಳು ಅವಲಂಬಿಸಿರುತ್ತಿದ್ದವು.

೧೯೩೪ ಇಸ್ವಿಯನಂತರ ಕಾಂಗ್ರೆಸ್ಸಿನ ಶಕ್ತಿಯು ಹೆಚ್ಚಾಗುವುದನ್ನು ಕಂಡು ಇತ್ತೆಹಾದ ಉಲ್ ಸಂಸ್ಥೆಯು ಹೈದರಾಬಾದ ಸಂಸ್ಥಾನದ ತುಂಬ ಮುಸಲ್ಮಾನರಲ್ಲಿ ಜಾತೀಯತೆಯ ವಿಷವನ್ನು ಭರದಿಂದ ತುಂಬ ಹತ್ತಿತು.

ಸಂಸ್ಥಾನದ ಸಹಾಯವು ಇದಕ್ಕೆ ಬಹಿರಂಗವಾಗಿಯೇ ಸಿಗುತ್ತಿತ್ತು. ಮುಖ್ಯ ಮುಖ್ಯ ಅಧಿಕಾರಿಗಳೇ ಇದಕ್ಕೆ ಸಹಾಯ ಮಾಡುತ್ತಿದ್ದುದರಿಂದ ಇವರ ವಿರುದ್ಧ ಯಾರೂ ಧ್ವನಿಯನ್ನೆತ್ತುತ್ತಿರಲಿಲ್ಲ

ಉಳಿದ ಸಂಸ್ಥೆಗಳ, ವಿಶೇಷತಃ ಕಾಂಗ್ರೆಸ್ಸಿನ ಶಕ್ತಿಯು ಸಂಸ್ಥಾನದಲ್ಲಿ ಬೆಳೆಯುವುದಂತೆ ನೋಡುವ ಕಾರ್ಯಕ್ರಮವು ಬಹು ಜಾಗರೂಕತೆಯಿಂದ ಸಾಗಿಸಲ್ಪಟ್ಟಿತು.

ಜಾತೀಯತೆಯ ಹುಚ್ಚಿನೊಡನೆ ಬೆಳೆಸಲ್ಪಟ್ಟ ಈ ಸಂಸ್ಥೆಯ ಜನರಲ್ಲಿ ಅರ್ಧಾತ್ ಸಂಸ್ಥಾನದ ಸರ್ವ ಮುಸಲ್ಮಾನರಲ್ಲಿ, ಅಲ್ಲಿಯ ಪ್ರತಿಯೊಬ್ಬ ಮುಸಲ್ಮಾನನೂ ಸಂಸ್ಥಾನದ ಮೇಲೆ ಒಡೆತನವುಳ್ಳವನೆಂಬ ಭಾವನೆಯು ಹುಟ್ಟಿಸಲ್ಪಟ್ಟಿತು. ಅಲ್ಲಿಯ ಪ್ರತಿಯೊಬ್ಬ ಮುಸಲ್ಮಾನನು ಇಂದು ಇದೇ ಭಾವನೆಯಿಂದ ಎದೆಯುಬ್ಬಿಸಿಕೊಂಡು ಓಡಾಡುತ್ತಾನೆ. ಮತ್ತೊಂದು ಧರ್ಮದ ಮನುಷ್ಯರೆಂದರೆ ಕಃಪದಾರ್ಥವೆಂದು ಅವನ ಅಭಿಪ್ರಾಯವಿದೆ.

ನಿಜಾಮ ಸಾಹೇಬರ ರಾಜ್ಯದಲ್ಲಿ ನಡೆದುದಿಲ್ಲವೂ ಶ್ರೇಷ್ಠತರಗತಿಯ ಘಟನೆಯೆಂಬ ಭಾವನೆಯನ್ನು ಈ ಸಂಸ್ಥೆಯ ಜನರ ಮನಸ್ಸಿನಲ್ಲಿ ಬಿತ್ತಲಾಗಿದೆ. ಆದ್ದರಿಂದ ಇವರು ಅಲ್ಲಿಯ ಇಂದಿನ ರಾಜ್ಯವ್ಯವಸ್ಥೆಯಲ್ಲಿ ಯಾವ ವ್ಯತ್ಯಾಸವನ್ನೂ ಮಾಡಲು ಸಿದ್ಧರಿಲ್ಲದವರಾಗಿದ್ದಾರೆ

ಇತ್ತೆಹಾದ-ಉಲ್-ಮುಸಲ್ಮೀನ್ ಸಂಸ್ಥೆಯ ಉದ್ದೇಶಗಳು ಅಥವಾ ಬೇಡಿಕೆಗಳು ಈ ರೀತಿಯಾಗಿವೆ– ಹೈದರಾಬಾದದಲ್ಲಿ ರಾಜಸಿರಲೇ ಬೇಕು. ಮತ್ತು ಆ ಅಧಿಕಾರವು ಜಾಹಿವಂಶಜರವರಿಗೇ ಸಲ್ಲಬೇಕು. ಹೈದರಾಬಾದದ ರಾಜ್ಯಘಟನೆಯಲ್ಲಿ ಯಾವುದೇ ತಿದ್ದುಪಡಿಯನ್ನು ಮಾಡುವುದು ಅನಿವಾರ್ಯವಾದರೆ, ಅದರಿಂದ ಅಲ್ಲಿಯ ಮುಸಲ್ಮಾನರ ಪಾರಂಪರಿಕ ಮತ್ತು ರಾಜಕೀಯ ಅಧಿಕಾರಗಳಿಗೆ ಭಂಗ ಬರಕೂಡದು. ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಲ್ಲಿ ಮತ್ತು ಶಾಸನಮಂಡಲಗಳಲ್ಲಿ ಮುಸಲ್ಮಾನರ ಬಹುಮತವಿರಬೇಕು. ಮುಸಲ್ಮಾನರಿಗಾಗಿ ವಿಭಕ್ತ ಮತದಾರ ಸಂಘಗಳಿರಬೇಕು. ಸಂಸ್ಥಾನದ ಸರಕಾರೀ ಭಾಷೆಯು ಉರ್ದು ಆಗಿರಬೇಕು. ಸಂಸ್ಥಾನದ ಸರಕಾರೀ ಉದ್ಯೋಗಗಳ [illegible]ನಗಳಿಗೂ ಅಲ್ಲಿಯ ಮುಸಲ್ಮಾನರಿಗೂ ರಾಜಕೀ

ಯ ಮತ್ತು ಸಾಂಸ್ಕೃತಿಕ ಸಂಬಂಧವಿರುವದರಿಂದ ಅವುಗಳನ್ನು ಜನಸಂಖ್ಯೆಯ ಪ್ರಮಾಣದ ಮೇಲೆ ಹಂಚುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಸಂಸ್ಥಾನದ ಧಾರ್ಮಿಕ ವಿಭಾಗವು ಮೊದಲಿನಂತೆಯೇ ಕಾರ್ಯ ಮಾಡಬೇಕು. ಮುಸಲ್ಮಾನರ ಧರ್ಮ ರಕ್ಷಣೆಗಾಗಿ ನಿಲ್ಲಿಸಲ್ಪಡುವ ಅವರ ಸಂಸ್ಥೆಗೆ ಸರಕಾರೀ ಮಾನ್ಯತೆ ಯಿರಬೇಕು. ವ್ಯಾಪಾರ, ಉದ್ಯೋಗ ಮತ್ತು ಒಕ್ಕ್ಲುತನಗಳಲ್ಲಿ ಮುಸಲ್ಮಾನರಿಗೆ ಸಾಕಷ್ಟು ಪ್ರಾತಿನಿಧ್ಯ ವಿರಬೇಕು.

ಪ್ರತ್ಯಕ್ಷ ನಿಜಾಮರು ಮತ್ತು ಅವರ ಸರಕಾರದ ವರು ಈ ಸಂಸ್ಥೆಯನ್ನು ಪ್ರೀತಿಯ ಕೂಸಿನಂತೆ ಬೆಳೆಸಿ ಬಿಟ್ಟಿದ್ದಾರೆ. ಆದ್ದರಿಂದ ಈ ಸಂಸ್ಥೆಯು ಈಗ ನಿಜಾ ಮರ ತಲೆಯೇರಿ ಕುಳಿತುಬಿಟ್ಟಿದೆ. ಇಂದು ಹೈದರಾ ಬಾದ ಸಂಸ್ಥಾನದಲ್ಲಿ ನಿಜಾಮರ ರಾಜ್ಯವಿರದೆ ಈ ಸಂಸ್ಥೆಯ ರಾಜ್ಯವೇ ಇದೆಯೆಂದು ಹೇಳಿದರೆ ಸಲ್ಲು ವಂತಿದೆ.

ತಮಗೆ ಕೊಟ್ಟ ಸಲಿಗೆಯ ಮೂಲಕವಾಗಿಯೇ ಈ ಸಂಸ್ಥೆಯವರು ಹಿಂದಕ್ಕೆ ಛತ್ತಾರಿ ನವಾಬರ ಮನೆ ಯನ್ನು ಮುತ್ತಿ ಸುಟ್ಟು ಮೊದಲಾದದ್ದನ್ನು ಮಾಡಿ ದರು. ತಮ್ಮ ಮನಸ್ಸಿಗೆ ಬಾರದ್ದನ್ನು ಕಾರ್ಯಕಾರೀ ಮಂಡಲದವರು ಹಿಂದಕ್ಕೆ ಮಾಡಿದಾಗ್ಗೆ ಇವರು ಅವರ ಪ್ರತಿಮೆಯ ಮೆರವಣಿಗೆಯನ್ನು ಕತ್ತೆ ಯ ಮೇಲೆ ಕೂಡಿಸಿ ತೆಗೆದಿದ್ದರು. ಆಗ ಜಿನ್ನಾರವರು ಅಲ್ಲಿಗೆ ಹೋಗಿ, "ನಿಮಗೆ ರಾಜ್ಯಘಟನೆಯಲ್ಲಿ ಬಹು ಮತ ಸಿಗುವಂತೆ ಮಾಡಲಾಗುವದೆಂ"ಬ ಆಶ್ವಾಸನೆ ಯನ್ನು ಇವರಿಗೆ ಕೊಡಿಸಿದ ನಂತರ ಇವರು ಸುಮ್ಮ ನಾದರು. ಹಿಂದುಸ್ಥಾನ ಸರಕಾರದೊಡನೆ ನಿಜಾಮ ಸರಕಾರವು ಮಾಡಿಕೊಳ್ಳಬೇಕಾದ ಒಪ್ಪಂದದ ಮಾತು ಗಳನ್ನು ಮೊನ್ನೆ ಹೇಗೆ ತಿದ್ದಬೇಕಾಯಿತು, ಎಂಬ ಸಂಗತಿಯು ತೀರ ಹೊಸದೇ ಇದೆ ಇವರ ಹಾವಳಿ ಯನ್ನು ತಡೆಯಲಾರದೆ ಹಿಂದಿನ ಮುಖ್ಯ ಮಂತ್ರಿ ಗಳೂ ಮತ್ತು ನಿಜಾಮರ ಸಲಹೆಗಾರರೂ ಸಂಸ್ಥಾನ ದಿಂದ ಕಾಲುಕಿತ್ತಿದರು.

ಶಿವನಿಂದ ಸೃಷ್ಟಿಸಲ್ಪಟ್ಟ ಭಸ್ಮಾಸುರನು ಶಿವನಿಗೇ ತಿರುಗಿ ನಿಲ್ಲಲು, ಶಿವನು ವಿಷ್ಣುವಿಗೆ ಮೊರೆ ಹೊಕ್ಕು ಆ ರಾಕ್ಷಸನನ್ನು ಸಂಹಾರ ಮಾಡಿಸಬೇಕಾ ಯಿತು. ಅದೇ ಪ್ರಕಾರ ಈ ಇತ್ತಿಹಾದ-ಉಲ್-ಮುಸಲ್ಮಾನ ಸಂಸ್ಥೆಯು ನಿಜಾಮರಿಂದ ಸೃಷ್ಟಿಸಲ್ಪಟ್ಟ ಭಸ್ಮಾಸುರ ಆಗಿದ್ದು ಅವರಿಗೇ ಈಗ ತಿರುಗಿ ನಿಂತಿದೆ. ಅವರ ಮುಂದೆ ನಿಜಾಮರೂ ಹತಾಶರಾಗಿದ್ದಾರೆ. ಅವರು, ಶಿವನು ವಿಷ್ಣುವನ್ನು ಕರೆದಂತೆ ಕೇಂದ್ರ ಸರ ಕಾರವನ್ನು ಮೊಹೋಗುಸದೊಂದೇ ಉಳಿದಿದೆ.

ಆ ಕಾಲವೂ ಬಹಳ ದೂರವಿಲ್ಲ. ಈಗ ಈ ಸಂಸ್ಥೆಯ ಅಧ್ಯಕ್ಷರಾದ ರಜವಿಯವರು ಸರದಾರ ಪಟೇಲರ ಮುಂದೆ ದಿಲ್ಲಿಗೆ ಹೋಗಿ ನಿಂತಿದ್ದಾರೆ. ಅಲ್ಲಿ ಅವರಿಗೆ ಜಗತ್ತಿನ ಜ್ಞಾನವಾದರೂ ಆಗಬಹುದಾಗಿದೆ ಇಲ್ಲದಿದ್ದರೆ ವಿಷ್ಣುವೇ ನಡುವೆ ಬಿದ್ದು ಈ ಭಸ್ಮಾಸುರ ನನ್ನು ಪರಾಮರಿಸಬೇಕಾದೀತೆಂದು ತೋರುತ್ತದೆ. ಅಂತೂ ತಾವೇ ಬಿತ್ತಿದ ಮುಳ್ಳು ತಮಗೆ ಹೇಗೆ ಮೂಲವಾಗುತ್ತದೆ ಎಂಬುದಕ್ಕೆ ಈ ಮಾತು ಉತ್ತಮ ವಾದ ಸಾಕ್ಷಿಯಾಗಿದೆ. [ಜಯಹಿಂದ್]

ಸೈನಿಕ ಶಿಕ್ಷಣ

ದೇಶರಕ್ಷಣೆಗೆ ರಾಷ್ಟ್ರೀಯ ದಳವು ಅಗತ್ಯವೆಂ ದೂ ಸ್ತ್ರೀಪುರುಷರಿಗೆಲ್ಲ ಸೈನಿಕ ಶಿಕ್ಷಣಕೊಡಬೇಕೆಂ ದೂ ಕೇಂದ್ರ ಶಾಸನಸಭೆಯಲ್ಲಿ ಡಾಕ್ಟರ್ ಪಟ್ಟಾಭಿ ಸೀತಾರಾಮಯ್ಯನವರು ಒಂದು ತೀರ್ಮಾನವನ್ನು ತಂದಿದ್ದರು. ಈಗಿರುವ ಸೈನ್ಯದ ಜೊತೆಗ ಒಂದು ದೇಶೀಯ ಸೈನ್ಯವನ್ನು ಕಟ್ಟುವ ಯೋ ಜ ನೆ ಯು ಕಾರ್ಯಗತವಾಗುತ್ತಲಿದೆಯೆಂದು ರಕ್ಷಣ ಮಂತ್ರಿ ಬಲದೇವಸಿಂಗರು ಹೇಳಿದ ಕಾರಣ ಪಟ್ಟಾಭಿಯವರ ತೀರ್ಮಾನವು ಹಿಂದೆಗೆದುಕೊಳ್ಳಲ್ಪಟ್ಟಿತು.

ಮೈಸೂರಿನ ರಾಷ್ಟ್ರೀಯ ಸರ್ಕಾರವು ೧೯೪೨ ಕ್ರಾಂತಿಯಲ್ಲಿ ಭಾಗವಹಿಸಿದ್ದ ಕೆಲಸಗಾರರನ್ನು ಮತ್ತೆ ಉದ್ಯೋಗಗಳಿಗೆ ತೆಗೆದುಕೊಳ್ಳಲು ಆಜ್ಞೆ ಮಾಡಿದೆ.

ರಾಯದುರ್ಗ

ಪ್ರಾಂತೀಯ ಮತ್ತು ಜಿಲ್ಲೆಗೆ ಸಂಬಂಧಿಸಿದ ಬಟ್ಟೆನಿಯಂತ್ರಣಾಧಿಕಾರಿಗಳು ನವಂಬರ್ ೨೪ ನೆಯ ದಿನ ಇಲ್ಲಿಗೆ ಬಂದು ಕೈಮಗ್ಗದ ಬಟ್ಟೆಯು ಮೈಸೂರು ಕಡೆ ಹೋಗದ ಕಾರಣ ಫ್ರೀಮಾರ್ಕೆಟ್ ಇಲ್ಲದ ಕಾರಣ ಆದ ತೊಂದರೆಗಳನ್ನು ಇಲ್ಲಿಯ ನಿಯೋಗದಿಂದ ತಿಳಿದು ಕೊಂಡರು. ಶ್ರೀ ಪೊರಾಳು ಗಂಗಪ್ಪನವರು ವಿಶದೀಕರಿಸಲು ಅಸಮರ್ಥರಾದುದರಿಂದ ಡಿ. ಯನ್. ಮುಕುಂದಪ್ಪನವರು ಸೂಚಿಸಿದಂತೆ ಒಂದು ಸಮಿತಿಯೇರ್ಪಡಿಸಿ ಅದರಲ್ಲಿ ಇಬ್ಬರು ಕೂಲಿಕಾರರ ಪ್ರತಿನಿಧ್ಯವನ್ನು ಕೊಟ್ಟರು. ಮೈಸೂರು ಸಂಸ್ಥಾನದೊಳಗೆ ಒಂದು ವಾರದೊಳಗಾಗಿ ಬಟ್ಟೆನಿರ್ಯಾತಮಾಡಲು ಆಜ್ಞೆ ಕೊಡುವದಾಗಿ ತಿಳಿಸಲಾಯಿತು

ಕೊನೆಯ — ದೀಪಾವಳಿ

ಎಲ್ಲೆಲ್ಲಿಯು ದೀಪಮಾಲೆ। ಎನ್ನಮನೆಯೋ, ಕತ್ತಲೆ।
ಎನ್ನಮನವು, ಕತ್ತಲೆ। ಕತ್ತಲೆ ಎತ್ತೆತ್ತಲೆ ॥೫॥

ಮಗನು ನಡೆದನು ಬಹಳೆ ದೂರಕೆ ಅಭ್ಯಾಸದ ನೆಪದಲಿ।
ಸೊಸೆ ನಡೆದಳು ತಾಯವ್ವೂರಿಗೆ ದೀಪಾವಳಿ ಹಬ್ಬಕೆ ॥
ಯಾರು ಇಲ್ಲ, ಏನು ಇಲ್ಲದಾಯ್ತೆ, ಕೊನೆಯ ಗಳಿಗೆಗೆ।
ಅನ್ನ ನೀರು ಇಲ್ಲದಾಯ್ತೆ ಸಾಯುವಂಥ ಜೀವಿಗೆ ॥೧॥

ಬಿರುಸು ನುಡಿಗಳ ಬರೆಯಕೊಟ್ಟರು ನೊಂದ
ಹೃದಯದ ಮೇಲೆಯೇ।
ಕೊಂದರಹಮಾನದಲಿ, ಅಯ್ಯೋ ಬಂಧು ಜನಗಳು ಕೂಡಿಯೇ ॥
ಯಾರಿಗಾಗೀ ಹಾಳುಬಾಳು।
ಖತಕೀಪರಿ ಬಾಳ್ವುದು ॥೨॥

ಸಾವನಪ್ಪವೆ ಸಂತಸದಿ।
ಮೇಣ್ ಸಾವೆ ದುಃಖದ ಅಂತ್ಯವು ॥
ಕಾವು ನೋವುಗಳಿಲ್ಲ ಮರೆಯುವೆ।
ಸಿಗದೆ ಅಲ್ಲಿಯು ಶಾಂತಿಯು ॥೩॥

ಅರ್ಪಿಸಿಹೆ ಈ ಅಲ್ಪ ಜೀವಿಯ।
ಬಾಳಹಣತೆಯ ಬೆಳಕನು ॥
ಸೇರಿಸಿಹೆ ಅನಂತ ಜೆಳಕಲಿ।
ಇದುವೆ ಕೊನೆಯ ದೀಪಾವಳಿ ॥೪॥

[ಕನ್ನಡಿಗ-ಮದ್ರಾಸು]

ದೊಡ್ಡ ಹರಿವಾಣ:— ಆಹಾರ ಬಟ್ಟೆಗಳ ನಿಯಂತ್ರಣ ಹೋಗಬೇಕು. ಕರ್ನಾಟಕ ಪ್ರಾಂತ ನಿರ್ಮಾಣ ಕೂಡಲೇ ಕೈಗೊಳ್ಳಬೇಕು. ಇಡೀ ಬಳ್ಳಾರಿ ಜಿಲ್ಲೆಯನ್ನು ಎಲ್ಲಾ ಹಿತದೃಷ್ಟಿಗಳಿಂದ ಕನ್ನಡನಾಡಿಗೇ ಸೇರಿಸಬೇಕೆಂಬ ತೀರ್ಮಾನಗಳು 25 ನೆಯ ದಿನಾಂಕ ಶ್ರೀ ಈ. ಸಂಗನಬಸಯ್ಯನವರ ಅಧ್ಯಕ್ಷತೆಯಲ್ಲಿ ಕೂಡಿದ ಸಭೆಯಲ್ಲಿ ತೀರ್ಮಾನಿಸಲ್ಪಟ್ಟವು

ಹೊಸಪೇಟೆ:— ಶ್ರೀಮತ್ತಿಹಳ್ಳಿ ರಾಘವೇಂದ್ರರಾಯರು ಹುಬ್ಬಳ್ಳಿಯಲ್ಲಿ ನೆಲೆಸಲು ನಿಶ್ಚಯಿಸಿದ ಕಾರಣ 15 ನೆಯ ದಿನಾಂಕ ಅವರಿಗೆ ಅವರಸ್ನೇಹಿತರು, ಕಾಂಗ್ರೆಸ್ ಮಿತ್ರರು, ಶ್ರೀ ತಟ್ಟಿಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಸತ್ಕಾರಕೂಟವನ್ನೇರ್ಪಡಿಸಿದ್ದರು ಅವರ ಸೇವೆ, ಕಾಂಗ್ರೆಸ್ ಸಂಸ್ಥೆಗಾಗಿ ಅವರು ಮಾಡಿದ ತ್ಯಾಗವನ್ನು ಕುರಿತು ಶ್ರೀಗಳಾದ ತಿರುಮಲರಾವು, ಸಂತರ ರಾಮಚಂದ್ರರಾವು, ತಿರುಮಲಾಚಾರ್ಯ, ಅಂಬಣ್ಣ, ಲಕ್ಷ್ಮಣಮೂರ್ತಿ ಇವರು ಮಾತಾಡಿದರು. ಶ್ರೀಮತ್ತಿಹಳ್ಳಿಯವರು ಸೂಕ್ತ ಉತ್ತರವಿತ್ತು, ಸತ್ಕಾರಕ್ಕಾಗಿ ನಂದಿಸಿ ಮುಂದೆಯೂ ಸೇವೆಗೈಯುವದಾಗಿ ಆಶ್ವಾಸನವಿತ್ತರು.

ಕಾನಾಮಡುಗು:— ಕಾಳಿನ ನಿಯಂತ್ರಣದಿಂದ ರೈತರು ಕಷ್ಟಕ್ಕೊಳಗಾಗಿದ್ದಾರೆ. ಸ್ಕೋರಿನಲ್ಲಿ ಕಾಳುಗಳು ಕೊಡುತ್ತಲಿಲ್ಲ. ಈ ನಿಯಂತ್ರಣ ಹೋಗಬೇಕು ಕೆಲ ವರ್ಷಗಳಿಂದ ಅಧಿಕೃತವಾಗಿ ಬಟ್ಟೆಯನ್ನೇ ಹಂಚಿಲ್ಲ. ಇದರ ವಿತರಣೆಗೂ ಏರ್ಪಾಟಾಗಬೇಕು. ಎಂಬ ತೀರ್ಮಾನಗಳು ಬಾಪೂಜಿ ತರುಣ ಸಂಘದಾಶ್ರಯದ ರೈತರ ಸಭೆಯಲ್ಲಿ 24 ನೆಯ ದಿನಾಂಕ ಶ್ರೀ ಜಿ ತಿಪ್ಪೇರುದ್ರಪ್ಪನವರ ಅಧ್ಯಕ್ಷತೆಯಲ್ಲಿ ಸ್ವೀಕೃತವಾದವು.

ರೈತರಿಗೆ ಸೌಕರ್ಯ

ಆಹಾರ ಧಾನ್ಯಗಳನ್ನು ಬೆಳೆವ ರೈತರಿಗೆ ಬೀಜ, ಗೊಬ್ಬರ ವಗೈರೆ ಸೌಕರ್ಯವನ್ನು ತಾವು ಕೊಡಲಿರುವೆವೆಂದು ಮದ್ರಾಸ್ ಸರ್ಕಾರದ ಪ್ರಚಾರ ಮಾಡಿಸಿದೆ.

ಕರ್ನಾಟಕ ಏಕೀಕರಣ ೨೫ ಲಕ್ಷ ಕನ್ನಡಿಗರ ಮನವಿ ಮಹಾಸಮಿತಿಯ ಸೂಚನೆ.

ಹುಬ್ಬಳ್ಳಿಯ ಕರ್ನಾಟಕ ಏಕೀಕರಣ ಮಹಾಸಮಿತಿಯವರು ಈ ಸೂಚನೆಗಳನ್ನು ಕರ್ನಾಟಕದ ಸಮಸ್ತ ಜನತೆಗೆ ಕೊಟ್ಟಿರುವರು. ೨೫ ಲಕ್ಷ ಕನ್ನಡಿಗರ ಅಂಕಿತವುಳ್ಳ ಮನವಿಯನ್ನು ಘಟನಾಸಮಿತಿ ಅಧ್ಯಕ್ಷರಿಗೊಪ್ಪಿಸುವ ಕೊನೆಯದಿನವು ೧-೧-೪೮ ಕ್ಕೆ ಮುಂದುವರಿಸಲಾಗಿದೆ ಸಮಯವು ಅತ್ಯಲ್ಪವಿರುವ ಕಾರಣ ಪ್ರತಿಗ್ರಾಮದವರು ತಮ್ಮ ಕರ್ತವ್ಯವನ್ನು ತಿಳಿದು ಮನವಿಗಳನ್ನು ಸರಿಯಾಗಿ ತುಂಬಿ ಭರದಿಂದ ಕರ್ನಾಟಕ ಏಕೀಕರಣ ಮಹಾಸಮಿತಿ ಹುಬ್ಬಳ್ಳಿ ಎಂದು ಸರಿಯಾದ ವಿಳಾಸವನ್ನು ಬರೆದು ರಜಿಸ್ಟರ ಪೋಸ್ಟದಿಂದ ೨೭-೧೨-೪೭ ರೊಳಗೆ ಕಳುಹಿಸಬೇಕೆಂದು ವಿಜ್ಞಾಪನೆ.

ಮನವಿಯ ಮುದ್ರಿತ ಪ್ರತಿಗಳು ನಮ್ಮಲ್ಲಿವೆ ತರಿಸಿಕೊಳ್ಳಬಹುದು. ಇಲ್ಲವಾದರೆ ಫುಲ್‌ಸ್ಕ್ಯಾಪಕಾಗದದ ಅರ್ಧಭಾಗದ ಮೇಲೆ ಕೆಳಗಿನಂತೆ ನಮೂನೆ ಮಾಡಿಕೊಳ್ಳಬೇಕು. ಜಿಲ್ಲೆ ತಾಲೂಕು ಊರು ಅಂಚೆ ಸ್ಪಷ್ಟವಾಗಿ ಬರೆದು ತಮ್ಮ ಹೆಸರು ವಿಳಾಸ ತಿಳಿಸಬೇಕು.

ಮನವಿಯ ನಮೂನೆ

ಕರ್ನಾಟಕ ಪ್ರಾಂತರಚನೆ
ಅಖಿಲ ಕರ್ನಾಟಕ ಜನತೆಯ ಮನವಿ

ಹಿಂದೀ ಒಕ್ಕೂಟ ಘಟನಾ ಸಮಿತಿಯ ಅಧ್ಯಕ್ಷರಾದ ಡಾ॥ ರಾಜೇಂದ್ರಪ್ರಸಾದರ ಸನ್ನಿಧಿಗೆ

.....ಜಿಲ್ಲೆ.....ತಾಲೂಕು.....

.....ಗ್ರಾಮ/ನಗರ ದ ನಿವಾಸಿಗಳಾದ ನಾವು ಅರಿಕೆ ಮಾಡಿಕೊಳ್ಳುವದೇನಂದರೆ

ಭಾಷಾನ್ವಯ ಪ್ರಾಂತ ರಚನೆಯ ತಳಹದಿಯ ಮೇಲೆ ಕರ್ನಾಟಕ ಪ್ರಾಂತರಚನೆಯಾಗುವದು ಹಿಂದೀಯ ಒಕ್ಕೂಟಕ್ಕೆ ಪೋಷಕವಾಗಬೇಕೆಂದು ನಮ್ಮೆಲ್ಲರ ಮಹದಿಚ್ಛೆಯಾಗಿದೆ. ಪ್ರಜಾಪ್ರಭುತ್ವ ತತ್ವಕ್ಕನುಗುಣವಾದ, ನ್ಯಾಯಬದ್ಧವಾದ ನಮ್ಮ ಈ ಬೇಡಿಕೆಯನ್ನು ತಾವು ಮಾನ್ಯಮಾಡಿ ಎರಡು ಕೋಟಿ ಕರ್ನಾಟಕ ಜನತೆಯ ಸಮೃದ್ಧ ಜೀವನವು ಸಾಧ್ಯವಾಗುವಂತೆ ಮಾಡುವಿರೆಂಬ ಭರವಸೆ ನನುಗಿದೆ.

ಅನುಕ್ರಮ ಸಂಖ್ಯೆ	ಪೂರ್ಣ ಹೆಸರು	ಸಹಿ
೧ ೨ ೩ ೪		

ಮೇಲೆ ಕಾಣಿಸಿರುವ ರೀತಿಯಲ್ಲಿ ಅನುಕ್ರಮವಾಗಿ ನಂಬರು ಹೆಸರು ಸಹಿಗಳನ್ನು ಹಾಕಬೇಕು.

ಹೊಸಪೇಟಿ ತಾ ೧- ತಾರೀಖು ೧೨-೧೨-೪೭ ರಿಂದ ೧೯-೧೨-೪೭ ರ ವರೆಗೆ ಜರುಗಲಿರುವ ಚಿತ್ತವಾಡಿಗಿ ಶ್ರೀ ಕಲ್ಮಠೇಶ್ವರ ರಥೋತ್ಸವ ಸಮಾರಂಭದ ಒಂದು ಅಂಗವಾದ ಸಾಹಿತ್ಯ ಮತ್ತು ವಿಜ್ಞಾನ ಸಭೆಗಳಿಗೆ ಶ್ರೀ ಮನ್ನಿರಂಜನ ಪ್ರಣವಸ್ವರೂಪಿಗಳಾದ ನವಲಗುಂದ ಗವಿಮಠದ ಸ್ವಾಮಿಗಳು ಮತ್ತು ಉರವಕೊಂಡ ಗವಿಮಠದ ಚನ್ನಬಸವಸ್ವಾಮಿಗಳು ಇವರಿಗೆ ಅಧ್ಯಕ್ಷತೆ ವಹಿಸಲಿಕ್ಕೂ ಮತ್ತು ಶ್ರೀಗಳಾದ ನಾಗೇಶ ಶಾಸ್ತ್ರಿಗಳು ಜೋಳದರಾಶಿ ದೊಡ್ಡನಗೌಡರು, ಚನ್ನಪ್ಪ ಉತ್ತಂಗಿ, ಮೃತ್ಯುಂಜಯಸ್ವಾಮಿ ಧಾರವಾಡ ಮಲ್ಲಾಭಾವಿ ವೀರಭದ್ರಪ್ಪ ಮುಂತಾದ ಅನೇಕ ಮಹಾಶಯರುಗಳನ್ನು ಆಹ್ವಾನಿಸಲಾಗಿದೆ ಎಂದೂ ನೋಡಲೇ ಬೇಕಾದ ಆಧುನಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ ಎಂದೂ ಶ್ರೀ ಬೆಲ್ಲದ ಚನ್ನಪ್ಪನವರು ತಿಳಿಸುತ್ತಾರೆ.

ನವಭಾರತಕ್ಕೆ ಚಂದಾದಾರರಾಗಿರಿ

Correspondence:—
The Rayalaseema Province — Its Objectives and Scope.

Sri N. Mrityunjaya Sastri writes

We must not forget that at a critical stage in the history of our country when the Andhras and Karnatics were running as fugitives before the invader, our great Vidyaranya united the Telugus Kannadigas and Tamils under a common banner giving us a national outlook and enabled us to save South India. Krishnadevaraya was the patron of Telugu, Canarese and Tamil and his period was the golden age for all these languages, Since then we have evolved a common culture and national out look and practised toleration to all religions We are the inheritors of that great heritage which is higher than the narrow parochialism of the Andhra and Kannadiga-Consistent with our genious we must set our face against Linguistic separateness The Telugu Kannadiga and Tamilian in our Madhyadesa must be satisfied that there will be no discrimination against his language.

Our Rayalaseema University must provide facilities for Hindi the National language, Sanskrit the language of our ancient culture, Telugu Kannada and Tamil our local languages

The language of the adminis tration should be the national language and the language of the locality, Telugu, Canarese or Tamil or bilingual as now wherever the 2 languages meet.

With the assurance that there will be no discrimination against their language, the people of this Madhya-Rastra Bellary, Anantapur, Cuddapah, Kurnool, Chittoor, Nellore, Madras, and a portion of Chengalput would have no hesitation in going into Rayalaseema (With the narrow Andhra outlook you will lose substantial portions of these Districts) There can be no doubt that the above Rayalaseema which is about 1/3 of the present Madras Province will economically be self sufficient. The readiness of Nellore, Madras and portions of Chengalput to join us is evident, We must immediately take steps in that direction, This should be the goal and objective of our Rayalaseema Province.

Vijayanagar the Capital.

In my opening address in Nandyal Conference, I have emphasised the need for setting up a Sub-Capital in South India to satisfy our aspirations and secure our allegiance to the central state at Delhi-The Indian Express has an aditorial pleading for a separate capital at Nagpur in lieu of Delhi

owing to recent political division of the country. Our suggestion for a subc-apltal in addition to the present capital at Delhi which will be a second line of defence is more feasible and practicable and is a military necessity particularly in view of our proximity to Hyderabad By its glorious tradition the Historic City of Vijayanagar where beautiful city is growing up on account of the Tungabhadra dam is the place most suited and is sure to command the loyalty of South India We want our Rayalaseema papers to concentrate on this and agitate for this and urge on the central Government to immediately start military academy, an all India University, the supreme Court and the Sub-Capital wherefrom half the Government is carried on at this centrally situated place.

ಪಾಲಿಸ್ತಾನ ವಿಭಜನೆ.

ಪಾಶ್ಚಾತ್ಯ ರಾಷ್ಟ್ರಗಳು ಅಮೆರಿಕಾದಲ್ಲಿ ಸಭೆ ಗೂಡಿ ಪಾಲಿಸ್ತಾನವು ಅರಬ್ ಮತ್ತು ಜ್ಯೂಜನರ ಮಧ್ಯೆ ವಿಭಜನೆಯಾಗಬೇಕೆಂದು ನಿಶ್ಚಯಿಸಿದ ಮೇಲೆ ಅರಬ್ ರಾಷ್ಟ್ರಗಳೆಲ್ಲಾ ಒಂದಾಗಿ ಇದನ್ನು ಪ್ರತಿಭಟಿಸಹತ್ತಿವೆ. ಜರೂಸಲೆಂ-ಟೆಲ್ ಅವಿವ್‌ದಲ್ಲಿ ದಂಗೆಗಳಾರಂಭವಾಗಿ ಜ್ಯೂ ಅರಬ್ ಜನರು ನಾವು ನೀವು ಗಳಿಗೀಡಾಗಿರುವರು. ಬ್ರಿಟಿಶರು ಶಾಂತತಾಭಂಗವಾಗದಂತೆ ನೋಡಿಕೊಳ್ಳುತ್ತಿರುವರು.

ಹೈದರಾಬಾದ್ ನೈಜಾಮರ ಮೇಲೆ ಯಾರೋ ಬಾಂಬು ಒಗೆದರು. ಅವರಿಗೆ ಅಪಾಯವಾಗದೆ ದಾರಿಯಲ್ಲಿ ಹೋಗುವವರಿಗೆ ಗಾಯಗಳಾದವು.

ಮೋಟಾರ ಕೆಲಸಗಾರರು

ಜಿಲ್ಲಾ ಮೋಟಾರಕೆಲಸಗಾರರ ಪರಿಸ್ಥಿತಿಯನ್ನು ವಿಮರ್ಶಿಸಲು ಸರ್ಕಾರ ನಿಯುಕ್ತ ಪ್ರಾಂತೀಯ ಧಿಕಾರಿಗಳು ಬಂದು ಮೋಟಾರ ಮಾಲೀಕರನ್ನೂ ಕೆಲಸಗಾರರನ್ನೂ ವಿಚಾರಿಸಿದರು ತಾವು ಬೋನಸ್ ಮತ್ತು ಸರಿಯಾಗಿ ಸಂಬಳಕೊಡುತ್ತಿರುವದಾಗಿ ಮಾಲೀಕರು ತಿಳಿಸಿದರು. ಕೆಲವು ಕೆಲಸಗಾರರು ತಮಗಿರುವ ಅನಾನುಕೂಲಗಳನ್ನು ಹೇಳಿ ಸಂಬಳ ಅಲೋಯನ್ಸ್ ಕೊರತೆ ಇದೆಯೆಂದರು. ಮೋಟಾರ ಕೆಲಸಗಾರರ ಸಭೆಯು ಕಳೆದವಾರ ಸಾಂಬಮೂರ್ತಿ ಮೈದಾನದಲ್ಲಿ ಶ್ರೀ ಎಂ. ಸತ್ಯನಂತರಾಯರಧ್ಯಕ್ಷತೆಯಲ್ಲಿ ಸಭೆ ಸೇರಿದ್ದಿತು. ಶ್ರೀ ರಮೇಶ, ಪ್ರಾಂತೀಯ ಕೆಲ್ಸಗಾರರ ಸಂಘಗಳ ಅಧ್ಯಕ್ಷ ಸೀತಾರಾಮನಾಯಿಡು ಇವರು ಭಾಷಣಕೊಟ್ಟು ತಮ್ಮ ಶಕ್ತಿಯನ್ನು ಬೆಳೆಸಿಕೊಳ್ಳಲು ಕೆಲಸಗಾರರಿಗೆ ವಿನಂತಿಸಿದರು. ಸ್ಥಾನಿಕ ಕಾರ್ಯಕರ್ತರಿಗೆ ಬಿ. ಭೀಮಸೇನಾಚಾರ್ಯರು ವಂದನಾರ್ಪಣೆ ಮಾಡಿದರು.

ತಾರಾನಾಥ ಆಯುರ್ವೇದ ವಿದ್ಯಾಪೀಠ

ಅಂತರಾಷ್ಟ್ರೀಯ ಚಿಕಿತ್ಸಾ ಪದ್ಧತಿಗಳನ್ನು ಅಭ್ಯಸಿಸಲು ವಿದೇಶಕ್ಕೆ ಕೆರಳಲಿರುವ, ಜಿಲ್ಲಾಮೆಡಿಕಲ್ ಆಫೀಸರ್ ಡಾ|| ಸತ್ಯನಾರಾಯಣರವರಿಗೆ ವಿದ್ಯಾಪೀಠದವರು ಸ್ನೇಹಮಯ ಸತ್ಕಾರವನ್ನೇರ್ಪಡಿಸಿ ಚಹಾ ಪಾನವಿಂದ ಸತ್ಕರಿಸಿದರು ಶ್ರೀ ಡಿ. ವಿ. ಚಾರಿಯವರ ಅಧ್ಯಕ್ಷತೆಯಲ್ಲಿ ಶ್ರೀ ಲಿಂಗಾರೆಡ್ಡಿ ಸ್ವಾಮಿರಾಯಾಚಾರ್ಯ ಇವರು ಮಾತಾಡಿದರು. ಜಿಲ್ಲಾ ಮೆಡಿಕಲ್ ಧೂರೆಗಳು ಉಚಿತವಾದ ಉತ್ತರವಿತ್ತರು.

N. G. O Strike:—

ಬಳ್ಳಾರಿನಗರದ ಸರ್ಕಾರದ ಎಲ್ಲಾ ಆಫೀಸುಗಳ ನಾನ್‌ಗೆಜೆಟೆಡ್ ನವಕರರು 5-12-47 ನೆಯ ದಿನಾಂಕ ಪ್ರಾ 11 ರಿಂದ 12 ರವರೆಗೆ ಪ್ರಾಂತೀಯ ಸಂಘದ ಆದೇಶಾನುಸಾರವಾಗಿ ಸಂಪುಹೂಡಿದರು. ಇದು ಯಾವ ತರಹೆ ಗಲಭೆಯೂ ಇಲ್ಲದೆ ಶಾಂತಿಪೂರ್ವಕವಾಗಿ ನೆರವೇರಿತು.

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್., ಮು. ಕ. ಬಳ್ಳಾರಿ. ಸ್ಥಾಪಿತ: 19:

ಬಳ್ಳಾರಿ, ಅನಂತಪುರ, ಕಡಪ, ಕರ್ನೂಲು ಮತ್ತು ಚಿತ್ತೂರು ಜಿಲ್ಲೆಗಳ ಆರ್ಥಿಕಾಭಿವೃದ್ಧಿ ಉದ್ದೇಶದಿಂದ ಸ್ಥಾಪಿತವಾಗಿದೆ.

ಛೇರ್ಮನ್ ಬ್ಯಾಂಕ್ ಆಫ್ ಡಾಯರೆಕ್ಟರ್ಸ್:- ಶ್ರೀ ಹೆಚ್. ಲಿಂಗಾರೆಡ್ಡಿ ಬಿ. ಎ, ಬಿ. ಎಲ್., **ಬಳ್ಳಾರಿ.**

ಸ್ಥಾಯಿಠೇವಣಿ [ಫಿಕ್ಸೆಡ್-ಡಿಪಾಜಿಟ್] ದರಗಳು

3, 4, 5 ತಿಂಗಳುಗಳಿಗೆ ಶೇಕಡ ಬಡ್ಡಿದರ ರೂ. 2-0-0 6 ತಿಂಗಳಿಗೆ ಶೇಕಡ ಬಡ್ಡಿದರ ರೂ. 2-8-0
1 ವರ್ಷಕ್ಕೆ " " " 3-0-0 2 ವರ್ಷಕ್ಕೆ " " " 3-8-0

(2) **ಕ್ಯಾಷ್ ಸರ್ಟಿಫಿಕೇಟುಗಳು** ಬಡ್ಡಿಯ ಸಹಿತ 100 ಕ್ಕೆ 1 ವರ್ಷಕ್ಕೆ 3-8-0 10-0-0 ಸರ್ಟಿಫಿಕೇ ಕೊಡುವ ಧರ ರೂ. 9-0-3 (3) **ಚಾಲು ಖಾತೆ** (ಕರೆಂಟು ಅಕೌಂಟು) ಬಡ್ಡಿ ಶೇಕಡ ರೂ. 1-0

(4) **ಸೇವಿಂಗ್ಸ್ ಬ್ಯಾಂಕು ಅಕೌಂಟು** :- ವಾರದಲ್ಲಿ ಎರಡು ಸಲ ರೂ. 250/- ಗಳಿಗೆ ಮಿಂಚಬೆ ಹಣ ತೆಗೆ ಕೊಳ್ಳಬೇಕು. 1 ವರ್ಷಕ್ಕೆ ಶೇಕಡ ರೂ 2-0-0

ಬ್ಯಾಂಕಿನ 27 ಶಾಖೆಗಳಲ್ಲಿ ಲೆಕ್ಕಗಳನ್ನು ಪ್ರಾರಂಭಿಸಬಹುದು. ಇತರ ಎಲ್ಲಾ ವಿಧವಾದ ಬ್ಯಾಂಕು ಸೌಕರ್ಯಗಳು ಒದಗಿಸಲಾಗಿವೆ.

ಬಿ. ವಿ. ಶೇಷಗಿರಿರಾವ್ ಬಿ. ಕಾಂ. - ಕಾರ್ಯದರ್ಶಿ.

ಸರ್ಕಾರ ನವಕರರ ಸಹಕಾರ ಸಂಘ, ಸಿರುಗುಪ್ಪ.

ಮಹಾಶಯರೇ:— ಈಗಿರುವ ಆಹಾರ ದುಸ್ಥಿತಿಯ ನಿವಾರಣೆಯಾಗಬೇಕೆಂದರೆ ಪ್ರತಿ ಗ್ರಾಮದಲ್ಲಿ ಸಹಕಾರ ಸಂಘಗಳು ಏರ್ಪಾಟಾಗಬೇಕಾದುದು ಬಹಳ ಅಗತ್ಯವೆಂದು ಬೇರೆ ಹೇಳಬೇಕಿಲ್ಲ. ಆಹಾರ ಧಾನ್ಯಗಳ ಸಂಗ್ರಹವಾದರೂ ಈ ಸಂಘಗಳ ಮೂಲಕವಾಗಿಯಾದರೆ ಬಡಜನರಿಗೆ ಕಷ್ಟವಿಲ್ಲದೆ ಕಾಳುದೊರೆಯುತ್ತದೆ. ಧನಿ, ನಿರ್ಧನಿಗಳ ಭೇದ ಮತ್ತು ಇವರಲ್ಲಿನ ಸಂಘರ್ಷಣ ಬಹಳಕಾಲವಿದ್ದೀತು. ಅಸ್ಪೃಶ್ಯತಾ ನಿವಾರಣೆ, ಹರಿಜನಾಭಿವೃದ್ಧಿ ಗ್ರಾಮದಲ್ಲಿ ವಿದ್ಯಾವಂತರಾದ ಉಪಾಧ್ಯಾಯರು, ಸುಧಾರಕರು ಎಲ್ಲರು ದುಡಿದರೆ ಹಳ್ಳಿಗಳ ಬೀಡಾದ ಹಿಂದೂಸ್ತಾನದ ಕಲ್ಯಾಣವು ಶೀಘ್ರದಲ್ಲಾದೀತು.

ಸಾಲದ ಸಂಘ ೧ ಷೇರು ಮೊತ್ತ ರೂ. ೫-೦-೦ ರುಸುಮು ೦-೪-೦
ಸ್ಟೋರ್ಸ ಸಂಘ ೧ ಷೇರು ಮೊತ್ತ ರೂ ೨೫-೦-೦ ರುಸುಮು ೧-೪-೦

ಕೊಡ್ಲಿಗಿ ವೆಂಕೋಬರಾವು,
ಕಾರ್ಯದರ್ಶಿ.

NAVA BHARAT, BELLARY. Reg. No. M. 4746

ನವಭಾರತ ಬಳ್ಳಾರಿ.
(Nationalist Weekly)

ಚಂದಾದರಗಳು.	Subscription Rates
ವರ್ಷಕ್ಕೆ 5-0-0	One Year 5—0—0
6 ತಿಂಗಳಿಗೆ 3-0-0	Six months 3—0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To
SRI..... .. ..
. ...
... .

Printed at Krishna Press Bellary QH No. B 17 FOR (Q.H. No. B-5.)
Edited & Published by T. B. KESHAVA RAO

ಜೈಹಿಂದ್

ನವಭಾರತ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ವರ್ಷ ೧೦ ಸಂಚಿಕೆ ೪೭ | ಬಳ್ಳಾರಿ ಡಿಸೆಂಬರು ೧೫ ಸೋಮವಾರ ೧೯೪೭ | ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವ್.

ಬಳ್ಳಾರಿ ಜಿಲ್ಲಾ ನಿರಾಶ್ರಿತ ಸಹಾಯ ಸಮಿತಿ ವರದಿ.

ಮಹಾತ್ಮಾಗಾಂಧಿ ಮದ್ರಾಸ ಪ್ರದಾನ ಮಂತ್ರಿ ಹಾಗೂ ಮತ್ತಿತರ ಭಾರತ ಧುರೀಣರ ಬೇಡಿಕೆಯನ್ನು ನುಲಕ್ಷಿಸಿ ಬಳ್ಳಾರಿಯಲ್ಲಿ ೧೩-೧೦-೪೭ ಶ್ರೀ ಹಾ. ಸೀತಾರಾಮಸೆಡ್ಡಿ (ಔದ್ಯೋಗಿಕ ಮಂತ್ರಿ) ಇವರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆಯು ಸೇರಿ ನಿರಾಶ್ರಿತರಿಗಾಗಿ ಹಣ ಮತ್ತು ಬೆಚ್ಚನ್ನ ಉಡುಪನ್ನು ಸಂಗ್ರಹಿಸಿಲು ಒಂದು ಸಮಿತಿಯು ನಿರ್ಮಿತವಾಯಿತು. ಇದಕ್ಕೆ ಶ್ರೀ ಹೆಚ್. ಲಿಂಗಾರೆಡ್ಡಿಯವರು ಅಧ್ಯಕ್ಷರು, ರಿಟೈರ್ಡ ಸಬ್ ಜಡ್ಜರಾದ ಶ್ರೀ ಆರ್. ಯಂ. ನಿ. ಎಸ್. ರಾಯರು ಕಾರ್ಯದರ್ಶಿಗಳು, ದಿಲ್ಲಿಯ ನಿರಾಶ್ರಿತರಿಗಾಗಿ ಶೇಕಡ ೭೫ ಭಾಗ, ಮದ್ರಾಸಿಗೆ ಬರುವ ನಿರಾಶ್ರಿತರಿಗೆ ಶೇ. ೨೫ ಭಾಗ,? ಮತ್ತು ಈ ಜಿಲ್ಲೆಗೆ ಬರುವವರಿಗೆ ಶೇ ೨೫ ಬಾಗ, ಈ ಪ್ರಕಾರ ಬಂದ ಹಣವನ್ನು ವಿನಿಯೋಗಿಸಲು ನಿಶ್ಚಯವಾಯಿತು. ಬಳ್ಳಾರಿ ಜಿಲ್ಲೆಯ ಕಂಬಳಿ ಉದ್ಯೋಗಕ್ಕೆ ಪ್ರೋತ್ಸಾಹ ಕೊಡುವಪರ ಸಲುವಾಗಿ ಅರ್ಧಭಾಗದ ಹಣವು ಬಳ್ಳಾರಿ ಕಂಬಳಿಗಳನ್ನೇ ಕೊಳ್ಳಲು ನಿಶ್ಚಿತವಾಗಿದೆ.

ಈ ವರೆಗೆ ಸಂಗ್ರಹವಾದ ಹಣ:—

ಬಳ್ಳಾರಿ	ತಾಲೂಕು	ರೂ.	೧೬೪೨
ಹೊಸಪೇಟೆ	,,	,,	೩೯೪೭
ಆದವಾನಿ	,,	,,	೭೯೪೩
ಯಮ್ಮಿಗನೂರು	,,	,,	೨೦೯೪
ಕೂಡ್ಲಿಗಿ	,,	,,	೧೧೩೬
ಸಿರುಗುಪ್ಪ	,,	,,	೭೫೦
ಹಡಗಲಿ	,,	,,	೧೪೯೭
ಆಲೂರು	,,	,,	೧೭೦೪
	ಒಟ್ಟು ಮೊತ್ತ		೨೧೧೦೩

ಖರ್ಚು:—

ದಿಲ್ಲಿಯ ನಿರಾಶ್ರಿತರಿಗೆ ೩೧೧೦ ಕಂಬಳಿ ಕಳುಹಿಸಿನ ಖರ್ಚು	ರೂ.	೧೩೪೭-೬-೦
ಬಳ್ಳಾರಿಗೆ ಬಂದ ನಿರಾಶ್ರಿತರಿಗೆ		೬೪-೪-೦
ಮುದ್ರಣದ ಖರ್ಚು		೭೫-೦-೦
ಬಿಲ್ಲರೆ		೧೭-೫-೦
		೧೫೬೪-೩-೦

ಉಳಿದ ಹಣ ಬ್ಯಾಂಕಿನಲ್ಲಿದೆ ಎಂದು ಕಾರ್ಯದರ್ಶಿ ಆರ್. ಯಂ. ನಿ. ಎಸ್. ರಾವ್‌ರವರು ತಿಳಿಸುತ್ತಾರೆ.

ಇಂಡಿಯಾದ ಲಿಬರಲ್ ಪಾರ್ಟಿ ಅಧ್ಯಕ್ಷ ಸರ್ ಚಿಮನಲಾಲ ಸೇಟ್ಲವಾಡರು ಬೊಂಬಾಯಿಯಲ್ಲಿ ಮರಣ ಹೊಂದಿದರು.

ಡಿ. ಮು. ಕೋರ್ಟು ಹೊಸಪೇಟೆ

O. S 86/44. — I. A. 664/47.

ಪಾಟೀಲು ಬಿಟ್ಟನಗೌಡ.....ವಾದಿ

1 ಪಾತ್ರದ ತಿಪ್ಪಾಸಾನಿ
2 ,, ಲಷ್ಮಾಸಾನಿ
3 ,, ಶೇಷಪ್ಪ
4 ,, ನಾಗರಾಜಪ್ಪ ಪ್ರತಿವಾದಿಗಳು
5 ,, ಶ್ರೀಧರಪ್ಪ
6 ,, ಸುಬ್ರಹ್ಮಣ್ಯಪ್ಪ
7 ,, ಹನುಮಂತಪ್ಪ

ಮೇಲ್ಕಂಡ ದಾವೆಯಲ್ಲಿ ಆಯಕಾಸ್ತಿಗಳನ್ನು ಯಾಲವ್ಮಿಗೆ ತರುವ ಸಲುವಾಗಿ 8-9-44 ರಂದು ಆದ ಪ್ರಿಲಿಮಿನರಿ ಡಿಕ್ರಿಯನ್ನು ಕಾಯಂಮಾಡಲು ವಾದಿ ಅರ್ಜಿ ದಾಖಲುಮಾಡಿಕೊಂಡಿದ್ದು ತಾ. 23-12-47 ರಲ್ಲಿ ಅದು ಪರಿಷ್ಕಾರವಾಗಲಿದೆ. ಆ ಬಗ್ಗೆ ಏನಾದರು ತಕರಾರು ಇದ್ದಲ್ಲಿ ಪ್ರತಿವಾದಿಗಳಾದ ನೀವು ಆ ದಿವಸ ಹಗಲು 10-30 ಗಂಟೆಗೆ ಸರಿಯಾಗಿ ಕೋರ್ಟಿಗೆ ಹಾಜರಾಗಿ ತಿಳಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರುಹಾಜರಿನಲ್ಲಿ ಫೈನಲ್ ಡಿಕ್ರಿ ಆಗುವದು ಖಂಡಿತ.

ಹೊಸಪೇಟೆ ಯಂ. ತಿರುಮಲಾಚಾರ್
ತಾ. 12-1-47 ವಾದಿ ವಕೀಲ್

ಬಳ್ಳಾರಿಜಿಲ್ಲಾ ಆಂಧ್ರರಾಜಕೀಯ ಸಭೆ

ಬಳ್ಳಾರಿ ಆಂಧ್ರ ಜಿಲ್ಲಾ ಕಾಂಗ್ರೆಸ್‌ಸಮಿತಿಯವರು ರಾಯದುರ್ಗತಾಲೂಕು ಶ್ರೀಧರಘಟ್ಟದಲ್ಲಿ ಈ ತಿಂಗಳು 20 ರಿಂದ 24 ರವರೆಗೆ ರಾಜಕೀಯ ಸಭೆಯನ್ನು ನೆರವೇರಿಸಲಿರುವರೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ. ದತ್ತಜಯಂತಿಯ ವ್ಯವಸ್ಥಾಪಕರು ಬರುವ ಅತಿಥಿಗಳಿಗೆ ಊಟ ಉಪಚಾರಗಳ ವ್ಯವಸ್ಥೆಮಾಡುವರಂತೆ.

ರಾಜಾಜಿ ಜಯಂತಿ

ಪಶ್ಚಿಮ ಬಂಗಾಲದ ಗವರ್ನರರಾದ ಶ್ರೀ ರಾಜಗೋಪಾಲಾಚಾರ್ಯರ 70 ನೆಯ ವರ್ಷವರ್ಧಂತಿಯು ಮದ್ರಾಸ್ ಪ್ರಾಂತದ ಅನೇಕ ನಗರ ಗ್ರಾಮಾದಿಗಳಲ್ಲಿ ನಡೆಯಿತು. ಅವರು ಆದರ್ಶಧುರೀಣರೆಂದು ಅನೇಕರು ಸಂದೇಶಗಳನ್ನು ಕಳುಹಿಸಿದ್ದರು.

ನೆಹರು ಲಂಡನ್ ಪ್ರಯಾಣ

ಭಾರತ ಇಂಗ್ಲೆಂಡಿನ ಮಧ್ಯೆ ಸಮಸ್ಯೆಗಳ ಇತ್ಯರ್ಥಕ್ಕಾಗಿ ಪಂಡಿತ ಜವಹರಲಾಲ ನೆಹರೂರವರು ಲಂಡನ್ನಿಗೆ ಹೋಗಲಿರುವರೆಂದು ಗೊತ್ತಾಗಿದೆ. ಬಹುಶಃ ಫಿಬ್ರವರಿ ತಿಂಗಳಲ್ಲಿ ಹೋಗಬಹುದು.

ಹೈದರಾಬಾದು ಚಳವಳಿ

ಹೈದರಾಬಾದು ಚಳವಳಿಯು ಉಗ್ರಸ್ವರೂಪವನ್ನು ತಾಳುತ್ತಲಿದೆ ಹಲವಿಗಳಲ್ಲಿ ಗ್ರಾಮಾಧಿಕಾರಿಗಳ ದಫ್ತರಗಳನ್ನೆಲ್ಲಾ ಸುಡಲಾಗುತ್ತಲಿದೆ. ಇತ್ತಹಾದುಲ ಮುಸಲ್ಮಾನ ಸಂಸ್ಥೆಯವರು ಪ್ರತಿಯೊಂದು ಹಳ್ಳಿಯಲ್ಲಿ ಮುಸಲ್ಮಾನ ಕಿರುಣರಿಗೆ ಮಿಲಿಟರಿ ಶಿಕ್ಷಣವನ್ನು ಕೊಡುತ್ತಲಿದ್ದಾರೆ.

ಸಿಮೆಂಟು.

ಸಿಮೆಂಟು ನಿಯಂತ್ರಣವು ಇಷ್ಟು ದಿನ ಕೇಂದ್ರ ಪ್ರಭುತ್ವದ ಅಧೀನದಲ್ಲಿತ್ತು ಇನ್ನುಮುಂದೆ ಈ ಅಧಿಕಾರವು ಪ್ರಾಂತಗಳಿಗೆ ಬಿಡಲಾಗಿದೆ ತಮಗೆ ಬರುವ ಭಾಗದ ಲಿಹಂಚಿಕೆಯವ್ಯವಸ್ಥೆಯು ಪ್ರಾಂತಕ್ಕೆ ಸೇರಿದೆ.

ಬ್ರಿಟಿಷ - ನಿರ್ಗಮನ

ಪಾಲಿಸ್ತಾನದಿಂದ ಬ್ರಿಟಿಸರು ಆಗಸ್ಟ 1948 ಕ್ಕೆ ಬಿಟ್ಟು ಹೋಗುವರು. ಯಹೂದಿ ಅರಬ ಜನರ ಹೊಡೆದಾಟಗಳಲ್ಲಿ ಇಲ್ಲಿಯವರೆವಿಗೆ 126 ಜನರು ಮಡಿದಿರುವರು. ಬ್ರಿಟಿಷ್ ಹೈಕಮೀಶನರು ಎಲ್ಲರಗು ಎಚ್ಚರಿಕೆಕೊಟ್ಟು ಶಾಂತತಾ ಸುವ್ಯವಸ್ಥೆಗಳನ್ನು ಕಾಯ್ದುಕೊಂಡು ಬರಲು ಹೇಳಿದ್ದಾರೆ.

ಪಾಕಿಸ್ತಾನ – ಪಾಲಿಸ್ತಾನ – ಅಸಂಬದ್ಧತೆ

ಪಾಕಿಸ್ತಾನವನ್ನು ನಿರ್ಮಿಸಿದವರು ಅದನ್ನು ನಿರ್ಮಿಸಿದ ಮೂರು ನಾಲ್ಕು ತಿಂಗಳ ಅತ್ಯಲ್ಪ ಕಾಲದಲ್ಲಿಯೇ ತಮ್ಮ ಅರಿವು ತಮಗಾಗಿ ವಿಚ್ಛೇದನದಿಂದ ಹಾನಿಯೇ ಕಟ್ಟಿಟ್ಟ ಮೂತು ಎಂಬ ಅನುಭವದ ಸಾರವನ್ನು ಕಲಿತಂತೆ ತೋರುತ್ತದೆ. ಇಲ್ಲದಿದ್ದರೆ ದ್ವಿರಾಷ್ಟ್ರವಾದಿ ಪಾಕಿಸ್ತಾನದ ಪ್ರತಿನಿಧಿಯು ಪಾಲಿಸ್ತಾನದ ವಿಭಜನೆಗೆ ಆ ತತ್ವದ ಪ್ರಕಾರ ಸಂಯುಕ್ತ ರಾಷ್ಟ್ರಸಭೆಯಲ್ಲಿ ಅನುಕೂಲ ಮತ ಕೊಡಬೇಕಾಗಿತ್ತು.

ಅಥವಾ ಮುಸ್ಲಿಂ ಜಾಬ್ಜರ ಹಿತದ ದೃಷ್ಟಿಯಿಂದ ಮಾತ್ರ ಭಾರತದ ವಿಭಜನೆಯು ಆಗಲೇಬೇಕಾದದ್ದು ಪಾಲಿಸ್ತಾನದ ವಿಭಜನೆಯು ಆಗಲೇಬಾರದೂ ಆಗಿರಬೇಕೆಂದು ಈ ಪಾಕಿಸ್ತಾನಿಗಳು ತಿಳಿದಿರಬೇಕು. ಹಾಗಿದ್ದರೆ ಅದು ಸ್ವಾರ್ಥಕ್ಕಾಗಿ ಬೇಕಾದ್ದು ಮಾಡುವ ಮನೋವೃತ್ತಿಯೆಂದು ಧಾರಾಳವಾಗಿಯೂ ಖಂಡಿತವಾಗಿಯೂ ಹೇಳಬೇಕಾಗಿ ಬರುತ್ತದೆ. ಏಕೆಂದರೆ ಹಿಂದುಸ್ತಾನದಲ್ಲಿಯ ಅಲ್ಪಸಂಖ್ಯಾಕ ಮುಸ್ಲಿಂರ ಬಗ್ಗೆ ಪಾಕಿಸ್ತಾನವು ನಿರ್ಮೋಣವಾಗಬೇಕಾದರೆ ಪಾಲಿಸ್ತಾನದಲ್ಲಿ ಅಲ್ಪಸಂಖ್ಯಾಕರಾದ ಯಹೂದಿಗಳಿಗಾಗಿ ಒಂದು 'ಸ್ತಾನ'ವಾಗಲು ವಿಚ್ಛೇದವು ನಡೆಯುವದು, ಪಾಕಿಸ್ತಾನಿ ತತ್ವದ ಪ್ರಕಾರ ನ್ಯಾಯವಾದದ್ದೆ.

ಯಹೂದಿಗಳು ಎತ್ತಿ ಬಂದವರು ಅದಕ್ಕಾಗಿ ಅವರಿಗೆ ಪಾಲಿಸ್ತಾನದ ನ್ಯಾಯವಾಗಿ ತುಂಡುಮಾಡಿ ಕೊಡುವುದು ಯೋಗ್ಯವಲ್ಲ ಎಂದು ಪಾಕಿಸ್ತಾನಿಗಳ ವಾದವಾಗಿದ್ದರೆ ಮುಸ್ಲಿಂರಾದರೂ ಭಾರತದಲ್ಲಿ ಎತ್ತಿ ಬಂದವರೇ ಅವರೇನೂ ಮೂಲ ನಿವಾಸಿಗಳಲ್ಲ.

ಇನ್ನೂ ಸಂಸ್ಕೃತಿಯ ದೃಷ್ಟಿಯಿಂದ ವಿಚಾರ ಮಾಡಿದರೂ, ಇಲ್ಲಿ ಹಿಂದೀ ಮಹಮದೀ ಸಂಸ್ಕೃತಿಗಳೇ ಬೇರೆ ಬೇರೆಯಾಗಿರುವಂತೆ ಅಲ್ಲಿ ಅರಬ ಮತ್ತು ಯಹೂದೀ ಸಂಸ್ಕೃತಿಗಳೂ ಬೇರೆಯಾಗಿಯೇ ಇವೆ. ಇವೆಲ್ಲ ಕಾರಣಗಳಿಂದ ನ್ಯಾಯವಾಗಿ ಪರಿಶೀಲನೆ ನಡೆಸಿದರೆ ಪಾಕಿಸ್ತಾನವು ಪ್ರಾಮಾಣಿಕವಾಗಿದ್ದಲ್ಲಿ ಈ ವಿಭಜನೆಗೆ ಅನುಕೂಲ ಮತ ಕೊಡಬೇಕು. ಆದರೆ ಅದು ವಿರುದ್ಧ ಮತ ಕೊಟ್ಟಿದೆಯಲ್ಲದೆ ಕೋಪದಿಂದ ಹೊರಬಿದ್ದೂ ಹೋಗುವಂತೆ ಆಗಿದೆ. ವಿಚಿತ್ರ ನ್ಯಾಯ!

ಪಾಕಿಸ್ತಾನದಲ್ಲಿಯ ಮುಸ್ಲಿಂರೂ, ಪಾಲಿಸ್ತಾನದಲ್ಲಿಯ ಅರಬರೂ ಮಹಮದೀಯರೇ! ಮಹಮದೀಯರಿಗಾಗಿ ಲಾಭವಾಗುವಂತಿದ್ದರೆ ವಿಭಜನೆ ಇಲ್ಲದಿದ್ದರೆ ಇಲ್ಲ ಎಂದು ಈ ಪಾಕಿಸ್ತಾನಿಗಳ ಅಂಬೋಣವಿದ್ದರೆ ಅದರಂತೆ ಉಳಿದ ಜನಾಂಗಗಳೂ ಅನ್ನಬೇಕಾಗಿ ಬರುತ್ತದೆ. ಯಹೂದಿಗಳು ಅಲ್ಪಸಂಖ್ಯಾಕರಾಗಿ ಅವರ ಅಹಿತವಾಗುವುದರಿಂದ ಅವರಿಗಾಗಿ ಪಾಲಿಸ್ತಾನದಲ್ಲಿಯೇ ಒಂದು ಸ್ತಾನ ಕಲ್ಪಿಸಿಕೊಟ್ಟರಾಯಿತು. ಅದರಿಂದ ಅರಬರೂ ಯಹೂದಿಗಳೂ ನ್ಯಾಯವಾದದಂತಾಗುವುದು. ಪಾಕಿಸ್ತಾನವು ಒಳಜಗಳದಿಂದ ಮುಕ್ತವಾಗಿ ಅಲ್ಲಿ ಶಾಂತಿಸಮಾಧಾನಗಳು ನೆಲೆಗೊಳ್ಳುವವು ಎಂದು ಪಾಕಿಸ್ತಾನೀ ತತ್ವದ ಪ್ರಕಾರ ಹೇಳಬಹುದಲ್ಲವೇ?

ಈಗ ಪಾಕಿಸ್ತಾನದಿಂದ ಮುಸ್ಲಿಂಜನತೆಗಾದ ಲಾಭವೂ ಅಷ್ಟರಲ್ಲಿಯೇ ಇದೆ. ಪ್ರತಿಯೊಂದು ಕಾರ್ಯಕ್ಕೂ ಅಡ್ಡಿ ಆತಂಕಗಳು ಅಲ್ಲಿ ಬರುತ್ತಲೇ ಇವೆ. ಅಲ್ಲಿಯ ಮುಸ್ಲಿಮರೇ ಪಾಕಿಸ್ತಾನದ ಸ್ವಾದುರ್ಭವದಿಂದ ಉದ್ಭವಿಸಿದ ತೊಂದರೆಗಳನ್ನು ಅನುಭವಿಸಿ

'ಸಾಕೋ ಮಾರಾಯಾ' ಎನ್ನುವ ಸ್ಥಿತಿಗೆ ಬಂದಿದ್ದಾರೆಂದು ಅಲ್ಲಿಂದ ಪ್ರಕಟವಾಗುವ ವರ್ತಮಾನಗಳಿಂದ ಗೊತ್ತಾಗುತ್ತದೆ.

ದ್ವಿರಾಷ್ಟ್ರ ತತ್ವದಿಂದ ಇಂತಹ ಹಾನಿ ಉಂಟೆಂದು ಕಾಂಗ್ರೆಸ್ ಮುಂದಾಳುಗಳು ಕೂಡಲೇ ಸಾಕಷ್ಟು ಎಚ್ಚರಿಕೆ ಕೊಟ್ಟಿದ್ದರೂ, ಕೇಳದೆ ನಡಿಸಿದ ಕಾರ್ಯದಿಂದ ಏನು ಹಾನಿಯಿದೆ ಎಂಬದು ಈಗಾದರೂ ಈ ಪಾಕಿಸ್ತಾನಿಗಳಿಗೆ ವಿದಿತವಾಗಿರಬಹುದೇ?

ಈ ಬಗೆಯಾಗಿ ತಾನು ನೆಟ್ಟ ಮರದ ಫಲವನ್ನು ತಾನೇ ತಿನ್ನಬೇಕಾಗುವುದು ಎಂಬ ಮಾತು ಇದರಿಂದ ಸಿದ್ಧವಾದಂತಾಗುತ್ತದೆ, ಒಡಕಿನಿಂದ. ವಿಭಜನೆಯಿಂದ, ಯಾರಿಗೂ ಸುಖವಿಲ್ಲ. ಅಹಂಭಾವ ಅನರ್ಥಕಾರಿಯಾದದ್ದು. ಸ್ವಾರ್ಥವು ಹೇಯವಾದದ್ದು, ಸಕಲರ ಹಿತದೃಷ್ಟಿಯಿಂದ ದೇಶದ ಮುಂದಾಳುಗಳು ಆ ದಿಶೆಯಲ್ಲಿಯೇ ಕಾರ್ಯ ಮಾಡಬೇಕು. ಸಕಲರ ಹಿತಕ್ಕಾಗಿಯು ಮುಂದಾಳಾಗಿ ದುಡಿಯಬೇಕು ಎಂದರೇ ತನಗೂ ರಾಷ್ಟ್ರಕ್ಕೂ ಕೂಡಿಯೇ ಶ್ರೇಯಸ್ಸು ಎಂಬದನ್ನು ಇನ್ನಾದರೂ ಈ ಪಾಕಿಸ್ತಾನ ತತ್ವ ಪ್ರಚಾರಕರು ಅರಿತು ಹಿಂದೂ ಶೀಖ ಮುಸ್ಲೀಂರೆಲ್ಲ ಒಂದು ಗೂಡಿ ಭವ್ಯಭಾರತದ ನಿರ್ಮಾಣ ಕಾರ್ಯದಲ್ಲಿ ತಮ್ಮ ತಮ್ಮ ಪಾಲಿನ ಕರ್ತವ್ಯವನ್ನು ಮಾಡಿದರೆ ಮುಸ್ಲೀಂರ ಈ ದ್ವಿರಾಷ್ಟ್ರತತ್ವದ ಪಾಪಪರಿಹಾರವಾದೀತು. ಪಾಕಿಸ್ತಾನದ ಘಟನೆ ನೋಡಿಯಾದರೂ ಯಾವದು ಒಳಿತೆಂಬದನ್ನು ಇನ್ನಾದರೂ ಅರಿತರೆ ಒಳ್ಳೇದು

(ಜಯ ಹಿಂದ್)

ಬದಿನೆಹಾಳು:—

ದತ್ತಾ ಸಪ್ತಾಹ ಭಜನ ದಿನಗಳಲ್ಲಿ ಸಪ್ತ ಕರ್ನಾಟಕ ಏಕೀಕರಣ ದಿನಾಚರಣೆ, ಸಾಹಿತ್ಯೋತ್ಸವ ಜರುಗಲಿದೆಯೆಂದೂ ಎಲ್ಲರೂ ಆಗವಿಸಬೇಕಾಗಿಯೂ ಶ್ರೀ ವಿರುಪಾಕ್ಷಯ್ಯನವರು ಕೋರುತ್ತಾರೆ

ಮೈಸೂರು ತ್ಯಾಗವೀರರ ಸ್ಮಾರಕಕ್ಕಾಗಿ ಒಂದು ಲಕ್ಷ ರೂ. ಧನ ಸಂಗ್ರಹ ಮಾಡಲಿರುವರು.

ಸರ್ಕಾರಿ ನವಕಾರಿ ಹಂಚಿಕೆ. ಜಾತೀಯ ವಿಧಾನ ಪದ್ಧತಿ.

ಮದ್ರಾಸ್ ಸರ್ಕಾರದವರು ಜಾತೀಯ ವಿಧಾನ ಪದ್ಧತಿಯಲ್ಲಿ ತಮ್ಮ ನಿರ್ಣಯವನ್ನು ಈ ಪ್ರಕಾರ ಕೊಟ್ಟಿರುವರು.

ಬ್ರಾಹ್ಮಣೇತರ ಹಿಂದುಗಳು	14 ರಲ್ಲಿ	6
ಹಿಂದೂಗಳಲ್ಲಿ ಹಿಂದುಳಿದವರು	,,	2
ಬ್ರಾಹ್ಮಣರು	,,	2
ಹರಿಜನರು	,,	2
ಆಂಗ್ಲೋ ಇಂಡಿಯನ್, ಕ್ರೈಸ್ತರು	,,	1
ಮಹಮ್ಮದೀಯರು	,,	1

ಈ ಪುನರ್ನಿರ್ಣಯ ಫಲಿತವಾಗಿ ಹರಿಜನರಿಗೆ ಲಾಭವುಂಟು. ಆಂಗ್ಲೋ ಇಂಡಿಯನ್ ಕ್ರೈಸ್ತರು ಮಹಮ್ಮದೀಯರಿಗೆ ನಷ್ಟವಾಗುವುದು. ಇದು ಜನ ಸಂಖ್ಯೆಗನುಗುಣವಾಗಿರುವ ಕಾರಣ, ನ್ಯಾಯವಾಗಿದೆಯೆನ್ನಬಹುದು.

ಹಳ್ಳಿಗಳ ಸೀದಾ ಹೋಯಿತು. ಪಟ್ಟಣಗಳ ಗತಿಏನು

ಬಳ್ಳಾರಿ ಜಿಲ್ಲೆಯ ದೊಡ್ಡನಗರಗಳಾದ ಬಳ್ಳಾರಿ, ಹೊಸಪೇಟೆಗಳಲ್ಲಿ ಶಾಸನ ಬದ್ಧವಾದ ರೇಷನಿಂಗ್ ಯಾ ಸೀದಾ ಜಾರಿಯಲ್ಲಿದೆ ಈ ಪಟ್ಟಣಗಳಲ್ಲಿ ಅಕ್ಕಿಯಲ್ಲದೆ ಜೋಳ ನವಣಿಗಳನ್ನುಪಯೋಗಿಸುವ ಅಸಂಖ್ಯಾತ ಜನರಿದ್ದಾರೆ. ಇಷ್ಟುದಿನ ಸರ್ಕಾರದವರು ಕಾಳನ್ನು ಸಂಗ್ರಹಿಸಿ ಸೀದಾ ಜಾರಿಯಲ್ಲಿರುವ ಪಟ್ಟಣಗಳಿಗೆ ಒದಗಿಸುತ್ತಿದ್ದರು. ಹಳ್ಳಿಗಳಲ್ಲಿನ ಸೀದಾ ಹೋದಕಾರಣ ರೈತರು ತಮ್ಮಲ್ಲಿ ಹೆಚ್ಚಿಗೆ ಬೆಳೆದ ಕಾಳನ್ನು ಪಟ್ಟಣಗಳಿಗೆ ತಂದು ಸಿನೆಮಾರಿಕೊಳ್ಳುವಂತಾದರೆ ಅವರಿಗೆ ಒಳ್ಳೆಯ ಬೆಲೆಯು ಸಿಕ್ಕುವದು. ಅಲ್ಲದೆ ಅಕ್ಕಿಯ ಬೇಡಿಕೆಯು ಕಡಮೆಯಾಗಬಹುದು. ಜಿಲ್ಲೆಯಲ್ಲೆಲ್ಲಾ ಕಾಳಿನ ಸಂಚಾರಕ್ಕವಕಾಶಕೊಟ್ಟು ಪಟ್ಟಣಗಳಿಗೆ ಬಾರದಂತೆ ಮಾಡಿದರೆ ಅನ್ಯಾಯವಾಗುತ್ತದೆ. ಈ ವಿಷಯವನ್ನು ಜಿಲ್ಲಾ ಕಲೆಕ್ಟರವರು ಸ್ಪಷ್ಟಪಡಿಸುವರೇ?

[ಒಬ್ಬ ಪಟ್ಟಣಿಗ]

ದತ್ತಮಂಡಲದ ಜಿಲ್ಲೆಗಳಲ್ಲಿ ಹಳ್ಳಿಗಳ ರೇಷನಿಂಗ್ ಪದ್ಧತಿಯ ಮುಕ್ತಾಯ

ಬಳ್ಳಾರಿ, ಕಡಪ, ಕರ್ನೂಲು, ಅನಂತಪುರ, ಜಿಲ್ಲೆಗಳ ಹಳ್ಳೀಪ್ರದೇಶಗಳಲ್ಲಿ ನೆಲ್ಲು, ಅಕ್ಕಿಯಲ್ಲದೆ ಜೋಳ, ನವಣೆ, ರಾಗಿ ಧಾನ್ಯಗಳ ಸೀದಾ ಪದ್ಧತಿಯನ್ನು ಅಂತಗೊಳಿಸಿರುವರು. ದತ್ತಮಂಡಲದ ಜಿಲ್ಲೆಗಳಲ್ಲಿ ಮುಖ್ಯಾಹಾರವಾದ ಜೋಳ ನವಣೆಗಳು ಬೇಕಾದ ಹಾಗೆ ಬೆಳೆಯುವಕಾರಣ ಹಳ್ಳಿಗರು ಕಷ್ಟವಿಲ್ಲದಂತೆ ತಮಗೆ ಬೇಕಾದ ಆಹಾರ ಧಾನ್ಯಗಳನ್ನು ದೊರಕಿಸಿಕೊಳ್ಳಲೆಂಬ ಉದ್ದೇಶದಿಂದ ಸರ್ಕಾರದವರು ಸೀದಾಪದ್ಧತಿ ತಗೆದುಹಾಕಿರುವರು. ಎರಡನೆಯ ಮೆಟ್ಟಿಲೆಂದರೆ ನೆಲ್ಲು ಹೆಚ್ಚಿಗೆ ಬೆಳೆಯುವ ಪ್ರದೇಶಗಳಾದ ಪೂರ್ವ ಮತ್ತು ಪಶ್ಚಿಮಗೋದಾವರಿ ಜಿಲ್ಲೆ, ಕೃಷ್ಣ, ಗುಂಟೂರು, ತಂಜಾವೂರು, ನೆಲ್ಲೂರು, ತಿರಿಚಿನಾಪಲ್ಲಿ, ದಕ್ಷಿಣ ಆರ್ಕಾಟು ಜಿಲ್ಲೆಗಳಲ್ಲಿ ಎಲ್ಲತದ ಸೀದಾತೆಗೆದು ಹಾಕುವರು. ಮೂರನೆಯದಾಗಿ ಜಿಲ್ಲೆ ಜಿಲ್ಲೆಯಲ್ಲಿ ನಿರಾಟಂಕವಾಗಿ ಕಳುಹಿಸುವದನ್ನು ಏರ್ಪಡಿಸುವರು

ಇದು ರೈತನ ಆಂದೋಲನ ಫಲಿತವಾಗಿ ದೊರೆತ ಫಲ. ಇದರ ದುರುಪಯೋಗವಾಗಬಾರದು ಹೆಚ್ಚು ಬೆಳೆದ ದೊಡ್ಡ ರೈತರು ತಮ್ಮ ಭಾಗದ ಬಡವರ ಸಂರಕ್ಷಣೆಯ ಭಾರವನ್ನು ವಹಿಸಬೇಕು. ಲಾಭದಾಸೆಗಾಗಲಿ, ಬ್ಲಾಕ್ ಮಾರ್ಕೆಟ ದರಗಳ ಲಂಚಸೆಗಾಗಲಿ ಬಿದ್ದು ತಮ್ಮಲ್ಲಿದ್ದ ಕಾಳನ್ನು ಊರಿನವರ ಬೇಡಿಕೆಯನ್ನನುಲಕ್ಷಿಸದೆ ಹೊರಗೆ ಕಳುಹಿಸುವದಾದರೆ ತಮ್ಮ ನಾಶವನ್ನು ತಾವೇ ಮಾಡಿಕೊಂಡಂತಾಗುತ್ತದೆ ಎಷ್ಟು ಕಷ್ಟಗಳಾದರೂ ಜನರು ಸಹನೆಮಾಡಬಹುದು. ಆದರೆ ಉದ್ದೇಶಪೂರ್ವಕವಾಗಿ ಆಹಾರ ಧಾನ್ಯಗಳನ್ನು ಬಚ್ಚಿಟ್ಟರೆ, ಅಥವಾ ಹೆಚ್ಚುಧರಗಳಿಂದ ಮಾರಿಕೊಂಡರೆ ಬಡಜನರು ದಂಗೆಯೆದ್ದು ಆಹಾರ ಧಾನ್ಯಗಳ ಲೂಟಿಗೆ ನಿಲ್ಲಲು ಹಿಂಜರಿಯುವುದಿಲ್ಲ.

ಶ್ರೀ ದತ್ತಜಯಂತಿ.

ಬದಿನೆಹಾಳಲ್ಲಿ:- ಆದವಾನಿ ತಾಲೂಕು ಬದಿನೆಹಾಳು ಸಾಧುಸೇವಾಸಕ್ತ ರಾಜಯೋಗಿ ತಮ್ಮಿರೆಡ್ಡಿ ಇವರು ತಮ್ಮ ಅದ್ವೈತಾನಂದಾಶ್ರಮದಲ್ಲಿ ಮಾರ್ಗಶಿರ ಶು॥ 8 ರಿಂದ ಶು॥ 15 ರವರಿಗೆ (20 ರಿಂದ 28-12-47 ವರಿಗೆ) ಶಿವದತ್ತ ಸಪ್ತಾಹಭಜನೆ, ಆತ್ಮಾನುಭವಿಗಳಿಂದ ವೇದಾಂತ ಶ್ರವಣ, ದತ್ತಗೀತ ಪ್ರವಚನ, ಶಿವಕಥೆ, ರುದ್ರಪೂಜೆ, ವಸಂತೋತ್ಸವ ನಡೆಸಲು ಏರ್ಪಡಿಸಿರುವರು. ಆಸ್ತಿಕ ಮಹಾಶಯರು ಬರಲು ಕೋರಿರುತ್ತಾರೆ ಬ್ರಾಡಗೇಜ್ ಕುಪ್ಪಗಲ್ಲು ಸ್ಟೇಷನ್ನಿನಿಂದ ಬದಿನೆಹಾಳಿಗೆ ಬರಲು ಸೌಕರ್ಯವಿದೆ.

ಶ್ರೀಧರ ಘಟ್ಟಿಯಲ್ಲಿ:- ದತ್ತಾತ್ರೇಯಾಶ್ರಮದಲ್ಲಿ ದೊಡ್ಡ ಸ್ವಾಮಿಯವರ ಆಶ್ರಯದಲ್ಲಿ ಮೇಲ್ಕಂಡ ಕಾರ್ಯಕ್ರಮಗಳೇ ಅಲ್ಲದೆ ದೇಶಭಕ್ತರ ಉಪನ್ಯಾಸಗಳು ಮಹಾಚಂಡಿಯಜ್ಞ (ದೇಶಶಾಂತಿಗಾಗಿ) ನಡೆಯಲಿರುವದೆಂದೂ ಎಲ್ಲರು ಬರಬೇಕೆಂದೂ ಸ್ವಾಮಿ ವೈರಾಗ್ಯಾನಂದಜಿಯವರು ಕೋರುತ್ತಾರೆ.

ಹೊಸಪೇಟೆ ಜಿಲ್ಲಾ ಮುನ್ಸೀಫರವರ ಕೋರ್ಟಿನಲ್ಲಿ.

OP 29 OP 1947

ಅರ್ಜಿದಾರಳು:—ಗುಂಡಗತ್ತಿ ರತ್ನಮ್ಮ

ಅರ್ಜಿದಾರಳು ಪ್ರೌತಯಾದ ಗುಂಡಗತ್ತಿ ಕರಣಂ ಶೇತಾರಾಮುಪ್ಪನ ಮರಣಪಂಡು ಬರಮಾಡಿಕೊಳ್ಳಲು, ವಾರಸು ಸರ್ಟಿಫಿಕೇಟು ಕೊಡಬೇಕೆಂದು ಮೇಲಿನ ಕೋರ್ಟಿನಲ್ಲಿ ಅರ್ಜಿ ದಾಖಲುಮಾಡಿರುತ್ತಾಳೆ. ಸದರಿ ಅರ್ಜಿ ವಿಚಾರಣೆ ವಾಯ್ದೆ 3-1-1948 ಕ್ಕೆ ಇರುತ್ತದೆ. ಆತನ ಇನ್ನಿತರ ವಾರಸುದಾರರು ಯಾರಾದರೂ ಇದ್ದಲ್ಲಿ ಮೇಲ್ಕಂಡವಾಯ್ದೆಗೆ ಹಾಜರಾಗಿ ತಕರಾರು ತಿಳಿಯಪಡಿಸತಕ್ಕದ್ದು.

ಹೊಸಪೇಟೆ
7-12-47

ಯಂ. ರಂಗನಾಥಾಚಾರ್
ಅರ್ಜಿದಾರಳ ವಕೀಲು

70

ರಶಿಯದಲ್ಲಿ ಸ್ವಂತ ಆಸ್ತಿ.

ಎಲ್ಲರೂ ದೇಶಕ್ಕೋಸ್ಕರ, ಸಮಾಜಕ್ಕೋಸ್ಕರ ಶ್ರಮಿಸಬೇಕೆಂಬುದು ರಶಿಯದ ತತ್ವ. ಆದ್ದರಿಂದ ಆ ದೇಶದಲ್ಲಿ ಸ್ವಂತಕ್ಕೆ ಆಸ್ತಿಪಾಸ್ತಿಯನಿಟ್ಟುಕೊಳ್ಳಬಹುದೆ? ಎಂಬ ಶಂಕೆ ಹುಟ್ಟುವದು ಸಹಜವಾಗಿದೆ. ರಶಿಯದಲ್ಲಿ ಸ್ವಂತ ಆಸ್ತಿಪಾಸ್ತಿಗಳಿಗೆ ಸ್ಥಳವೇ ಇಲ್ಲವೆಂದು ಅನೇಕರು ನಂಬಿಕೊಂಡಿದ್ದಾರೆ. ಆದ್ದರಿಂದ ಈ ವಿಷಯದಲ್ಲಿ ಯಥಾರ್ಥ ಸಂಗತಿಯನ್ನಿಲ್ಲಿ ಕೊಡಲಾಗಿದೆ.

ರಶಿಯದಲ್ಲಿ ಪ್ರಜೆಗಳು ತಮ್ಮ ತಮ್ಮ ಸ್ವಂತಕ್ಕೆ ಆಸ್ತಿಯನ್ನಿಟ್ಟುಕೊಳ್ಳಬಹುದು. ಅಂತಹ ಆಸ್ತಿಯನ್ನು ಆ ದೇಶದ ಕಾನೂನುಗಳು ಮಾನ್ಯಮಾಡುವದಲ್ಲದೆ ರಕ್ಷಿಸುವ ಭಾರವನ್ನು ಕೂಡ ಹೊತ್ತಿರುತ್ತವೆ. ಅವರವರ ವಾರಸದಾರರಿಗೆ ಆಯಾ ಆಸ್ತಿಗಳು ಸೇರುವುದಕ್ಕೂ ಸಹ ಅವಕಾಶ ಮಾಡಿಕೊಡಲಾಗಿದೆ

ರಶಿಯದಲ್ಲಿರುವ ಬಹುಭಾಗದ ಆಸ್ತಿಯನ್ನೆಲ್ಲ ಎರಡು ವಿಧವಾಗಿ ವಿಂಗಡಿಸಬಹುದು. ಒಂದು, ರಾಷ್ಟ್ರದ ಸೊತ್ತು. ಇದು ಪ್ರಜೆಗಳಿಗೆಲ್ಲ ಸೇರಿದ್ದು ಎರಡು ಸಹಕಾರ ಸಂಘಗಳು ಮತ್ತು ಸಾಮೂಹಿಕ ಸಹಕಾರದ ವ್ಯವಸಾಯ ಸಂಘಗಳಿಗೆ ಸೇರಿದ ಸೊತ್ತು. ಭೂಮಿ, ಭೂಗರ್ಭದ ಸಂಪತ್ತು ಜಲ, ತರು, ಕೈಗಾರಿಕೆಯ ಉದ್ಯಮಗಳು ಸಾರ್ವಜನಿಕರ ಪ್ರಯೋಜನಕ್ಕೆ ಮೀಸಲಾದ ಎಲ್ಲ ವಸ್ತುಗಳು, ಮತ್ತು ವಾಸವ ಮನೆಗಳಲ್ಲಿ ಬಹುಭಾಗದ ಮನೆಗಳು ಮೊದಲನೆಯ ವರ್ಗಕ್ಕೆ ಸೇರಿದವುಗಳು. ಅಂದರೆ ಇವೆಲ್ಲ ರಾಷ್ಟ್ರದ ಸೊತ್ತು.

ಸಾಮೂಹಿಕ ಸಹಕಾರ ವ್ಯವಸಾಯ ಸಂಘಗಳ ಜಮೀನು, ಮಾಲು, ಉತ್ಪತ್ತಿ ಸಾಧನಗಳು ಇವೆಲ್ಲ ಆಯಾ ಸಂಘಗಳ ಸದಸ್ಯರಿಗೆ ಸೇರಿದ ಸೊತ್ತುಗಳು ಇದು ಮತ್ತೊಂದು ವರ್ಗ.

ಈ ಎರಡು ವಿಧವಾದ ಆಸ್ತಿಯನ್ನು ಬಿಟ್ಟು ಸಾಮೂಹಿಕ ಸಹಕಾರ ಸಂಘಗಳಿಗೆ ಸೇರದೆ ಇರುವ ಸಣ್ಣಪುಟ್ಟ ರೈತರ ಮತ್ತು ಉದ್ಯೋಗಿಗಳ ಆಸ್ತಿಗಳಿರುತ್ತವೆ. ಇಂತಹ ಆಸ್ತಿಗಳಲ್ಲಿ ಆಯಾ ರೈತ ಅಥವಾ ಕಸಬುದಾರನು ಅನ್ನ ಆಸ್ತಿಯನ್ನು ತನ್ನ ಸ್ವಂತ ಶ್ರಮದಿಂದಲೇ ವೃದ್ಧಿಪಡಿಸಿಕೊಳ್ಳುವುದಾಗಿಯೂ ಇತರರ ಸಹಾಯವನ್ನು ಅಪೇಕ್ಷಿಸದೆ ನಡೆಸಿಕೊಳ್ಳುವದಾಗಿಯೂ ಸರಕಾರಕ್ಕೆ ಭರವಸೆಯನ್ನು ಕೊಟ್ಟರೆ ಮಾತ್ರ ಅವನ ಆಸ್ತಿ ಅವನ ಸ್ವಂತಕ್ಕೆ ಸೇರಿದ್ದೆಂದು ಪರಿಗಣಿಸಲಾಗುವುದು.

ರಾಷ್ಟ್ರದ ಉದ್ಯಮಗಳ ಹಿಡಿತವೆಲ್ಲ ಈ ಕೆಳಗಿನ ರೀತಿಯಲ್ಲಿ ವಿನಿಯೋಗವಾಗುತ್ತವೆ. ಉತ್ಪತ್ತಿಯಲ್ಲಿ ಒಂದು ಭಾಗ ಗಿರಣಿಗಳ, ಕಾರಖಾನೆಗಳ ಮೇಲ್ವಿಚಾರಣೆಗೆ ಮತ್ತು ಹೊಸ ಮಿಲ್ಲು ಕಾರಖಾನೆಗಳ ನಿರ್ಮಾಣಕ್ಕೂ ವಿನಿಯೋಗಿಸಲ್ಪಡುವುದು. ಇನ್ನೂ ರೆಸ್ಸಿಗಾಗಿಯೂ ಅಪದ್ಧನ ಸಂಗ್ರಹಕ್ಕಾಗಿಯೂ ಕೆಲವು ಹಣ ತೆಗೆದಿಡಲಾಗುತ್ತದೆ ದೇಶದ ಒಟ್ಟು ವರಮಾನದಲ್ಲಿ ಇನ್ನುಳಿದ ಪರಮಾನವು ಸಾರ್ವಜನಿಕರ ಉಪಯೋಗಕ್ಕಾಗಿ ಖರ್ಚುಮಾಡಲಾಗುತ್ತದೆ. ಹೀಗೆ ಕಾದಿಟ್ಟ ಹಣದಲ್ಲಿ ಅರ್ಧಭಾಗ ಸಾಮಾಜಿಕ, ಸಾಂಸ್ಕೃತಿಕ ಕಾರ್ಯಗಳಿಗೆ ವಿನಿಯೋಗಿಸಲ್ಪಡುವುದು. ಉಳಿದರ್ಧ ಭಾಗದ ವರಮಾನವನ್ನು ವ್ಯಕ್ತಿಗಳ ಉಪಯೋಗಕ್ಕಾಗಿ ಎಂದರೆ ಪಜೂರಿಗಾಗಿ ವಿನಿಯೋಗಿಸಲ್ಪಡುವುದು.

ಹೀಗೆ ಮಜೂರಿಗಾಗಿ ಕೂಡುವ ಹಣವನ್ನು ಆಯಾ ವ್ಯಕ್ತಿ ತನ್ನ ಮನಒಂದಂತೆ ಖರ್ಚುಮಾಡಬಹುದು. ಇದು ಅವನ ಸ್ವಂತ ಹಣ. ಈ ಹಣದಿಂದ ತನ್ನ ಸ್ವಂತ ಒಳಕೆಗಾಗಿ ಯಾವ ಪದಾರ್ಥ

ವನ್ನಾದರೂ. ಕೊಂಡುಕೊಳ್ಳಬಹುದು ಆದರೆ ಹೀಗೆ ಕೊಂಡ ಪದಾರ್ಥಗಳಿಂದ ತಾನು ದುಡಿಮೆಮಾಡಿ ಕೊಂಡು ಅವುಗಳನ್ನೇ ಬಂಡವಾಳ ಮಾಡಿಕೊಂಡು ಇನ್ನೊಬ್ಬನನ್ನು ಅದಕ್ಕಾಗಿ ಕೂಲಿ ಇಟ್ಟುಕೊಂಡು ದುಡಿಯುಕೂಡದು. ರಶಿಯದ ಪ್ರತಿಪ್ರಜೆಯೂ ಮಜೂರಿಯಿಂದ ಬೇಕಾದಷ್ಟು ಹಣವನ್ನು ಶೇಖರಿಸಬಹುದು ಮತ್ತು ಅದರಲ್ಲಿ ಮಿಗಿಸಿ ಮಿಕ್ಕ ಹಣವನ್ನು ತನ್ನಲ್ಲೇ ಉಳಿಸಿಕೊಳ್ಳಬಹುದು. ಆದರೆ ಈ ಹಣವನ್ನು ಒಡ್ಡಿಯ ಸಾಲಕ್ಕೆ ಕೊಡಕೂಡದು ಈ ಹಣದಿಂದ ಅವನ ಸ್ವಂತಕ್ಕಾಗಿ ಮೋಟಾರು, ಹೊಲಿಗೆ ಯಂತ್ರ ಟ್ರ್ಯಾಕ್ಟರುಗಳನ್ನು ಮತ್ತು ಈ ಬಗೆಯ ಉತ್ಪತ್ತಿ ಸಾಧನದ ಸಾಮಗ್ರಿಗಳನ್ನೂ ಕೊಂಡುಕೊಳ್ಳಬಹುದು. ಆದರೆ ಈ ಸಾಧನಗಳಿಂದ ಅವನು ಸೋಮಾರಿಯಾಗಿ ಕುಳಿತು ಕೂಲಿ ಇಟ್ಟು ದುಡಿದುಕೊಳ್ಳುವುದು ನಿಷೇಧ ಉದಾಹರಣೆಗೆ ವಾಚನಾಲಯದಿಂದ ಪುಸ್ತಕಗಳನ್ನು ಓದುವುದಕ್ಕೆ ಬಾಡಿಗೆ ಕೊಡುವುದು ನಿಷೇಧ. ಹಣವನ್ನು "ಸೇವಿಂಗ್ಸ್ ಬ್ಯಾಂಕು"ಗಳಲ್ಲಿ ನಿರ್ದಿಷ್ಟವಾದ ಬಡ್ಡಿಯದರದ ಮೇಲೆ ಠೇವು ಇಡಬಹುದು. ಅಂತಹ ಸೇವಿಂಗ್ಸ ಬ್ಯಾಂಕುಗಳಿಗೆ ಸರಕಾರ ಹೊಣೆ ಕೊಡುತ್ತದೆ. ರಶಿಯದ ರಾಜ್ಯಾಂಗ ಶಾಸನದ ೧೦ ನೆಯ ವಿಧಿಯಸ್ಕಾರ ತಮ್ಮ ತಮ್ಮ ಮಜೂರಿಯಿಂದ ತಮ್ಮ ಸ್ವಂತ ಬಳಕೆಗಾಗಿ ಯಾವ ಪದಾರ್ಥಗಳನ್ನು ಬೇಕಾದರೂ ಕೊಂಡು ಇಟ್ಟುಕೊಳ್ಳುವುದಕ್ಕೆ ಪ್ರತಿ ಪ್ರಜೆಗೂ ಕಾನೂನುಬದ್ಧವಾದ ಹಕ್ಕಿದೆಯೆಂದು ಸಾರಲಾಗಿದೆ, ಅಂತಹ ಆಸ್ತಿಯನ್ನು ಆ ಕಾನೂನು ರಕ್ಷಿಸುತ್ತದೆ.

ಪ್ರತಿಪ್ರಜೆಯೂ ತನ್ನ ಕುಟುಂಬದ ಉಪಯೋಗಕ್ಕಾಗಿ ಒಂದು ಮನೆಯನ್ನು ಮಾತ್ರವೇ ಇಟ್ಟುಕೊಳ್ಳಬಹುದು. ಆದರೆ ಆ ಮನೆಯಲ್ಲಿ ತಾನೇ ವಾಸವಾಗಿರಬೇಕೆಂಬ ನಿರ್ಬಂಧನೇನೂ ಇಲ್ಲ. ತಾನೂ ತನ್ನ ಕುಟುಂಬದವರೂ ಬೇರೆಕಡೆ ವಾಸವಾಗಿದ್ದಲ್ಲಿ ಆ ಮನೆಯನ್ನು ಬಾಡಿಗೆಗೆ ಕೊಡಬಹುದು. ಸ್ವಂತಕ್ಕೆ ರುವ ಮನೆ ಮತ್ತು ಇತರ ಆಸ್ತಿಗಳನ್ನು ಕೊಳ್ಳುವುದು ಭಮ್ಮಮಾಡುವುದು ಅಥವಾ ವಾರಸುದಾರರಿಗೆ ಬಿಟ್ಟುಕೊಡುವುದೂ ಇವೆಲ್ಲ ಕಾನೂನು ಪ್ರಕಾರ ರಶಿಯದಲ್ಲಿ ರೂಢಿಯಲ್ಲಿರುವ ವ್ಯಕ್ತಿಗೆ ಸಂಬಂಧಪಟ್ಟ ಹಕ್ಕುಗಳು. ಆದರೆ ಮನೆಗಳನ್ನು ಕೊಳ್ಳುವುದಕ್ಕೆ ಮಾತ್ರ ಒಂದು ಪರಿಮಿತಿಯನ್ನಿಡಲಾಗಿದೆ. ಒಂದು ಮನೆ ಕೊಂಡುಕೊಂಡ ಮೂರು ವರ್ಷಗಳೊಳಗೆ ಮತ್ತೊಂದು ಮನೆಯನ್ನು ಕೊಳ್ಳಲಾಗುವುದಿಲ್ಲ. ತನ್ನ ಕುಟುಂಬದ ಉಪಯೋಗಕ್ಕಾಗಿ ಯಾವ ಪದಾರ್ಥವನ್ನು ಬೇಕಾದರೂ ಇಟ್ಟುಕೊಳ್ಳುವುದರಲ್ಲಿ ಯಾವ ನಿರ್ಬಂಧವೂ ಇಲ್ಲ ಈ ರೀತಿಯ ಆಸ್ತಿಯ ಮಾರಾಟ ಆಧಾರ ಭೋಗ್ಯ, ದಾನದತ್ತಕ ವಗೈರೆ ಹಕ್ಕುಗಳು ರಶಿಯದ ಪ್ರತಿ ಪ್ರಜೆಗೂ ಇದೆ.

ಗಂಡ ಹೆಂಡಿರು ಮಾತ್ರ ಆಸ್ತಿಯನ್ನಿಟ್ಟುಕೊಳ್ಳಲು ಅಧಿಕೃತರು. ಮನೆಯ ಇತರ ಕುಟುಂಬಿಗಳಿಗೆ ಆ ಅಧಿಕಾರವಿರುವುದಿಲ್ಲ. ಮದುವೆಯಾದ ನಂತರ ಕೂಡಿದ ಆಸ್ತಿಗೆಲ್ಲ ಅದು ಯಾರ ಹಣದಿಂದ ಕೊಂಡಿದ್ದರೂ ಸರಿಯೆ, ಗಂಡ ಹೆಂಡಿರಿಬ್ಬರೂ ಅದರ ಮಾಲೀಕರು, ಆದರೆ ಅವರವರ ಸ್ವಂತ, ವೈಯಕ್ತಿಕ ಬಳಕೆಯ ಪದಾರ್ಥಗಳೂ ಅವರ ಸ್ವಂತ ಕಸಬಿಗೆ ಸಂಬಂಧಪಟ್ಟ ಪದಾರ್ಥಗಳೂ, ಅವರಿಬ್ಬರಲ್ಲಿ ಯಾರ ಕಸಬಿಗೆ ಸಂಬಂಧ ಪಟ್ಟಿರುವುವೋ ಅವರೇ ಆ ಪದಾರ್ಥಗಳ ಮಾಲೀಕರೆಂದು ವಿಧಿಸಲಾಗಿದೆ.

ಸಾಮೂಹಿಕ ವ್ಯವಸಾಯ ಸಂಘಗಳ ಸದಸ್ಯರ ವಾಸದ ಮನೆ, ಅದರ ಸುತ್ತಮುತ್ತಲೂ ಇರುವ ಭೂಮಿ ಅರ್ಧ ಎಕರೆಯಿಂದ ಎರಡೂವರೆ ಎಕರೆಗೆ ಮೀರದಂತೆ ಅವರ ದನಕರು, ಕುರಿ, ಕೋಳಿ, ಮತ್ತು ವ್ಯವಸಾಯದ ಮರಮುಟ್ಟು ಇವಕ್ಕೆಲ್ಲ ಆಯಾ ಮನೆಯವರೇ ಮಾಲೀಕರು. ಆ ಮನೆಯಲ್ಲಿ ಯಾರಾದರೂ ಮೃತಪಟ್ಟರೆ ಅಥವಾ ಹುಟ್ಟಿದರೆ ಮಾಲೀಕರ ಸಂಖ್ಯೆಯಲ್ಲಿ ಮಾತ್ರ ಹೆಚ್ಚು ಕಡಿಮೆಯಾಗುತ್ತದೆ.

2.72

ಸೋವಿಯಟ್ ಕಾನೂನಿನ ಪ್ರಕಾರ ಮೃತಮಾ ಲೀಕನ ಸ್ವಂತ ಆಸ್ತಿಯನ್ನು ಮಕ್ಕಳು ಅಥವಾ ದತ್ತ ಪುತ್ರರು, ಮೃತರಗಂಡ ಅಥವಾ ಹೆಂಡತಿ, ನಿಶ್ಯಕ್ತ ರಾದ ಮಾತಾಪಿತೃಗಳು ಅಥವಾ ಮೃತನ ಮೇಲೆ ಆತನ ಮರಣಕ್ಕೆ ಒಂದುವರ್ಷಕ್ಕೆ ಕಡಿಮೆ ಇಲ್ಲದಂತೆ ಆಧಾರಪಟ್ಟಿದ್ದ ಇತರ ನಿಶ್ಯಕ್ತ ವ್ಯಕ್ತಿಗಳು ವಾರಸದಾ ರರಾಗಿ ಪಡೆಯಬಹುದು. ಮಗ ಅಥವಾ ಮಗಳು ಮೃತಪಟ್ಟಲ್ಲಿ ಅವರ ಆಸ್ತಿ ಅವರ ಮಕ್ಕಳಿಗೇ ಸೇರು ತ್ತದೆ. ಅವರಾದ ಮೇಲೆ ವಾರಸಿನಲ್ಲಿ ಎರಡನೆಯ ಸ್ಥಾನ ಶಕ್ತರಾದ ತಂದೆತಾಯಿಗಳಿಗೆ ಇಡಲಾಗಿದೆ. ಅವರ ನಂತರ ಕ್ರಮವಾಗಿ ಮೃತನ ಅಣ್ಣ ತಮ್ಮಂ ದಿರು ಅಕ್ಕ ತಂಗಿಯರು ಇವರಿಗೆ ಹೋಗುತ್ತದೆ.

ಯಾವ ಪ್ರಜೆಯೇ ಆಗಲಿ ತನ್ನ ಆಸ್ತಿಯನ್ನು ತನ್ನ ವಾರಸದಾರರ ಪೈಕಿ ಯಾರಿಗಾದರೂ ಮೃತ್ಯು ಪತ್ರ ಮುಖೇನ ಬರೆದು ಕೊಡಬಹುದು, ಅಥವಾ ರಾಷ್ಟ್ರದ ಯಾವ ಸಂಸ್ಥೆಗಾದರೂ ಬಿಡಬಹುದು; ಆದರೆ ಹೀಗೆ ಬಿಟ್ಟುಕೊಡುವುದರಲ್ಲಿ ತನ್ನ ಅಪ್ರಾ ಯಸ್ಥ ಮಕ್ಕಳ ಅಥವಾ ಅವನ ಮೇಲೆ ಆಧರಿಸಿರುವ ವಾರಸುದಾರರ ಪಾಲಿಗೆ ಕಾನೂನು ಪ್ರಕಾರ ಬರುವ ಭಾಗವನ್ನು ಅವು ಬಾಧಿಸಲಾರದು. ವಾರಸುದಾ ರರು ಯಾರೂ ಇಲ್ಲದಿದ್ದಲ್ಲಿ ಅವನು ಆಸ್ತಿಯನ್ನು ಯಾರಿಗಾದರೂ ಕೊಡಬಹುದು. ವಾರಸುದಾರರು ಯಾರೂ ಇಲ್ಲದೆ, ಮೃತನು ಯಾರಿಗೂ ಆಸ್ತಿಯನ್ನು ಬರೆದಿಡದೆ ಇದ್ದಲ್ಲಿ ಅದು ರಾಷ್ಟ್ರಕ್ಕೇ ಸೇರಿ ಹೋಗು ವುದು. [ಕರ್ಮವೀರ]

ಬಳ್ಳಾರಿನಗರ

ಸಶಸ್ತ್ರ ಪೋಲೀಸದಳ:- ಮದ್ರಾಸ್ ಸರ್ಕಾ ರದವರು ನಿಶ್ಚಯಿಸಿದ ಗುಂತಕಲ್ಲಿನಲ್ಲಿಡಬೇಕಾದ ಸಶಸ್ತ್ರ ಪೋಲೀಸ್‌ದಳವು (ಒಂದು ಸಾವಿರಜನ) ಬಳ್ಳಾರಿಯಲ್ಲಿಡಲ್ಪಡಲು ನಿಶ್ಚಯವಾಗಿದೆ. ಈ ವಿಭಾ ಗದ ಮುಖ್ಯರಾದ ಶ್ರೀ ವಿ. ಸುಬ್ಬರಾಯನ್‌ರವರು 10-11-12 ನೆಯ ತಾ. ಗಳಲ್ಲಿ ಸ್ಥಳ ನಿರ್ದೇಶಿಸಿ ಕೆಲ ಸಕ್ಕೆ ಸೇರಲಿರುವವರ ಪರೀಕ್ಷೆನಾಡಿದರು.

ವಿದ್ಯಾರ್ಥಿ ಸಂಘದ ಸಭೆ:- ಯು ಶ್ರೀ ಡಿ. ಯಲ್. ಶೆಟ್ಟಿಯವರಧ್ಯಕ್ಷತೆಯಲ್ಲಿ ಸೇರಿ ಸಾಲಿಸಂಬ ಳವನ್ನು 10 ತಿಂಗಳು ವಸೂಲ್ಮಾಡುವ ಪದ್ಧತಿಯನ್ನು ಖಂಡಿಸಿ, ಬಲಾತ್ಕಾರವಾಗಿ ಉಚಿತ ವಿದ್ಯಾಭ್ಯಾಸ ವನ್ನು ಜಾರಿಯಲ್ಲಿ ತರಬೇಕೆಂದು ತೀರ್ಮಾನಿಸಿದರು ಶ್ರೀಗಳಾದ ಕ. ಸುಬ್ಬರಾವು, ಗಂಗಾಧರಶೆಟ್ಟಿ, ರಮೇ ಶ ವಗೈರೆಯವರು ಭಾಷಣಮಾಡಿದರು.

ಪ್ರಾಥಮಿಕ ಶಾಲೆಗಳ ಆಟಪಾಟ:- 13 ನೇ ದಿನಾಂಕ ಪ್ರಾಥಮಿಕ ಶಾಲೆಗಳ ಆಟಪಾಟಗಳು ಜಿಲ್ಲಾ ಜಡ್ಜರಾದ ಜಾರ್ಜಸನ್‌ರವರ ಅಧ್ಯಕ್ಷತೆಯಲ್ಲಿ ನಡೆದು ಅವರ ಶ್ರೀಮತಿಯವರು ಬಹುಮಾನಗಳನ್ನು ಹಂಚಿದರು

ಕರ್ನಾಟಕ ಏಕೀಕರಣ ಪರಿಷತ್ತು.

ಕರ್ನಾಟಕ ಏಕೀಕರಣ ಸಂಘದ ಆಶ್ರಯದಲ್ಲಿ 11 ನೆಯ ಅಖಿಲ ಕರ್ನಾಟಕ ಏಕೀಕರಣ ಪರಿಷತ್ತು ದಿನಾಂಕ 29-12-47 ಕ್ಕೆ ದಕ್ಷಿಣ ಕನ್ನಡ (ಮಂಗ ಳೂರು) ಜಿಲ್ಲೆಯ ಕಾಸರಗೋಡಿನಲ್ಲಿ ನಡೆಯುವುದು.

ಕಾಸರಗೋಡವು ಕರ್ನಾಟಕದ ದಕ್ಷಿಣ ಗಡಿ ಯಲ್ಲಿದೆ. ಅಲ್ಲಿಯೇ ದಿ 28-12-47 ಕ್ಕೆ ಕನ್ನಡ ಸಾಹಿತ್ಯ ಸಮ್ಮೇಲನವೂ ನೆರೆಯಲಿದೆ. ಅಲ್ಲದೆ ಅ ಕ. ಏ ಪರಿಷತ್ತು ಈ ಜಿಲ್ಲೆಯಲ್ಲಿ ಕರೆಯಲ್ಪಟ್ಟುದು ಇದೇ ಮೊದಲನೆಯ ಸಲ.

ಹಿಂದುಸ್ತಾನ ಕೇಂದ್ರಸರ್ಕಾರದ ಮೊನ್ನಿನ (ದಿ 27-11-47 ರ) ಹೇಳಿಕೆಯನ್ನು ಅವಲೋಕಿಸ ಲಾಗಿ, ಬೇಗನೆ ಪರಿಷತ್ತನ್ನು ಕರೆದು ಮುಂದಿನ ಕಾರ್ಯಕ್ರಮವನ್ನು ಕುರಿತು ಒಮ್ಮತದ ಸಲಹೆ ಯನ್ನು ಪಡೆಯುವದು ಅತ್ಯವಶ್ಯವಾಗಿದೆ.

ಕನ್ನಡನಾಡಿನ ಎಲ್ಲ ದಿಕ್ಕುಗಳಿಂದಲೂ ಪ್ರತಿನಿ ಧಿಗಳು ಹೆಚ್ಚಾಗಿ ಈ ಪರಿಷತ್ತಿಗೆ ಬಂದು ಯಶಸ್ವಿ ಗೊಳಿಸಬೇಕೆಂದು ವಿನ್ನಹ.

ನವಭಾರತಕ್ಕೆ ಚಂದಾದಾರರಾಗಿರಿ

ಕಾಂಗ್ರೆಸ್ಸು, ಸಮತಾವಾದಿಗಳು, ಕಮ್ಯುನಿಸ್ಟರು.

ರಾಜಕಾರಣದಲ್ಲಿ ಈ ಮೂರು ತತ್ವ ಪ್ರಣಾಲಿಗಳು ವಿಶೇಷತಃ ಹಿಂದುಸ್ಥಾನದೊಳಗೆ ಕಾಣುತ್ತಿವೆ. ಜಾತೀಯ ತಳಹದಿಯ ಮೇಲೆ ನಿಂತಿರುವ ಸಂಸ್ಥೆಗಳು ಬೇರೆ ಕೇವಲ ಸರ್ವಸಾಮಾನ್ಯ ದೃಷ್ಟಿಯಿಂದ ದೇಶದ ಅಭಿವೃದ್ಧಿಯನ್ನು ಜನತೆಗೆ ಹಿತವಾಗುವಂತೆ ಸಾಗಿಸಬೇಕೆಂದು ಇಚ್ಛಿಸುವ ರಾಜಕೀಯ ಪಕ್ಷಗಳೆಂದರೆ ಮೇಲೆ ಹೇಳಲ್ಪಟ್ಟ ಮೂರು ಮಾತ್ರ ಆಗಿವೆ.

ಈ ಮೂರೂ ಪಕ್ಷಗಳ ಕಾರ್ಯ ಮಾರ್ಗಗಳು ನೋಡಲಿಕ್ಕೆ ಭಿನ್ನವಾಗಿದ್ದರೂ ಉದ್ದೇಶದ ದೃಷ್ಟಿಯಿಂದ ಒಂದೇ ಆಗಿವೆ. ಅದು ಹೇಗೆಂಬುದನ್ನು ನೋಡೋಣ

ಕಾಂಗ್ರೆಸು ಕಳೆದ ೬೦-೭೦ ವರ್ಷಗಳಿಂದದುಡಿದ ಸಂಸ್ಥೆಯಾಗಿದ್ದು ಅದು ಪ್ರಜಾಸತ್ತಾತ್ಮಕ ಪದ್ಧತಿಯನ್ನು ಸ್ಥಾಪಿಸಲು ಹೆಣಗುತ್ತ ಬಂದಂಥದಾಗಿದೆ. ಅದು ತನ್ನ ತ್ಯಾಗ ಮತ್ತು ಸಾಹಸದಿಂದ ಹಿಂದುಸ್ಥಾನಕ್ಕೆ ಸ್ವಾತಂತ್ರ್ಯವನ್ನು ತಂದು ಕೊಟ್ಟಿತು. ಮತ್ತು ಇಂದು ಈ ದೇಶದ ಅಭಿವೃದ್ಧಿಯನ್ನು ಕೇವಲ ಪ್ರಜೆಗಳ ಹಿತದ ದೃಷ್ಟಿಯಿಂದ ನಡೆಸಿಕೊಂಡು ಬರುತ್ತದೆ.

ತಾನು ಅಧಿಕಾರಕ್ಕೆ ಬರುತ್ತಲೇ ಅನೇಕ ಹೊಸ ಹೊಸ ಕಾಯಿದೆ ಕಾನೂನುಗಳನ್ನು ಮಾಡುತ್ತ ಬಡವರು, ರೈತರು, ಕೂಲಿಕಾರರು ಇವರ ಏಳ್ಗೆಯನ್ನು ಮಾಡಲು ಹೆಣಗುತ್ತದೆ ವರ್ಗಕಲಹಗಳನ್ನು ಹಬ್ಬಿಸಲು ಅದು ಇಚ್ಛಿಸುತ್ತಿಲ್ಲ. ಆದರೆ ವರ್ಗಗಳಲ್ಲಿಯ ಭೇದಗಳನ್ನು ಮತ್ತು ವೈತ್ಯಯಗಳನ್ನು ಅದಷ್ಟು ಕಡಿಮೆಮಾಡಲು ಅದು ಇಚ್ಛಿಸುತ್ತಿದೆ ಆ ಮೇರೆಗೆ ಅನೇಕ ವಿಧವಾದ ಕಾರ್ಯಗಳನ್ನು ಮಾಡಿದೆ ಮತ್ತು ಮಾಡುತ್ತಿದೆ.

ಸಮತಾವಾದಿಗಳು ಇದುವರೆಗೆ ಕಾಂಗ್ರೆಸ್ಸಿನಲ್ಲಿಯೇ ಇದ್ದುಕೊಂಡು ಕೆಲಸ ಮಾಡುತ್ತಿದ್ದಾರೆ. ಆದರೆ ಅವರ ವಿಚಾರಸರಣಿಯು ಬೇರೆ. ಜಗತ್ತು ಧನವಂತರ ಸೂತ್ರದಂತೆ ಕುಣಿಯುತ್ತಿದೆ. ಇದರಿಂದ ಬಡವರ ಬವಣೆಯು ಬೆಳೆಯುತ್ತಿದೆ. ಧನವಂತರ ಕೈಯಿಂದ ಜಗತ್ತಿನ ಅಧಿಕಾರವು ಕಿತ್ತಲ್ಪಟ್ಟು ಅದು ಬಡವರ ಕೈಗೆ ಬರುವಂತಾಗಬೇಕು ಎಂದು ಹೇಳುತ್ತಾರೆ ಅದಕ್ಕಾಗಿ ಅವರ ಪ್ರಚಾರವು ಯಥಾಪ್ರಕಾರ ನಡೆದಿರುತ್ತದೆ. ಕೂಲಿಕಾರರು ರೈತರನ್ನು ಉದ್ಯೋಗಶಾಲೆಗಳ ಒಡೆಯರು ಮತ್ತು ಹೊಲದೊಡೆಯರ ವಿರುದ್ಧ ಎಬ್ಬಿಸಿ ಆ ಬಡವರಿಗೆ ಹೆಚ್ಚಿನ ಸೌಕರ್ಯಗಳನ್ನು ಕೊಡಿಸುವದು ಇವರ ಕಾರ್ಯಕ್ರಮದ ಮುಖ್ಯ ಅಂಗವಾಗಿದೆ. ಇವರು ಕನಿಷ್ಟ ಹಿಂದುಸ್ಥಾನದಲ್ಲಿ ಯಂತೂ ಅಹಿಂಸಾವಾದಿಗಳಾಗಿಯೇ ಇದ್ದಾರೆ

ಕಮ್ಯುನಿಸ್ಟರು ಇಟ್ಟುಕೊಂಡಿರುವ ಧ್ಯೇಯಕ್ಕೂ ಸಮತಾವಾದಿಗಳ ಗುರಿಗೂ ಭೇದವಿಲ್ಲ. ಆದರೆ ಕಮ್ಯೂನಿಸ್ಟರು ಕಾಂಗ್ರೆಸ್ಸಿನ ಹತ್ತರ ಕೂಡ ಬರುವುದಿಲ್ಲ. ಅವರ ಮುಖ್ಯ ಕಚೇರಿ ರಶಿಯಾ ದೇಶದಲ್ಲಿದೆ. ಸಮತಾವಾದಿ ಕಾರ್ಯಕ್ರಮದ ಸ್ವರೂಪದ ಚಟುವಟಿಕೆಗಳನ್ನೇ ಕಮ್ಯೂನಿಸ್ಟರೂ ನಡೆಸುತ್ತಾರೆ. ಇವರಿಗೆ ಹಿಂಸೆ ಮತ್ತು ಅಹಿಂಸೆಗಳಲ್ಲಿ ಭೇದವಿಲ್ಲ. ಆದರೆ ಹಿಂದುಸ್ಥಾನದಲ್ಲಿ ಇವರು ಹಿಂಸೆಗೆ ಕೈ ಹಾಕಲು ಅವಕಾಶದ ದೊರೆತಿಲ್ಲ

ರಶಿಯಾದ ತತ್ವದಂತೆ ಮತ್ತು ಮಾರ್ಗದರ್ಶನದಂತೆ ಕಮ್ಯೂನಿಸ್ಟರು ನಡೆಯುತ್ತಿರುವದರಿಂದ ಅವರ ದೃಷ್ಟಿಯು ಬೇರೆಯಿದೆ. ಮೊನ್ನಿನ ಯುದ್ಧದಲ್ಲಿ ರಶಿಯಾವು ಗೆಲ್ಲಬೇಕೆಂದು ಆ ಯುದ್ಧಕ್ಕೆ ಸಹಾಯ ಮಾಡಬೇಕೆಂದು ಇವರು ಪ್ರತಿಪಾದಿಸಿದರು. ಸಮತಾವಾದಿಗಳು ಹಿಂದುಸ್ಥಾನದ ದೃಷ್ಟಿಯಿಂದ ಸಮತಾವಾದವನ್ನು ಸ್ಥಾಪಿಸಲು ಬಯಸುತ್ತಾರೆ ಆದರೆ ಕಮ್ಯುನಿಸ್ಟರು ರಶಿಯಾದ ದೃಷ್ಟಿಯಿಂದ ಇಲ್ಲಿಯ ಕಾರ್ಯಕ್ರಮಗಳನ್ನು ನೋಡುತ್ತಾರೆ.

ಮೊನ್ನೆ ಪುಣೆಯಲ್ಲಿ ಮಾತಾಡುವಾಗ್ಗೆ ಸಮತಾವಾದಿಗಳ ಮುಖಂಡರಾದ ಶ್ರೀ ಜಯಪ್ರಕಾಶ ನಾರಾಯಣರು "ನಮ್ಮನ್ನು ಸಂಗಡ ಕರೆದುಕೊಂಡು

(11 ನೆ ಪುಟ ನೋಡಿರಿ)

274

ಆಹಾರ ಧಾನ್ಯಗಳು

ಇಂಡಿಯಾ ಸರ್ಕಾರದ ಪ್ರಕಟನೆ.

ಆಹಾರ ಧಾನ್ಯದ ನಿಯಂತ್ರಣವನ್ನು ಕ್ರಮೇಣ ವಿನಿಯಂತ್ರಣಗೊಳಿಸುವುದೇ ಹೊಸ ಧೋರಣೆಯ ತಿರುಳು. ಪ್ರಾಂತೀಕ ಸರ್ಕಾರಗಳಿಗೆ ಆಡಚ್ಚು ಜಾಗ್ರತೆ ನಿಯಂತ್ರಣವನ್ನು ಸಡ್ಡುಗೊಳಿಸಲು ತಿಳಿಸಲಾಗಿದೆ. ದೇಶದಲ್ಲಿ ಗಂಡಾಂತರ ಪರಿಸ್ಥಿತಿಯನ್ನು ಕಾದುಕೊಳ್ಳಲು ಹೊರದೇಶಗಳಿಂದ ಹತ್ತು ಲಕ್ಷ ಟನ್ ಆಹಾರ ಧಾನ್ಯಗಳನ್ನು ತರಿಸಲಾಗುವುದು. ಮಾರಾಟ ಮತ್ತು ಕೊಳ್ಳುವ ಧಾರಣೆಗಳನ್ನು ಪ್ರಾಂತೀಕ ಸರ್ಕಾರಗಳವರು ತಮ್ಮ ಪರಿಸ್ಥಿತಿಗನುಸಾರವಾಗಿ ನಿಶ್ಚಯಿಸಿಕೊಳ್ಳಬಹುದು. ಭತ್ತವೂ ಸೇರಿದ ಅಕ್ಕಿ, ಗೋಧಿ, ಮತ್ತು ಹಿಟ್ಟು, ಸಜ್ಜಿ, ಜೋಳ, ಜೋಳದ ಜಾತಿಗೆ ಸೇರಿದ ಕಾಳುಗಳ ನಿಯಂತ್ರಣವನ್ನು ಮುಂದುವರಿಸಲಾಗಿದೆ. ಪ್ರಾಂತಿಕ ಮತ್ತು ಸಂಸ್ಥಾನೀ ಸರ್ಕಾರಗಳು ತಮಗೆ ಬೇಕಾದಂತೆ ಧಾನ್ಯ ಸಂಗ್ರಹ ಮಾಡಲು ಆವಶ್ಯಕ ಮತ್ತು ಸುಲಲಿತ ಮಾರ್ಗಗಳನ್ನನುಸರಿಸಲು ಅಧಿಕಾರ ಕೊಡಲಾಗಿದೆ. ಒಂದು ಪ್ರಾಂತ್ಯದಿಂದ ಇನ್ನೊಂದು ಪ್ರಾಂತ್ಯಕ್ಕೆ ಕಳುಹಿಸುವ ವ್ಯವಸ್ಥೆಯು ಈಗಿನಂತೆಯೇ ಇದೆ.

ಸರ್ಕಾರದ ಪದ್ಧತಿ ಸರಿಯಾಗಿಲ್ಲೆಂದೂ, ಹಂಚು ನಿಕೆ ವ್ಯವಸ್ಥೆಯನ್ನು ನಿರ್ಮೂಲನಮಾಡಿ ರೈತರಿಗೆ ಇದನ್ನೊಪ್ಪಿಸಬೇಕೆಂದೂ ಅನೇಕ ರೈತಪರಿಷತ್ತುಗಳಲ್ಲಿ ತೀರ್ಮಾನವಾದದ್ದುಂಟು. ಈಗ ಬೆಳೆದ ರೈತರು ಔದಾರ್ಯವನ್ನೂ, ದೇಶಾಭಿಮಾನವನ್ನು ತಾಳಿದ್ದರೆ ಆಹಾರ ಸಂಕಷ್ಟವು ಮತ್ತಷ್ಟು ತೀವ್ರವಾಗುವುದು ಎಂದು ಎಚ್ಚರಿಕೆ ಕೊಡದೆ ವಿಧಿಯಿಲ್ಲ

ಬ್ರಿಟನ್, ಇಂಡಿಯಾ, ಪಾಕಿಸ್ಥಾನಗಳಲ್ಲಿ ಮಿಲಿಟರಿ ಒಪ್ಪಂದಕ್ಕಾಗಿ ಮಾತುಕತೆಗಳಾದವೆಂದು ಹೇಳಲಾಗಿದೆ.

ಬಾ

ಬಾ, ದೇವಿ ಬಾ, ದೇವಿ,
ಕಬ್ಬಗಳ ಸನದೇವಿ
ಕಬ್ಬಿಗರ ಮನದೇವಿ
ನೀನೋಡಿ ಬಾ ! ||೧||

ಬಂದೆನ್ನ ಮನ ಬೆಳಗಿ,
ಕಬ್ಬಗಳ ಸುಳಿಯಾಗಿ,
ಸುರಿಸುತಲಿ ಸುಖಿಯಾಗು,
ನೀನೋಡಿ ಬಾ ! ||೨||

ಗಂಗೆಯಲಿ ಕುಳಿತಿರಲು,
ಬನಗಳಲಿ ನಿಂತಿರಲು,
ಕವನಗಳ ಸುರಿಸುತಲಿ,
ಸುರಿಯುತ್ತ ಬಾ ! ||೩||

ಕಾಲ್ಗೆಜ್ಜೆ ಕುಣಿಸುತ್ತ,
ಮನವೆನ್ನ ನುಡಿಸುತ್ತ,
ಕವನಗಳ ನುಡಿಸುತ್ತ
ನುಡಿಯುತ್ತ ಬಾ ! ||೪||

ಬನಗಳಲಿ ಆಲಿಬಲಿದು,
ಪೂಗಳನು ಹೆಣೆ ಹೆಣೆದು,
ಮಾಲೆಯನು ಮಾಡುತಲಿ,
ಕೊರಳಿನ್ನ ತೊಡಿಸುವೊಲು
ಹಾರುತ್ತ ಬಾ ! ||೫||

ನೀನೆನ್ನ ಸೇರುತಲೆ,
ಕವನಗಳ ಕಟ್ಟುತಲಿ,
ಹಾಡುವೆನು ಹರುಷದಲಿ,
ನೀಸೇರು ಬಾ ! ||೬||

[ಮ. ಹಿ. ಮ]

ಶಾಲೆಗಳಲ್ಲಿ ದೇಶಭಕ್ತರ ಪಟಗಳು.

ಮದ್ರಾಸ್ ಸರ್ಕಾರದ ವಿದ್ಯಾ ಸಂಸ್ಥೆಗಳಲ್ಲಿ ಪಂಡಿತ ಜವಹರಲಾಲ, ಸುಭಾಸಚಂದ್ರಬೋಸ್, ಮೌಲಾನಾ ಅಬುಲ್ ಕಲಂಆಜಾದ್ ಇವರ ಪಟಗಳನ್ನಿಡಲು, ಅನಾವರಣಮಾಡಲು, ಸರ್ಕಾರವು ಅಪ್ಪಣೆ ಕೊಟ್ಟಿದೆ. ಈ ಮಾಗಲೇ ಮಹಾತ್ಮಗಾಂಧಿಯವರ ಪಟವನ್ನಿಡಲು ಅನುಮತಿಯನ್ನು ಕೊಡಲಾಗಿತ್ತು.

ಕಾಂಗ್ರೆಸ್ಸು, ಸಮತಾವಾದಿಗಳು, ಕಮ್ಯುನಿಸ್ಟರು.

(9 ನೇ ಪುಟದಿಂದ)

ಹೋಗಲು ಕಾಂಗ್ರೆಸ್ಸು ಸಮರ್ಥವಾಗದಿದ್ದರೆ ಆ ಸಂಸ್ಥೆಯನ್ನು ಬಿಟ್ಟು ನಾವು ಹೊರಬೀಳಬೇಕಾಗುವದು. ಕಾಂಗ್ರೆಸ್ಸು ನಮ್ಮನ್ನು ಕೂಡಿಸಿಕೊಂಡು ಹೋಗಲು ಸಾಧ್ಯವಿಲ್ಲವೆಂದು ನಮಗೆನಿಸುತ್ತದೆ' ಎಂದು ಹೇಳಿದ್ದಾರೆ.

ವಿಚಾರ ಮಾಡಿದಲ್ಲಿ ಈ ತಾತ್ವಿಕ ಭೇದಗಳು ಬಹಳ ಗಹನವಾಗಿವೆ. ಮೇಲು ಮೇಲಿನ ಮಾತುಗಳಿಂದ ಅನೇಕರು ಈ ವಿಚಾರಗಳಿಂದ ಕೊಚ್ಚಿಕೊಂಡು ಹೋಗುವುದನ್ನು ನಾವು ನೋಡುತ್ತಿದ್ದೇವೆ. ಒಂದು ವಿಚಾರಕ್ಕೆ ಒಬ್ಬರು ಅಂಟಿಕೊಂಡರೆಂದರೆ ಅದೇ ಪ್ರವಾಹದಲ್ಲಿ ಅವನು ಮುಂದೆ ಸಾಗಹತ್ತುತ್ತಾನೆ

ಶ್ರೀ ಜಯಪ್ರಕಾಶ ನಾರಾಯಣ ಇವರು ಇಟ್ಟುಕೊಂಡ ಗುರಿ ಮತ್ತು ಅವರು ನಡೆಸಿರುವ ಪ್ರಚಾರಗಳು ಯೋಗ್ಯವಾಗಿವೆ. ಶ್ರೀಮಂತರಿಂದ ಬಡವರ ಶೋಷಣೆ ನಡೆದಿರುವುದನ್ನು ನಿಲ್ಲಿಸಬೇಕು ಎಂಬ ಮಾತೂ ಸರಿಯಾದದ್ದೇ. ಅದಕ್ಕಾಗಿ ಸಾರವಾದ ಕಾರ್ಯವನ್ನು ಈಗ ಕಾಂಗ್ರೆಸ್ಸು ಮಾಡೇ ಮಾಡುತ್ತಿದೆ. ಇಷ್ಟಕ್ಕಾಗಿಯೇ ದೇಶದಲ್ಲಿ ನಡೆದ ಕೋಲಾಹಲವನ್ನು ನಾವೆಲ್ಲರೂ ನೋಡುತ್ತಿದ್ದೇವೆ.

ಆದರೆ ಎಲ್ಲವನ್ನೂ ಇನ್ನೂ ತ್ವರಿತವಾಗಿ ಮಾರ್ಪಡಿಸಬೇಕು ಮತ್ತು ಶ್ರೀಮಂತ ಬಡವ ಎಂದು ನಿರ್ಮಿತವಾಗಿರುವ ಇಂದಿನ ವರ್ಗಗಳನ್ನು ಕೂಡಲೆ ಕಿತ್ತು ಒಗೆಯಬೇಕು ಎಂದು ಹೇಳಿದರೆ ಅದು ಸಾಧ್ಯವಾಗುವ ಮಾತೇ ಎಂಬುದನ್ನು ನಾವು ನೋಡಬೇಕಾಗಿದೆ. ಇಂತಹ ಕಾರ್ಯಗಳು ಸಾಮಾನ್ಯವಾದುವಲ್ಲ. ಬಹು ದಿವಸಗಳಿಂದ ನಡೆದು ಬಂದ ರೂಢಿಗಳನ್ನು ಕಿತ್ತೊಗೆಯುವುದು ಬಹು ಕಠಿಣವಾಗಿದೆ. ಹರಿಜನೋದ್ಧಾರವನ್ನು ಮಾಡಬೇಕೆಂದು ಮಹಾತ್ಮಾಗಾಂಧಿಯವರು ಕಳೆದ ೨೫ ವರ್ಷಗಳಿಂದ ಪ್ರಯತ್ನಿಸುತ್ತಿದ್ದಾರೆ. ಆದರೆ ಆ ಮಾರ್ಗದಲ್ಲಿ ನಾವು ಇನ್ನೂ ಏಳುತ್ತ ಬೀಳುತ್ತ ಸಾಗಿದ್ದೇವೆ.

ಬಹಳ ಸಾವಕಾಶವಾಗಿ ಕಾಂಗ್ರೆಸ್ಸು ಸಾಗುತ್ತಿದೆ. ಅಥವಾ ಅದರಿಂದ ಹೆಚ್ಚಿನ ಕಾರ್ಯವಾಗುವ ಲಕ್ಷಣವಿಲ್ಲ ಎಂದುಸಿರನ್ನು ಬಿಟ್ಟು ನಾವು ಹೊರಬೀಳಬಹುದಾಗಿ ತೋರುತ್ತದೆ. ಎಂದು ಶ್ರೀ ಜಯಪ್ರಕಾಶ ನಾರಾಯಣರವರು ಹೇಳಿರುವ ಮಾತುಗಳನ್ನು ನಾವು ತೂಗಿ ನೋಡದೆ ನಿರ್ವಾಹವಿಲ್ಲ. ಈ ಮೊದಲು ಸಮತಾವಾದಿಗಳಿಗೆ ಕಾಂಗ್ರೆಸಿಗರಿಗೆ ಚಲೋ ವಾದ ವಿವಾದಗಳಾಗಿವೆ. ಮಹಾತ್ಮಾಗಾಂಧಿ, ಪಂಡಿತ ಜವಾಹರಲಾಲ ನೆಹರು ಮತ್ತು ಸರದಾರ ವಲ್ಲಭ ಭಾಯಿಯವರು, "ನಮಗಿಂತ ಹೆಚ್ಚಿನ ಸಮತಾವಾದಿಗಳು ಯಾರೂ ಇಲ್ಲ. ಸಮತಾವಾದಿಗಳು ಮಾಡಬಯಸುತ್ತಿದ್ದುದೆಲ್ಲವನ್ನೂ ನಾವು ಇಂದು ಮಾಡುತ್ತಿದ್ದೇವೆ' ಎಂದು ಹೇಳಿದ್ದಾರೆ. ಅವರು ಸಮತಾವಾದಿಗಳನ್ನು ಕಾಂಗ್ರೆಸ್ಸಿನಲ್ಲಿ ಕೂಡಿಸಿಕೊಂಡು ಇದುವರೆಗೆ ನಡೆದಂತೆ ದೇಶದ ಕಾರ್ಯವನ್ನು ಸಾಗಿಸಿಕೊಂಡು ಹೋಗಲು ಸಿದ್ಧರಿದ್ದಾರೆ, ಅದರೂ ಅವರನ್ನು ಬಿಟ್ಟು ನಾವು ಬೇರೆ ಇನ್ನೂ ಕಾರ್ಯ ಮಾಡುತ್ತೇವೆ ಎಂದು ಸಮತಾವಾದಿಗಳು ಅನ್ನುವುದರಲ್ಲಿ ಏನು ಅರ್ಥವಿದೆ ?

ಇಷ್ಟೆಲ್ಲ ಆದ ಮೇಲೆ ಹಿಂದುಸ್ಥಾನದಲ್ಲಿ ಕಾಂಗ್ರೆಸ ಸಂಸ್ಥೆ, ಮಹಾತ್ಮಾಗಾಂಧಿ, ಪಂಡಿತ ಜವಾಹರಲಾಲ ನೆಹರೂರವರು ದೊರಕಿಸಿಕೊಂಡ ಸ್ಥಾನದ ಬಗ್ಗೆ ಸಮತಾವಾದಿಗಳು ವಿಚಾರ ಮಾಡುವದು ಅವಶ್ಯವಿದೆ. ಅವರನ್ನು ಇಂದು ಹಿಂದುಸ್ಥಾನವು ಪೂಜಿಸುತ್ತಿದೆ. ಅವರೇ ಈ ದೇಶದ ಉದ್ಧಾರವನ್ನು ನಿಜವಾಗಿ ಮಾಡಬಲ್ಲರು ಎಂದು ಜನತೆಯು ದೃಢವಾಗಿ ನಂಬುತ್ತದೆ. ಇಂದು ಅಧಿಕಾರದಲ್ಲಿರುವ ಕಾಂಗ್ರೆಸ್ಸು ಅನೇಕ ಕಾಯಿದೆ ಕಾನೂನುಗಳನ್ನು ಮಾಡುತ್ತಿರುವುದರಿಂದ, ಅದರಿಂದ ಅದು ಜನತೆಯಲ್ಲಿ ಅಪ್ರಿಯವಾಗುತ್ತಿದೆಯೆಂದೂ ಅದರಿಂದ ಆ ಸಂಸ್ಥೆಯ ವರ್ಚಸ್ಸು ಕಡಿಮೆಯಾಗುತ್ತಿದೆಯೆಂದೂ ಕೆಲವರ ಅಭಿಪ್ರಾಯವಿದೆ. ಆದರೆ ಈ ಅಭಿಪ್ರಾಯವು ವಾಸ್ತವಿಕವಾದುದಲ್ಲ ಏನೇ ಆದರೂ ನಮ್ಮ ಉದ್ಧಾರವು ಈ ಸಂಸ್ಥೆಯಿಂದಲೇ ಆಗಬೇಕಾಗಿದೆ. ಈ ಮಾತನ್ನು ಹಿಂದೀ ಜನತೆಯು ಸ್ವೀಕರಿಸಿದೆ. ಮತ್ತು ಜನತೆಯು ಸ್ವೀಕರಿಸುವುದರಲ್ಲಿ ಸಂಶಯವಿಲ್ಲ.

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್., ಮು. ಕ. ಬಳ್ಳಾರಿ. ಸ್ಥಾಪಿತ: 1939

ಬಳ್ಳಾರಿ, ಅನಂತಪುರ, ಕಡಪ, ಕರ್ನೂಲು ಮತ್ತು ಚಿತ್ತೂರು ಜಿಲ್ಲೆಗಳ ಆರ್ಥಿಕಾಭಿವೃದ್ಧಿ ಉದ್ದೇಶದಿಂದ ಸ್ಥಾಪಿತವಾಗಿದೆ.

ಛೇರ್ಮನ್ ಬೋರ್ಡ ಆಫ್ ಡಾಯರೆಕ್ಟರ್ಸ:- ಶ್ರೀ.ಹೆಚ್. ಲಿಂಗಾರೆಡ್ಡಿ ಬಿ. ಎ., ಬಿ. ಎಲ್., **ಬಳ್ಳಾರಿ.**

ಸ್ಥಾಯೀಠೇವಣಿ [ಫಿಕ್ಸಡ್-ಡಿಪಾಜಿಟ್] ದರಗಳು

3, 4, 5 ತಿಂಗಳುಗಳಿಗೆ ಶೇಕಡ ಬಡ್ಡಿದರ ರೂ. 2-0-0 6 ತಿಂಗಳಿಗೆ ಶೇಕಡ ಬಡ್ಡಿದರ ರೂ. 2-8-0
1 ವರ್ಷಕ್ಕೆ ,, ,, ,, 3-0-0 2 ವರ್ಷಕ್ಕೆ ,, ,, ,, 3-8-0

(2) **ಕ್ಯಾಷ್ ಸರ್ಟಿಫಿಕೇಟುಗಳು** ಬಡ್ಡಿಯ ಸಹಿತ 100 ಕ್ಕೆ 1 ವರ್ಷಕ್ಕೆ 3-8-0 10-0-0 ಸರ್ಟಿಫಿಕೇಟು ಕೊಡುವ ಧರ ರೂ. 9-0-3 (3) **ಚಾಲು ಖಾತೆ** (ಕರೆಂಟು ಅಕೌಂಟು) ಬಡ್ಡಿ ಶೇಕಡ ರೂ. 1-0-0
(4) **ಸೇವಿಂಗ್ಸ್ ಬ್ಯಾಂಕು ಅಕೌಂಟು**:- ವಾರದಲ್ಲಿ ಎರಡು ಸಲ ರೂ. 250/- ಗಳಿಗೆ ಮಿಂಚದೆ ಹಣ ತೆಗೆದು ಕೊಳ್ಳಬೇಕು. 1 ವರ್ಷಕ್ಕೆ ಶೇಕಡ ರೂ.2-0-0

ಬ್ಯಾಂಕಿನ 27 ಶಾಖೆಗಳಲ್ಲಿ ಲೆಕ್ಕಗಳನ್ನು ಪ್ರಾರಂಭಿಸಬಹುದು. ಇತರ ಎಲ್ಲಾ ವಿಧವಾದ ಬ್ಯಾಂಕು ಸೌಕರ್ಯಗಳು ಒದಗಿಸಲಾಗಿವೆ.

ಬಿ. ವಿ. ಶೇಷಗಿರಿರಾವ್ ಬಿ. ಕಾಂ. – ಕಾರ್ಯದರ್ಶಿ.

TO LET.

NAVA BHARAT, BELLARY. Reg. No. M. 4746

ನವಭಾರತ ಬಳ್ಳಾರಿ.
(Nationalist Weekly)

ಚಂದಾದರಗಳು.		Subscription Rates	
ವರ್ಷಕ್ಕೆ	5-0-0	One Year	5 0—0
6 ತಿಂಗಳಿಗೆ	3-0-0	Six months	3—0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ		Subscription will not be accepted for less than 6 months.	

To
SRI..... .. ..
....
....

Printed at Krishna Press Bellary QH No. B 17 FOR (Q.H. No. B-5.)
Edited & Published by T. B. KESHAVA RAO

ಶ್ರೀಮದ್

ನವಚೈತನ್ಯ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ವರ್ಷ ೧೦ | ಬಳ್ಳಾರಿ ಡಿಸೆಂಬರು ೨೨ ಸೋಮವಾರ ೧೯೪೪ | ಸಂಪಾದಕ ಮತ್ತು ಪ್ರಕಾಶಕ
ಸಂಚಿಕೆ ೪೮ | ಟಿ. ಬಿ. ಕೇಶವರಾವ್.

ಪಂಡಿತ ಜವಹರಲಾಲರ ಭಾಷಣ

ನಾವು ಇನ್ನು ಮನುಷ್ಯರಂತೆ ಇರಬೇಕು, ಸ್ವತಂತ್ರ ದೇಶದ ನಾಗರಿಕರಿಗೆ ಒಪ್ಪುವಂತೆ ಇರಬೇಕು. ಹೊಸ ಮನ್ವಂತರದ ಹೊಸ್ತಿಲದಲ್ಲಿ ನಾವು ಕಾಲಿಟ್ಟಿದ್ದೇವೆ. ಹಿಂದುಸ್ತಾನವು ಕೇವಲ ಸ್ವತಂತ್ರವಾದ ದೇಶವಾಗಬೇಕಾಗಿಲ್ಲ; ಅದೊಂದು ದೊಡ್ಡ ರಾಷ್ಟ್ರವಾಗಬೇಕಾಗಿದೆಂದು ಮುಖ್ಯ ಮಂತ್ರಿ ಪಂಡಿತ ಜವಾಹರಲಾಲ ನೆಹರೂರವರು ೧೮ ನೆಯ ತಾ ಕಲಕತ್ತೆಯ ಆಕಾಶವಾಣಿ ಕೇಂದ್ರದಿಂದ ಭಾಷಣಮಾಡುತ್ತ ಳಿದರು.

ಈಗ ಮಾಡುತ್ತಿರುವ ಭಾಷಣವನ್ನು ನಾನು ನಿನ್ನೆನ ಸಾರ್ವಜನಿಕ ಸಭೆಯಲ್ಲಿ ಮಾಡಬೇಕೆಂದಿದ್ದೆ. ಆದರೆ ಕೆಲವೊಂದು ಅನಿರೀಕ್ಷಿತ ಕಾರಣಗಳ ಮೂಲಕ ಅವುಗಳಲ್ಲಿ ಮುಖ್ಯವೆಂದರೆ ಬಹುದೊಡ್ಡ ಜನ ಸಮುದಾಯವು ಸಭೆಗೆ ಬಂದುದ್ದರಿಂದ ಸಾರ್ವಜನಿಕ ಸಭೆಯಲ್ಲಿ ಭಾಷಣಮಾಡುವದು ಸಾಧ್ಯವಾಗಲಿಲ್ಲ. ಬಹುದೊಡ್ಡ ಜನಸಮುದಾಯವು ಸಭೆಗೆ ಬಂದದರಿಂದ ಮಾಡಿದ ವ್ಯವಸ್ಥೆಯು ಸಾಕಷ್ಟಾಗಲಿಲ್ಲ. ಈ ಬಗ್ಗೆ ನಾನು ಎಲ್ಲರ ಕ್ಷಮೆ ಬೇಡುತ್ತೇನೆ.

ನಾನು ಒಂದು ವರ್ಷದ ನಂತರ ಕಲಕತ್ತೆಗೆ ಒಂದಿದ್ದೇನೆ. ಒಂದು ವರ್ಷ ಪೂರ್ಣವಾಯಿತು. ಅದು ನಮ್ಮ ತಪ್ಪುಗಳಿಂದ ಪೂರ್ಣವಾಯಿತೆನ್ನಬಹುದು' ಇಲ್ಲವೆ ನಾವು ಎದುರಿಸಿದ ಕಷ್ಟನಷ್ಟಗಳಿಂದ ಅದು ಪೂರ್ಣವಾಯಿತೆನ್ನಬಹುದು. ನಾನು ಮಾಡಿದ ಸೇವೆಯನ್ನು ಕಲಕತ್ತೆಯ ಜನರಿಗೆ ವಿವರಿಸಬೇಕೆಂದು ಮಾಡಿದ್ದೆ. ಆದರೆ ಅದು ಆಸಭೆಯಲ್ಲಿ ಸಾಧ್ಯವಾಗಲಿಲ್ಲ.

ಇಂದು ನಾನು ಒಂದು ದಶಲಕ್ಷದಷ್ಟು ಕಲಕತ್ತೆಯ ಜನರನ್ನು ಕಂಡೆನು. ಇಷ್ಟು ದೊಡ್ಡ ಜನಸಮುದಾಯವನ್ನು ನಾನು ಹಿಂದೆಂದೂ ನೋಡಿರಲಿಲ್ಲ. ನಾನು ದಿಲ್ಲಿಯಲ್ಲಿ ತಲೆಯ ಮೇಲೆ ದೊಡ್ಡ ಭಾರವನ್ನು ಹೊತ್ತುಕೊಂಡು ಕೇಳಿತಾಗೆಲ್ಲ ನಾನು ಮಾಡಿದುದು ಸರಿಯೆ. ನಾನು ಜನರ ಬೆಂಬಲದಿಂದ ಮುಖ್ಯ ಪ್ರಧಾನನ ಸ್ಥಾನದಲ್ಲಿದ್ದೇನೆ ಎಂಬ ವಿಚಾರಗಳು ನನ್ನ ತಲೆಯಲ್ಲಿ ತುಂಬುತ್ತವೆ. ಹಿಂದೀ ಜನರ ಅನುಗ್ರಹದಿಂದ ಅವರ ಸಂಪೂರ್ಣ ಬೆಂಬಲದಿಂದ ನಾನು ಮುಖ್ಯ ಮಂತ್ರಿ ಪದದಲ್ಲಿದ್ದೇನೆ. ಹೊರತು ನನ್ನನ್ನು ಬೇರೆ ಯಾರೂ ನೇಮಿಸಿಲ್ಲ.

ಪೂರ್ವ ಬಂಗಾಲಿಗಳು.

ಪೂರ್ವ ಬಂಗಾಲದಲ್ಲಿ ಕಷ್ಟಸನ್ನಿವೇಶಗಳಿಗೊಳಗಾಗುತ್ತಿದ್ದ ಎಷ್ಟೋ ಬಾಂಧವರು ಪಶ್ಚಿಮ ಬಂಗಾಲಕ್ಕೆ ಬರಲಿಚ್ಛಿಸುತ್ತಿದ್ದಾರೆಂದು ನನಗೆ ಹೇಳಲಾಗಿದೆ. ಅದರೆ ಅವರು ಹಾಗೆ ಮಾಡಬಾರದೆಂದು ನನ್ನ ಪ್ರಾರ್ಥನೆ. ನಾವು ಎಲ್ಲ ಕಷ್ಟಗಳನ್ನೂ ಅರಾಜಕತೆಯನ್ನೂ ಎದುರಿಸಲೇಬೇಕು. ಹಿಂದುಸ್ತಾನವನ್ನು ದೊಡ್ಡ ರಾಷ್ಟ್ರವನ್ನಾಗಿ ನಾವು ಮಾಡಬೇಕಾಗಿದೆ. ಸುರಕ್ಷಿತತೆಯ ಮಸೂದೆಯ ವಿಷಯವಾಗಿ ಕಲಕತ್ತೆಯಲ್ಲಿ ಮೊನ್ನೆ ಮೊನ್ನೆ ಗಲಭೆಯಾಗಿದೆ. ಈ ಮಸೂದೆಯ ವಿಷಯವಾಗಿ ಆಗಲಿ ಅಥವಾ ಅದರ ಕಲಮುಗಳು ವಿಷಯವಾಗಿ ಆಗಲಿ ನಾನು ಹೇಳಬಯಸುವದಿಲ್ಲ. ಅದರ ಇಷ್ಟೇ ಹೇಳಲಿಚ್ಛಿಸುವೆ, ಹಿಂದುಸ್ತಾನದ ಬಹುತರೆ ಎಲ್ಲ ಪ್ರಾಂತಗಳಲ್ಲಿಯೂ ಇಂಥ ಕಾಯಿದೆ ಮಾಡಲ್ಪಟ್ಟಿವೆ. ಸರಕಾರವೆ ಗಂಡಾಂತರಕ್ಕೀಡಾದರೆ ಎಲ್ಲ ಸ್ವಾತಂತ್ರ್ಯವು ನಷ್ಟವಾದಂತೆಯೇ ಸರಿ. ಸುಶಾಂತ ಪರಿಸ್ಥಿತಿಯಿಂದೆಂದು ಕಲ್ಪಿಸಿ ನಾಗರಿಕ ಹಕ್ಕುಗಳು ಪ್ರತಿಪಾದಿಸಬಹುದು. ಅದರೆ ಸದ್ಯದ ಪರಿಸ್ಥಿತಿ ಅದು ಗಂಡಾಂತರಕ್ಕೆ ಕಾರಣವಾಗುವದೆಂಬುದನ್ನು ಮರೆಯಬಾರದು. ಆದ್ದರಿಂದ ಜನರು ಶಿಸ್ತುಗೇಡಿಗಳಾಗಿ ವರ್ತಿಸಬಾರದೆಂದು ಪ್ರಾರ್ಥಿಸುತ್ತೇನೆ

ಕಲಕತ್ತೆಯ ಜನರು ನನ್ನ ಬಗ್ಗೆ ಪೂರ್ಣ ಪ್ರೀತಿ ವಿಶ್ವಾಸವೆನಿಸುತ್ತದೆಂದು ತೋರಿದರು. ಇದರಿಂದ ಬರಲಿರುವ ಎಲ್ಲ ಕಷ್ಟಗಳನ್ನು ಎದುರಿಸುವ ಸಾಮರ್ಥ್ಯ ನನ್ನಲ್ಲಿ ಬಂದಂತಾಗಿದೆ

ಕಲಕತ್ತೆಯು ಹಾಗೂ ಬಂಗಾಲವು ಉತ್ತರ ಹಿಂದುಸ್ತಾನದ ಭಾಗಗಳಲ್ಲಾದಂಥ ಗಲಭೆಯಿಂದ ಮುಕ್ತವಿದೆ. ಪಂಜಾಬ ಗಡಿಯಲ್ಲಿದ್ದ ನಾವು ಭಯಂಕರ ಪರಿಸ್ಥಿತಿಯನ್ನು ಎದುರಿಸಬೇಕಾಯಿತು. ಗಂಡಾಂತರವಿನ್ನೂ ಕೊನೆಗಂಡಿಲ್ಲ. ಆದರೆ ಏನೆ ಬಂದರೂ ಅದನ್ನು ಎದುರಿಸುವ ಶಕ್ತಿ ನನಗೆ ಬಂದಿದೆ ಹಿಂದೀ ಜನರ ವಿಶ್ವಾಸ, ಹಿಂದುಸ್ತಾನದ ಭವಿತವ್ಯದ ಬಗ್ಗೆ ವಿಶ್ವಾಸ ಮತ್ತು ಮಹಾತ್ಮರ ಸಂನಿಧಾನ ಈ ಮೂರೇ ಸಂಗತಿಗಳಿಂದ ನನಗೆ ಕಷ್ಟಕಾಲವನ್ನು ನೀಗುವ ಸಾಮರ್ಥ್ಯ ದೊರಕಿತು. ಅಂಜಿಕೆಯನ್ನು ಬಿಟ್ಟು ಬಿಡಿರಿ, ಎಲ್ಲವೂ ಸರಿಹೋಗುವದು ಎಂಬ ಸಂದೇಶವನ್ನು ಕಳೆದ 25 ವರ್ಷಗಳಿಂದ ಮಹಾತ್ಮರು ನನಗೆ ಕೊಡುತ್ತ ಬಂದಿದ್ದಾರೆ.

ವಿದೇಶಿ ಸರಕಾರವಿದ್ದಾಗ ಸರಿಯಾಗಬಹುದಾದಂಥ ಕೃತ್ಯವನ್ನು ನಾವು ಈಗ ಏಕೆ ಮಾಡಬೇಕು? ಹಿಂದಿನ ಸರಕಾರವನ್ನು ಕಿತ್ತೊಗೆಯುವದು ನಮ್ಮ ಕೈಯಲ್ಲಿರಲಿಲ್ಲ. ಈಗ ಹಾಗಿಲ್ಲ ಘಟನಾತ್ಮಕ ರೀತಿಯಿಂದ ಈ ಸರಕಾರವನ್ನು ಕೇಳಿಬಹುದು

'ಜಯಹಿಂದ' ನಿಜವಾಗಲಿ
ಪಂಡಿತರ ಸಂದೇಶ

ಕಲಕತ್ತಾ ಕಲಕತ್ತೆಯನ್ನು ಬಿಟ್ಟು ತೆರಳುವಾಗ ಪಂ. ಜವಾಹರಲಾಲರು ಅಲ್ಲಿ ನೆರೆದ ಜನರನ್ನು ಬೀಳ್ಕೊಡುತ್ತ "ಕಲಕತ್ತೆಯ ಜನರಿಗೆ ನಾನು ತುಸು ಬೆದರುತ್ತೇನೆ. ಭಯ ಗಂಡಾಂತರಗಳನ್ನು ಹೇಗೆ ಎದುರಿಸಬೇಕೆಂಬದನ್ನು ನಾನು ಬಲ್ಲೆ ಆದರೆ ನನಗಾಗಿ ನಿಮ್ಮಿಂದ ಉಕ್ಕಿ ಬರುತ್ತಿರುವ ಪ್ರೇಮವನ್ನು ಹೇಗೆ ಎದುರಿಸಲಿ? ಈ ವಿಚಾರ ಬಂದಾಗ ನನ್ನ ಕಂಣುಗಳು ಹನಿಗೂಡುತ್ತವೆ; ಕಂಠ ಬಿಗಿದು ಬರುತ್ತದೆ. ಮತ್ತು ಈ ಅಪೂರ್ವ ಪ್ರೇಮವನ್ನು ಸ್ವೀಕರಿಸಲು ನಾನೆಷ್ಟು ಅಪಾತ್ರನಿದ್ದೇನೆ! ಆದರೆ ಇದನ್ನು ವ್ಯಕ್ತಿಗಲ್ಲದೆ ನಮ್ಮೆಲ್ಲರ ಉದಾತ್ತ ಧ್ಯೇಯಕ್ಕಾಗಿ ಕೊಟ್ಟಿರುವಿರೆಂದು ನಾನು ನಂಬುತ್ತೇನೆ. ಆದ್ದರಿಂದ ನನ್ನನ್ನು ಮರೆತರೂ ಈ ಧ್ಯೇಯವನ್ನು ಮರೆಯದಿರಿ. ಸ್ವತಂತ್ರ ಪ್ರಜಾಸತ್ತಾತ್ಮಕ ಭಾರತವನ್ನು ಕಟ್ಟಲು ನಿಮ್ಮ ಎಲ್ಲ ಶಕ್ತಿಗಳನ್ನು ಸಂಘಟಿಸಿರಿ. ಲಕ್ಷಾಂತರ ಕಂಠಗಳು ಜೈಹಿಂದ ಕೂಗುವದನ್ನು ನಾನು ಕೇಳಿದ್ದೇನೆ. ಅದು ನಿಜವಾಗಿ ಪರಿಣಮಿಸಲಿ. ಭಯ ಮತ್ತು ಸಂಕುಚಿತ ಜಾತೀಯತೆಯನ್ನು ಕಳೆದೊಗೆಯಿರಿ. ಜೈಹಿಂದ" ಎಂದು ಹೇಳಿದರು.

N. G. O. ನೌಕರರ ಸಂಪು.

ಯನ್. ಜಿ. ಒ. ನವಕರರ ಅಭಿಪ್ರಾಯ.

ಸರ್ಕಾರದವರು ನಮ್ಮಂಥ ಸಣ್ಣ ಪುಟ್ಟನವಕರರಿಗೆ ಕೊಡುವ ಸಂಬಳ ಅಲೋಯ್ಯನ್ಸ್‌ನಿಂದ ನಮಗೆ ಜೀವನ ರಥ ಸಾಗುವದಿಲ್ಲ. ನಮ್ಮಲ್ಲನೇಕರು ಅಹನ್ಯಹನಿ ಕಾಲಕ್ಷೇಪ ಮಾಡುತ್ತಿರುವರು. ನವಕರರೆಲ್ಲಾ ಲಂಚತಿಂಬುವರಲ್ಲ. ಅಲ್ಲದೆ ಸಣ್ಣ ಪುಟ್ಟನವಕರರ ಕಡೆಗೆ ದೃಷ್ಟಿಹಾಕದಿರುವ ಸಾರ್ವಜನಿಕರು ಇದ್ದಾರೆ. ನಾವು ಕಷ್ಟಗಳನ್ನು ಸಹಿಸಿ ಸಹಿಸಿ ನಿರ್ವೀರ್ಯರಾಗಿ ಹೋಗಿಬಿಟ್ಟಿದ್ದೇವೆ. ಜೀವನವು ನಿರಸನವಾಗಿದೆ ಹೊಟ್ಟೆತುಂಬ ಆಹಾರ ಕೊಟ್ಟರಲ್ಲವೇ ಕೆಲಸವನ್ನು ತೃಪ್ತಿದಾಯಕವಾಗಿ ಮಾಡುವ ಶಕ್ತಿಯಾದರೂ ಲಭಿಸೀತು. ಈ ರೇಷನ್ ದಿನಗಳಲ್ಲಿ ಮಕ್ಕಳೊಂದಿಗರಾದ ನವಕರರ ಅವಸ್ಥೆಯಂತೂ ಹೇಳತೀರದು. ಎಲ್ಲಾದರೂ ಸಾಲದ ಶೂಲಕ್ಕೆಡೆಮಾಡಿ ಕಾಳುತಂದುಹಾಕಿದರೂ ಗುರುವಾರ ಹೆಚ್ಚಿಂದರೆ ಶುಕ್ರವಾರದ ಹೊತ್ತಿಗೆ ಧಾನ್ಯಸಂಗ್ರಹತೀರಿ ಭಾನುವಾರ ಕಾಳುತರುವವರಿಗೆ ಉಪವಾಸ ಮಾಡಬೇಕಾಗುತ್ತದೆ.

ಯುದ್ಧವ್ಯಾರಂಭವಾದ ಮೇಲಂತೂ ನಮ್ಮ ಕೆಲಸವು 3 ರಷ್ಟು 4 ರಷ್ಟು ಹೆಚ್ಚಿದೆ. ಕೆಲಸಹೆಚ್ಚಿದಂತೆ, ಜೀವನಮಟ್ಟವು ಹೆಚ್ಚಿದಂತೆ ಸಂಬಳ ಅಲೋಯ್ಯನ್ಸ್‌ಗಳು ಹೆಚ್ಚಲಿಲ್ಲ. ಹೆಚ್ಚಿನಸಂಬಳ ಹೆಚ್ಚಿನ ಅಲೋಯ್ಯನ್ಸ್ ಇರುವವರಿಗೆ ಅತಿ ಅಲ್ಪಕೆಲಸ. ಸಂಬಳಕಡಮೆಯಾದಂತೆಲ್ಲಾ ಹೆಚ್ಚಿನ ಕೆಲಸ. ಈ ಪದ್ಧತಿ ಬ್ರಿಟಿಷ್ ಕಾಲದಿಂದಲೂ ಬಂದಿದೆ. ಈಗಲೂ ಮುಂದುವರಿಯುತ್ತಲಿದೆ.

ಪ್ರಜಾಸರ್ಕಾರಕ್ಕೆ ತೊಂದರೆಕೊಡಬೇಕೆಂಬುದಾಗಲಿ ನಿಷ್ಠೆ (Loyalty) ಯಲ್ಲಿ ಕಳಂಕತರಬೇಕೆಂಬುದಾಗಲಿ ನಮ್ಮ ಕಿಂಚಿತ್ತು ಇಷ್ಟವಿಲ್ಲ. ಇಪರ ಸ್ಪಷ್ಟೀಕರಣವನ್ನು ನಮ್ಮ ಅಧ್ಯಕ್ಷರೇ ಮಾಡಿದ್ದಾರೆ. ನಾವೆಲ್ಲಾ ಕಾಂಗ್ರೆಸಿನವರಷ್ಟೇ ದೇಶ ಮತ್ತು ಸ್ವಾತಂತ್ರ್ಯ ಪ್ರೇಮಿಗಳಿದ್ದೇವೆ. ಕೈಲಾಗದೆ ಪರಿಸ್ಥಿತಿಯ ಹಿಡಿತದಲ್ಲಿ ಸಿಕ್ಕು ನಾವು ಸ್ವಾತಂತ್ರ್ಯ ಸಂಗ್ರಾಮಗಳಲ್ಲಿ ಪ್ರತ್ಯಕ್ಷರೀತಿಯಿಂದ ಭಾಗವಹಿಸಲಿಲ್ಲ.

ನಮ್ಮ ನ್ಯಾಯವಾದ ಬೇಡಿಕೆಗಳನ್ನು ಸರ್ಕಾರವು ಮನ್ನಿಸಬೇಕೆಂದು ಆಶಿಸುತ್ತೇವೆ.

ಪ್ರೊಫೆಸರ್ ಎಂ. ವೆಂಕಟರಂಗಯ್ಯ ಎಂ. ಎ. ಇವರು ಹೀಗೆ ಬರೆಯುತ್ತಾರೆ:—

"N G O ರ ಸಂಪು ಈಗಿನ ಸಂದರ್ಭದಲ್ಲಿ ಯಾವದೃಷ್ಟಿಗಳಿಂದಲೂ ಸಮರ್ಥನೀಯವಿಲ್ಲ. ಜನತಾ ಅಭಿವ್ಯಾಯವು ಇವರ ವಿರೋಧವಿದೆಯೆಂಬುದು ಶತಸಿದ್ಧವಾಗಿದೆ. ಕೆಲ ಇಲಾಖೆಗಳವರು ಕಳ್ಳಸಂತೆ ನಿಯಂತ್ರಣಗಳ ಉಪಯೋಗ ಪಡೆದು ಯುದ್ಧಕಾಲದಲ್ಲಿ ಅಪರಿಮಿತ ಸುಲಿಗೆಮಾಡಿದರು. ಈಗಲೂ ಮಾಡುತ್ತಿರುವರು. ಯಾವ ದೇಶದಲ್ಲೇ ಆಗಲಿ ಒಂದು ಶಾಖೆಯವರ ಜೀವನಮಟ್ಟವು ಸಾಧಾರಣ ಮನುಷ್ಯನಿಗಿಂತ ಶ್ರೇಷ್ಠವಿರಬೇಕೆಂಬುದು, ಅನ್ಯಾಯದ್ದಾಗಿದೆ ಹಳ್ಳಿಯ ಸಾಮಾನ್ಯ ರೈತ ಮತ್ತು ಪಟ್ಟಣದ ಸರ್ವಸಾಧಾರಣ ನಾಗರೀಕನ ಜೀವನಮಟ್ಟಕ್ಕಿಂತ ಈ ಗುಮಾಸ್ತನ ಜೀವನ ಮಟ್ಟವು ಬಹಳ ಹೆಚ್ಚಿದೆ. ಹೊಸದಾಗಿ ತಾತ್ಕಾಲಿಕವಾಗಿ ನೌಕರಿಗೆ ಸೇರುವ ಗುಮಾಸ್ತರಿಗೆ $30+16=46$ ಮಾಸಿಕ ಸಂಬಳ ಕೊಡುತ್ತಾರೆ. ಸರ್ವೇ ಸಾಧಾರಣದ ಕನಿಷ್ಟವರ್ಗದ ಗುಮಾಸ್ತನಿಗೆ ಅಲೋಯ್ಯನ್ಸ್ ಸೇರಿ 61 ರೂ. ಮಾಸಿಕ ವೇತನ ಸರ್ಕಾರವು ಕೊಡುತ್ತಲಿದೆ. ಭಾರತೀಯನ ಸರಾಸರಿ ಆದಾಯಸ್ಥಿತಿಂಗಳಿಗೆ 5/- ಕೂಡ ಇಲ್ಲ.

ಯಾವ ಬಡಸೈತ ಬಡನಾಗರೀಕರ ಹಣದಿಂದ ಈ ಗುಮಾಸ್ತರಿಗೆ ಇಷ್ಟೊಂದು ಸಂಬಳ ಅಲೋ

ರ್ಯನ್ಸ್ ಕೊಡುತ್ತಿರುವರೋ ಅದನ್ನು ಮತ್ತೆ ಹೆಚ್ಚಿಸುವದೆಂದರೆ ಪ್ರಜೆಗಳ ಮೇಲೆ ಮತ್ತೆ ತೆರಿಗೆಯ ಭಾರವನ್ನು ಹೇರಿದಂತಾಗುತ್ತದೆ. ಪ್ರಜೆಗಳು ಪುನಃ ತೆರಿಗೆಯ ಭಾರವನ್ನು ಹೊರಲು ಸಿದ್ಧರಿಲ್ಲ.

ದೇಶದ ಪ್ರಗತಿಗಾಗಿ ಕೈಗೊಂಡಿರುವ ಕಾರ್ಯಗಳಿಗೆ ನಾವು ಲಕ್ಷ್ಯಕೊಡಬೇಕೆಂದರೆ ಇಲ್ಲವಾದರೆ ಮದ್ರಾಸ್ ಪ್ರಾಂತದ ಆದಾಯವನ್ನೆಲ್ಲಾ ಇವರ ಸಂಬಳ ಆಲೋರ್ಯನ್ಸ್‌ಗಳಿಗಾಗಿಯೇ ವೆಚ್ಚಮಾಡಿ ಮತ್ತಾವ ರಚನಾತ್ಮಕ ಕಾರ್ಯವನ್ನೂ ಕೈಗೊಳ್ಳದೆ ಸ್ತಬ್ಧಕೂಡಬೇಕಾಗುತ್ತದೆ. ಕಡಮೆ ಸಂಬಳ ನೌಕರನ ಸುಜೀವನ ವ್ಯವಸ್ಥೆಯನ್ನು ಪುನರ್ವಿಚಾರ ಮಾಡುವ ದಾಗಬಹುದು. ಆದರೆ ಮದ್ಯನಿಷೇಧವನ್ನು ಕೈಗೊಂಡು ಮದ್ರಾಸ್ ಸರ್ಕಾರವು 16 ಕೋಟಿ ರೂ. ಕಳೆದು ಕೊಂಡಿರುವಾಗ ಇದು ಸಾಧ್ಯವೇ ಇಲ್ಲ.

ಮತ್ತೊಬ್ಬ ಸುದ್ದಿಗಾರರು ಹೀಗೆ ಬರೆಯುತ್ತಾರೆ:-

1942 ರ ಆಗಸ್ಟ ಚಳವಳಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಯೊಬ್ಬ ಸರ್ಕಾರಿ ನವಕರರಿಗೆ ಪ್ರಿಂಟೆಡ್ ನೋಟೀಸು ಕೊಟ್ಟು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಲು ಕೆಲಸಗಳಿಗೆ ಶರಣು ಹೊಡೆದು ಬರಬೇಕೆಂದು ಬೇಡಿಕೊಂಡರು. ಯಾವ ಅಧಿಕಾರಿಯಾಗಲಿ ಗುಮಾಸ್ತನಾಗಲಿ ರಾಜೀನಾಮೆ ಕೊಡಲಿಲ್ಲ. ಸರ್ಕಾರಿನವಕರರಲ್ಲಿ ಅತ್ಯಧಿಕ ಸಂಖ್ಯಾಕರು ಯಾವ ಸ್ವಾತಂತ್ರ್ಯ ಸಂಗ್ರಾಮಕ್ಕೂ ದಂಬಡಿ ಸಹಾಯಮಾಡಲಿಲ್ಲ.

"ಈ N. G. O. ಅಧಿಕಾರಿಗಳು 1947 ಆಗಸ್ಟ 15 ರ ವರೆಗೆ ಪರಕೀಯ ಸರ್ಕಾರವಿದ್ದಾಗ ಬಂಡಾಯ ಹೂಡಲಿಲ್ಲ ಈ ನಾಲ್ಕುತಿಂಗಳೊಳಗಾಗಿ ಆಹಾರ ಧಾನ್ಯಗಳ ವಿರಳಿತ ತಲೆಕೆಳಗಾಗಿಲ್ಲ. ಆದರೆ ಈಗ ಪ್ರಜಾಸರ್ಕಾರವಿರುವ ಕಾಲದಲ್ಲಿ ಅವರನ್ನು ತೊಂದರೆಗೀಡುಮಾಡುವ ಉದ್ದೇಶ ವಿರೋಧ ಬಂಡಾಯವೆಬ್ಬಿಸಿದ್ದಾರೆ. ಸರ್ಕಾರಿನವಕರರಲ್ಲಿ ಶಿಸ್ತು ಕಾರ್ಯನಿಷ್ಠೆ ಸ್ವಾಮಿಭಕ್ತಿ ಇರಬೇಕು. ಇವೆಲ್ಲಾ ಬ್ರಿಟಿಷ್ ಸರ್ಕಾರದ ಕಾಲಕ್ಕಿದ್ದವು. ಈಗ ಒಂದೇ ಸಲ ಮಾಯವಾಗಿ ಪ್ರಜಾಸರ್ಕಾರವನ್ನು ಸಾರ್ವಜನಿಕ ಸಭೆಯಲ್ಲಿ ದೂಷಿಸುವ ಧೈರ್ಯ ಇವರಿಗೆ ಬಂತು ಎಂಥಾ ಪ್ರಜಾಸರ್ಕಾರವೇ ಆಗಲಿ ಇದನ್ನು ಸಹಿಸಬಾರದು. ತಕ್ಕ ಪ್ರತೀಕಾರೋಪಾಯಗಳನ್ನು ತೆಗೆದುಕೊಳ್ಳಬೇಕು.

ಸಂಪುಬೀಡ.

"ಬಳ್ಳಾರಿ ಜಿಲ್ಲೆಯು ನಿಜಾಮ ಸರಹದ್ದಿನಲ್ಲಿರುವದರಿಂದ N. G. O. ರ ಸಂಪು ಅಪಾಯಕರವಾದ್ದಾಗಿದೆ. ಅಲ್ಲದೆ ಅದರಿಂದ ಪ್ರಜಾಸರ್ಕಾರಕ್ಕೂ, ಸಾರ್ವಜನಿಕರಿಗೂ ತೊಂದರೆಯಾಗಿರುವ ಕಾರಣ ಅದನ್ನು ಸಾಕುಮಾಡಬೇಕು. ಸರ್ಕಾರದವರು ಅವರ ನ್ಯಾಯವಾದ ಬೇಡಿಕೆಗಳನ್ನು ಮನ್ನಿಸಬೇಕು" ಎಂಬುವ ನಿರ್ಣಯವು 16 ನೆಯ ತಾ. ಸಾರ್ವಜನಿಕಸಭೆಯಲ್ಲಿ ಶ್ರೀ ಡಿ. ಯಜ್. ವೆಂಕೋಬರಾಯರಿಂದ ಮಂಡಿಸಲ್ಪಟ್ಟು ಸರ್ವಾನುಮತದಿಂದ ಸ್ವೀಕೃತವಾಯಿತು.

ನಾನ್‌ಗೆಜೆಟೆಡ್ ಅಧಿಕಾರಿಗಳ ಸಂಪು

ಬಳ್ಳಾರಿ ನಗರದಲ್ಲೇನೋ ಎಲ್ಲಾ ಕಾರ್ಯಾಲಯಗಳಲ್ಲೂ ಸರ್ಕಾರಿ ನಾನಗೆಜೆಟೆಡ್ ಅಧಿಕಾರಿಗಳು (15 ನೆಯ ದಿನಾಂಕ) ದಿಂದ ಸಂಪು ಹೂಡಿರುವರು, ಇದು ಬಹಳ ಯಶಶ್ವಿಯಾಗಿದೆ ಸದ್ಯಕ್ಕೆ ಸರ್ಕಾರಿ ಕಛೇರಿಗಳಲ್ಲಿ ಅಲ್ಲಲ್ಲಿ ಒಬ್ಬೊಬ್ಬ ಗುಮಾಸ್ತರು ಕಂಡು ಬರುತ್ತಲಿರುವರು. ಜಿಲ್ಲೆಯ ಎಲ್ಲಾ ಭಾಗಗಳಲ್ಲೂ ಸಂಪು ನಡೆದಿದೆ.

ಕುರಾನ್ - ಕತ್ತಿ

ಒಂದು ಕೈಯಲ್ಲಿ ಕುರಾನ್ ಒಂದು ಕೈಯಲ್ಲಿ ಕತ್ತಿಯನ್ನು ಹಿಡಿದು ಶಾಂತತಾಭಂಗ ಮಾಡುವ ಪ್ರತಿಗಾಮಿ ಚಟುವಟಿಕೆಗಾರರಿಗೆ, ಹೈದರಾಬಾದ ಮಜ್ಲಿಸ ಅಧ್ಯಕ್ಷರಾದ ಕಾಸಿಂ ರಜ್ವಿಯವರು ಎಚ್ಚರಿಕೆ ಕೊಟ್ಟರು ಮುಸಲ್ಮಾನರ ಸಭೆಯಲ್ಲಿ ಸ್ವತಂತ್ರ ಹೈದರಾಬಾದಿಗೂ ಮುಸಲ್ಮಾನರಿಗೂ ಅನುಪಮಸೇವೆಗೈದ ರಜ್ವಿಯವರಿಗೆ ಕುರಾನ ಮತ್ತು ಕತ್ತಿಯನ್ನು ಬಹುಮಾನ ರೂಪವಾಗಿ ಮುಸಲ್ಮಾನರು ಕೊಟ್ಟರು.

ಆಂಧ್ರ ಪ್ರಾಂತ ನಿರ್ಮಾಣವು ಶೀಘ್ರದಲ್ಲಾಗುವುದು.

ಶ್ರೀ ಟಿ. ಪ್ರಕಾಶಂರವರು, ಭಾರತ ಮುಖಂಡರ ಹೇಳಿಕೆ ದೊರಕಿಸಲು ಪಟ್ಟ ಪ್ರಯತ್ನಗಳನ್ನು, ಆಂಧ್ರ ಪ್ರಾಂತದ ಶೀಘ್ರ ನಿರ್ಮಾಣವನ್ನು ಕುರಿತು ಬಹಿರಂಗ ಸಭೆಗಳಲ್ಲಿ ಸ್ಪಷ್ಟೀಕರಣ ಮಾಡಿದರು. ನಮ್ಮ ಪ್ರಾಂತ ನಿರ್ಮಾಣವು ಶೀಘ್ರವಾಗಿ ಆಗಲಿದೆ, ಬರುವ ಫೆಬ್ರವರಿಯಲ್ಲಿ ಅಲ್ಲವಾದರೆ, ಮಾರ್ಚ್, ಏಪ್ರಿಲ್, ತಿಂಗಳುಗಳೊಳಗಾದರೂ ನಮ್ಮ ಆಶೆಯು ಈ ಡೇರ ಲಿದೆ, ನೀವೆಲ್ಲರೂ ನಮಗೆ ಸಾಕಷ್ಟು ಪ್ರೋತ್ಸಾಹ ಕೊಟ್ಟು, ಪ್ರಾಂತೀಕರಣದ ಫಲದೊರಕಿಸಿದಿರಿ ..... ಬಳ್ಳಾರಿ ಜಿಲ್ಲೆಯಲ್ಲಿ ಕೇಳ್ಕರ ಅವಾರ್ಡದ ಪ್ರಕಾರಕ್ಕೆ ನಮಗೆ ಸೇರಿದ ಭಾಗಗಳೆಲ್ಲೂ ಸಂಚರಿಸಿ, ನಮ್ಮವ ರೊಡನೆ ಕಲೆತು, ಶುಭ ಸಮಾಚಾರವನ್ನರುಹಿ, ಭವಿಷ್ಯ ಸಂಘಟನೆ ಅಣಿಮಾಡಲಿದ್ದೇನೆ.

"ನಮ್ಮ ಮಂತ್ರಿಮುಂಡಳವು ಉರುಳಿ ಇನ್ನೊಂದು ಅಸ್ತಿತ್ವದಲ್ಲಿ ಬಂದದ್ದು, ಅಧಿಕಾರ ಪ್ರಿಯರಿಂದ ನಾವು ಗಾಂಧೀಜಿಯವರ ಕಾರ್ಯಕ್ರಮವನ್ನು ಅಮಲಿನಲ್ಲಿ ತರಲು ಬದ್ಧರಾಗಿದ್ದೆವು. ನಿಮ್ಮಿಂದ ಮತಗಳನ್ನು ಪಡೆದು ಹೋದವರು, ಮಂತ್ರಿಪದಗಳಿಗಾಗಿ 3-4 ಬಣ ಗಳನ್ನುನೂಡಿಕೊಂಡು ಕಲಹಕ್ಕೆ ತೊಡಗಿದರು, ನನ್ನ ಹೇಳಿಕೆಯಲ್ಲಿ ಇನ್ನೆಲ್ಲಾ ಸ್ಪಷ್ಟೀಕರಿಸಿದ್ದೇನೆ, ಕಾಂಗ್ರೆಸ ಬಹಳ ದೊಡ್ಡ ಶ್ರೇಷ್ಠ ಸಂಸ್ಥೆ ಆದರೆ ಅದರಲ್ಲಿ ಕೆಲ ದುರಾಸೆಯ ವ್ಯಕ್ತಿಗಳು ಸೇರಿ ಅದಕ್ಕೆ ಕಳಂಕವನ್ನು ತಂದರು, ಗಾಂಧೀಜಿಯವರ ಆದರ್ಶ ತತ್ವಗಳನ್ನು ಜಾರಿಯಲ್ಲಿ ತರಲು ಬದ್ಧವಾದ ಚುನಾವಣಾ ಪ್ರಣಾ ಳಿಕೆಯನ್ನು ಮತದಾರರ ಮುಂದಿಟ್ಟು, ಕಾಂಗ್ರೆಸ್ ಹೆಸರಿನಿಂದ ಅರಿಸಿ ಬಂದು, ಆ ತತ್ವಗಳಿಗೇ ಇಂದು ತಿಲಾಂಜಲಿಯನ್ನಿತ್ತಿರುವರು, ಕೆಲವರು !! ಮುಖಂಡ ರಾಗಲಿಚ್ಛಿಸುತ್ತಿರುವವರು !!

"ನೀವಾರೂ ಇಂಥ ಬಲೆಗಳಿಗೆ ಬೀಳಬಾರದು. ಕುಹಕರನ್ನು ಹೊರದೂಡಬೇಕು, ಸಂಸ್ಥೆಯನ್ನು ಶುದ್ಧ ವಾಗಿರಿಸುವ ಕಾರ್ಯದಲ್ಲಿ ಎಲ್ಲರೂ ಸಹಕರಿಸ ಬೇಕೆಂದರು."

ಆಂಧ್ರ ವಿಜ್ಞಾನ ಸಮಿತಿಯವರು, ಪ್ರಭಾತ ಟಾಕೀಸ್‌ದಲ್ಲಿ ಶ್ರೀ ಪ್ರಕಾಶಂರನ್ನು ಸತ್ಕರಿಸಿದರು, ರಾಯದುರ್ಗ, ಆಲೂರು, ಆದವಾನಿಗಳನ್ನು ಸಂದ ರ್ಶಿಸಿ, ಶ್ರೀ ಪ್ರಕಾಶಂರವರು ಮದ್ರಾಸಿಗೆ ತೆರಳಿರುವರು.

ತಾರಾನಾಥ ಆಯುರ್ವೇದ ವಿದ್ಯಾಪೀಠದಲ್ಲಿ.

ಮಾಜೀ ಪ್ರಧಾನ ಮಂತ್ರಿ, ಆಂಧ್ರಕೇಸರಿ; ಶ್ರೀ ಟಿ. ಪ್ರಕಾಶಂರವರು

ಮಾನ್ಯ ಪ್ರಕಾಶಂರವರು, ಶ್ರೀ ಟೀ ಕೂ ರು ಸುಬ್ರಮ್ಮಣ್ಯಂ, ಡಾ ವೆಂಕಟರಮಣ ಮುಂತಾದವ ರೊಡನೆ ವಿದ್ಯಾಪೀಠಕ್ಕೆ ಆಗಮಿಸಿ, ತಮ್ಮ ಶುಭಹಸ್ತ ದಿಂದ ರಾಷ್ಟ್ರಧ್ವಜವನ್ನು ಹಾರಿಸಿ, ಕಾಲೇಜ ವಿದ್ಯಾರ್ಥಿ ಗಳಿಗೆ ಸನುಯೋಚಿತ ಉಪದೇಶಗಳನ್ನುಮಾಡಿ, ಹಳ್ಳಿ ಗರ ಸೇವೆಗಾಗಿ ಕಟಿಬದ್ಧವಾಗಿ ನಿಂತಿರುವ ಇಂಥಹ ಆಯುರ್ವೇದ ಆಶ್ರಮಗಳಿಗೆ ಇಂದಿನ ಸ್ವತಂತ್ರ ಭಾರತವು ಸರ್ವ ವಿಧದಿಂದ ಸಹಾಯವನ್ನು ನೀಡು ತ್ತದೆಂದು ಆಶ್ವಾಸನವನ್ನಿತ್ತರು. ಚ ಹಾ ಪಾ ನ ಹೂಮಾಲೆ, ಮತ್ತು "ಆಂಧ್ರ ಕೇಸರೀಕೀ ಜೈ" ಘೋಷಣೆಗಳೊಡನೆ ಮುಂದಿನ ಕಾರ್ಯಕ್ರಮಕ್ಕೆ ಮೋಟಾರಿಸಿದರು

ರಿಜಿಟರ್ಸ್ ಬುಕ್ಕಿನಲ್ಲಿ ಅವರು ಹೀಗೆ ಬರೆದಿರುವರು.

"Every thing is very good done here in the name of my old departed friend Taranath I offer my blessings and congratulations to the leaders and rank and file"

ನವಭಾರತಕ್ಕೆ ಚಂದಾದಾರರಾಗಿರಿ

ಪ್ರಾಚೀನ ಸೋಮನಾಥ ದೇವಾಲಯ

"ಸೋಮನಾಥವು ಗುಜರಾಥ ಪ್ರಾಂತದಲ್ಲಿರುವ ಒಂದು ಪ್ರಸಿದ್ಧ ಶಿವದೇವಾಲಯ. ಇದರ ಜಾಗೃತಿಯನ್ನೂ, ಈ ದೇವಾಲಯಗಳಲ್ಲಿ ಅಗಣಿತ ಸಂಪತ್ತು ಇರುವುದೆಂಬುದನ್ನು ಕೇಳಿಯೇ ಘಜನಿ ಮಹಮ್ಮದನು ಇದರ ಮೇಲೆ ದಾಳಿ ಮಾಡಿದುದು ಇತಿಹಾಸ ಪ್ರಸಿದ್ಧವಾದ ಮಾತಾಗಿದೆ. ಈ ಪ್ರಸಿದ್ಧ ದೇವಾಲಯವನ್ನು, ಚಾಲುಕ್ಯ ಅರಸುವಂಶದವನಾದ ಕುಮಾರಪಾಲನೆಂಬ ರಾಜನು ಕಟ್ಟಿಸಿದನು. ಗುಜರಾಥ ಪ್ರಾಂತಕ್ಕೆಲ್ಲ ಇದೊಂದೇ ಪ್ರಸಿದ್ಧವೂ ಮಹತ್ವದ್ದೂ, ಬಯಜನ ಮನವನ್ನೂ ಸೆಳೆದದ್ದೂ ರಾಜಕೀಯ ಮಹತ್ವ ಉಳ್ಳದ್ದೂ ಆದ ಒಂದೇ ಒಂದು ದೇವಾಲಯವಾಗಿದ್ದಿತು. ಅಂತೆಯೇ ಮಧ್ಯಕಾಲೀನ ಗುಜರಾತದಲ್ಲಿ "ಜೈ ಸೋಮನಾಥ" ಎಂಬುದು ಕಾಳಗದ ಕೂಗಾಗಿತ್ತು ಇತಿಹಾಸದಲ್ಲಿ ಈ ದೇವಾಲಯಕ್ಕೆ ಬಹು ಮಹತ್ವದ ಸ್ಥಾನವಿತ್ತು. ಮೊನ್ನೆ ಮೊನ್ನೆ ಸರದಾರ ಪಟೇಲರೂ, ಗಾಡಗೀಳರೂ ಗುಜರಾತವನ್ನು ಸಂದರ್ಶಿಸಿದಾಗ, ಅವರನ್ನು ಕಂಡು ಜನತೆ ಆನಂದ ವ್ಯಕ್ತ ಮಾಡುತ್ತ "ಜೈ ಸೋಮನಾಥ" ಎಂದು ಕೂಗಿತು.

ಈ ಸೋಮನಾಥ ದೇವಾಲಯಕ್ಕೆ ಬಹುಪುರಾತನವಾದ ಇತಿಹಾಸವುಂಟು. ಸೋಮನೆಂಬವನಿಂದ ಬಂಗಾರದಲ್ಲಿಯೇ ಈ ಮೂರ್ತಿಯನ್ನು ನಿರ್ಮಿಸಲ್ಪಟ್ಟಿತು ಅಜ್ಞಾತವಾಸದಲ್ಲಿ ಪಾಂಡವರು ಇಲ್ಲಿ ತಂಗಿ, ತಮ್ಮ ಪ್ರಾರ್ಥನೆಯನ್ನು ಸೋಮನಾಥನಿಗೆ ಸಲ್ಲಿಸಿದ್ದಾರೆ. ಯಾದವರು ಇಲ್ಲಿಯೇ ತಮ್ಮ ವೈಭವದ ಶಿಖರಕ್ಕೇರಿ, ಯಾದವೀ ಯುದ್ಧದಿಂದ ಸರ್ವನಾಶವನ್ನೂ ಮಾಡಿಕೊಂಡರು. ಇಲ್ಲಿಯೇ ಹಿರಣ್ಯ ನದಿಯ ದಡದ ದೇಹತ್ಯಾಗವೆಂಬ ತಾಣದಲ್ಲಿ ಶ್ರೀಕೃಷ್ಣನು ದೇಹವಿಟ್ಟದ್ದು. ಗಿರಿನಾರ ಪರ್ವತದ ಅಪೂರ್ಣ ಶೋಭೆಗೆ ಹೆಸರಾದ ಪಟ್ಟಣವು, ಅಶೋಕನ ರಾಜಧಾನಿಯಾಗಿತ್ತು. ಹೂಣರನ್ನು ಹಣಿದು ಗುಪ್ತವಂಶದ ಸಾಮ್ರಾಟನಾದ ಸ್ಕಂದ ಗುಪ್ತನು ಇಲ್ಲಿಯೇ ರಾಜ್ಯಭಾರ ಮಾಡಿದ್ದನು.

ವೇದ, ಪುರಾಣಗಳ ಕಾಲದಿಂದಲೂ ಈ ಸೋಮನಾಥ ದೇವಾಲಯದ ಐತಿಹ್ಯವು ಕಂಡುಬರುತ್ತಿದೆ; ಮತ್ತು ಆಗಿನಿಂದಲೂ ಪ್ರಾಚೀನವೂ ಪೂಜ್ಯವೂ ಆದ ದೇವಾಲಯವೆಂದು ಜನತೆಯಲ್ಲಿ ಪ್ರತೀತಿ ಇತ್ತೆಂದು ತಿಳಿದು ಬರುತ್ತದೆ. ಪಾಶುಪತ ಶೈವಸಂಪ್ರದಾಯವು ಆ ಕಾಲದಲ್ಲಿ ಒಳ್ಳೇ ಊರ್ಜಿತ ಸ್ಥಾನದಲ್ಲಿತ್ತು. ಸೋಮನಾಥನಿಗೆ, ಸಾವಿರಾರು ವಿದ್ವಾಂಸ ಬ್ರಾಹ್ಮಣರು ಗಂಗಾಜಲದಿಂದ ನಿತ್ಯಾಭಿಷೇಕ ಮಾಡುತ್ತಿದ್ದರು.

ಈ ಗಡಿಯ ಮೂರ್ತಿಯನ್ನು ಘಜನಿ ಮಹಮ್ಮದನು 1025 ರಲ್ಲಿ ಮುತ್ತಿ ಭಂಗ ಮಾಡಿ ಅಲ್ಲಿಯ ಸಂಪತ್ತನ್ನೆಲ್ಲ ದೋಚಿಕೊಂಡು ಕಚ್ಛಪರಣದ ಮಾರ್ಗವಾಗಿ ಹಿಂತಿರುಗಿದನು ಆದರೆ ಭೋಜ ಪರಮಾರ ಮತ್ತು ಚಾಲುಕ್ಯ ಭೀಮದೇವರು ಆ ಸ್ಥಳದಲ್ಲಿಯೇ ಅದನ್ನು ಮತ್ತೆ ಪುನರುತ್ಥಾಪನೆಯನ್ನು ಮಾಡಿದರು.

ಶಿಲ್ಪಕಲಾ ವೈಭವದ ದೃಷ್ಟಿಯಿಂದಲೂ ಪ್ರಾಚೀನತೆಯ ದೃಷ್ಟಿಯಿಂದಲೂ, ಅನುಪಮ ವೈಭವಪೂರ್ಣವಾದ, ಮತ್ತು ಗುಜರಾತ ಕುಲದೈವತವೂ ಅರಸು ದೈವತವೂ ಆದ, ಈ ಸೋಮನಾಥವು ಎಂದೆಂದಿಗೂ ಗುಜರಾತಿಗಳ ಮನೋಮಂದಿರದಲ್ಲಿ ಚಿರಸ್ಥಾಯಿಯಾಗಿ ಉಳಿಯುವದರಲ್ಲಿ ಸಂದೇಹವಿಲ್ಲ.

ಭಕ್ತಿಯ ದೃಷ್ಟಿಯಿಂದಲೂ, ಗುಜರಾತಿನ ಅನೇಕ ಕವಿಗಳೂ ಸಾಧು ಸತ್ಪುರಷರೂ ಈ ಸೋಮನಾಥನ ವೈಭವವನ್ನೂ ಮಹಾತ್ಮ್ಯವನ್ನೂ ಹಾಡಿ ತಣಿದಿದ್ದಾರೆ. ಪೂಜ್ಯ ಮಹಾತ್ಮಾಜಿಯವರ ಪ್ರೀತಿಯ,

ಮತ್ತು ಅವರ ಪ್ರಾರ್ಥನಾ ಕಾಲದಲ್ಲಿಯ ಹಾಡಾದ "ವೈಷ್ಣವ ಜನತೋ ತೇನೇ ಕಹಿಯೇ" ಎಂಬು ದನ್ನು ಭಕ್ತ ಶಿರೋಮಣಿಯೂ, ವರಕವಿಯೂ ಆದ ನರಸಿ ಮೂಹತಾ ಎಂಬ ಗುಜರಾತಿ ಸಾಧು ಪುರುಷನು ರಚಿಸಿದ್ದಲ್ಲದೆ ಇಂತಹ ಇನ್ನೂ ಅನೇಕ ವರದ ವಾಣಿಯ ಪದಗಳನ್ನು ರಚಿಸಿದ ಭಕ್ತ ಶ್ರೇಷ್ಠರು ಅಲ್ಲಿ ಆಗಿ ಹೋಗಿದ್ದಾರೆ.

ಭಾರತದಲ್ಲಿ ಮಹಮದೀಯ ಆಳಿಕೆಯ ಕಾಲದಲ್ಲಿ ಈ ದೇವಾಲಯದ ಬಗ್ಗೆ ರಾಜದೃಷ್ಟಿಯ ಮಹತ್ವವು ಕಡೆಗಳಿಸಲ್ಪಟ್ಟಂತೆ ಕಂಡು ಬಂದರೂ ಜನತೆಯ ದೃಷ್ಟಿಯಿಂದ ಅದು ಶಿಖರಕ್ಕೇರಿತ್ತು. ಮುಂದೆ ಮರಾಟರು ಗುಜರಾತವನ್ನು ಗೆದ್ದ ಬಳಿಕಂತೂ ಇದರ ಮಹತಿಯು ಇನ್ನೂ ಬೆಳೆಯಿತು. ಹೀಗೆ ಈ ಸೋಮನಾಥನ ಪೂರ್ವೇತಿಹಾಸವು ಉಜ್ವಲವಾದದ್ದೂ ಮಹತ್ವದ್ದೂ ಆಗಿದೆ.

ಇಂದು ಅದು ಹಾಳುದೇಗುಲ. ದೇವರಿಲ್ಲದ ಗುಡಿಯಾಗಿದೆ. ಈಶ್ವರ ಲಿಂಗವು ಅಲ್ಲಿಂದ ಸ್ಥಾನಾಂತರಿಸಲ್ಪಟ್ಟಿದೆ. ಮೊದಲು ಈ ಲಿಂಗವಿದ್ದ ಸ್ಥಾನದಲ್ಲಿ ಒಮ್ಮೆ ಮುಸಲ್ಮಾನ ಅಧಿಕಾರಿಯು ತನ್ನ ಕುದುರೆ ಕಟ್ಟಿದ್ದನು. ಮಂದಿರವು ಅಲ್ಲಲ್ಲಿ ಭಗ್ನವಾಗಿದೆ. ಒಂದು ಕಾಲದಲ್ಲಿ ರಾಜ ಮಹಾರಾಜರಿಂದ ಪೂಜೆಗೊಂಡ ದೇವರು ಇಂದು ಹಾಳು ದೇಗುಲದಲ್ಲಿ ವಾಸ ಮಾಡ ಬೇಕಾಗಿದೆ.

ಆದರೂ ಇಂದು ನಮಗೆ ಸ್ವಾತಂತ್ರ್ಯ ದೊರ ಕಿದೆ. ನಮ್ಮ ಆಡಳಿತ ನಮ್ಮ ಕೈಯಲ್ಲಿಯೇ ಇದೆ. ಇಂತಹ ಇತಿಹಾಸ ಪುರಾಣ ಪ್ರಸಿದ್ಧವಾದ ದೇವಾಲಯವು ಪುನರುದ್ಧರಿತವಾಗಿ ಚಾಲುಕ್ಯರ ಧ್ವಜವು ಒಮ್ಮೆ ಹೆಮ್ಮೆಯಿಂದ ಹಾರಾಡಿದಂತೆ ಸನಿಹದಲ್ಲಿಯೇ ನಮ್ಮ ಮೂಒಣ್ಣದ ನಾಡಗುಡಿಯು ಪುನರುದ್ಧರಿತ ಸೋಮನಾಥ ದೇವಾಲಯದ ಶಿಖರದ ಮೇಲೆ ಬೆಳಗಿನ ಸುಳಿಗಾಳಿಯಲ್ಲಿ ಫಡಫಡಿಸುವ ಕಾಲಸನ್ನಿಹಿತವಾಗುತ್ತಿದೆ. (ಜಯಹಿಂದ್)

ಹಿಂದುಸ್ತಾನದ ವಿವಿಧ ಉದ್ಯೋಗಗಳು--ಕೆಲಸಗಾರರು.

ನಾಲ್ವತ್ತು ಕೋಟಿ ಜನಸಂಖ್ಯೆಯುಳ್ಳ ಹಿಂದು ಸ್ಥಾನವನ್ನು ಇಂದು ಸ್ವತಂತ್ರ ವಾತಾವರಣದಲ್ಲಿ ಪುನಃ ಕಟ್ಟಿ ಬೆಳೆಸಬೇಕಾಗಿದೆ ನಮ್ಮಲ್ಲಿಯ ಭೂಮಿ ಖನಿಜ ದ್ರವ್ಯಗಳು, ಅರಣ್ಯ ಮೊದಲಾದ ಸಂಪತ್ತುಗಳನ್ನೂ ಅವುಗಳ ಹುಟ್ಟುವಳಿಯನ್ನು ದೊರಕಿಸಲು ಅವಶ್ಯವಿರುವ ವಿವಿಧ ಉದ್ಯೋಗಗಳಲ್ಲಿ ಕೆಲಸಮಾಡಲು ಬೇಕಾದ ಜನಶಕ್ತಿಯನ್ನೂ ಅಳೆದು ನೋಡಿ ಅವುಗಳಿಗೆ ತಕ್ಕಂತೆ ದಾರಿಗಳನ್ನು ಹುಡುಕಬೇಕಾಗಿದೆ. ಈ ದೃಷ್ಟಿಯಿಂದ ಇಂದಿನ ಸರಕಾರದ ತಜ್ಞರು ಲೆಕ್ಕಮಾಡುತ್ತಿದ್ದಾರೆ. ಈ ಸಂಬಂಧದಲ್ಲಿ ಸರಕಾರೀ ಕೆಲವು ಬೋಧಪ್ರದ ಅಂಕಿ ಸಂಖ್ಯೆಗಳು ಈ ಕೆಳಗಿನಂತಿವೆ:—

ನಮ್ಮಲ್ಲಿಯ 18 ಕೋಟಿ ಕೆಲಸಗಾರರು; ಒಕ್ಕಲುತನ, ಉದ್ಯೋಗಗಳು, ಕಣಿಗಳು, ವಾಹನಗಳ ಕಾರ್ಯ, ಹಣದ ವ್ಯವಹಾರ (ಬ್ಯಾಂಕು,) ವ್ಯಾಪಾರೀ ಉದ್ಯೋಗಗಳು, ಮೀನುಗಾರಿಕೆ ಮತ್ತು ಹಡಗುಪಡೆಗಳ ಕಾರ್ಯಗಳಲ್ಲಿ ತೊಡಗಿದ್ದಾರೆ.

ದೇಶದ ಜನಸಂಖ್ಯೆಯು ನಾಲ್ಕನೇ ಭಾಗದಷ್ಟಾಗುವ ಅರ್ಥಾತ್ 10 ಕೋಟಿ ಜನರು ಕೇವಲ ಒಕ್ಕಲುತನದಲ್ಲಿ ತೊಡಗಿದ್ದಾರೆ. ಅವರು ವರ್ಷದಲ್ಲಿಯ 2-4 ತಿಂಗಳುಗಳವರೆಗೆ ಕೆಲಸವಿಲ್ಲದೆ ಇರಬೇಕಾಗುತ್ತದೆ.

1945 ನೇ ಇಸ್ವಿಯಲ್ಲಿ 48 ಲಕ್ಷ ಜನರು ಸಂಘಟಿತ ಉದ್ಯೋಗ ಶಾಲೆ (ಗಿರಣಿ) ಮೊದಲಾದವು

284

ಗಳಲ್ಲಿ ಕೆಲಸ ಮಾಡುತ್ತಿದ್ದರು. ಇವರಲ್ಲಿ 26 ಲಕ್ಷ ಜನರು ಸರಕಾರದಿಂದ ನಿಯಂತ್ರಿಸಲ್ಪಟ್ಟ ಉದ್ಯೋಗಗಳಲ್ಲಿ, 3 ಲಕ್ಷ ಜನರು ಕಣಿಗಳಲ್ಲಿ, ರೇಲ್ವೆಗಳಲ್ಲಿ 8 ಲಕ್ಷ ಜನರು, ಚಹಾ ಮೊದಲಾದ ತೋಟಗಳಲ್ಲಿ 10 ಲಕ್ಷ ಜನರು ಕೆಲಸ ಮಾಡುತ್ತಿದ್ದರು.

ಸ್ವಂತದ ಮತ್ತು ಸರಕಾರದ ನಿಯಂತ್ರಣಕ್ಕೊಳಪಡದ ಉದ್ಯೋಗಗಳಲ್ಲಿ ಸುಮಾರು 10 ಲಕ್ಷ ಜನರು ಕೆಲಸ ಮಾಡುತ್ತಿದ್ದಾರೆ. ಇವರಲ್ಲಿ ಸುಮಾರು 5 ಲಕ್ಷ ಜನರು ಬೀಡೀ ಕಟ್ಟುವುದರಲ್ಲಿ, ಒಂದು ಲಕ್ಷ ನಾಲ್ವತ್ತು ಸಾವಿರ ಜನರು ಅಭ್ರದ ಕೆಲಸದಲ್ಲಿ 30 ಸಾವಿರ ಜನರು ಶಂಖು ಸಿಂಪುಗಳ ಉದ್ಯೋಗಗಳಲ್ಲಿ ಮತ್ತು ಸುಮಾರು 2 ಸಾವಿರ ಜನರು ಜಮಖಾನೆ ನೇಯುವುದರಲ್ಲಿ ತೊಡಗಿದ್ದಾರೆ.

ಸುಮಾರು 60 ಲಕ್ಷ ಜನರು ಕೈಮಗ್ಗಗಳ ಮೇಲೆ ನೇಯುವ ಕಾರ್ಯವನ್ನು ಮಾಡುತ್ತಿದ್ದಾರೆ. ಅವರಲ್ಲಿ 24 ಲಕ್ಷ ಜನರು ಸಂಪೂರ್ಣ ಅವಧಿಯ ಕೆಲಸಗಾರರೂ 36 ಲಕ್ಷ ಜನರು ಕೆಲವು ವೇಳೆ ಮಾತ್ರ ಕೆಲಸ ಮಾಡುವವರೂ ಆಗಿದ್ದಾರೆ. ಕೈಮಗ್ಗಗಳ ಮೇಲೆ ಸಿದ್ಧವಾಗುವ ಅರಿವೆಯು ದೇಶಕ್ಕೆ ಬೇಕಾಗುವ ಅರಿವೆಯ ನಾಲ್ಕರಲ್ಲಿ ಒಂದು ಭಾಗವನ್ನು ಸಮಾಧಾನ ಪಡಿಸುತ್ತದೆ. ಅರಿವೆಯ ಉದ್ಯೋಗದಲ್ಲಿ ತೊಡಗಿರುವ ಜನರ ಪ್ರತಿ ನೂರರಲ್ಲಿ 86 ರಷ್ಟು ಜನರು ಈ ಕೈಮಗ್ಗದ ಕೆಲಸಗಾರರು ಆಗಿದ್ದಾರೆ. 1945 ನೇ ಇಸ್ವಿಯಲ್ಲಿ ಅರಿವೆಯ ಗಿರಣಿಗಳಲ್ಲಿ 10 ಲಕ್ಷಕ್ಕೆ ಮೇಲ್ಪಟ್ಟ ಜನರು ದುಡಿಯುತ್ತಿದ್ದರು.

ಬಂದರಗಳಲ್ಲಿ ಕೆಲಸ ಮಾಡುವ ಜನರ ಸಂಖ್ಯೆಯು 75 ಸಾವಿರದಷ್ಟಾಗುತ್ತದೆ.

ಮೊನ್ನೆ ಆದ ಲೆಕ್ಕದಿಂದ ಹಡಗುಪಡೆಯಲ್ಲಿ 2 ಲಕ್ಷ ಜನರು ಕೆಲಸ ಮಾಡುತ್ತಿದ್ದಾರೆಂದು ಗೊತ್ತಾಗುತ್ತದೆ. 1931 ನೇ ಇಸ್ವಿಯಲ್ಲಿ ನಾಲ್ಕು ಲಕ್ಷ ಎಪ್ಪತ್ತು ಸಾವಿರ ಜನರು ಮನೆ ಕಟ್ಟುವ ಕೆಲಸದಲ್ಲಿ ತೊಡಗಿದ್ದರು. 1931 ನೇ ಇಸ್ವಿಯಲ್ಲಿ ರೇಲ್ವೆ ಕಂಪನಿಗಳಲ್ಲಿ ಪೋರ್ಟರರು, ಕೂಲಿಗಳು ಮತ್ತು ಕಟ್ಟಡದ ಕೆಲಸಕ್ಕಾಗಿ ಇಡಲ್ಪಟ್ಟ ಜನರ ಸಂಖ್ಯೆ 2 ಲಕ್ಷವಿತ್ತು.

ಹಿಂದುಸ್ಥಾನದಲ್ಲಿ ಮನುಷ್ಯರು ಎಳೆಯುವ ಗಾಡಿಗಳ ಸಂಬಂಧವಾಗಿ (ರಿಕ್ಷಾ) ಕೆಲಸಮಾಡುವವರು 50 ಸಾವಿರ ಇದ್ದಾರೆ.

ಕಣಿಗಳಲ್ಲಿ ಕೆಲಸ ಮಾಡುವವರು ಹಿಂದುಸ್ಥಾನದಲ್ಲಿ 2 ಲಕ್ಷ 55 ಸಾವಿರಕ್ಕೆ ಮೇಲ್ಪಟ್ಟು ಹೆಂಗಸರಿದ್ದಾರೆ. ಹೆಂಗಸರನ್ನು ಕಣಿಗಳ ಒಳಭಾಗಗಳಲ್ಲಿ ಕೆಲಸಕ್ಕೆ ಹಚ್ಚುವುದಿಲ್ಲ.

1943–44 ನೇ ವರ್ಷದಲ್ಲಿ ಹಿಂದುಸ್ಥಾನದಲ್ಲಿ 818 ಕೂಲಿಕಾರ ಸಂಸ್ಥೆಗಳು ಇದ್ದವು. ಅವುಗಳ ಸಭಾಸದರ ಒಟ್ಟುಸಂಖ್ಯೆಯು 7,80,967 ಇತ್ತು. 1927–28 ನೇ ವರ್ಷ 29 ಸಂಸ್ಥೆಗಳಿದ್ದು ಅವುಗಳ ಸಭಾಸದರ ಸಂಖ್ಯೆಯು 1,00,619 ಇತ್ತು. 1946 ನೇ ಇಸ್ವಿಯಲ್ಲಿ 1825 ಕೂಲಿಕಾರ ಸಂಪುಗಳು ಆದವು. ಆ ಸಂಪುಗಳಲ್ಲಿ 23,10,209 ಕೆಲಸಗಾರರು ಭಾಗವಹಿಸಿದ್ದರು. ಇದರಿಂದ 1,22,85,215 ದಿವಸಗಳ ಕೆಲಸದ ಹಾನಿಯಾಯಿತು. 1921 ನೇ ಇಸ್ವಿಯಿಂದ 1946 ನೇ ಇಸ್ವಿಯ ವರೆಗೆ ಅಂದರೆ 26 ವರ್ಷಗಳ ಅವಧಿಯಲ್ಲಿ 9500 ಸಂಪುಗಳಾದುದರಿಂದ 16 ಕೋಟಿ ದಿವಸಗಳ (ಈ ದಿವಸಗಳೆಂದರೆ ಒಬ್ಬನು ಒಂದು ದಿವಸದಲ್ಲಿ ಮಾಡುವ ಕೆಲಸದ ಅವಧಿಗೆ ಒಂದು ದಿವಸ ಎಂದು ತಿಳಿಯಬೇಕು) ಕೆಲಸದ ಹಾನಿಯಾಯಿತು

931–32 ನೇ ವರ್ಷದಲ್ಲಿ ಹಿಂದುಸ್ಥಾನದ ಪ್ರತಿಯೊಬ್ಬ ಕೆಲಸಗಾರನ ವಾರ್ಷಿಕ ಉತ್ಪನ್ನವು ಪಟ್ಟಣಗಳಲ್ಲಿ 426 ರೂ. ಇತ್ತು; ಹಳ್ಳಿಗಳಲ್ಲಿ 135 ರೂ. ಇತ್ತು ಆ ವರ್ಷದಲ್ಲಿ ಪ್ರತಿಯೊಬ್ಬ ಕೆಲಸಗಾರನ ಸರಾಸರಿ ಉತ್ಪನ್ನವು ಪಟ್ಟಣದಲ್ಲಿ 162 ರೂ; ಹಳ್ಳಿಗಳಲ್ಲಿ 48 ರೂ. ಇತ್ತು. 1945 ನೇ ಇಸ್ವಿಯಲ್ಲಿ ಇಂಡಿಯನ್ ಫ್ಯಾಕ್ಟರೀಜ ಕಾಯಿದೆಯ ಅನುಸಾರವಾಗಿ ನಡೆಸಲ್ಪಟ್ಟ ಹಿಂದುಸ್ಥಾನದ ಕಾರಖಾನೆಗಳ ಕೆಲಸಗಾರರಿಗೆ ನಗದು ಕೊಟ್ಟ ಕೂಲಿಯ ಹಣವು 124 ಕೋಟಿ 38 ಲಕ್ಷ ರೂ. ಆಗಿತ್ತು. (ಜಯಹಿಂದ್)

ಕರ್ನಾಟಕ ಪ್ರಾಂತರಚನೆಯ ಮಹತ್ವ ಸಭೆ.

ಬಳ್ಳಾರಿ ಜಿಲ್ಲಾ ಕರ್ನಾಟಕ ಸಂಘದಾಶ್ರಯ ಶ್ರೀ ಬಿ. ಎಂ. ದೇವಣ್ಣ ಸಿದ್ಧಯ್ಯನವರ ಅಧ್ಯಕ್ಷತೆಯಲ್ಲಿ ಬೆಳಗಾವಿಯ ರೈತಸಂಘ ಧುರೀಣರಾದ ಶ್ರೀ ತಲ್ಲೂರ ರಾಯನಗೌಡರು ವಿಚಾರ ಪರಿಪ್ಲುತ ಭಾಷಣಕೊಟ್ಟರು. ಅದರ ಸಾರಾಂಶ ಹೀಗಿದೆ.

"ಕಳೆದ 25 ವರ್ಷಗಳಿಂದ ಭಾರತ ಮುಖಂಡರು ಭಾಷಾವಾರ ಪ್ರಾಂತವಿಭಜನೆಯ ತತ್ವಕ್ಕೆ ಮನ್ನಣೆ ಕೊಟ್ಟು ಏಕಾ ಏಕಿ ಕೆಲದಿನಗಳ ಕಳಗೆ ಕರ್ನಾಟಕಪ್ರಾಂತ ಮಹಾರಾಷ್ಟ್ರದಷ್ಟೇ ತೊಡಕಿನದಿದೆಯೆಂದು ಹೇಳಿದ್ದು ವಿಷಾದವಾಗಿದೆ. ಅವರನ್ನಾರೊ ತಪ್ಪು ದಾರಿಹಿಡಿಸಿರಲಿಕ್ಕೆ ಬೇಕು. ಕರ್ನಾಟಕವು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಯಾವಾಗಲೂ ಗೌರವನೀಯ ಸ್ಥಾನವನ್ನಾಕ್ರಮಿಸಿದೆ. 1824 ರಲ್ಲಿ ಕಿತ್ತೂರ ಚನ್ನಮ್ಮನು ಪ್ರಥಮದಲ್ಲಿ ಪರಕೀಯರ ರಾಜ್ಯದ ವಿರುದ್ಧ ಬಂಡಾಯ ಹೂಡಿದಳು. ನಮ್ಮ ತ್ಯಾಗ ಸ್ವಾತಂತ್ರ್ಯ ಪ್ರೇಮದ ಕುರಿತು ನಮ್ಮ "ಗಾಂಧಿಪ್ರಾಂತ"ದ ವಿಷಯಕ್ಕೆ ನಮ್ಮಕಡೆಯೂರೂ ಬೆಟ್ಟು ತೋರಿಸುವಂತಿಲ್ಲ. ಕರ್ನಾಟಕದ ಖನಿಜ ಪ್ರಾಕೃತಿಕ ಸಂಪತ್ತು ಬಂದರುಗಳ ಅನುಕೂಲ್ಯತೆಗಳು ಹಿಂದೂಸ್ತಾನದ ಮತ್ತಾವ ಪ್ರಾಂತಕ್ಕೂ ಇಲ್ಲ. ಜೋಗದ ವಿದ್ಯುತ್ತು, ಕಾರ್ವಾರದ ಅರಣ್ಯ ಬಂದರು ಜಗತ್ಪ್ರಸಿದ್ಧ. ಹೀಗಿದ್ದೂ ನಾವು ಆರ್ಥಿಕವಾಗಿ ಸ್ವಾವಲಂಬಿಗಳಾಗಲಾರೆವೆಂದು ನಮ್ಮ ಧುರೀಣರನ್ನು ಸಂಶಯ ಸಾಮ್ರಾಜ್ಯದಲ್ಲಿ ಕೆಡವಿದವರ್ಯಾರು? ಮುಖಂಡತ್ವದಲ್ಲಿ ದೋಷವಿರಬಹುದೋ? ಇರಲು ಏನೇ ಇರಲಿ ಕನ್ನಡಿಗರೆಲ್ಲಾ ಟೊಂಕಕಟ್ಟಿ ಹೋರಾಟ ಮಾಡಲು ಸಿದ್ಧರಾಗದಿದ್ದರೆ ನಮ್ಮ ಅವಜಯವಾದೀತು. ಆಂಧ್ರಪ್ರಾಂತ ಬಂದಾಗಲೇ ಕರ್ನಾಟಕ ಪ್ರಾಂತದ ರಚನೆಯೂ ಆಗೇ ತೀರಬೇಕು ಎಂದರು.

ಕರ್ನಾಟಕ ಪ್ರಾಂತದ ಶೀಘ್ರರಚನೆ (ಬಳ್ಳಾರಿ ಜಿಲ್ಲೆ ಮುತ್ತಿತರ ಪೂರ್ವ ಕರ್ನಾಟಕವನ್ನೊಳಗೊಂಡ) ಯಾಗಬೇಕೆಂದೂ, ಭಾರತಮುಖಂಡರ ಹೇಳಿಕೆಯಿಂದ ಕನ್ನಡಿಗರಿಗೆ ವಿಷಾದವಾಗಿದೆಯೆಂದೂ, ಇದನ್ನು ಸರಿಪಡಿಸಿ ಆಂಧ್ರದ ಜೊತೆಗೇ ಕನ್ನಡ ಪ್ರಾಂತವನ್ನೂ ರಚಿಸಬೇಕೆಂದೂ ಶ್ರೀ ಕೊ. ಚನ್ನಬಸಪ್ಪನವರು ತಂದ ನಿರ್ಣಯವು ಶ್ರೀ ಬಸವರಾಜರಿಂದ ಸಮರ್ಥಿತವಾಗಿ ಸರ್ವಾನುಮತದಿಂದ ಸ್ವೀಕೃತವಾಯಿತು.

ಬಳ್ಳಾರಿ ಜಿಲ್ಲೆಯಲ್ಲಿ ಶ್ರೀ ಟಿ. ಪ್ರಕಾಶಂರವರು,

ಮದ್ರಾಸಿನ ಮಾಜಿ ಪ್ರಧಾನ ಮಂತ್ರಿಗಳಾದ ಶ್ರೀ ಟಿ. ಪ್ರಕಾಶಂರವರು, 14 ನೆಯ ದಿನಾಂಕ ಬಳ್ಳಾರಿಗೆ ದಯಮಾಡಿಸಿ, ಇಲ್ಲಿಯ ವರ್ತಕರಾದ ಶ್ರೀ. ಗುಡದೂರು ತಿಮ್ಮಪ್ಪನವರ ಪಷ್ಟಿವೂರ್ತಿ ಮಹೋತ್ಸವದಲ್ಲಿ ಭಾಗವಹಿಸಿದರು, ಗುಡದೂರವರ ಧಾರ್ಮಿಕ ಕಾರ್ಯಗಳನ್ನು ಹೊಗಳುತ್ತಾ ಅನೇಕ ಸಂಘ, ಸಂಸ್ಥೆಗಳವರು ಮಾನಪತ್ರಿಕೆಗಳನ್ನರ್ಪಿಸಿದರು. ಶ್ರೀ ಗುಡದೂರು ತಿಮ್ಮಪ್ಪನವರು, ಕಾಲೇಜ ವಿದ್ಯಾರ್ಥಿಗಳಿಗಾಗಿ ಒಂದು ವಿದ್ಯಾರ್ಥಿನಿಲಯವನ್ನು ರಂಭಿಸುವ ಯೋಜನೆಯನ್ನು ತಿಳಿಯಹೇಳಿದರು.

ವಿಲ್ಲುಪುರಂ ತಿರುಪತಿ ಮಸಲೀಪಟಂ ತಿನ್ನೆವೆಲ್ಲಿ ಮುಂತಾದ ಸ್ಥಳಗಳಲ್ಲಿ ಸರಕಾರಿ ನವಕರರೆಲ್ಲಾ ಕೆಲಸಕ್ಕೆ ಹಿಂದಿರುಗಿದ್ದಾರೆ.

ಜನಾಗಷ್ಟ ಸಂಸ್ಥಾನದಲ್ಲಿ ಸಂಸ್ಥಾನದ ಭವಿಷ್ಯದ ಬಗ್ಗೆ ಜನಮತವನ್ನು ಜೂರಕಿಸಲು ಶೀಘ್ರದಲ್ಲೇ ಏರ್ಪಾಟಾಗಲಿದೆ.

ಅಪಹೃತ ಸ್ತ್ರೀಯರು ಎಲ್ಲೇ ಇರಲಿ ಅವರನ್ನು ಪುನಃ ವಾಪಸು ಕರೆಸಿ ಅವರವರ ಕುಟುಂಬಗಳವರಿಗೆ ಒಪ್ಪಿಸ ಬೇಕು ಎಂದು ಕಾಶ್ಮೀರಮಹಾರಾಜ ಮಹಾರಾಣಿಯವರು ಸಂಯುಕ್ತ ಮನವಿಯನ್ನು ಹೊರಡಿಸಿದ್ದಾರೆ.

ಸಣ್ಣಪುಟ್ಟ ಸಂಸ್ಥಾನಗಳ ವಿಲಿನಿಕರಣ

ಹಿಂದುಸ್ಥಾನ ಸ್ವಾತಂತ್ರ್ಯವು ಲಭಿಸಿದನಂತರ ಸಣ್ಣಪುಟ್ಟ ಸಂಸ್ಥಾನಗಳಲ್ಲಿಯೂ ಪ್ರಜೆಗಳು ಬಂಧನದಿಂದ ಮುಕ್ತಿಯಾಗಲು ಹಾತೊರೆಯುತ್ತಿರುವರು. ಸಂಸ್ಥಾನೀ ಪ್ರಜೆಗಳ ಆಶೋತ್ತರಗಳಗ್ನು ಬಗ್ಗು ಬಡಿಯಲಾರದೆ ಮೈಸೂರು, ತಿರುವಾಂಕೂರಿನಂಥ ದೊಡ್ಡ ಸಂಸ್ಥಾನಗಳು ಪ್ರಜಾಪ್ರತಿನಿಧಿಗಳಿಗೆ ತಾತ್ಕಾಲಿಕ ರಾಜ್ಯಭಾರವನ್ನೊಪ್ಪಿಸಿ, 'ಜವಾಬ್ದಾರೀ ಸರ್ಕಾರಕ್ಕೆ ಏರ್ಪಾಟು ಮಾಡುತ್ತಲಿವೆ. ಆದರೆ ತೀರ ಸಣ್ಣಪುಟ್ಟ ಸಂಸ್ಥಾನಾಧೀಶರು ತಮ್ಮ ಅಧಿಕಾರವನ್ನು ಕೈಯ್ಯಲ್ಲುಳಿಸಿಕೊಳ್ಳುವ ಆಕಾಂಕ್ಷೆಯಿಂದ ಜನರ ಮೇಲೆ ದಬ್ಬಾಳಿಕೆ ನಡೆಸಿರುವರು. ಒರಿಸ್ಸಾ ಸಂಸ್ಥಾನಗಳಲ್ಲಿ ಬಂಡಾಯವೇ ಎದ್ದಿದೆ. ಇವನ್ನೆಲ್ಲಾ ತಪ್ಪಿಸಿ ಸಂಸ್ಥಾನಗಳಲ್ಲಿ ಸುವ್ಯವಸ್ಥೆಯನ್ನೇರ್ಪಡಿಸಲು ಜನರ ಆಶಾಕಾಂಕ್ಷೆಗಳನ್ನು ಪೂರೈಸಲು ಭಾರತ ಸರ್ಕಾರದೊಡನೆ ಸಂಧಿ ಮಾಡಿಕೊಳ್ಳಬೇಕೆಂದು ಸಂಸ್ಥಾನ ಶಾಖೆಯ ಮಂತ್ರಿಗಳಾದ ಸರ್ದಾರವಲ್ಲಭಭಾಯಿ ಪಟೇಲರು ಕೆಲ ಸೂಚನೆಗಳನ್ನು ಮಾಡಿರುವರು: ಈ ಸೂಚನೆಗಳನ್ನು ಒರಿಸ್ಸಾ ಮತ್ತ ಛತ್ತೀಸಘಡ (ಮಧ್ಯಪ್ರಾಂತ) ಸಂಸ್ಥಾನಾಧೀಶರು ಒಪ್ಪಿ ಸಹಿಮಾಡಿರುತ್ತಾರೆ. ದೇಶದಲ್ಲಿ ಜಾಗೃತಿಯ ವಾತಾವರಣದಿಂದ ಈ ಅರಸರಿಗೆ ಬೇರೆ ಮಾರ್ಗವೇ ಇಲ್ಲ.

ಈ ಸಂಸ್ಥಾನಗಳ ರಾಜರೊಡನೆ ಆದ ಒಪ್ಪಂದದ ಮುಖ್ಯ ಕರಾರುಗಳು ಇಂತಿರುತ್ತವೆ:—

1) ರಾಜರು ಸಂಸ್ಥಾನಗಳ ಪೂರ್ಣ ಆಡಳಿತೆಯನ್ನು 1948 ಜನೇವರಿ 15 ರಿಂದ ಹಿಂದುಸ್ತಾನ ಸರಕಾರಕ್ಕೆ ಬಿಟ್ಟು ಕೊಡಬೇಕು.

2) ಅಂದಿನಿಂದ ರಾಜರಿಗೆ ಸಂಸ್ಥಾನದ ಉತ್ಪನ್ನದಿಂದ ಖಾಸಗಿ ವೆಚ್ಚಕ್ಕೆ ಹಣ್ಣು ಕೊಡಲಾಗುವದು. ಈ ಹಣದಲ್ಲಿ ಅವರ ಎಲ್ಲ ವೆಚ್ಚವೂ ನಡೆಯತಕ್ಕದ್ದು. ಇದನ್ನು ಯಾವದೇ ಕಾರಣದಿಂದ ಏರಿಸತಕ್ಕದ್ದಲ್ಲ ಮತ್ತು ಇಳಿಸತಕ್ಕದ್ದಲ್ಲ.

3) ಮೂರು ತಿಂಗಳಿಗೊಮ್ಮೆ ಬಿಲ್ಲುಕೊಟ್ಟು ಸರಕಾರೀ ಬೊಕ್ಕಸದಿಂದ ಈ ಹಣ ನಾಲ್ಕು ಕಂತುಗಳಲ್ಲಿ ಮುಂಗಡ ಪಡೆಯಬಹುದು.

4) ರಾಜರಿಗೆ ಅವರ ಖಾಸಗಿ ಆಸ್ತಿ ದೊರೆಯುವದು, ಅದರ ವಿವರಗಳನ್ನು ಈಗ ಕೊಡಬೇಕು.

5) ಖಾಸಗಿ ಆಸ್ತಿ ಅವರದೋ ಎಂಬ ಬಗ್ಗೆ ತಂಟೆಯುಂಟಾದರೆ, ಹಿಂದೂಸ್ತಾನ ಸರಕಾರವು ನೇಮಿಸುವ ನ್ಯಾಯಾಧೀಶನಿಗೆ ಅದನ್ನೊಪ್ಪಿಸಿ ಅವನ ನಿರ್ಣಯದಂತೆ ನಡೆಯಬೇಕು.

6) ರಾಜಾ, ರಾಣಿ, ರಾಜಮಾತಾ ಯುವರಾಜ ಮತ್ತು ಯುವರಾಣಿ ಇವರಿಗೆ 1947 ಆಗಸ್ಟ 15 ರ ಮೊದಲು ಇದ್ದ ಎಲ್ಲ ವೈಯಕ್ತಿಕ ಹಕ್ಕುಗಳು ಇನ್ನು ಮುಂದಾದರೂ ಲಭಿಸುವವು.

7) ಗಾದಿಗೆ ಉತ್ತರಾಧಿಕಾರಿಯನ್ನು ಕಾಯದೆಯಂತೆ ಅರಿಸಲಾಗುವದೆಂದು ಮತ್ತು ರಾಜನಿಗೆ ಅವನ ಪದವಿ ಹಾಗೂ ವೈಯಕ್ತಿಕ ಹಕ್ಕುಗಳನ್ನು ಕೊಡಲಾಗುವದೆಂದು ಹಿಂದುಸ್ತಾನ ಸರಕಾರವು ಆಶ್ವಾಸನ ಕೊಡುತ್ತದೆ.

ಈ ಕರಾರ ಪತ್ರಕ್ಕೆ ರಾಜರು ಮತ್ತು ಗವರ್ನರ ಜನರಲ್ಲರ ಪರವಾಗಿ ಕಾರ್ಯದರ್ಶಿ ಮೆನೆನ್ನರು ಸಹಿ ಹಾಕಿರುತ್ತಾರೆ.

ಚಿಕ್ಕ ಸಂಸ್ಥಾನಗಳ ಆಡಳಿತೆಯನ್ನು ಯಶಸ್ವಿಯಾಗಿ ನಿರ್ವಹಿಸುವದು ಸಾಧ್ಯವಿಲ್ಲದ್ದರಿಂದ ಈ ಯೋಜನೆ ಕೈಕೊಳ್ಳಲಾಗಿದೆಂದು ಒಪ್ಪಂದದ ಪ್ರಸ್ತಾವನೆಯಲ್ಲಿ ಹೇಳಲಾಗಿದೆ.

ಸಂಸ್ಥಾನದ ಉತ್ಪನ್ನವು ಒಂದು ಲಕ್ಷ ರೂ. ಪಾಯಿ ಇದ್ದರೆ ನೂರಕ್ಕೆ 15 ರಷ್ಟು ಒಂದರಿಂದ ಐದು ಲಕ್ಷದ ವರೆಗಿದ್ದರೆ ನೂರಕ್ಕೆ 10 ರಷ್ಟು ಮತ್ತು ಐದು ಲಕ್ಷ ಮಿಕ್ಕಿದರೆ ನೂರಕ್ಕೆ 7 ರಷ್ಟು ರಾಜರಿಗೆ ಖಾಸಗಿ ವೆಚ್ಚಕ್ಕಾಗಿ ಕೊಡಲಾಗುವದು. 1945-46 ನೇ ವರ್ಷದ ಉತ್ಪನ್ನದ ಮೇಲಿಂದ ಈ ಲೆಕ್ಕ ಮಾಡಲಾಗುವದು.

ಮುಲತಾಯಿ.

ನನ್ಮೂರ ಬಡತಿಮ್ಮ ಪರದೇಶಿಯಿದ್ದ,
(ತಾಯಿಯಿಲ್ಲದ ಹುಡುಗ, ತಂದೆಯಳಿದಿದ್ದ!)
ಮುಲತಾಯಿ ಸೀತಮ್ಮ ನಿಷ್ಕರುಣೆ ತಾಯಿ
ತಿಮ್ಮನಂ ಬಯ್ಯುತಿದ್ದಳು ಅವಗಂ 'ನಾಯಿ'
ತಂಗುಳವ ಹಾಕುವಳು ದನಕಾಯೆ ನೂಂಕುವಳು
ಬಿಸಿಯಡಿಗೆ ತಾನುಂಡು ಪಲ್ಲಂಗವೇರುವಳು!
ವರುಷವಿಲ್ಲವು ಹತ್ತು, ತಿಂದುಂಬುವಾಸೆ,
ಮಿಗಿಲಾಗಿ ಇರ್ದುದಾ ತಿಮ್ಮನೊಳು ಸೂಸಿ,
ಅದರವಗೆಲ್ಲಿ ಬಿಸಿಯೂಟ ತಿಂಡಿ?
ಕೆಲಸಮಿರ್ದುಡು ಅವಗಂ ಬಂಡಿ!
ಹಗಲೆಲ್ಲ ದನಕಾಯ್ದು ಹೊಟ್ಟೆಗಿಲ್ಲದ ಮಗುವು,
ಸಂಜೆಯೊಳು ಮನೆಸೇರೆ ಹಾಳು ಕೆಲಸದ ಹೊರೆಯು!

ಒಂದಿನದಿ ಆತಿಮ್ಮ ಆಟದೊಳು ಸೇರಿ,
ಆಟಮುಗಿಯಲು ಬಂದ ಮನೆಯನ್ನು ಸೇರೆ,
ಸೀತಮ್ಮ ಮಾತಾಯಿ ಬಹಳ ರೇಗಾಡಿ,
ತಿಮ್ಮನನು ದೂರಿದಳು ಬಹಳ ಮಾತಾಡಿ!
ಆ ದಿನದಿ ಬಿಸಿಯಿಲ್ಲ! ತಂಗಳೂ ಇಲ್ಲ!!
ಉಪವಾಸ ಮಲಗಿದನು ಬರಿಬಂಡೆಯಲ್ಲಿ!

ಬೆಳಗೆದ್ದು ಕಸಬಳಿದು, ಮಿಗೆಹಸಿದು ಕೊರಗಿ,
ಬಿದ್ದನಲ್ಲಿಯೆ ತಾನು ಹೊಟ್ಟೆಗಿಲ್ಲದೆ ಕೂಗಿ!
ಹೊಟ್ಟೆಗೊಂದೇ ಅಲ್ಲ!
ಬಟ್ಟೆಯೂ ಇಲ್ಲ!!!
ಸೀತಮ್ಮ ಮಾತಾಯಿ ಓಡೋಡಿ ಬಂದು,
ಹಾಕಿದಳು ಏಟುಗಳಾನಾ ತಿಮ್ಮನಿಗೆ ನಿಂದು!!
ತಿಮ್ಮ ಏಳುತತಾನು ಭಯದಿಂದ ಮಿಡುಕಿ,
ತಾಯಿ (?) ಯನು ಕಾಣುತಲಿ ಓಡಿದನು ಕಣಕೆ!

ನೂರನೆಯುರಿನ ಬೆಳಗು ಬಾನಿನೀರಿಗೆ ಬಂದ,
ಊರವರು ಕೂಗಿದರು ಭಯದಿಂದವಲಂದು
'ತಿಮ್ಮ ಹುಡುಗನು ತಾನು ಭಾವಿಯರು ಹಾರಿ,
ಅಸುವನ್ನು ನೀಗಿದನು ಬನ್ನಿ! ಎಲೆ ಅಾರೇ! "
ಊರೆ ಊರಿಗೆ ಬಂದು, ಭಾವಿಯನು ಸೇರೆ,
ಸಿದ್ಧತೆಗೆದನು ಶವನ ಸಾಹಸವ ಮೀರಿ!
ಸೀತಮ್ಮ ಗೂರವರು ಛೆ! ಮಾರಿಯಾಕಿ,
ತಿಮ್ಮನೆನು (?) ತೋರಿಸವೆ ದೂರಿದರು ನೂಕಿ!
ಹೂಡುಗಸಿಗೆ ಮರುಗಿದರು ಊರವರು ಬಂದು,
ಸೀತಮ್ಮ ನಿಡುಕಿದಳು 'ಸೊಕಾಯಲಾರಿಲ್ಲವೆಂದು'!

ಹೈದರಾಬಾದ್ ಮಂತ್ರಿಮಂಡಳ.

ಹೈದರಾಬಾದ್ ಸರ್ಕಾರದವರು ಒಂದು ಪ್ರಕಟನೆ ಹೊರಡಿಸಿ, ನಡುಗಾಲ ಸರ್ಕಾರದ ಮಂತ್ರಿಮಂಡಲದ ರಚನೆಯನ್ನು ತಿಳಿಸಿರುವರು. ಹೈದರಾಬಾದ್ ನಲ್ಲೇ ಬಲಾಢ್ಯ ರಾಜಕೀಯ ಸಂಸ್ಥೆಯಾದ ಕಾಂಗ್ರೆಸ್‌ಗೆ ಒಂದು ಸ್ಥಳ. ಇತ್ತೆಹಾದುಲ್ ಸಂಸ್ಥೆಗೆ 4 ಸ್ಥಳ ಹಿಂದೂಗಳ ಸಂಖ್ಯೆ 6 ಮುಸಲ್ಮಾನರ ಸಂಖ್ಯೆ 8 ಇದೆ.

ಲಿಯಾಕಲ್ಲಿ	—	ಮುಖ್ಯಮಂತ್ರಿ
ಪಿ. ವೆಂಕಟರಾವ್ ರೆಡ್ಡಿ	—	ಉಪ ಮುಖ್ಯಮಂತ್ರಿ
ನವಾಬ್ ಮೊಯಿನ್ ಜಂಗ್	—	ಹಣಕಾಸಿನ ಮಂತ್ರಿ
" ಫಜುಲ್ ನವಾಜ್ ಜಂಗ್	—	ರೆವಿನ್ಯೂ
ರಾಜಾ ಮೋಹನಲಾಲ	—	ನ್ಯಾಯ ಖಾತೆ
ಅಬ್ದುಲ ಹಮೀದ ಖಾನ್	—	ಪೋಲೀಸ್ ಮಂತ್ರಿ
ಅಬ್ದುಲ ರಹಿವಾನ್	—	ರೇಲ್ವೆ ಖಾತೆ
ಇಕ್ರಾಮುಲ್ಲ	—	ಪುನರ್ರಚನೆ
ಅಬ್ದುಲ ರಾವುಫ್	—	ಲೋಕೋಪಯೋಗಿ ಖಾತೆ
ಯಾಮಿನ್ ಜುಬೇರಿ	—	ಶಾಸನಸಭೆ ಕೂಲಿ
ರಾಮಾಚಾರಿ		ವ್ಯವಸಾಯ ಹಲ್ಲಿಗಳ ಪುನರುದ್ಧಾರ
ಬಿ. ಯಸ್. ವೆಂಕಟರಾವ್	—	(ಹರಿಜನ)
ಮಲ್ಲಿಕಾರ್ಜುನಪ್ಪ	—	ಆರೋಗ್ಯ ಖಾತೆ
ಜೆ. ಜೋಶಿ	—	ವಾಣಿಜ್ಯ ಕೈಗಾರಿಕೆ

ಒಪ್ಪಂದವಿಲ್ಲ.

ಲಂಡನ್ನಿನಲ್ಲಿ ಕೂಡಿದ್ದ, ಇಂಗ್ಲೆಂಡ್, ಫ್ರಾನ್ಸ್, ರಷ್ಯಾ, ಅಮೆರಿಕಾ ಮಂತ್ರಿಗಳ ಸಮ್ಮೇಳನವು ಅಯಶಸ್ವಿಯಾಯಿತು. ಪರರಾಷ್ಟ್ರ ಮಂತ್ರಿ ಬೆವಿನ್‌ರವರು, ಭಾಷಣ ಕೊಡುತ್ತಾ, ಇದು ಶಾಂತಿಯ ಸೂಚನೆಯಲ್ಲವೆಂದರು. ಅಮೆರಿಕಾವು ತುರ್ಕಿಯ ಗಡಿಗೆ ಅತ್ಯಂತಾಧುನಿಕ ಶಸ್ತ್ರಾಸ್ತ್ರಗಳನ್ನು ಕಳುಹಿಸಿದೆಯೆಂದು ಸುದ್ದಿಯಿದೆ.

ಹೊಸಪೇಟೆ ಡಿ|| ಮುನ್ಸಿ|| ಕೋರ್ಟಿನಲ್ಲಿ

S. C. 390/47

H. K. ರಾಮರಾವು — ವಾದಿ
ಕೆಂಗ ಮಲಿಯಪ್ಪ — ಪ್ರತಿವಾದಿ

ಮೇಲಿನ ನಂಬರಿನಲ್ಲಿ ವಾದಿಯು ಪ್ರತಿವಾದಿಯ ಮೇಲೆ ಪ್ರಾಮಿಸರಿ ನೋಟಿನ ಸಂಬಂಧದ ರೂ. 114-4-9 ಮೊತ್ತಕ್ಕೆ ದಾವಾ ಮಾಡಿರುತ್ತಾನೆ. ವಾಯ್ದೆಯು 5-1-1948 ಕ್ಕೆ ಇರುತ್ತದೆ. ತಕರಾರು ಇದ್ದಲ್ಲಿ ಪ್ರತಿವಾದಿಯು ವಾಯ್ದೆಗೆ ಹಾಜರಾಗಬೇಕು.

ಹೊಸಪೇಟೆ
18-12-47

ಕೆ. ಲಿಂಗಮಲ್ಲಾರಶಾಸ್ತ್ರಿ,
ವಾದಿಯ ವಕೀಲರು

ಆಹಾರ ಧಾನ್ಯಗಳ ವಿನಿಯಂತ್ರಣ

ಸರ್ಕಾರಿ ಅಧಿಕಾರಿಗಳ ಸಂಪು ಸಾಗಿರುವ ಕಾರಣ, ಹಳ್ಳಿಯ ಪ್ರದೇಶಗಳಲ್ಲಿ ಆಹಾರ ಧಾನ್ಯಗಳ ವಿನಿಯಂತ್ರಣವು ಜಾರಿಯಲ್ಲಿ ಬರಲು ತಡವಾಗಿರಲಿಕ್ಕೆ ಬೇಕು. ಆದರೂ ಸರ್ಕಾರಿ ಅಧಿಕಾರಿಗಳು ಸದ್ಯಕ್ಕೆ ಧಾನ್ಯಸಂಗ್ರಹ ಕಾಯವನ್ನು ಕೈಗೊಳ್ಳುವುದಿಲ್ಲೆಂದು ತಿಳಿದುಬಂದಿದೆ.

ಚಿಮ್ಮಿ ಎಣ್ಣೆ ಅಭಾವ: — ಕೆಲದಿನಗಳಿಂದ ಬಳ್ಳಾರಿಯಲ್ಲಿ ಚಿಮ್ಮಿ ಎಣ್ಣೆ ಅಭಾವವು ಹೆಚ್ಚಾಗಿದೆ. ಹೀಗೇಕೆ ಆಯಿತೋ ಗೊತ್ತಾಗಿಲ್ಲ.

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್., ಮು. ಕ. ಬಳ್ಳಾರಿ. ಸ್ಥಾಪಿತ: 1939.

ಬಳ್ಳಾರಿ, ಅನಂತಪುರ, ಕಡಪ, ಕರ್ನೂಲು ಮತ್ತು ಚಿತ್ತೂರು ಜಿಲ್ಲೆಗಳ ಆರ್ಥಿಕಾಭಿವೃದ್ಧಿ ಉದ್ದೇಶದಿಂದ ಸ್ಥಾಪಿತವಾಗಿದೆ.

ಛೇರ್ಮನ್ ಬೋರ್ಡ ಆಫ್ ಡಾಯರೆಕ್ಟರ್ಸ:- ಶ್ರೀ ಹೆಚ್. ಲಿಂಗಾರೆಡ್ಡಿ ಬಿ. ಎ., ಬಿ. ಎಲ್., ಬಳ್ಳಾರಿ.

ಸ್ಥಾಯಿಠೇವಣಿ [ಫಿಕ್ಸೆಡ್-ಡಿಪಾಜಿಟ್] ದರಗಳು

3, 4, 5 ತಿಂಗಳುಗಳಿಗೆ ಶೇಕಡ ಬಡ್ಡಿದರ ರೂ. 2-0-0 6 ತಿಂಗಳಿಗೆ ಶೇಕಡ ಬಡ್ಡಿದರ ರೂ. 2-8-0
1 ವರ್ಷಕ್ಕೆ ,, ,, ,, 3-0-0 2 ವರ್ಷಕ್ಕೆ ,, ,, ,, 3-8-0

(2) **ಕ್ಯಾಷ್ ಸರ್ಟಿಫಿಕೇಟುಗಳು** ಬಡ್ಡಿಯ ಸಹಿತ 100 ಕ್ಕೆ 1 ವರ್ಷಕ್ಕೆ 3-8-0 10-0-0 ಸರ್ಟಿಫಿಕೇಟ್ ಕೊಡುವ ಧರ ರೂ. 9-0-3 (3) **ಚಾಲು ಖಾತೆ** (ಕರೆಂಟು ಅಕೌಂಟು) ಬಡ್ಡಿ ಶೇಕಡ ರೂ. 1-0-0

(4) **ಸೇವಿಂಗ್ಸ್ ಬ್ಯಾಂಕು ಅಕೌಂಟು** :- ವಾರದಲ್ಲಿ ಎರಡು ಸಲ ರೂ. 250/- ಗಳಿಗೆ ಮಿಂಚದೆ ಹಣ ತೆಗೆದ್ದು ಕೊಳ್ಳಬೇಕು. 1 ವರ್ಷಕ್ಕೆ ಶೇಕಡ ರೂ 2-0-0

ಬ್ಯಾಂಕಿನ 27 ಶಾಖೆಗಳಲ್ಲಿ ಲೆಕ್ಕಗಳನ್ನು ಪ್ರಾರಂಭಿಸಬಹುದು. ಇತರ ಎಲ್ಲಾ ವಿಧವಾದ ಬ್ಯಾಂಕು ಸೌಕರ್ಯಗಳು ಒದಗಿಸಲಾಗಿವೆ.

ಬಿ. ವಿ. ಶೇಷಗಿರಿರಾವ್ ಬಿ. ಕಾಂ. - ಕಾರ್ಯದರ್ಶಿ.

NAVA BHARAT, BELLARY. Reg. No. M. 4746

ನವಭಾರತ ಬಳ್ಳಾರಿ.
(Nationalist Weekly)

ಚಂದಾದರಗಳು.	Subscription Rates
ವರ್ಷಕ್ಕೆ 5-0-0	One Year 5—0—0
6 ತಿಂಗಳಿಗೆ 3-0-0	Six months 3—0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To
SRI.....

Printed at Krishna Press Bellary QH No. B 17 FOR (Q.H NO. B-5.)
Edited & Published by T. B. KESHAVA RAO

ನವಚೇತನ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ವರ್ಷ ೧೦ | ಸಂಚಿಕೆ ೪೯ | ಬಳ್ಳಾರಿ ಡಿಸೆಂಬರು ೨೯ ಸೋಮವಾರ ೧೯೪೭ | ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವ್.

ವಿಲೀನೀಕರಣ ತತ್ವ

(ಮಹಾತ್ಮಗಾಂಧಿ)

ಇಲ್ಲಿ ಉಪಯೋಗಿಸಿದ ವಿಲೀನೀಕರಣ ಶಬ್ದಕ್ಕೆ ಕಾಯದೆಬದ್ಧವಾದ ಮಹತ್ವವೇನೂ ಇಲ್ಲ. ದಕ್ಷಿಣ ಒಕ್ಕೂಟದಲ್ಲಿಯ ಕೆಲ ಸಂಸ್ಥಾನಗಳಲ್ಲಿಯ ಪ್ರಜೆಗಳು ತಮ್ಮ ಸಂಸ್ಥಾನಗಳನ್ನು ಪ್ರಾಂತಗಳಲ್ಲಿ ಸಮಾವೇಶ ಮಾಡಿ ಬಿಡಬೇಕೆಂಬ ಉತ್ಕಟ ಇಚ್ಛೆಯನ್ನು ಪ್ರದರ್ಶಿಸುತ್ತಿರುವರೆಂದು ಸುದ್ದಿ ಹಬ್ಬಿದೆ. ಹೀಗೆ ಮಾಡುವದೆಂದರೆ ಬ್ರಿಟಿಶ ಹಿಂದುಸ್ತಾನದಲ್ಲಿ (ಬ್ರಿಟಿಶರಾಳಿಕೆಯಲ್ಲಿ ಹಾಗೆ ಕರೆಯಲಾಗುತಿದ್ದಿತು) ಅವನ್ನು ವಿಲೀನ ಮಾಡಿದಂತೆ. ಹಿಂದೀ ಸಂಸ್ಥಾನಗಳು ಮತ್ತು ಇವುಗಳಲ್ಲಿಯ ಭೇದವಿದು.

ಅಹಿಂಸೆಯ ತಳಹದಿಯ ಮೇಲೆ ಸ್ಥಾಪಿತವಾದ ಸಮಾಜದಲ್ಲಿ ಯಾವನೊಬ್ಬನು ಮತ್ತೊಬ್ಬನನ್ನು ಹಿಂದೆ ಮುಂದೆ ನೋಡದೆ ನಾಶ ಮಾಡತಕ್ಕದ್ದಲ್ಲ. ಏಕೆಂದರೆ ದುಷ್ಕೃತ್ಯಮಾಡುವ ಪ್ರತಿಯೊಬ್ಬನು ತನ್ನ ರೀತಿ ನೀತಿಗಳನ್ನು ಸುಧಾರಿಸಿಕೊಳ್ಳದಿದ್ದರೆ ಆತ್ಮನಾಶಹೊಂದುವದು ನಿಃಸಂದೇಹ, ಅಪಾಯವೆಂದಿಗೂ ತಾನಾಗಿಯೆ ನಿಲ್ಲಬಾರದು. ಅದುದರಿಂದ ಸಂಸ್ಥಾನಗಳ ಅಡಳಿತವನ್ನು ಸುಧಾರಿಸುವದೆ ಕಾಂಗ್ರೆಸ್ಸಿನ ಈವರೆಗಿನ ಧೋರಣದಾಗಿತ್ತಲ್ಲದೆ ಅದನ್ನು ಕೊನೆಗೊಳಿಸುವದಾಗಿರಲಿಲ್ಲ, ಸಂಸ್ಥಾನಿಕರು ತಮ್ಮ ಪ್ರಜೆಗಳ ವಿಶ್ವಸ್ತರು ನಿಜಾರ್ಥದಲ್ಲಿ ಸೇವಕರು ಆಗಿ ವರ್ತಿಸುವಂತೆ ಅವರ ಮನವೊಲಿಸುವದೇ ಕಾಂಗ್ರೆಸ್ಸಿನ ಧೋರಣವಾಗಿತ್ತು. ತನ್ನ ಈ ಧೋರಣಕ್ಕನುಸಾರವಾಗಿಯೆ ಕಾಂಗ್ರೆಸ್ ಸರ್ಕಾರ ಸಂಸ್ಥಾನಿಕರ ಅಡಳಿತವನ್ನು ಕೊನೆಗೊಳಿಸಿ ಹಿಂದೀ ಒಕ್ಕೂಟ ಪ್ರಾಂತಗಳಲ್ಲಿಯ ಭಾಗಗಳನ್ನಾಗಿ ಮಾರ್ಪಡಿಸಿಕೊಳ್ಳುವ ಧೋರಣವನ್ನು ವಹಿಸದೆ ಹಿಂದಿ ಒಕ್ಕೂಟದಲ್ಲಿ ಅವು ಸೇರುವಂತೆ ಪ್ರಯತ್ನಿಸಿ ಯತಸ್ವಿಯಾದುದುಂಟು. ಅದುದರಿಂದ ವಿಲೀನೀಕರಣವು ಎರಡು ಸಂದರ್ಭಗಳಲ್ಲಿ ಮಾತ್ರ ಆಗಬಲ್ಲುದು. ಮೊದಲನೆಯದಾಗಿ ಯಾವನೊಬ್ಬ ಸಂಸ್ಥಾನಿಕರ ಅಡಳಿತೆ ಸರಿಯಾಗಿಲ್ಲೆಂದು ಸಿದ್ಧವಾಗಿ ಅದನ್ನು ಸುಧಾರಿಸುವದು ಶಕ್ಯವಾಗಿರದಿದ್ದರೆ ಆ ಸಂಸ್ಥಾನವನ್ನು ತಮ್ಮ ಪ್ರಾಂತದಲ್ಲಿ ವಿಲೀನ ಮಾಡಿಕೊಳ್ಳುವದು ಇಲ್ಲವೆ ಕೂಡಿಸಿಕೊಳ್ಳುವದು ಜನತೆಯ ಚಕ್ಕಾಗಿದೆಯಲ್ಲದೆ ಕರ್ತವ್ಯವೂ ಆಗಿ ಪರಿಣಮಿಸುವದು. ಎರಡನೆಯದಾಗಿ ಸಂಸ್ಥಾನಿಕರು ಮತ್ತು ಪ್ರಜೆಗಳಿಬ್ಬರೂ ವಿಲೀನೀಕರಣವನ್ನು ಬಯಸುತ್ತಿದ್ದರೆ ಹಾಗೆ ಮಾಡಬಹುದು. ಎಲ್ಲ ಸಂಸ್ಥಾನಗಳು ಇಲ್ಲವೆ ಬಹುಸಂಖ್ಯಾಕ ಸಂಸ್ಥಾನಿಗಳು ಒಪ್ಪದಿದ್ದರೆ ಯಾವದೊಂದು ಸಂಸ್ಥಾನವು

ಇಲ್ಲವೆ ಅದರ ಪ್ರಜೆಗಳು, ಅವರೆಷ್ಟು ಬಲಿಷ್ಠರಿರಲಿ ಇಲ್ಲವೆ ಕನಿಷ್ಠರಿರಲಿ, ವಿಲೀನೀಕರಣವನ್ನಪೇಕ್ಷಿಸಬಾರದೆಂದು ಸೂಚಿಸಲಾಗುತ್ತದೆ. ನಾನು ಹಾಗೆ ಭಾವಿಸುವುದಿಲ್ಲ. ಯಾವದೊಂದು ಸಂಸ್ಥಾನದಲ್ಲಿಯ ದುರಾಡಳಿತವನ್ನು ಕೊನೆಗೊಳಿಸುವದು ಉಳಿದ ಸಂಸ್ಥಾನಗಳಲ್ಲಿಯೂ ಅಷ್ಟೇ ದುರಾಡಳಿತ ನಡೆಯುವವರೆಗೆ ತಡೆಯಲ್ಪಡಬಾರದು. ಅಲ್ಲದೆ ತನ್ನ ಅಧಿಕಾರವನ್ನು ಬಿಟ್ಟುಕೊಡಬಯಸುವ ಯಾವನೊಬ್ಬ ಸಂಸ್ಥಾನಿಕನು ಉಳಿದ ಎಲ್ಲ ಸಂಸ್ಥಾನಿಕರೂ ಅದಕ್ಕೆ ಸಿದ್ಧರಾಗುವವರೆಗೆ ತಡೆಯತಕ್ಕದೆಂದು ಹೇಳುವದೂ ಸಮಂಜಸವಾಗಲಾರದು, ಇಂಥ ಪ್ರತಿಯೊಂದು ಪ್ರಶ್ನೆಯನ್ನು ಕೇಂದ್ರ ಸರ್ಕಾರವು ಉಚಿತವಾದ ರೀತಿಯಲ್ಲಿ ವಿಚಾರಿಸಿ ನಿರ್ಣಯಿಸತಕ್ಕದ್ದು.

ನೆಗಡಿಗೆ ಮದ್ದೇ ಇಲ್ಲ.

ಒಂದು ಸಲ ನೆಗಡಿಯಾಗಿ ಬಿಟ್ಟರೆ ಬೇರಾವ ಕಾಹಿಲೆಯೂ ತಲೆಹಾಕದೆಂದು ಹಿರಿಯರ ಹೇಳಿಕೆ. ಅದಕ್ಕೆ ನೆಗಡಿ ಹಿಡಿದವರನ್ನು ಮಾತ್ರ ಅದರಿಂದುಂಟಾಗುವ ವೇದನೆಗಿಂತ ಹೆಚ್ಚಾಗಿ ಬಾಹ್ಯಪರಿಣಾಮಗಳಾದ ಶೀನು ಸಿಂಬಳಗಳ ಹಾವಳಿಯೇ ಸಾಕೋ ಸಾಕೆನಿಸಿಬಿಡುತ್ತದೆ.

ಈ ನೆಗಡಿಯಿಂದರೆ ರೋಗಗಳಲ್ಲಿ ಒಂದು ವಿದೂಷಕರತ್ನ. ಅದರಿಂದಲೇ ತೆನ್ನಾಲ ರಾಮಕೃಷ್ಣ ಚಂಡಿಯನ್ನು ಸಾಕ್ಷಾತ್ಕರಿಸಿಕೊಂಡಾಗ ಅವಳು ಸಾವಿರ ಮುಖಗಳಿಂದ ಶೀನತೊಡಗಿದರೆ ಅವಳಿಗೆಷ್ಟು ವೇದನೆಯಾದೀತೆಂದು ಹೇಳಿ ಅವಳನ್ನು ನಗಿಸಿ ವಿಕಟ ಕವಿಯಾಗೆಂದು ವರ ಪಡೆದ.

ನೆಗಡಿಗೆ ನಾನಾ ಔಷಧಗಳಿವೆಯೆಂಬುದನ್ನು ಜಾಹೀರಾತುಗಳ ಸಹಸ್ರನಾಮ ಪಠನದಿಂದ ತಿಳಿಯಬಹುದು. ನೆಗಡಿಯ ಚಿಕಿತ್ಸೆಗಾಗಿ ನೂರಕ್ಕೆ ಒಬ್ಬ ಸಂದರ್ಭಗಳಲ್ಲಿ ಮನೆಗೂ ೧೫ ಸಂದರ್ಭಗಳಲ್ಲಿ ಕಾರ್ಯಾಲಯಕ್ಕೂ ವೈದ್ಯರು ಭೇಟ್ಟಿ ಕೊಡುತ್ತಾರೆಂದು ಡಾ. ಮೋಬಾರ್ಟ್ ಏ ರೀಮನ್ನರ ಲೆಕ್ಕವಾಡಿ ತೋರಿಸಿದ್ದಾರೆ.

ನೆಗಡಿ ಮತ್ತು ಅದರ ಭ್ರಾತೃರೋಗಗಳು 'ವೈರಸ್' ಎಂಬ ಜೀವಕಣಕ್ಕೆ ರೋಗದಾಣು ಕಚ್ಚುವುದರಿಂದುಂಟಾಗುವುವು. ಇವರ ನಿವಾರಣೆಗೆಂದು ಬೆವರು ಹೆಚ್ಚಿಸಲು, ನಂಜು ತೆಗೆಯಲು, ತಲೆಹಗುರ ಮಾಡಲು ನಾನಾ ಔಷಧಗಳನ್ನು ತೆಗೆದುಕೊಳ್ಳುತ್ತಾರೆ. ಗುಳಿಗೆಗಳಿಗಂತೂ ಲೆಕ್ಕ ಸಂಖ್ಯೆಯಿಲ್ಲ. ಜ್ವರ ಇಳಿದರೆ ಹಲವರು ನೆಗಡಿ ಗುಣಮುಖವಾಯಿತೆಂದು ತಿಳಿಯುತ್ತಾರೆ. ಅದು ತಪ್ಪು. ಕೆಲಮಟ್ಟಿಗೆ ಜ್ವರವಿದ್ದರೆ ನೆಗಡಿಗೊಳ್ಳಿಯದಿ. ಇನ್ನು ಕೆಮ್ಮು ನಿಲ್ಲಿಸಲು ನಾನಾ ಮಿಶ್ರಣಗಳನ್ನು ತೆಗೆದುಕೊಳ್ಳುತ್ತಾರೆ. ಅದರೆ ಇದೂ ತಪ್ಪು. ಬಹಳ ಹೆಚ್ಚಿಲ್ಲದಿದ್ದರೆ ಸಾಮಾನ್ಯ ಕೆಮ್ಮು ದೇಹಕ್ಕೆ ಆರೋಗ್ಯವನ್ನೇ ಉಂಟು ಮಾಡುತ್ತದೆಯೆಂದು ತಜ್ಞರ ಅಭಿಪ್ರಾಯ, ಕೆಲ ಕೆಮ್ಮಿನ ಮದ್ದುಗಳಲ್ಲಿ ನಿದ್ರಾಜನಕ ಪದಾರ್ಥಗಳಿರುತ್ತವೆ. ಅವು ಹಾನಿಕರ. ನೆಗಡಿಯನ್ನು ಗುಣಪಡಿಸಲು ಯಾವ ಔಷಧದ ಉರಿಮದ್ದೂ ಪ್ರಯೋಜನವಿಲ್ಲ ವಿಶಿಷ್ಟ 'ಗ್ಯಾಸ್' ಸೇವನೆಯೂ ಹಿತಕರವಲ್ಲ. ಇನ್ನು 'ವೈರಸ್' ನ ಕಾಹಿಲೆಯನ್ನು ಗುಣಪಡಿಸಲು ಮೈಲಿಮದ್ದು ಚುಚ್ಚುತ್ತಾರೆ, ಇದು ವ್ಯರ್ಥ.

ದೈಹಿಕ ಆರೋಗ್ಯ, ಮನಃಶಾಂತಿ, ಸಾಕಷ್ಟು ಆಹಾರ, ಹಿತಕರ ಹವೆ ಇಷ್ಟಿದ್ದರೆ ನೆಗಡಿ ಪತ್ತರ ಸುಳಿಯದು, ಅದರೆ ಶ್ವಾಸಕೋಶಕ್ಕೆ ಸಂಬಂಧಿಸಿದ ರೋಗಗಳು ಧೂಳೀಪಾಸ್, ಆಯಾಸ, ಒಮ್ಮೆಲೆ ಥಂಡಿ ಬಡಿಯುವುದು, ತೋಯ್ಸಿಕೊಳ್ಳುವುದು ಇವುಗಳಿಂದ ಸಂಭವಿಸುವುದುಂಟು ಅವುಗಳಿಂದ ರಕ್ಷಿಸಿಕೊಳ್ಳಬೇಕು ಇಲ್ಲದೆ ವಿಶ್ರಾಂತಿಯಿಂದ ಸುಧಾರಿಸಿಕೊಬೇಕು.

ಇಲ್ಲಿಯವರೆಗೆ ವೈಜ್ಞಾನಿಕವಾಗಿ ನೆಗಡಿಯನ್ನು ಗುಣಪಡಿಸುವ ಒಂದು ಮದ್ದನ್ನು ಯಾರೂ ತಯಾರಿಸಿಲ್ಲವೆಂದು ಡಾ. ಹಚ್. ವಿ. ರೀಮನ್ನರ ಅಭಿಪ್ರಾಯ. ನೆಗಡಿಯೆಂಬುದಿಂಥ ಗಟ್ಟಿಗ ರೋಗವೆಂದು ಯಾರಿಗಾರಿಗೂ ಗೊತ್ತಿದೆಯೇ ? ಅದು ಧನ್ವಂತರಿಗಳ ತಲೆಯನ್ನೇ ಮಂಕುಗೊಳಿಸಿದೆಯೆಂಬುದೀಗ ಸ್ಪಷ್ಟವಾಯಿತು ಅಲ್ಲವೆ ನೆಗಡಿಯೇ !

ನೆಗಡಿ

ಅಯ್ಯೊ ನೆಗಡಿಯು ಬೇಡಪ್ಪ!
ಹೇಳಲು ಕೇಳಲು ಬೇಡಪ್ಪ!
ಸೀನುಗಳೇಸೋ ಲೆಕ್ಕವೆ ಇಲ್ಲ
ಎಣಿಸಲು ಬಾಯೇ ಬರದಲ್ಲಿ!
ನೀರೇ ಸೋರಲು ಸುರುವಾಯ್ತು,
ಮುಗೋ ಹುರಿದು ಹಾಳಾಯ್ತು!
ಅಂತೂ ನೆಗಡಿಯು ಬೇಡಪ್ಪಾ
ಹೇಳಲು ಕೇಳಲು ಬೇಡಪ್ಪಾ!

ಕಣ್ಣೂ ಮೂಗು ಸೋರಿ ಸೋರಿ,
ಎಲ್ಲಿಯೋ ಹೊಯ್ತು ಸ್ವರಹಾರಿ!
ಊಟದಿ ರುಚಿಯೇ ಇಲ್ಲದೆ ಹೋಯ್ತು,
ಮಲಗೀ ಮಲಗೀ ಸಾಕಾಯ್ತು,
ಇಂತಹ ರೋಗವು ಇಲ್ಲಪ್ಪ,
ಅಂತೂ ನೆಗಡಿಯು ಬೇಡಪ್ಪಾ!

ಮಜ್ಜಿಗೆ ಮೊಸರನು ಉಣ್ಣಲೆ ಬಾರದು,
ಥಂಡಿಗೆ ತಲೆಯನು ಬಿಡಲೇ ಬಾರದು
ಬೆಳಗನು ನೋಡಲು ಹೊರಹೋಗೆ,
ಎಲ್ಲರು ಬೈವರು ಬಹುಕೂಗಿ!
ಸಂತಸವೆಂಬುದು ಇನಿತಿಲ್ಲ
ಅಂತೂ ನೆಗಡಿಗೆ ಮಿತಿಯಿಲ್ಲ!

ರಾಗಿಯಹಿಟ್ಟನು ಕೆಂಡದಿ ತುಂಬಿ,
ಮೂಗಿನ ತುಂಬಾ ಹೊಗೆಯನು ತುಂಬಿ,
ಕಂಬಳಿಹೊದ್ದೂ ಮಲಗಿದರೂನೂ,
ಇನ್ನೂ ನೆಗಡಿಯು ಬಿಡದಪ್ಪ!
ರೋಗಕೆ ಮದ್ದೇ ಇಲ್ಲಪ್ಪ!
ಇದು ಮಹಾರೋಗವು ಕಾಣಪ್ಪಾ!

ಮನೆಯೊಳು ಸೇರಿಕೆ ಮೊದಲೇ ಇಲ್ಲ
ಅದುವೇ ಬಂದರೆ ಗೌರವವಿಲ್ಲ!
ಕರದಲಿ ವಸ್ತ್ರ ಎಡಗೈ ಶಸ್ತ್ರ!
ಅಂತೂ ರೋಗವು ಮಹಶತ್ರು!

ತಲೆಯೂ ನೋಯುತ ಜ್ವರವೂ ಬಂತು!
ನೆಗಡಿಯು ಬಂದರೆ ಬಹು ಚಿಂತೆ!
ಮೂಗನು ಕೊಯ್ಯಲು ಮನಸೂ ಬರುವುದು
ಕೊಯಿದರೆ ನೆಗಡಿಯು ಬಿಟ್ಟೀತೆ?
ಎನ್ನುವ ಚಿಂತೆಯು! ಇದು ಬಲುಚಿಂತೆ!

ನೆಗಡಿಯು "ಹಿತ ಅರಿ" ಕಾಣಪ್ಪಾ!
ಇದು ಮಹಾರೋಗವು ಅಹುದಪ್ಪಾ!
ರೋಗಕೆ ಮದ್ದೂ ಇಲ್ಲಪ್ಪ
ಬಚ್ಚಿಸಿ ಪದಗಳೆ ಇಲ್ಲಪ್ಪಾ!

'ಶಂಭೋ! ಶಂಕರ! ಹರಿನಾರಾಯಣ!
ಮೂಗಿನ ಉಸಿರನು ಕಟ್ಟುವ ನೆಗಡಿಯು
ಮೊದಲೇ ನೀವು ತೆಗಿರಪ್ಪಾ
ನಮಗೇ 'ಶಹಭಾಷ್' ಗಿರಿಯಪ್ಪಾ!

[ಮ-ಹಿ-ಮ]

ಧಾರವಾಡದಲ್ಲಿ ಸಮಾಜವಾದಿ ಪಕ್ಷದ ಸಭೆ.

ಸಮಾಜವಾದಿ ಪಕ್ಷ (ಕರ್ನಾಟಕ) ದ ಕಾರ್ಯಕಾರಿ ಸಮಿತಿಯು ತಾ|| ೧೭,೧೮ ರಲ್ಲಿ ಶ್ರೀಮತಿ ಕಮಲಾದೇವಿಯವರ ಅಧ್ಯಕ್ಷತೆಯಲ್ಲಿ ಧಾರವಾಡದಲ್ಲಿ ಪಕ್ಷದ ಕಚೇರಿಯಲ್ಲಿ ಸೇರಿತ್ತು. ಆಫೀಸ್‌ಗೆ ಸಂಬಂದಪಟ್ಟ ಅನೇಕ ಕಾರ್ಯಗಳ ಬಗ್ಗೆ ಚರ್ಚಿಸಿ ಕೆಲವು ಗೊತ್ತುವಳಿಗಳನ್ನು ಅಂಗೀಕರಿಸಲಾಯಿತು. ಈ ಸಮಿತಿಯು ಹೈದರಾಬಾದು ಸತ್ಯಾಗ್ರಹದ ಬಗ್ಗೆ ವಿಚಾರಮಾಡಿ ಕೆಲಸಮಾಡಲು ಒಂದು ಉಪಸಮಿತಿಯನ್ನು ನೇಮಿಸಿತು. (೧) ಅಣ್ಣಾ ವೇ ಶ ಪಾಂ ಡೆ (ಬೆಳಗಾವಿ) (೨) ಗರುಡಶರ್ಮ (ಧಾರವಾಡ) (೩) ಯಸ್. ನಾಗಭೂಷಣ (ಮೈಸೂರು) (೪) ಆರ್. ವಿ. ದೇಸಾಯಿ (ಬಳ್ಳಾರಿ) ಯವರಿಗೆ ಹೆಚ್ಚಿಗೆ ಸದಸ್ಯರನ್ನು ಸೇರಿಸಿಕೊಳ್ಳಲು ಅಧಿಕಾರ ಕೊಡಲಾಯಿತು

ಇದೇ "ಹೈದರಾಬಾದ್ ಸತ್ಯಾಗ್ರಹ" ಉಪಸಮಿತಿಯು ತಾ|| ೧೮-೧೨-೪೭ ರಾತ್ರಿ ೧೦ ರಿಂದ ೨ ಗಂ|| ಬೆಳಿಗ್ಗೆವರೆಗೂ ಸೇರಿ ಹೈದರಾಬಾದಿನ ಗಡಿ ಪ್ರವೇಶಗಳ ಮತ್ತು ಹೈದರಾಬಾದಿನಲ್ಲಿನ ಸತ್ಯಾಗ್ರಹದ ಬಗ್ಗೆ ನಡೆದ ಎಲ್ಲ ವಿಷಯಗಳನ್ನು ಕೂಲಂಕಷವಾಗಿ ಚರ್ಚಿಸಲಾಯಿತು. ಈ ತಿಂಗಳ ಕೊನೆಯಲ್ಲಿ ಹೊಸಪೇಟೆಯಲ್ಲಿ ಪುನಃ ಕೂಡಬೇಕಾಗಿ ನಿರ್ಧರಿಸಲಾಯಿತು ಈ ವಿಷಯದಲ್ಲಿ ಸಾರ್ವಜನಿಕರು ಸಹಾಯವನ್ನೀಡಬೇಕಾಗಿ ವಿನಂತಿ ಮಾಡಿಕೊಳ್ಳಲಾಗಿದೆ.

ಹೈದರಾಬಾದ್ ಸತ್ಯಾಗ್ರಹಕ್ಕೆ ಸಹಾಯಮಾಡಿರಿ

— ಬಳ್ಳಾರಿಯಲ್ಲಿ ಸಭೆ —

ಶ್ರೀ ಕಲ್ಲಗಿ ಶಿವರುದ್ರಪ್ಪನವರ ಅಧ್ಯಕ್ಷತೆಯಲ್ಲಿ 21 ನೆಯ ದಿನಾಂಕ ಹೈದರಾಬಾದ್ ಸಂಸ್ಥಾನ ಕಾಂಗ್ರೆಸ್ ಮುಖಂಡರು ಶ್ರೀ ಜನಾರ್ಧನರಾವ್ ದೇಶಾಯಿ (ಕ. ಪ್ರಾ. ಅಧ್ಯಕ್ಷರು) ಪಾಂಡುರಂಗರಾವು, ರಾಜ ಪುರೋಹಿತ್, ರಾಮಚಂದ್ರಶರ್ಮ ಇವರು ಸ್ಫೂರ್ತಿದಾಯಕ ಭಾಷಣಮಾಡಿ ಹೈದರಾಬಾದ್ ಸತ್ಯಾಗ್ರಹಕ್ಕೆ ಸಹಾಯಮಾಡಿ ಅಲ್ಲಿ ಹೊಣೆಗಾರ ಸರ್ಕಾರ ಸ್ಥಾಪನೆಯ ವ್ಯವಸ್ಥೆಯಾಗಲು ಬಿನ್ನಯಿಸಿದರು.

ಶ್ರೀ ರಾಜಪುರೋಹಿತ:—

ನಮ್ಮ ಚಳುವಳಿಯು ಮುಸಲ್ಮಾನರ ಹಿತಕ್ಕೆ ವಿರೋಧವಿಲ್ಲ. ಕೆಲ ಉಚ್ಚವರ್ಗದವರನ್ನು ಬಿಟ್ಟರೆ, ಉಳಿದ 23ಲಕ್ಷ ಬಡ ಮುಸಲ್ಮಾನರು ನಮ್ಮಂತೆಯೇ ಹೀನ ದೆಶೆಯಲ್ಲಿರುವರು. ಅವರಿಗೂ ಆರ್ಥಿಕ ರಾಜಕೀಯ ಸ್ವಾತಂತ್ರ್ಯವಿಲ್ಲ. ನ್ಯಾಯ ಶಾಸನಗಳೇ ಇಂದು ಹೈದರಾಬಾದಿನಲ್ಲಿಲ್ಲ ಪೋಲೀಸ್ ಮಿಲಿಟರಿಯವರಿಗೆ ಜನರನ್ನು ಹಿಂಸಿಸಲು ಸೂಚನೆಗಳು ಕೊಡಲಾಗಿವೆ. ಹಿಂದೂಜನರ, ಅಶಿಕ್ಷಿತ ರೈತರ ಮನೆಯಿಂದ ಕುಡು ಗೋಲು, ಈಳಿಗೆಗಳನ್ನು ತೆಗೆದುಕೊಂಡು ಹೋಗಿದ್ದಾರೆ ಈ ನಪುಂಸಕ ನೀತಿಗೆ ಕಾರಣವೇನೋ ಗೊತ್ತಿಲ್ಲ. ಆದರೂ ಜನರು ಪ್ರತೀಕಾರಸ್ಫೂರ್ತಿಯಿಂದ ಸೇಡು ತೀರಿಸಿಕೊಳ್ಳಲು ಸಿದ್ಧರಾಗಿರುವರು. ಹೈದರಾಬಾದ್ ಹಿಂದೂಸ್ಥಾನದ ಅವಿಭಾಜ್ಯ ಭಾಗವೆಂದು ನೀವೆಲ್ಲಾ ಸಹಾಯಮಾಡಬೇಕು ಎಂದರು.

ಶ್ರೀರಾಮಚಂದ್ರಶರ್ಮ:—

ಹೈದರಾಬಾದ್ ಸ್ವಾರ್ಥಚಿಕ ಪ್ರಭುತ್ವದ ವಿರುದ್ಧ ನಾವು ಯುದ್ಧಹೂಡಿ ನಾಲ್ಕುತಿಂಗಳಾಯಿತು. ಅನೇಕ ಕಷ್ಟ, ನಷ್ಟ, ಮಾನ, ಪ್ರಾಣಹಾನಿಗಳಿಗೆ ಗುರಿಯಾಗಿದ್ದೇವೆ. ಇತ್ತೆಹಾದುಲ ಸಂಸ್ಥೆಯವರು ಸರ್ಕಾರದೊಡನೆ ಸಹಕರಿಸಿ ನಮ್ಮಮೇಲೆ ಅವರ್ಣನೀಯ ಅತ್ಯಾಚಾರಗಳನ್ನು ನಡೆಸಿದ್ದಾರೆ. ಸಂಸ್ಥಾನಕ್ಕೆ ಹೊರಗಿನಿಂದ 2 ಲಕ್ಷ ಗೂಂಡಾ ಜನರು ಬಂದಿದಾರೆ ಇತ್ತೆಹಾದ ಸಂಸ್ಥೆಯವರು ಒಂದು ಲಕ್ಷ ಜನರನ್ನು ಅಣೆಮಾಡಿದ್ದಾರೆ. ಅಲ್ಲಿ ನಡೆದುದನ್ನೆಲ್ಲಾ ವಿಚಾರಿಸಿದರೆ ಗದ್ಗದವಾಗುತ್ತೆ. ನಿಮ್ಮಂತೆ ನಾವೂ ಸ್ವಾತಂತ್ರ್ಯ ಹೊಂದಲು ಸಹಾಯಮಾಡಿರಿ ಎಂದರು.

ಶ್ರೀ ಪಾಂಡುರಂಗರಾಯರು:—

ಇವರ ಭಾಷಣವು ಜನರನ್ನು ಮುಗ್ಧಮಾಡಿತು. ಅವರು ಹರಿಶ್ಚಂದ್ರ, ರಾಮಾಯಣ ವಗೈರೆ ಪೌರಾಣಿಕ ಗ್ರಂಥಗಳ ಘಟನೆಗಳನ್ನು ಸೂಚಿಸಿ ತಮ್ಮದು ಧರ್ಮಯುದ್ಧವೆಂದೂ, ಎಲ್ಲಾ ಧರ್ಮಗಳ ಸಾರವೂ ಒಂದೇ ಎಂದೂ ಸಕಾರಣ ಹೇಳಿದರು. ನಿಜಾಮರು ಒಳ್ಳೆಯವರೆಂಬುದನ್ನು ನಂಬಬಹುದಾದರೂ, ಅವರ ನಿಕಟ ಅನುಯಾಯಿಗಳು ಅವರಿಗೆ ಆತ್ಮೋದ್ಧಾರಮಾರ್ಗದ ಬದಲು ಆತ್ಮನಾಶ ಮಾರ್ಗವನ್ನು ತೋರಿಸುತ್ತಿರುವರೆಂದರು.

ಕೆ. ಸುಬ್ಬರಾಯರು:—

(ಜಿಲ್ಲಾ ವಸ್ತ್ರಶಾಖೆಯಧಿಕಾರಿ) ಇವರು ಎಲ್ಲರು ಕೊಡುಗೈಯಿಂದ ಸಹಾಯಮಾಡಲು ಕೋರಿದರು.

ಶ್ರೀ ಜನಾರ್ದನರಾವ ದೇಸಾಯಿ:—

ಕನ್ನಡ ಮತ್ತು ಹಿಂದೂಸ್ತಾನಿಗಳಲ್ಲಿ ಮಾತಾಡಿ ಸತ್ಯಾಗ್ರಹದ ರೂಪರೇಷೆಗಳನ್ನು ತಿಳಿಸಿ ರಾಯಚೂರು ಜಿಲ್ಲೆಗೆ ಹೊಂದಿಕೊಂಡಿರುವ ಬಳ್ಳಾರಿ ಜಿಲ್ಲೆಯವರ್ ಧನಸಹಾಯಮಾಡಲೇಬೇಕೆಂದು ಬೇಡಿದರು.

ಅಧ್ಯಕ್ಷರ ಸಮಾರೋಪ ಭಾಷಣವಾಗಿ ವಂದೇ ಮಾತರಂ ಗಾನದಿಂದ ಸಭೆಯು ಮುಗಿಯಿತು 23 ನೆ ದಿನಾಂಕ ನಗರ ಪ್ರಮುಖರು ಹೈದರಾಬಾದ್ ಸಂಸ್ಥಾನ ಕಾಂಗ್ರೆಸ್ ಸಹಾಯಾರ್ಥವಾಗಿ ದ್ರವ್ಯಸಂಗ್ರಹ ಮಾಡಿದರು.

ಆಧುನಿಕ ತೊಗಲಕ ಮಹಮ್ಮದನ ಹುಚ್ಚು ದರ್ಬಾರು.

ಇತ್ತೀಚೆಗೆ ಪಾಕಿಸ್ತಾನ ಸರಕಾರದವರು ಹೊರಡಿಸುತ್ತಿದ್ದ ಆಜ್ಞೆಗಳನ್ನು ನೋಡಿದರೆ ಯಾರಿಗಾದರೂ ನಗೆಯೂ ಕನಿಕರವು ಬರುವಂತಿದೆಯೆಂದು ಎನಿಸದೆ ಇರದು. ಮೊನ್ನೆ ನೊನ್ನೆ ಪತ್ರಿಕೆಗಳಲ್ಲಿ ಪ್ರಸಿದ್ಧವಾದ ಸುದ್ದಿಗಳನ್ನು ನೋಡಿದರೆ ಈ ಮಾತಿನ ಸತ್ಯತೆಯು ಕಂಡುಬರುವುದು. ಪಾಕಿಸ್ತಾನದಿಂದ ಹಿಂದೂಸ್ಥಾನಕ್ಕೆ ಹೊರಟ ಹದಿನಾರು ಜನ ಅಗಸರನ್ನೂ ಎಂಟು ಜನ ಕಸಗೂಡಿಸುವವರನ್ನೂ "ಸಿಂಧ ಸೇಫ್ಟಿ ಆರ್ಡಿನನ್ಸ್" ಪ್ರಕಾರ ಬಂಧಿಸಿದ್ದಾರಂತೆ. ಪಾಕಿಸ್ತಾನ ಸರಕಾರದಲ್ಲಿ ಕೆಲಸ ಮಾಡುತ್ತಿದ್ದ ಹಿಂದೀ ಕೆಲಸಗಾರರು ನಾತಾಳಿ ಸೂಟಿಯಲ್ಲಿ ಹಿಂದೂಸ್ತಾನದಲ್ಲಿಯ ತಮ್ಮ ತಮ್ಮ ಆಪ್ತ ಇಷ್ಟರನ್ನು ಕಂಡು ಬರಲಿಕ್ಕೆಂದು ಹೋಗುವವರಿದ್ದರು ಅದಕ್ಕಾಗಿ ಅವರು ಸರಕಾರಕ್ಕೆ ಕೆಲವು ದಿನಗಳ ಹೆಚ್ಚಿನ ಬಿಡುವನ್ನು ಕೇಳಿದ್ದರಂತೆ. ಪಾಕಿಸ್ತಾನ ಸರಕಾರವು ಅವರ ಬೇಡಿಕೆಯನ್ನು ಮೊದಲು ಮನ್ನಿಸಿದ್ದರಂತೆ. ಆಪ್ರಕಾರ ಅವರು ಗಂಟುಮೂಟೆ ಕಟ್ಟಿಕೊಂಡು ಹೊರಡಲನುವಾಗಲು ಪಾಕಿಸ್ತಾನ ಸರಕಾರದಿಂದ "ಸರಕಾರದಲ್ಲಿ ದುಡಿಯುತ್ತಿದ್ದ ಹಿಂದೀ ಜನರು ಹಿಂದೂ ಜನರು ಹಿಂದುಸ್ತಾನಕ್ಕೆ ಹೋಗಕೂಡದು" ಎಂದು ಮತ್ತೊಂದು ಆಜ್ಞೆಯನ್ನು ಹೊರಡಿಸಿ ಮೊದಲು ಹೊರಡಲು ಅಪ್ಪಣೆ ಕೊಟ್ಟವರಿಗೂ ಪ್ರತಿಬಂಧ ಮಾಡಿದರಂತೆ. ಹೀಗೆ ಹುಚ್ಚು ಹಿಡಿದವರಂತೆ ಕ್ಷಣಕ್ಕೊಂದು ರೀತಿಯ ಪರಸ್ಪರ ವಿರುದ್ಧವಾದ, ಅಸಂಬದ್ಧವೆನಿಸುವ ಅವ್ಯವಹಾರ್ಯವಾದ ಈ ಬಗೆಯ ಆಜ್ಞೆ ಹೊರಡಿಸುವುದನ್ನು ನೋಡಿದರೆ ಇತಿಹಾಸದಲ್ಲಿ ಹುಚ್ಚುಮಹಮ್ಮದನೆಂದು ಪ್ರಸಿದ್ಧವಾದ ತೊಘಲಕ ಮಹಮ್ಮದನ ಆಳಿಕೆಯ ನೆನಪು ಒರುತ್ತದೆ.

ತೊಘಲಕ ಮಹಮ್ಮದನು, ಒಮ್ಮೆ ಯಾವ ಕಾರಣಕ್ಕಾಗಿಯೋ ಮರುದಿನ ಬೆಳಗಾಗುವದರೊಳಗಾಗಿ ದಿಲ್ಲಿಯ ನಾಗರಿಕರೆಲ್ಲ ದೌಲತ್ತಾಬಾದಕ್ಕೆ ಹೊರಡಬೇಕೆಂದೂ, ಒಂದು ಬೆಕ್ಕಿನ ಸಿಳ್ಳಿಕೂಡ ದಿಲ್ಲಿಯಲ್ಲಿ ಉಳಿಯಬಾರದೆಂದೂ ಕಟ್ಟಾಜ್ಞೆಯನ್ನು ಮಾಡಿದನು. ಮಹಮ್ಮದನ ಹುಚ್ಚುತನವನ್ನೂ ಕ್ರೌರ್ಯವನ್ನೂ ಕಂಡು ಉಂಡು ಬೇಸತ್ತ ಜನರು ಆ ಆಜ್ಞೆಯನ್ನು ವಿಧಿಯಿಲ್ಲದೆ ಪಾಲಿಸಬೇಕಾಗಿ ಬಂದಿತು. ಮರುದಿನ ಮುಂಜಾನೆ ದಿಲ್ಲಿ ನಗರವೆಲ್ಲವೂ ಜನಶೂನ್ಯವಾಗಿ ಸ್ಮಶಾನದಂತೆ ರಣಗುಟ್ಟುತ್ತಿರುವುದನ್ನು ನೋಡಿ ಮಹಮ್ಮದನು ಆನಂದಪಟ್ಟನಂತೆ. ಮುಂದೆ ಅವನು ರಾಜದೂತರನ್ನು ನಗರದೊಳಗೆ ನಾಲ್ಕೂ ಕಡೆಗೆ ತಿರುಗಾಡಿಸಿ ತನ್ನ ಆಜ್ಞೆಯನ್ನುಲ್ಲಂಘಿಸಿ ಯಾರಾದರೂ ದಿಲ್ಲಿಯಲ್ಲಿಯೇ ಉಳಿದಿದ್ದರೆ, ಅವರನ್ನು ಎಳೆದು ತರಬೇಕೆಂದು ಅಟ್ಟಿದನು. ನಗರದಲ್ಲಿ ಯಾರೂ ಉಳಿದಿರಲಿಲ್ಲ. ಆದರೆ ಕುರುಡನೂ, ಕುಂಟನೂ ಆದ ಅನಾಥ ಭಿಕ್ಷುಕನೊರ್ವನು ಬೀದಿಯ ಒಂದು ಸಂದಿಯಲ್ಲಿ ನರಳುತ್ತ ಬಿದ್ದುಕೊಂಡಿರುವುದು ಕಂಡುಬಂತು. ಕೂಡಲೇ ರಾಜದೂತರು ಅವನ ಕುಂಟುಕಾಲೊಂದನ್ನೇ ಹಿಡಿದು ದರದರ ಎಳೆಯುತ್ತ ಮಹಮ್ಮದನೆದುರಿಗೆ ತಂದು ನಿಲ್ಲಿಸಿದರು. ಮಹಮ್ಮದನು ಕೋಪದಿಂದ ಕೆಂಡವಾಗಿ ಆ ಭಿಕ್ಷುಕನನ್ನು ಒದ್ದು ಆ ರಾಜದೂತರಿಗೆ ಇವನನ್ನು ಹೀಗೆಯೇ ಕಾಲು ಹಿಡಿದು ದರದರ ಎಳೆಯುತ್ತ ದೌಲತ್ತಾಬಾದದವರೆಗೂ ಎಳೆದುಕೊಂಡು ಹೋಗಿರೆಂದು ಆಜ್ಞೆ ಮಾಡಿದನು. ರಾಜದೂತರು ಅದರಂತೆಯೇ ಅವನನ್ನು ದರದರ ಎಳೆಯುತ್ತ ನಡೆದರು. ದೌಲತ್ತಾಬಾದ ಮುಟ್ಟುವುದರೊಳಗಾಗಿ ಆ ಬಡಭಿಕ್ಷುಕನ ಎಲ್ಲ ಅವಯವಗಳೂ ಒಂದೊಂದಾಗಿ ಕಳಚಿಹೋಗಿ ರಾಜದೂತರು ಹಿಡಿದಿದ್ದ ಕಾಲೊಂದು ಮಾತ್ರ ಅವರ ಕೈಯಲ್ಲಿ ಉಳಿಯಿತಂತೆ. ಆದರದ ಆರಾಜದೂತರು ಈ ಹುಚ್ಚು ಮಹಮ್ಮದನ ಕೋಪಕ್ಕೆ ಹೆದರಿ, ಆ ಕಾಲೊಂದನ್ನೇ

ದೌಲತಾಬಾದದವರೆಗೂ ಎಳೆದುಕೊಂಡು ಹೋಗಿ ಕೋಟೆಯೊಳಗೆ ಒಗೆದರಂತೆ.

ಹೀಗೆಯೇ ಇಂದು ಪಾಕಿಸ್ತಾನದ ಗತಿಯಾಗಿದೆ ಎಂದು ಹೇಳಬಹುದು. ಹಿಂದೂಜನರಿಂದ ಪ್ರತ್ಯೇಕವಾಗಿರಲು ಬಯಸಿ, ಸಾವಿರಾರು ವರುಷದಿಂದ ಕೂಡಿ ನಡೆದ ಬಾಂಧವ್ಯವನ್ನು ಬಿಸುಟಿ, ತಾಯಿನಾಡನ್ನು ತುಂಡುಮಾಡಿ, ಕೇವಲ ಮುಸಲ್ಮಾನರಿಗಿಂದೇ ಪಾಕಿಸ್ತಾನವೊಂದನ್ನು ನಿರ್ಮಾಣ ಮಾಡಿಕೊಂಡ ಇವರು ಮುಸಲ್ಮಾನರಲ್ಲದವರು, ಪಾಕಿಸ್ತಾನದಿಂದ ಹೊರಹೊರಡಲಿಕ್ಕೂ ಆಸ್ಪದ ಕೊಡದಿರುವದು ಎಂತಹ ಅಸಂಬದ್ಧತೆ? ತಮ್ಮ ಜಾತೀಯ ಪ್ರತ್ಯೇಕತೆಯ ತತ್ವವನ್ನು ತಾವೇ ಅಲ್ಲಗಳೆದಂತಲ್ಲವೇ? ಪಾಕಿಸ್ತಾನದಿಂದ ಹಿಂದುಗಳು ಹೊಂಹೊರಡ ಬಯಸಿದರೆ ವಾಸ್ತವಿಕವಾಗಿ ಇವರು ಆನಂದ ಪಡಬೇಕು. ಏಕೆಂದರೆ ಅದು ಅವರ ಪ್ರತ್ಯೇಕತೆಯ ತತ್ವವನ್ನು ಮಾನ್ಯ ಮಾಡಿದಂತೆ ಆಗುವದಿಲ್ಲವೇ? ಅಲ್ಲದೆ, ಶ್ರೀ ಜಿ. ಎಂ. ಸೈಯದರ ಇತ್ತೀಚಿನ ಕರಾಚಿ ಪ್ರಕಟನೆಯಲ್ಲಿ ಪಶ್ಚಿಮ ಪಂಜಾಬು ಬೆಲೂಚಿಸ್ತಾನ, ಗಡಿನಾಡು ಪ್ರಾಂತಗಳಲ್ಲಿ ಈಗ ಮುಸ್ಲಿಮೇತರರು ಇಲ್ಲವೇ ಇಲ್ಲವೆಂದಿದ್ದಾರೆ. ಸಿಂಧದಲ್ಲಿ ಮಾತ್ರ ಕೇವಲ 10 ಲಕ್ಷ ಹಿಂದೂಗಳಿದ್ದಾರೆಂದಿದ್ದಾರೆ. ಅವರೂ ಅಷ್ಟು ಹೊರಗೆ ಹೊರಟು ಹೋಗಿ ಪಾಕಿಸ್ತಾನವು ಮುಸಲ್ಮಾನಮಯವಾಗಿ ಬಿಟ್ಟರೆ ಒಳಿತಲ್ಲವೇ? ಅಥವಾ ಎಲ್ಲರೂ ಪಾಕಿಸ್ತಾನೀ ಪಾಲ್ಟಿಯಲ್ಲಿ ಕೂಡುವವರಾದರೆ ಅದನ್ನು ಹೊರುವರಾರು ಎಂದು ಪಾಕಿಸ್ತಾನೀ ಸರಕಾರದ ವಿಚಾರ ಸರಣಿ ಇರಬಹುದೋ?

ಕೇವಲ ಜಾತೀಯತೆಯ ತಳಹದಿ ಮೇಲೆಯೂ, ಪ್ರತ್ಯೇಕತೆಯ ತತ್ವದ ಮೇಲೆಯೂ, ಯಾವ ರಾಜ್ಯ ಕಾರಭಾರವೂ, ನಾಡ ನಿರ್ಮಾಣವೂ ನೆಲೆಗೊಂಡು ನಿಲ್ಲಲಾರದು, ಅದು ನಿಸರ್ಗ ನಿಯಮಕ್ಕೆ ವಿರುದ್ಧವಾದುದು. ಹಾಗೆ ಮಾಡುವವರು ಇಂದಿಲ್ಲ ನಾಳೆ ವಿಶ್ವದ ಎದುರು ಹಾಸ್ಯಕ್ಕೆ ಗುರಿಯಾಗದಿರರು. ಅಲದೆ ವಿನಾಶ ಕಾಲಕ್ಕೆ ವಿಪರೀತ ಬುದ್ಧಿ ಎಂಬ ಗಾದೆಯ ಮಾತಿನಂತೆ ಆದೀತು.

ಆದ್ದರಿಂದ ಪಾಕಿಸ್ತಾನ ಸರಕಾರವು ಇನ್ನಾದರೂ ತೊಳಲಕ ಮಹಮ್ಮದನ ದರಬಾರೀ ವೃತ್ತಿಯನ್ನು ಬಿಟ್ಟು ಜಾತೀಯತೆಯನ್ನು ತೊರೆದು ಸರ್ವರನ್ನೂ ಸಮ ಭಾವದಿಂದ ನಡೆಯಿಸಿಕೊಂಡು ಹೋಗುವ ರೀತಿ ನೀತಿಗಳನ್ನನುಸರಿಸಬೇಕು. ಇದರಿಂದ ಮುಸಲ್ಮಾನರಿಗೂ ಇತರರಿಗೂ ಕೂಡಿಯೇ ಹಿತ. ಇದೇ ಮಾರ್ಗ ಒಳ್ಳೆಯದು.

ಬಳ್ಳಾರಿಯಲ್ಲಿ – ವೈಶ್ಯರ ಸಭೆಗಳು

ಕಡಪನಗರ ಸಭೆಯ ಅಧ್ಯಕ್ಷರಾದ ರಾವಸಾಹೇಬ್ ಪಿ. ಶೇಷಯ್ಯಶೆಟ್ಟಿಯವರ ಅಧ್ಯಕ್ಷತೆಯಲ್ಲಿ ನಗರ ಸಭೆಗಳ, ವೈಶ್ಯ ಅಧ್ಯಕ್ಷರು, ಉಪಾಧ್ಯಕ್ಷರು, ಮತ್ತು ವೈಶ್ಯ ಸದಸ್ಯರ ಸಭೆಯು 4-1-48 ಬಳ್ಳಾರಿಯಲ್ಲಿ ಕೂಡಲಿದೆ. "ಭಾರತೀಯ ವೈಶ್ಯ" ಪತ್ರಿಕೆಯ ಸಂಪಾದಕರಾದ ಶ್ರೀ ಏ. ಸುಬ್ಬರಾವು ಗುಪ್ತರವರು ಪ್ರಾರಂಭೋತ್ಸವವನ್ನು ನೆರವೇರಿಸಲಿದ್ದಾರೆ. ಎಲ್ಲಾ ಪ್ರತಿನಿಧಿಗಳು 3 ನೆಯ ತಾರೀಖಿಗೆ ಬಳಗೆ ಬರಲುಕೋರಿಕೆ ಬಳ್ಳಾರಿ ಆರ್ಯ ವೈಶ್ಯ ಯುವಜನ ಸಂಘದ 16ನೆಯ ವಾರ್ಷಿಕೋತ್ಸವ, ವೈಶ್ಯ ವಿದ್ಯಾನಿಧಿಯ ಪ್ರಥಮ ವಾರ್ಷಿಕೋತ್ಸವವು ನಡೆಯುವುದು.

ಡಿ. ಯಲ್. ಗಂಗಾಧರಶೆಟ್ಟಿ
ಕಾರ್ಯದರ್ಶಿ

ಶ್ರೀ ಕೆ. ಯಂ. ಮುನ್ಶಿ:- ಇವರು ಹೈದರಾಬಾದಿನಲ್ಲಿ ಭಾರತದ ಏಜಂಟು ಜನರಲ್ ಆಗಿ ನಿಯಾಮಕ ಹೊಂದಿದುವರೆಂದು ನವದೆಹಲಿಯಿಂದ ಪ್ರಕಟನೆಯೊಂದು ಹೊರಟಿದೆ.

ಪಾಲಿಸ್ತಾನವು ವಿಭಜಿಸಲ್ಪಡಬೇಕೆಂದು ಸಂಯುಕ್ತ ರಾಷ್ಟ್ರ ಸಂಘವು ತೀರ್ಮಾನಿಸಿದನಂತರ ೨೩ ದಿನಗಳೊಳಗಾಗಿ ೨೫೦ ಜನರು ಸಂಹರಿಸಲ್ಪಟ್ಟಿರುವರು. ಇವರಲ್ಲಿ ೧೦೯ ಯಹೂದಿಗಳು, ೧೩೮ ಅರಾಬರಿದಾರೆ.

ಹಳ್ಳಿಗಳ ಸೀದಾಪದ್ಧತಿಯ ವಿಸರ್ಜನೆ

ಸರ್ಕಾರಿ ಪ್ರಕಟನೆ

ಮದ್ರಾಸ್ ರೆವಿನ್ಯೂ ಬೋರ್ಡ್‌ನವರು ಈ ಕೆಳಗಿನ ಪ್ರಕಟನೆಯನ್ನು ಹೊರಡಿಸಿರುವರು.

ಈ ತಿಂಗಳ ೨೮ನೆಯ ದಿನಾಂಕದಿಂದ ಹಳ್ಳಿಗಳಲ್ಲಿ ಧಾನ್ಯದ ಸೀದಾಪದ್ಧತಿಯನ್ನು (ಮುನಿಸಿಪಲ್ ನಗರಗಳ ಹೊರತಾಗಿ) ರದ್ದುಗೊಳಿಸಲಾಗಿದೆ. ಪತ್ತಕುಂಡಲದ ಬಳ್ಳಾರಿ, ಕಡಪ, ಕರ್ನೂಲು, ಅನಂತಪುರಗಳಲ್ಲಿ ಈ ಆಜ್ಞೆಯು ಜಾರಿಗೆ ಬಂದಿದೆ. ಅಕ್ಕಿಯಲ್ಲದ ಇತರ ಧಾನ್ಯಾದಿಗಳನ್ನು ಶಾಸನಬದ್ಧ ಸೀದಾಪ್ರದೇಶಗಳಿಗೆ (ಉದಾಹರಣಾರ್ಥ, ಬಳ್ಳಾರಿ, ಆದವಾನಿ, ಹೊಸಪೇಟೆ ಕೊಂಡೊಯ್ಯಬಹುದು. ಅಲ್ಲಿಂದ ತರಬಹುದು) ಧಾನ್ಯ ಸಂಗ್ರಹವು ಮಾಯವಾಗಿ ಬೆಲೆಗಳೇರಿ ಜನರಿಗೆ ಕಷ್ಟವು ಸಂಭವಿಸುವುದಾದರೆ, ಧಾನ್ಯ ಸಂಗ್ರಹವಿರುವ ಜಾಗಗಳನ್ನು ಪರಿಶೋಧಿಸಿ ಅವುಗಳನ್ನು ಜನತೆಗೆ ಮಾರಲು ಸರ್ಕಾರಕ್ಕೆ ಅಧಿಕಾರವುಂಟು.

ಹಳ್ಳಿ ಪ್ರದೇಶಗಳಲ್ಲಿ ಜನರು ತಮ್ಮ ಹತ್ತಿರವಿರುವ ಕಾರ್ಡುಗಳನ್ನೊಗೆಯಬಾರದು ಏತಕ್ಕೆಂದರೆ ಇದರ ಪರಿಣಾಮವನ್ನು ಊಹಿಸುವುದು ಕಷ್ಟವಲ್ಲದುವೆ ವಗ್ಗೆರೆ ಶುಭ ಪ್ರಸ್ತಗಳಲ್ಲಿ ೩೦ ಜನರಿಗಿಂತ ಹೆಚ್ಚಿಗೆ ಊಟಕ್ಕೇರ್ಪಡಿಸಬಾರದೆಂಬ ನಿಯಮವನ್ನು ತೆಗೆದು ಹಾಕಿಲ್ಲ ಧಾನ್ಯಾದಿಗಳ ಬೆಲೆಯಲ್ಲಿ ಬಹಳ ಹೆಚ್ಚು ಕಡಮೆಗಳಾದರೆ, ಕಲೆಕ್ಟರವರು ಗವರ್ನಮೆಂಟಿನ ಸಮ್ಮತಿಯಿಂದ ಅದನ್ನು ನಿಗದಿ ಮಾಡಬಹುದು ಜಿಲ್ಲೆಯು ಯಾವ ಭಾಗದಲ್ಲಾದರೂ ಧಾನ್ಯಗಳ ಕಮ್ಮಿಯಕಾರಣ ಪೀಡೆಯು ತಲೆದೋರಿದರೆ ಅಲ್ಲಿ ಅಂಗಡಿಗಳನ್ನು ತೆರೆದು ಜನರಿಗೆ ಕನಿಷ್ಟಕ್ಕೆ ಲ ಔನ್ಸ್‌ಗಳನ್ನಾದರೂ ಒದಗಿಸುವ ಅಧಿಕಾರವಿದೆ. ಕಲೆಕ್ಟರವರು ಜಿಲ್ಲೆಯಲ್ಲಾಗುವ ಪ್ರತಿಕ್ರಿಯೆಗಳಿಗಾಗಿ ಪ್ರತಿವಾರ ಟೆಲಿಗ್ರಾಂನಿಂದ ಸರ್ಕಾರಕ್ಕೆ ತಿಳಿಸುತ್ತಿರಬೇಕು.

ಹೊಸಪೇಟೆ.

ಶ್ರೀ ಮಾನ್ಯ ಎನ್. ವಿ ಗಾಡಗೀಳ (ಶಕ್ತಿ ಮತ್ತು ಕಣಿಗಳ ಮಂತ್ರಿಗಳು, ಇಂಡಿಯಾ ಸರ್ಕಾರ. ಅವರು 22-22-47 ನೇ ಮಧ್ಯಾಹ್ನ 1-30 ಗಂಟೆಗೆ ಗುಂತಕಲ್‌ನಿಂದ ಕಾರಿನಲ್ಲಿ ಬಂದರು. ಇವರ ಜೊತೆಗೆ ಮದ್ರಾಸಿನ ಮಂತ್ರಿಗಳಾದ ಎಂ. ಭಕ್ತವತ್ಸಲ್ಲಂ ಮಂತ್ರಿ ಸಾರ್ವಜನಿಕ ಮತ್ತು ಸುದ್ದಿ ಖಾತೆ, ಹೆಚ್. ಸೀತಾರಾಮರೆಡ್ಡಿ, ಕೂಲಿಕಾರ ಮತ್ತು ಔದ್ಯೋಗಿಕ, ಬಿ. ಗೋಪಾಲರೆಡ್ಡಿ-ಆರ್ಥಿಕ, ಕೆ. ಮಾಧವಮೆನನ್-ವ್ಯವಸಾಯ ಖಾತೆ ಮತ್ತು ಇತರ ಸಂಬಧಪಟ್ಟ ಅಧಿಕಾರಿಗಳೂ ಬಂದರು. ಬಂದನಂತರ ಮಾನ್ಯ ಗಾಡಗೀಳ ಇವರಿಗೆ ಕಾಂಗ್ರೆಸ್ ಕಮಿಟಿಗಳಪರವಾಗಿ, ತುಂಗಭದ್ರಾ ಪ್ರಾಜೆಕ್ಟ್ ರಿಲೀಫ್ ಕಮಿಟಿ ಮತ್ತು ಇತರ ಸಂಘಸಂಸ್ಥೆಗಳ ಪರವಾಗಿ ಹಾರತುರಾಯಿಗಳನ್ನರ್ಪಿಸಲಾಯಿತ್ತು ನಂತರ ಪ್ರಾಜೆಕ್ಟ್ ರಿಲೀಫ್ ಕಮಿಟಿಯವರು ಈವರೆಗೆ ತಾವು ಮಾಡಿದ ಎಲ್ಲ ಕಾರ್ಯಗಳ ಮನವಿಯೊಂದನ್ನು ಅರ್ಪಿಸಿ ಪ್ರಾಜೆಕ್ಟಿನ ಬಗ್ಗೆಯಿರುವ ಎಲ್ಲ ಕುಂದುಕೊರತೆಗಳನ್ನು ತಿಳಿಸಿ ಹೇಳಿದರು. ಶ್ರೀ ಎಸ್. ವಿ. ಗಾಡಗೀಳ ಅವರು ಶಾಂತ ಚಿತ್ತದಿಂದ ಎಲ್ಲವನ್ನು ತಿಳಿದುಕೊಂಡು ಅವರು ಸಂಪೂರ್ಣವಾಗಿ ಎಲ್ಲ ಕಾಗದ ಪತ್ರಗಳನೋದಿ ಆ ವಿಷಯದಲ್ಲಿ ಸಂಪೂರ್ಣವಾಗಿ ಅಭ್ಯಸಿಸುವದಾಗಿ ಭರವಸೆಯನ್ನಿತ್ತರು ಮತ್ತು ಒಂದು ರಿವರ್ ಕಮಿಶನ್ ನರ್ಪಡಿಸುವದಾಗಿ ಹೇಳಿದರು. ನಂತರ ಭೋಜನ ತೀರಿಸಿಕೊಂಡು ತುಂಗಭದ್ರಾ ಪ್ರಾಜೆಕ್ಟ್‌ನ ಕೆಲಸವನ್ನು ನೋಡಿಕೊಂಡು ಪುನಃ 4-30 ಗಂಟೆಗೆ ಗುಂತಕಲ್ಲಿಗೆ ತೆರಳಿದರು.

ಏಕೀಕರಣ.

ತಾ|| ೨೨-೧೨-೪೭ ರಾತ್ರಿ ೯ ಗಂ|| ಕಾಂಗ್ರೆಸ್ ಕಮಿಟಿ ಆಫೀಸಿನಲ್ಲಿ ಅಸಾಧಾರಣ ಸಭೆಯಲ್ಲಿ ಶ್ರೀ ಮಂಗಳವೇಡಿ ಶ್ರೀನಿವಾಸರಾವು ಕಾರ್ಯದರ್ಶಿ, ಅಖಿಲ ಕರ್ನಾಟಕ ಏಕೀಕರಣ ಮಹಾಸಮಿತಿ ಇವರು ಭಾಷಾವಾರು ಪ್ರಾಂತ ರಚನೆಯ ಬಗ್ಗೆ ದಿಲ್ಲಿಯಲ್ಲಿ

ಮತ್ತು ಡೊಮಿನಿಯನ್ ಪಾರ್ಲಿಮೆಂಟಿನಲ್ಲಿ ನಡೆದ ಎಲ್ಲಾ ವಿಷಯಗಳನ್ನು ವಿವರವಾಗಿ ತಿಳಿಸಿಹೇಳಿದರು ಕೆಲವು ಪ್ರಶ್ನೋತ್ತರಗಳನಂತರಸಭೆಯು ಮುಕ್ತಾಯವಾಯಿತು.

ಬಳ್ಳಾರಿ ಜಿಲ್ಲಾ ಕರ್ನಾಟಕ ಸಂಘದ ಮನವಿ.

ತಾ|| ೨೭-೧೧-೪೭ ನೆಯ ತಾರೀಕು ಹಿಂದೂ ಸ್ಥಾನದ ಹಿರಿಯೋಲಗದಲ್ಲಿ ಪಂಡಿತ ಜವಹರಲಾಲರು ಕರ್ನಾಟಕ ಪ್ರಾಂತ ನಿರ್ಮಾಣವು ಕೂಡಲೇ ನಿರವೇರಲು ಅಡ್ಡಿ ಆತಂಕಗಳಿವೆ ಎಂದೂ ಆಂಧ್ರ ಪ್ರಾಂತ ನಿರ್ಮಾಣವು ಶೀಘ್ರವಾಗಿ ಆಗುವುದೆಂದೂ ಕೂಟ್ಟ ಅಭಿಪ್ರಾಯವನ್ನು ನಾವು ಗಮನಿಸಬೇಕಾಗಿದೆ. ಒಂದು ವೇಳೆ ಕರ್ನಾಟಕ ಪ್ರಾಂತವಾಗದೆ ಆಂಧ್ರ ಪ್ರಾಂತ ಮಾತ್ರ ಅಸ್ತಿತ್ವದಲ್ಲಿ ಬಂದರೆ ಬಳ್ಳಾರಿಯೂ ಪೂರ್ವ ಕರ್ನಾಟಕದ ಹಿಂದೂಪುರ-ಮಡಕಶಿರ-ಕಲ್ಯಾಣದುರ್ಗ ಮೊದಲಾದುವು ಆಂಧ್ರಪ್ರಾಂತಕ್ಕೆ ಸೇರಿಹೋಗುವುವೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಅಂಥ ಸಂದರ್ಭದಲ್ಲಿ ಪೂರ್ವ ಕರ್ನಾಟಕದಲ್ಲಿ ಇದುವರೆಗೆ ಉಳಿದಿರುವ ಅಲ್ಪ ಸ್ವಲ್ಪ ಕನ್ನಡವೂ, ಕನ್ನಡಿಗರಿಗಿರುವ ಸೌಲಭ್ಯಗಳೂ ಮಿಂಚಿನ ವೇಗದಲ್ಲಿ ಆಂಧ್ರೀಕರಣವಾಗಿ ಪೂರ್ವಕರ್ನಾಟಕವು ಕನ್ನಡನಾಡಿನಿಂದ ಸಂಪೂರ್ಣ ಕಡಿದುಹೋಗಬೇಕಾದೀತು. ಇದನ್ನು ವಿರೋಧಿಸುವುದು ಪ್ರತಿಯೊಬ್ಬ ಕನ್ನಡಿಗರ ಕರ್ತವ್ಯ.

ಆದಕಾರಣ ನೀವು ನಿಮ್ಮ ಊರಿನ ಕರ್ನಾಟಕ ಸಂಘದ ವತಿಯಿಂದಲೂ, ವರ್ತಕ ಸಂಘ, ವಿದ್ಯಾರ್ಥಿ ಸಂಘ, ಮುಸ್ಲಿಂಲೀಗ್ ಮುಂತಾದ ಎಲ್ಲ ಸಂಘ ಸಂಸ್ಥೆಗಳ ವತಿಯಿಂದಲೂ ಒಂದು ಬಹಿರಂಗ ಸಭೆಯನ್ನು ಕರೆದು ಕೂಡಲೇ ಕರ್ನಾಟಕ ಪ್ರಾಂತದ ರಚನೆಯಾಗಬೇಕೆಂದೂ, ಆಂಧ್ರ ಪ್ರಾಂತದಲ್ಲಿ ಪೂರ್ವ ಕರ್ನಾಟಕವನ್ನು ಕೂಡಿಸುವುದಕ್ಕೆ ನಿಮ್ಮ ವಿರೋಧವಿರುವುದೆಂದೂ ಪ್ರಜಾಭಿಪ್ರಾಯಕ್ಕೆ ವಿರೋಧವಾಗಿ ವರ್ತಿಸುವುದು ಕ್ಷೋಭೆಗೆ ಕಾರಣವಾಗುತ್ತದೆಂದೂ ಸೂಚಿಸುವ ಒಂದು ಗೊತ್ತುವಳಿಯನ್ನು ಮುಂಜೂರುಮಾಡಿ ಪಂಡಿತ ಜವಹರಲಾಲ್, ಮಹಾತ್ಮಾಗಾಂಧೀ, ಸರ್ದಾರ್ ಪಟೇಲ್, ಬಾಬುರಾಜೇಂದ್ರಪ್ರಸಾದ್ ಮತ್ತು ಲಾರ್ಡ್‌ಮೌಂಟ್‌ಬ್ಯಾಟನ್ ಇವರಿಗೆ ಕಳಿಸಿಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಹಾಗೆ ಕಳಿಸಿದ ತರಾವಿನ ಪ್ರತಿಯನ್ನು ನಮ್ಮ ಕಡೆಗೆ ದಾಖಲೆಗೆ ಕಳಿಸಿಕೊಡಬೇಕಾಗಿ ವಿನಂತಿ.

ಸಮಯ ವಿಳಂಬಕ್ಕೆ ತಕ್ಕುದಲ್ಲವೆಂಬುದನ್ನು ಮಾತ್ರ ಈ ಸನ್ನಿವೇಶದಲ್ಲಿ ತಿಳಿಸಬಯಸುತ್ತೇನೆ.

ಇಂತಿ ನಿಮ್ಮ-ಕೊ. ಚೆನ್ನಬಸಪ್ಪ,

ಪ್ರಾಥಮಿಕ ಶಾಲೆಗಳಲ್ಲಿ ಕನ್ನಡವನ್ನು ಜಾರಿಗೆ ತರಬೇಕು.

"ಸರ್ಕಾರದ ನೀತಿಗನುಗುಣವಾಗಿ ಪ್ರಾಥಮಿಕ ಶಾಲೆಗಳಲ್ಲಿ ಮಾತೃಭಾಷೆಯಲ್ಲಿ ಶಿಕ್ಷಣಕೊಡಬೇಕೆಂಬ ತತ್ವದ ಪ್ರಕಾರಕ್ಕೆ ಕನ್ನಡವೇ ಮಾತೃಭಾಷೆಯಾಗುಳ್ಳ ಬಾಲಕರಿಗೆ ಬಳ್ಳಾರಿನಗರದ ಪ್ರಾಥಮಿಕ ಶಾಲೆಗಳಲ್ಲಿ 1-೬-48 ರಿಂದ ಕನ್ನಡದಲ್ಲೇ ಶಿಕ್ಷಣಕೊಡಬೇಕು" ಎಂಬ ನಿರ್ಣಯವು ಶ್ರೀ ಶಾಮುಯಲ್‌ರವರಿಂದ ತರಲ್ಪಟ್ಟು ಶ್ರೀ ವಿಶ್ವನಾಥಪ್ಪನವರು ಅನುಮೋದಿಸಿದ್ದಾರೆ ಶಾಲೆಗಳಲ್ಲಿನ ಕನ್ನಡ ಬಾಲಕರ ಸರಿಯಾದ ಸಂಖ್ಯೆಯನ್ನರಿಯಲು ಅಧಿಕಾರಿಗಳು ಐವರು ನಗರ ಸಭೆಯ ಸದಸ್ಯರ ಸಹಾಯವನ್ನು ತೆಗೆದುಕೊಳ್ಳಬೇಕೆಂದೂ, ಅದರ ಕಾರ್ಯಫಲವನ್ನು 15-2-48 ರೊಳಗೆ ತಿಳಿಸಬೇಕೆಂದೂ ನಿರ್ಣಯದಲ್ಲಿ ಮತ್ತೆ ಸೂಚಿಸಲಾಗಿದೆ.

ಕಾಶ್ಮೀರ: ದಾಳಿಗಾರರಿಗೆ ಪಾಕಿಸ್ತಾನದ ಸಹಾಯವೊರೆಯುತ್ತಲಿದೆ ಯೆಂಬುದು ನಿರ್ವಿವಾದಾಂಶವಾಗಿದೆ. ೨೨ ನೆಯ ದಿನಾಂಕ ನೆಹರು ಲಿಯಾಖತರಲ್ಲಿ ಈ ಬಗ್ಗೆ ಚರ್ಚೆಯಾಯಿತು.

ನವಭಾರತಕ್ಕೆ ಚಂದಾದಾರರಾಗಿರಿ

ಸತ್ಯಾಗ್ರಹಿಗಳಿಗೆ ಭೂದಾನ.

೧೯೨೧ ರಿಂದ ಭಾರತದ ಸ್ವಾತಂತ್ರ್ಯ ಸಂಗ್ರಾಮಗಳಲ್ಲಿ ಭಾಗವಹಿಸಿ ಜೈಲು ಶಿಕ್ಷೆಯನ್ನನುಭೋಗಿಸಿದ ಸತ್ಯಾಗ್ರಹಿಗಳಿಗೆ ಮದ್ರಾಸ್ ಸರ್ಕಾರದವರು ಐದು ಎಕರೆಗಳಷ್ಟು ನೀರಾವರಿಭೂಮಿಯನ್ನು ಕೊಡಬೇಕೆಂದು ಈಗಾಗಲೇ ಪ್ರಕಟಿಸಿದ್ದು ಸರಿಯಷ್ಟೆ. ಈಗ ಸರ್ಕಾರದವರು ಕಲೆಕ್ಟರರವರಿಗೆ ಅಜ್ಞೆನೂಡಿ ಈವಿಷಯದಲ್ಲಿ ತಕ್ಕ ಚರ್ಯೆ ತೆಗೆದುಕೊಳ್ಳಲು ತಿಳಿಸಿದ್ದಾರೆ.

ಅಮೆರಿಕ-ಪರ್ಶಿಯಾದ ಸೈನ್ಯ ಒಡಂಬಡಿಕೆ.

ಪರ್ಶಿಯಾದಲ್ಲಿ ರಷ್ಯಾದವರ ಪ್ರಭಾವವು ಹೆಚ್ಚಬಹುದೆಂಬ ಕಾರಣದಿಂದ ಅಂತರಾಷ್ಟ್ರೀಯ ರಾಜಕಾರಣದಲ್ಲಿ ತನ್ನ ಪ್ರತಿಭೆ ಬಲುಮೆಗಳನ್ನು ಕಾಪಾಡಿಕೊಳ್ಳಲು ಅಮೆರಿಕೆಯು 20 ನೆಯ ಮಾರ್ಚ್ 1949 ರವರಿಗೆ ಒಂದು ಮಿಲಿಟರಿ ಒಪ್ಪಂದವನ್ನು ಮಾಡಿಕೊಂಡಿದೆ ಈ ಒಪ್ಪಂದದ ಪ್ರಕಾರಕ್ಕೆ ಪರ್ಶಿಯಾ ಸೈನ್ಯದ ಚಲನ ವಲನ ನಿಯಂತ್ರಣದ ಭಾಗವು ಅಮೆರಿಕಾಕ್ಕೆ ಹೋಗುವುದು. ತನ್ನ ಸೈನ್ಯ ಸುಧಾರಣೆಯ ಬಗ್ಗೆ ಪರ್ಶಿಯಾವು ಮತ್ತಾವ ಪರದೇಶದಿಂದಲೂ ಸಲಹೆಗಳನ್ನು ಪಡೆಯತಕ್ಕದ್ದಲ್ಲ.

ಕೆಪ್ಪಗಂತುಲ ಸುಬ್ಬರಾಯರ ರಾಜೀನಾಮೆ.

ಬಳ್ಳಾರಿ ಜಿಲ್ಲೆ ಬಟ್ಟೆಯಧಿಕಾರಿಗಳಾದ ಶ್ರೀ ಕೆ ಸುಬ್ಬರಾಯರು (I.A.T C.) ರಾಜೀನಾಮೆ ಕೊಟ್ಟಿರುವರೆಂದು ಪೊತ್ತಾಗಿದೆ. ಆರ್ಥಿಕ ಸಚಿವರಾದ ಶ್ರೀ ಗೋಪಾಲರೆಡ್ಡಿಯವರು ಬಳ್ಳಾರಿಗೆ ಒಂದಾಗ ಇವರಿಗೆ ದರ್ಶನ ಕೊಡಲು ನಿರಾಕರಿಸಿದರಂತೆ.

ಜುನಾಗಢದಲ್ಲಿ ಜನಾಭಿಪ್ರಾಯ.

ಕಾಥಿಯವಾರದ ಸಂಸ್ಥಾನಿಗಳಾದ ಜುನಾಗಢ ಮಂಗ್ರೋಲ್, ಬಾಬ್ರಿಯಾವಾಡಗಳಲ್ಲಿ ಜನಮತವು ತೆಗೆದುಕೊಳ್ಳಲ್ಪಟ್ಟು ಅವುಗಳ ರಾಜಕೀಯ ಹಣೆಯ ಬರಹವು ನಿಶ್ಚಯಿಸಲ್ಪಡಲಿದೆ ಹಿಂದುಸ್ತಾನ ಸರ್ಕಾರದವರು ಇದಕ್ಕೆ ಒಬ್ಬ ಅಧಿಕಾರಿಯನ್ನು ನಿಯಮಿಸಿರುವರು

ಇದಕ್ಕೇನು ಹೇಳುವಿರಿ ?

ಸಕ್ಕರೆಯ ವಿನಿಯಂತ್ರಣವಾದ ನಂತರ ಬಾಜಾರದಿಂದ ಸಕ್ಕರೆಯು ಮಾಯವಾಗಿದೆ. ವರ್ತಕರು ಹೆಚ್ಚು ಹೆಚ್ಚು ದರಗಳಿಂದ ಇದನ್ನು ಕಳ್ಳಪೇಟೆಯಲ್ಲಿ ಮಾರಲೋಸುಗ ಸಂಗ್ರಹಿಸುತ್ತಿರುವರೆಂಬ ಸುದ್ದಿಗಳು ಬರುತ್ತಲಿವೆ. "ಕಂಟ್ರೋಲ್ ತೆಗೆಯಿರಿ" ಎಂದು ರಾತ್ರಿ ಹಗಲು ಬೊಬ್ಬೆ ಇಡುತ್ತಿದ್ದ ಸ್ವಾರ್ಥಿಗಳು ಕಣ್ಣು ತೆರೆಯಬೇಕು. ಆಹಾರ ಧಾನ್ಯಗಳಿಗೂ ಇಂಥಾ ಭವಣೆಯೆಲ್ಲಿ ತಂದೊಡ್ಡುವರೋ ಎಂದು ಈ ಗಾಗಲೇ ಜನರು ಭಯಭೀತರಾಗಿದ್ದಾರೆ.

ಒಬ್ಬ ಬಡರೈತ

ಬರ್ಮಾ ಸ್ವಾತಂತ್ರ್ಯ ಮಹೋತ್ಸವಕ್ಕೆ ಪಂಡಿತ ಜವಹರಲಾಲನೆಹರು ರಾಜೇಂದ್ರ ಪ್ರಸಾದರು ಹೋಗಲಿದ್ದಾರೆ.

ಭಾರತಕ್ಕೆ ಪ್ರಥಮ ಹಿಂದೀ ಸೇನಾಪತಿಯು ೧೯೪೯ ನೆಯ ಏಪ್ರಿಲ್ ತಿಂಗಳಿಂದ ನಿಯಮಿಸಲಾಗುವುದು.

ಪರ್ಶಿಯಾದ ಸೈನ್ಯ ಶಿಕ್ಷಣ ವ್ಯವಸ್ಥೆಯನ್ನು ಅಮೆರಿಕಾವು ವಹಿಸಿದ ತಕ್ಷಣವೇ ಗ್ರೀಸಿನಲ್ಲಿ ಕಮ್ಯೂನಿಸ್ಟ ಜನರು ಪ್ರತಿ ಸರ್ಕಾರವನ್ನು ಸ್ಥಾಪಿಸಿರುವರು. ಇದರಿಂದ ಅಂತರಾಷ್ಟ್ರೀಯದಲ್ಲಿ ಗೊಂದಲವೆದ್ದಿದೆ.

ಹೈದರಾಬಾದವು ಪಾಕಿಸ್ತಾನಕ್ಕೆ ಅನೇಕ ಕೋಟಿ ರೂಪಾಯಿಗಳ ಸಾಲಕೊಡಲಿದೆಯೆಂದು ಒಂದು ವಾರ್ತಾ ಸಂಸ್ಥೆಯಿಂದ ತಿಳಿದು ಬಂದಿದೆ.

N. G. O. ಸಂಪಿನ ಕಾಲಕ್ಕೆ ತಾತ್ಕಾಲಿಕವಾಗಿ ಡಲ್ಪಟ್ಟ ಜನರ ನೌಕರಿಯುಳಿಸಲು ಸರ್ಕಾರದವರು ಹಂಗಾಮಿ ಜನರನ್ನು ಮನೆಗೆ ಕಳುಹಿಸುತ್ತಿರುವರು.

ಸಿಂಧೂ ದೇಶದಿಂದ ಹಿಂದೂಗಳು ಬಿಟ್ಟು ಹೋಗಬಾರದೆಂದು ಅಲ್ಲಿಯ ಪ್ರಧಾನರಾದ ಖುರ್ರೋರವರು ಪ್ರಕಟನೆ ಹೊರಡಿಸಿರುವರು.

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್., ಸ್ಥಾಪಿತ : 193

ಮುಖ್ಯ ಕಾರ್ಯಾಲಯ — ಬಳ್ಳಾರಿ.

ಬಳ್ಳಾರಿ, ಅನಂತಪುರ, ಕಡಪ, ಕರ್ನೂಲು ಮತ್ತು ಚಿತ್ತೂರು ಜಿಲ್ಲೆಗಳ ಅಧಿಕ ಆರ್ಥಿಕಾಭಿವೃದ್ಧಿಯಾಗಲೆಂಬ ಉದಾತ್ತಧ್ಯೇಯದಿಂದ ಈ ಬ್ಯಾಂಕಿನ ಸ್ಥಾಪನೆಯಾಗಿದೆ.

ಶಾಖೆಗಳು { **ಮದ್ರಾಸು :** ೩೦೧ ಲಿಂಗಶೆಟ್ಟಿ ಬೀದಿ.
ಬೆಂಗಳೂರು : ರುಕ್ಮಿಣಿ ಬಿಲ್ಡಿಂಗ್ಸ್, ಚಿಕ್ಕಪೇಟೆ.

ಇವಲ್ಲದೆ ರಾಯಲಸೀಮೆಯ ೨೫ ಮುಖ್ಯ ವ್ಯಾಪಾರ ಕೇಂದ್ರಗಳಲ್ಲಿ ನಮ್ಮ ಶಾಖೆಗಳಿವೆ.

ಸ್ಥಾಯಿ ಠೇವಣಿಗಳು (Fixed Deposits) ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತವೆ.

ಒಂದು ವರ್ಷ 3¼% ——— ಎರಡು ವರ್ಷ 3½%

ಸೀಸನ್ ಡಿಪಾಸ್ಟುಗಳನ್ನು 3 ರಿಂದ 6 ತಿಂಗಳವರೆಗೆ ಶೇ 3% ರಂತೆ ತೆಗೆದುಕೊಳ್ಳುತ್ತೇವೆ.

ಬ್ಯಾಂಕಿಗೆ ಸಂಬಂಧಿಸಿದ ಎಲ್ಲ ವ್ಯವಹಾರವು ನಮ್ಮಲ್ಲಿ ನಡೆಯುತ್ತದೆ.

ವಿವರಗಳಿಗಾಗಿ ನಮ್ಮ ಬ್ಯಾಂಕಿನ ಯಾವ ಶಾಖೆಗಾದರೂ ಬರೆಯಿರಿ.

ಹೆಚ್. ಲಿಂಗಾರೆಡ್ಡಿ ಬಿ. ಎ., ಬಿ. ಎಲ್.,
ಛೇರ್ಮನ್ – ಬೋರ್ಡ್ ಆಫ್ ಡೈರೆಕ್ಟರ್ಸ್.

ಬಿ. ವಿ ಶೇಷಗಿರಿರಾವು ಬಿ. ಕಾಂ,
ಕಾರ್ಯದರ್ಶಿ.

NAVA BHARAT. BELLARY. Reg. No. M. 47

ನವಭಾರತ ಬಳ್ಳಾರಿ.
(Nationalist Weekly)

ಚಂದಾದರಗಳು.		Subscription Rates	
ವರ್ಷಕ್ಕೆ	5-0-0	One Year	5—0—0
6 ತಿಂಗಳಿಗೆ	3-0-0	Six months	3—0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ		Subscription will not be accepted for less than 6 months.	

To
SRI.....
.....
.....

Printed at Krishna Press Bellary QH NO. B 17 FOR (Q.H. NO. B-5.)
Edited & Published by T. B. KESHAVA RAO